₹ 6 @vishwavaninews epaper.vishwavani.news vishwavani.news ಬೆಂಗಳೂರು । **ಹುಬ್ಬಳ್ಳಿ** । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ **ಶುಕ್ರವಾರ 08.11.2024** **ಸಂಪುಟ:** 67 **ಸಂಚಿಕೆ:** 183 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶಿವರಾಜ್ ಕುಮಾರ್‌ಗೆ ಅಮೆರಿಕದಲ್ಲಿ ಚಿಕಿತ್ಸೆ

ಆಡಳಿತ-ಪ್ರತಿಪಕ್ಷ ಸದಸ್ಯರ ನಡುವೆ ಹೊಯ್ ಕೈ

ಮೊಳಗಿದ ಘೋಷಣೆಗಳು, ತಾರಕಕ್ಕೇರಿದ ಗದ್ದಲ

ಜಮ್ಮು-ಕಾಶ್ಮೀರ ಸದನ ರಣರಂಗ

ಶ್ರೀನಗರ: 370ನೇ ವಿಧಿ ಮತ್ತು 35ಎ ಮರುಜಾರಿಗೆ ಆಗ್ರಹಿಸಿ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸಿ ಶಾಸಕರೊಬ್ಬರು ಜಮ್ಮು-ಕಾಶ್ಮೀರ ವಿಧಾನಸಭೆಯಲ್ಲಿ ಗುರುವಾರ ಬ್ಯಾನರ್ ಪ್ರದರ್ಶಿಸಿದ್ದರಿಂದ ಸದನದಲ್ಲಿ ಭಾರೀ ಗದ್ದಲ ಉಂಟಾಗಿದೆ. ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ಶಾಸಕರು ಪರಸ್ಪರ ಕೈಕೈ ಮಿಲಾಯಿಸಿದ್ದು, ಸದನದಲ್ಲಿ ದೊಡ್ಡ ಕದನವೇ ನಡೆದುಹೋಗಿದೆ.

370ನೇ ವಿಧಿ ಮತ್ತು 35ಎ ಮರುಜಾರಿಗೆ ಆಗ್ರಹಿಸಿ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸುವ ಬ್ಯಾನರನ್ನು ಅವಾಮಿ ಇತ್ತೆಹಾದ್ ಪಕ್ಷದ ಶಾಸಕ ಲಂಗೇಟ್ ಷೇಕ್ ಖುರ್ಷಿದ್ ಅಹಮದ್ ಗುರುವಾರ ಸದನದ ಬಾವಿಗಿಳಿದು ಪ್ರದರ್ಶಿಸಿದರು. ಇದನ್ನು ತೀವ್ರವಾಗಿ ವಿರೋಧಿಸಿದ ಬಿಜೆಪಿ ಶಾಸಕರು, ಆಕ್ರೋಶ ವ್ಯಕ್ತಪಡಿಸಿ ಬ್ಯಾನರ್ ಕಿತ್ತುಕೊಳ್ಳಲು ಮುಂದಾದರು. ಆಗ ಬಿಜೆಪಿ ಸದಸ್ಯರನ್ನು ಮಾರ್ಷಲ್‌ಗಳು ತಡೆದರು. ಪಟ್ಟು ಬಿಡದ ಬಿಜೆಪಿ ಶಾಸಕರು ಬ್ಯಾನರ್ ಕಿತ್ತುಕೊಂಡರು. ಆಗ ಮಾರ್ಷಲ್‌ಗಳು ಬಿಜೆಪಿ ಸದಸ್ಯರ ಕೈನಿಂದ ಬ್ಯಾನರ್ ಕಿತ್ತುಕೊಳ್ಳಲು ಮುಂದಾದರು. ಆಗ ಆಡಳಿತ ಪಕ್ಷದ ಶಾಸಕರು, ಪ್ರತಿಪಕ್ಷ ಸದಸ್ಯರು, ಮಾರ್ಷಲ್‌ಗಳ ನಡುವೆ ಕೆಲ ನಿಮಿಷಗಳ ಕಾಲ ತಳ್ಳಾಟ, ನೂಕಾಟ ನಡೆಯಿತು.

ಬ್ಯಾನರ್ ಪ್ರದರ್ಶನ ಖಂಡಿಸಿ ಬಾವಿಗಿಳಿದು ಪ್ರತಿಭಟನೆ ನಡೆಸಿದ ಪ್ರತಿಪಕ್ಷ ಬಿಜೆಪಿ ಸದಸ್ಯರ ಮೇಲೆ ಆಡಳಿತ ಪಕ್ಷದ ಸದಸ್ಯರು ಹಲ್ಲೆ ಮಾಡಿದರು. ಬಿಜೆಪಿ ಶಾಸಕರೊಬ್ಬರ ಶಲ್ಯವನ್ನು ಕುತ್ತಿಗೆ ಸುತ್ತುಹಾಕಿ ಎಳೆದಾಡಿ ಥಳಿಸಿದರು. ಪಿಡಿಪಿ, ಎನ್‌ಸಿ, ಕಾಂಗ್ರೆಸ್ ಶಾಸಕರು ಹಾಗೂ ಬಿಜೆಪಿ ಶಾಸಕರ ನಡುವೆ ಹೊಡೆದಾಟ ನಡೆಯಿತು.

→ 4

- ಬುಧವಾರ ಅಂಗೀಕಾರವಾಗಿದ್ದ 370 ಮರುಜಾರಿ ನಿರ್ಣಯ
- ನಿರ್ಣಯ ವಿರೋಧಿಸಿ ಬಿಜೆಪಿಯಿಂದ ಸದನದಲ್ಲಿ ಪ್ರತಿಭಟನೆ
- ಪ್ರತಿಪಕ್ಷ ನಾಯಕ ಸುನಿಲ್ ಮಾತಿಗೆ ಆಡಳಿತ ಪಕ್ಷ ವಿರೋಧ
- ಅವಾಮಿ ಇತ್ತೆಹಾದ್ ಪಕ್ಷದ ಲಂಗೇಟ್ ಬ್ಯಾನರ್ ಪ್ರದರ್ಶನ
- ಬ್ಯಾನರ್ ಕಿತ್ತುಕೊಳ್ಳಲು ಬಿಜೆಪಿ ಶಾಸಕರ ಯತ್ನ-ಘೋಷಣೆ
- ಬ್ಯಾನರ್ ಮರು ವಶಕ್ಕೆ ಬಿಜೆಪಿ ಜತೆ ಮಾರ್ಷಲ್‌ಗಳ ಸೆಣಸಾಟ
- ಘೋಷಣೆ ನಿಲ್ಲಿಸದ 3 ಬಿಜೆಪಿ ಶಾಸಕರು ಸದನದಿಂದ ಹೊರಕ್ಕೆ
- ಬಿಜೆಪಿ ಶಾಸಕರ ವಿರುದ್ಧ ಮಾರ್ಷಲ್‌ಗಳಿಂದ ಬಲ ಪ್ರಯೋಗ
- 2 ಬಾರಿ ಕಲಾಪ ಮುಂದೂಡಿದ ಸ್ಪೀಕರ್ ಅಬ್ದುಲ್ ರಹೀಮ್

ಪುಟ ತೆರೆದಂತೆ...

ಜೀವತಜ್ಞರೊಂದಿಗೆ ಸಾಗರದಲ್ಲೊಂದು ಸುತ್ತು
ಶಿಶಿರ್ ಹೆಗಡೆ
ಶಿಶಿರ್ ಹೆಗಡೆ
ಸಂ.ಪುಟ | 6

ಕಲ್ಲೇಟಿಗೆ ಉದುರುವ ಮಾವಿನ ಕಾಯಿ
ಶತಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂದ್ರೆ ಮಾತು

ಕರ್ನಾಟಕ ಸರಕಾರ ವಾದ ಕಿಯಾ, ಧೋಕಾ ದಿಯಾ ಎಂದು ಮಹಾರಾಷ್ಟ್ರ ಬಿಜೆಪಿ ಸುಳ್ಳು ಜಾಹೀರಾತು ನೀಡಿ, ಜನರ ದಾರಿ ತಪ್ಪಿಸುತ್ತಿದೆ. ರಾಜ್ಯದಲ್ಲಿ ಶಕ್ತಿ ಯೋಜನೆ ಸೇರಿದಂತೆ ಐದಕ್ಕೆ ಐದೂ ಗ್ಯಾರಂಟಿಗಳು ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿವೆ. ಗೃಹಲಕ್ಷ್ಮಿಯ ಮುಂದಿನ ಕಂತಿನ ಹಣ ಒಂದೆರಡು ದಿನಗಳಲ್ಲೇ ಬಿಡುಗಡೆ ಕೂಡ ಆಗುತ್ತದೆ. ಆದರೆ ಬಿಜೆಪಿಯವರು ಸುಳ್ಳುಗಳನ್ನು ಹರಡುವುದಕ್ಕೇ ಕೋಟಿ ಕೋಟಿ ಖರ್ಚು ಮಾಡುತ್ತಿದ್ದಾರೆ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ಜೆಪಿಸಿ ಸಮಿತಿ ಭೇಟಿಗೆ ಕಾಂಗ್ರೆಸ್ ಕೆಂಡ । ಹುಬ್ಬಳ್ಳಿಯಲ್ಲಿ ಜಮೀರ್ ಸಭೆ

ವಕ್ಫ್ ಬೇಲಿ: ಜೆಪಿಸಿಗೆ ದೂರುಗಳ ಸುರಿಮಳೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಕ್ಫ್ ನೋಟಿಸ್ ಪ್ರಕರಣದಲ್ಲಿ ಜಂಟಿ ಸದನ ಸಮಿತಿ ಎಂಟ್ರಿ ಕೊಟ್ಟಿದ್ದು, ವಿಜಯಪುರ, ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ಸರಣಿ ದೂರುಗಳು ಬಂದಿವೆ. ಆದರೆ ಜಂಟಿ ಸದನ ಸಮಿತಿ ಅಧ್ಯಕ್ಷರೊಬ್ಬರೇ ಆಗಮಿಸುವ ಮೂಲಕ ಇದರಲ್ಲಿಯೂ ರಾಜಕೀಯ ಮಾಡುತ್ತಿದ್ದಾರೆ ಎಂದು ಕಾಂಗ್ರೆಸಿಗರು ದೂರಿದ್ದಾರೆ.

ಗುರುವಾರ ರಾಜ್ಯಕ್ಕೆ ಆಗಮಿಸಿದ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು ವಕ್ಫ್ ನೋಟಿಸ್ ಪಡೆದಿರುವ ರೈತರೊಂದಿಗೆ ಚರ್ಚೆ ನಡೆಸಿದರು. ಪಾಲ್ ಅವರು ಆಗಮಿಸಿರುವುದನ್ನು ಬಿಜೆಪಿಗರು ಸಮರ್ಥಿಸಿಕೊಂಡರೆ, ಕಾಂಗ್ರೆಸಿಗರು ಇದೊಂದು ರಾಜಕೀಯ ನಾಟಕವೆಂದು ವಾಗ್ದಾಳಿ ನಡೆಸಿದ್ದಾರೆ. ಪರ- ವಿರೋಧ ಚರ್ಚೆಯ ನಡುವೆ, ಸಮಸ್ಯೆ ಆಲಿಸಿರುವ ಪಾಲ್, ಈ ಬಗ್ಗೆ ಅಗತ್ಯ ಕಾನೂನು ಕ್ರಮದ ಭರವಸೆ ನೀಡಿದ್ದಾರೆ.

ವಕ್ಫ್ ವಿವಾದಕ್ಕೆ ಸಂಬಂಧ ಸಂಸದೀಯ ಜಂಟಿ ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು, ಹುಬ್ಬಳ್ಳಿ ಸೇರಿದಂತೆ ಇತರೆಡೆ ಭೇಟಿ ನೀಡಿ ಪರಿಶೀಲಿಸಿ ಮನವಿ ಪಡೆದಿದ್ದಾರೆ. ರೈತರು, ಮಠ, ಮಂದಿರಗಳ ಜಮೀನುಗಳ ಪಹಣಿ ಅಧಿಕಾರಿಗಳ ಸಹಕಾರವಿಲ್ಲದೆ ವಕ್ಫ್ ಆಸ್ತಿ ಬದಲಿಸಲು ಹೇಗೆ ಸಾಧ್ಯ? ನೂರಾರು ವರ್ಷದಿಂದ ವ್ಯವಸಾಯ ಮಾಡುತ್ತಿರುವ ರೈತರ ಜಮೀನು ವಕ್ಫ್ ಆಸ್ತಿ ಆಗಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ಸಂಸದೀಯ ಜಂಟಿ ಸಮಿತಿ(ಜೆಪಿಸಿ) ಒಂದು ನಾಟಕ ಕಂಪನಿ. ಜೆಪಿಸಿಗೆ ಒಂದು ನಿಯಮ ಇದೆ. ಸಮಿತಿ ಅಧ್ಯಕ್ಷರು ಭೇಟಿ ನೀಡುವ ಮೊದಲು ರಾಜ್ಯ ಸರಕಾರ ಹಾಗೂ ಅಧಿಕಾರಿಗಳಿಗೆ ತಿಳಿಸಬೇಕು. ಅದರಲ್ಲಿರುವ ಸದಸ್ಯರೆಲ್ಲರೂ ಬರಬೇಕು. ಒಬ್ಬರು ಅಧ್ಯಕ್ಷರು ಮಾತ್ರ ಭೇಟಿ ನೀಡಿ ಒಬ್ಬ ಸಂಸದರನ್ನು ಕರೆದುಕೊಂಡು ಬಂದಿದ್ದಾರೆ. ಅವರ ಪಕ್ಷದ ಕೆಲಸಕ್ಕೆ ಬಂದಿದ್ದಾರೆ ಎಂದು ಕುಟುಕಿದೆ. ವಕ್ಫ್ ಮಂಡಳಿ ನೋಟಿಸ್ ನೀಡಿರುವುದು ನಮ್ಮ ಅವಧಿಯಲ್ಲಿ ಅಲ್ಲ. ಬಿಜೆಪಿ ಅವಧಿಯಲ್ಲೇ ಅತ್ಯಧಿಕ ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಈಗ ವಕ್ಫ್ ಸಚಿವರ ಸೂಚನೆ ಮೇರೆಗೆ ಮಠಮಾನ್ಯಗಳ ಆಸ್ತಿಯ ಮೇಲೂ ಕಾಂಗ್ರೆಸ್ ಕಣ್ಣು ಬಿದ್ದಿದೆ ಎಂದು ಬಿಜೆಪಿ ಆರೋಪಿಸಿದೆ.

ಆದರೆ ವಿಷಯವನ್ನು ಕೈಗೆತ್ತಿಕೊಂಡಿದ್ದ ರಾಜ್ಯ ಬಿಜೆಪಿಗೆ ಇದರಲ್ಲಿ ಆಸಕ್ತಿ ಉಳಿದಿಲ್ಲ ಎನ್ನುವ ಅನುಮಾನ ಶುರುವಾಗಿದೆ. ವಿವಾದ ಸಂಬಂಧ ಯತ್ನಾಳ್ ಅವರ ಅಮರಣಾಂತರ ಸತ್ಯಾಗ್ರಹಕ್ಕೆ ರಾಜ್ಯ ನಾಯಕರ ಸಹಕಾರವಿಲ್ಲದೆ ಕೇಂದ್ರ ನಾಯಕರು ಬೆಂಬಲ ನೀಡುವಂತಾಗಿದೆ.

→ 4

ಹುಬ್ಬಳ್ಳಿಯಲ್ಲಿ ಸಂಸದ ಜಗದಾಂಬಿಕಾ ಪಾಲ್ ಅವರಿಗೆ ಬಿಜೆಪಿ ನಾಯಕರು ಅಹವಾಲು ಸಲ್ಲಿಸಿದರು. ಸಂಸದರಾದ ಗೋವಿಂದ ಕಾರಜೋಳ, ತೇಜಸ್ವಿ ಸೂರ್ಯ, ಶಾಸಕರಾದ ಅರವಿಂದ ಲಿಂಬಾವಳಿ, ಮಹೇಶ್ ಟೆಂಗಿನಕಾಯಿ ಇದ್ದರು.

ಜಮೀರ್ ವಿರುದ್ಧ ಕಾಂಗ್ರೆಸ್ ಶಾಸಕರೇ ಅಸಮಧಾನಗೊಂಡಿದ್ದಾರೆ. ಜಮೀರ್ ಪ್ರವಾಸ ತಡೆಯಿರಿ ಎನುತ್ತಿದ್ದಾರೆ. ಜಮೀರ್ ನನಗೆ ನಿಮ್ಮ ಅಪ್ಪನ ಆಸ್ತಿಯಾ ಎಂದಿದ್ದ. ನಾ ಇದು ನಿಮ್ಮ ಅಪ್ಪಂದಾ ಎಂದಿದ್ದೆ. ಜಮೀರ್ ಅಶ್ವಮೇಧವನ್ನು ಕಲಬುರಗಿ, ಬೀದರ್ ಸೇರಿ ಯಾರೂ ತಡೆಯಲಿಲ್ಲ. ನಾನು ಜಮೀರ್ ಅಶ್ವಮೇಧ ಕುದುರೆಯನ್ನು ವಿಜಯಪುರದಲ್ಲಿ ತಡೆದಿದ್ದೇನೆ.

– **ಬಸನಗೌಡ ಪಾಟೀಲ್ ಯತ್ನಾಳ,** ಬಿಜೆಪಿ ಶಾಸಕ

ಬೊಮ್ಮಾಯಿ ಸರಕಾರ ಇದ್ದಾಗಲೇ ಧಾರವಾಡದ ಜಿಲ್ಲಾಧಿಕಾರಿಗಳಿಗೆ ಕೇಳಿ ನೋಟಿಸ್ ಕೊಟ್ಟು ದಾಖಲೆ ತಿದ್ದಲಾಗಿದೆ. ಮುಖ್ಯಮಂತ್ರಿ ಈಗಾಗಲೇ ಆ ಬಗೆಗಿನ ದಾಖಲೆಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಕಂದಾಯ ಸಚಿವರೂ ದಾಖಲೆಗಳನ್ನು ಬಿಡುಗಡೆ ಮಾಡುತ್ತಾರೆ. ತಾಂತ್ರಿಕವಾಗಿ ಕೆಲವು ಅಧಿಕಾರಿಗಳು ತಪ್ಪುಗಳನ್ನು ಮಾಡಿರಬಹುದು. ಎಲ್ಲ ರೈತರಿಗೆ ರಕ್ಷಣೆ ಕೊಡುವಂತಹ ಕೆಲಸ ನಮ್ಮ ಸರಕಾರ ಮಾಡುತ್ತದೆ.

– **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಜಂಟಿ ಸಂಸದೀಯ ಸಮಿತಿ ಅಧ್ಯಕ್ಷರ ರಾಜ್ಯ ಭೇಟಿ ರಾಜಕೀಯ ದುರುದ್ದೇಶದಿಂದ ಕೂಡಿದೆ. ಕಮಿಟಿಯ ಸದಸ್ಯರನ್ನು ಬಿಟ್ಟು ಬರುತ್ತಿದ್ದಾರೆ. ಅವರು ಆ ರೀತಿ ಒಬ್ಬರೇ ಬರುವ ಹಾಗಿಲ್ಲ ಎಂದು ಸಮಿತಿಯ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

– **ಡಾ.ಜಿ.ಪರಮೇಶ್ವರ್** ಗೃಹ ಸಚಿವ

ದಾರಿದೀಪೋಕ್ತಿ

ನೀವು ನಿಮ್ಮ ಕೋಪವನ್ನು ಪ್ರದರ್ಶಿಸುವುದು ತಪ್ಪಲ್ಲ. ಅದೂ ಕೂಡ ಒಂದು ಉತ್ತಮ ಗುಣವೇ. ಆದರೆ ಅದು ಯಾವ ಕಾರಣಕ್ಕೂ ಕ್ರೌರ್ಯಕ್ಕೆ ತಿರುಗದಂತೆ ಎಚ್ಚರವಹಿಸಬೇಕು. ಕೋಪ ಯಾವತ್ತೂ ನಿಮ್ಮ ನಿಯಂತ್ರಣದಲ್ಲಿರಬೇಕು. ಅದು ನಿಮ್ಮಲ್ಲಿ ಪಶ್ಚಾತ್ತಾಪವನ್ನುಂಟು ಮಾಡಬಾರದು.

ವಕ್ರತುಂಡೋಕ್ತಿ

ವ್ಯಕ್ತಿಗಳ ಬಣ್ಣದಿಂದ ಅವರ ವ್ಯಕ್ತಿತ್ವ ಗೊತ್ತಾಗುವುದಿಲ್ಲ. ಆದರೆ ಅವರ ಹಲ್ಲಿನ ಬಣ್ಣದಿಂದಂತೂ ಗೊತ್ತಾಗುತ್ತದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ವಕ್ಫ್ ಬೋರ್ಡ್ ಆಸ್ತಿ ಒತ್ತುವರಿ ವಿವಾದ ಸುದ್ದಿ



5.53 ಲಕ್ಷ ಕೋಟಿ ರು.ಗೆ ತಲುಪಲಿದೆ ರಾಜ್ಯದ ಸಾಲದ ಮೊತ್ತ

40,000 ಕೋಟಿ ರು.ಗೂ ಹೆಚ್ಚು ಬಡ್ಡಿ ಕಟ್ಟುತ್ತಿರುವ ಸರಕಾರ

40,000 ಕೋಟಿ ರು. ಸಾಲ ಪಡೆಯಲು ಆರ್‌ಬಿಐ ಅಸ್ತು

ಬೆಂಗಳೂರು: ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ತಲಾ 40 ಸಾವಿರ ಕೋಟಿ ರು. ಅಭಿವೃದ್ಧಿ (ಸರಳ) ಸಾಲ ಪಡೆಯಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ರಾಜ್ಯ ಸರಕಾರ ಅನುಮತಿ ಪಡೆದುಕೊಂಡಿದೆ. ಇದರೊಂದಿಗೆ ರಾಜ್ಯದ ಒಟ್ಟಾರೆ ಸಾಲದ ಮೊತ್ತ 5.53 ಲಕ್ಷ ಕೋಟಿ ರು.ಗೆ ತಲುಪಲಿದೆ.

ಪ್ರಸಕ್ತ ಬಜೆಟ್‌ನಲ್ಲಿ ಕೇಂದ್ರ ಸರಕಾರದಿಂದ 6,855 ಕೋಟಿ ರು. ಹಾಗೂ ಮುಕ್ತ ಮಾರುಕಟ್ಟೆಯಿಂದ 96,840 ಕೋಟಿ ರು. ಸೇರಿ ಒಟ್ಟು 1.05 ಲಕ್ಷ ಕೋಟಿ ರು. ಸಾಲ ಪಡೆಯುವ ಅಂದಾಜು ಮಾಡಿದ್ದ ಸರಕಾರ, ಸೆಪ್ಟೆಂಬರ್‌ವರೆಗೆ 4 ಸಾವಿರ ಕೋಟಿ ರು. ಸಾರ್ವಜನಿಕ ಸಾಲ ಮಾಡಿದೆ. ಜತೆಗೆ ಮುಕ್ತ ಮಾರುಕಟ್ಟೆಯಿಂದ 3 ಸಾವಿರ ಕೋಟಿ ರು. ಸಾಲ ಪಡೆದಿತ್ತು.

ಅಕ್ಟೋಬರ್‌ನಲ್ಲಿ ಮುಕ್ತ ಮಾರುಕಟ್ಟೆಯಿಂದ 20 ಸಾವಿರ ಕೋಟಿ ರು. ಅಭಿವೃದ್ಧಿ ಸಾಲ ಪಡೆಯಲು ಆರ್‌ಬಿಐನಿಂದ ಅನುಮತಿ ಪಡೆದಿದ್ದ ಸರಕಾರ, ಇದೀಗ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ತಲಾ 20 ಸಾವಿರ ಕೋಟಿ ರು.ಗಳಂತೆ ಇನ್ನೂ 40 ಸಾವಿರ ಕೋಟಿ ರುಪಾಯಿ ಅಭಿವೃದ್ಧಿ ಸಾಲಕ್ಕೆ ಅನುಮತಿ ಪಡೆದುಕೊಂಡಿದೆ. ಇದೂ ಸೇರಿದಂತೆ ಡಿಸೆಂಬರ್ ಅಂತ್ಯಕ್ಕೆ 67 ಸಾವಿರ ಕೋಟಿ ರು. ಸಾಲ ಪಡೆದಂತಾಗಲಿದೆ.

ಈಗಾಗಲೇ ವಾರ್ಷಿಕ ಬಡ್ಡಿ ರೂಪದಲ್ಲಿ 40 ಸಾವಿರ ಕೋಟಿ ರು.ಗೂ ಹೆಚ್ಚು ಮೊತ್ತ ಪಾವತಿಸುತ್ತಿರುವ ಸರಕಾರ, ನೌಕರರ ವೇತನ ಪರಿಷ್ಕರಣೆ, ಗ್ಯಾರಂಟಿ ಯೋಜನೆ ಸೇರಿದಂತೆ ಹಲವು ಬದ್ಧತಾ ವೆಚ್ಚಗಳ ಭಾರವನ್ನೂ ಹೊತ್ತಿದೆ.

ವಿತ್ತೀಯ ಕೊರತೆ

ವಿತ್ತೀಯ ಹೊಣೆಗಾರಿಕೆ ಅಧಿನಿಯಮ-2002ರ ಅನ್ವಯ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3ರೊಳಗೆ ಇರಬೇಕು. ಅಂತೆಯೇ ಸಾಲದ ಪ್ರಮಾಣವು ಶೇ.25ರೊಳಗೆ ಇರಬೇಕು. ಪ್ರಸ್ತುತ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.2.95ರಷ್ಟಿದ್ದು, ಸಾಲದ ಪ್ರಮಾಣವು ಶೇ.23.68ಕ್ಕೆ ತಲುಪಿದೆ. ಬದ್ಧತಾ ವೆಚ್ಚದ ಜತೆಗೆ ಸಾಲ ಮರುಪಾವತಿ ಯತ್ತಲೂ ಸರಕಾರ ಗಮನ ಹರಿಸದಿದ್ದರೆ, ಸಾರ್ವಜನಿಕ ಆಸ್ತಿ ನಗದೀಕರಣ, ಸಬ್ಸಿಡಿಗಳ ಕಡಿತದಂತಹ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾದ ಅನಿವಾರ್ಯ ಸಹ ಎದುರಾಗಬಹುದು ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಸಹ ಎಚ್ಚರಿಸಿತ್ತು.

ಬಿಜೆಪಿ ರಾಷ್ಟ್ರಾಧ್ಯಕ್ಷರ ರೇಸ್‌ನಲ್ಲಿ ಕನ್ನಡಿಗ?

ಬೆಂಗಳೂರು: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಬಳಿಕ ಬಿಜೆಪಿ ರಾಷ್ಟ್ರಾಧ್ಯಕ್ಷರು ಬದಲಾವಣೆಯಾಗುವುದು ಬಹುತೇಕ ಖಚಿತವಾಗಿದ್ದು, ರೇಸ್‌ನಲ್ಲಿ ಕನ್ನಡಿಗರ ಹೆಸರೊಂದು ಮುನ್ನೆಲೆಗೆ ಬಂದಿದೆ. ಜೆ.ಪಿ.ನಡ್ಡಾ ಅವರು ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿರುವುದರಿಂದ ರಾಷ್ಟ್ರೀಯ ಅಧ್ಯಕ್ಷರ ಬದಲಾವಣೆ ಖಚಿತವಾಗಿದೆ. ಈಗಾಗಲೇ ಹಲವು ಹೆಸರುಗಳು ಓಡಾಡುತ್ತಿದ್ದು, ಇವುಗಳ ಪೈಕಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಬಿ.ಎಲ್.ಸಂತೋಷ್ ಅವರ ಹೆಸರು ಕೇಳಿಬಂದಿದೆ. ಅವರೊಂದಿಗೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್ ಮತ್ತು ಮಹಾರಾಷ್ಟ್ರದ ವಿನೋದ್ ಥಾವಡೆ ಹೆಸರುಗಳು ರೇಸಿನಲ್ಲಿವೆ. ಒಂದು ವೇಳೆ ಸಂತೋಷ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನ ಪಡೆದರೆ, ಈ ಹುದ್ದೆಗೆ ಏರಿದ ಮೊದಲ ಕನ್ನಡಿಗರಾಗುತ್ತಾರೆ.

ನಕ್ಸಲ್ ಕೂಬಿಂಗ್ ಕಾರ್ಯಾಚರಣೆ

ಚಿಕ್ಕಮಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಆರು ಜನ ನಕ್ಸಲರು ಓಡಾಡಿದ್ದಾರೆ ಎಂಬ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ನಕ್ಸಲ್ ನಿಗ್ರಹ ಪಡೆಯಿಂದ ಕೂಂಬಿಂಗ್ ಕಾರ್ಯಾಚರಣೆ ಚುರುಕು ಗೊಂಡಿದೆ. ಕಳಸ, ಶೃಂಗೇರಿ ತಾಲೂಕಿನ ಘಟ್ಟ ಪ್ರದೇಶಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ಆರಂಭಗೊಂಡಿದೆ.

ದೆಹಲಿ, ಮುಂಬೈ ಮೂಲದ ಕಂಪನಿಗಳ ಮೇಲೆ ಐಟಿ ದಾಳಿ

ಬೆಂಗಳೂರಿನಲ್ಲಿ ಐಟಿ, ಇಡಿ ಸದ್ದು

ಬೆಂಗಳೂರು: ರಾಜಧಾನಿಯ ಕೆಲವು ಕಂಪನಿಗಳ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡ ಗುರುವಾರ ಬೆಳ್ಳಂಬೆಳಗ್ಗೆ ದಾಳಿ ನಡೆಸಿದೆ.

ದೆಹಲಿ ಮತ್ತು ಮುಂಬೈ ಮೂಲದ ಕಂಪನಿಗಳ ಮೇಲೆ ದಾಳಿ ಐಟಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಇವುಗಳ ಬೆಂಗಳೂರಿನ ಬ್ರ್ಯಾಂಚ್ ಆಫೀಸ್‌ಗಳಲ್ಲಿ ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಚನ್ನಪಟ್ಟಣ, ಶಿಗ್ಗಾಂವಿ ಸೇರಿದಂತೆ ರಾಜ್ಯದ ಮೂರು ಕಡೆಗಳಲ್ಲಿ ನಡೆಯುತ್ತಿರುವ ಉಪಚುನಾವಣೆಗೂ ಈ ಐಟಿ ದಾಳಿಗೂ ಸಂಬಂಧವಿದೆ ಎಂದು ಹೇಳಲಾಗುತ್ತಿದೆ. ಹೆಚ್ಚಾಗಿ ಜ್ಯುವೆಲ್ಲರಿಗಳು ತೆರಿಗೆ ಹಣ ವಂಚಿಸುತ್ತಿದ್ದು , ಇವು ಐಟಿ ದಾಳಿಗಳಿಗೆ ಪದೇ ಪದೆ ತುತ್ತಾಗುತ್ತಿವೆ. ಕಂಪನಿಗಳು ತೆರಿಗೆ ವಂಚನೆ ದೂರುಗಳು ಕೇಳಿ ಬಂದ ಹಿನ್ನಲೆಯಲ್ಲಿ ದಾಳಿ ನಡೆಸಲಾಗಿದೆ.

ಅಮೆಜಾನ್‌ಗೆ ಇ.ಡಿ ಬಿಸಿ

ಗೌರಿ-ಗಣೇಶ ನಂತರ ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಭಾರೀ ವಹಿವಾಟು ನಡೆಸಿದ್ದ ಆನ್‌ಲೈನ್ ಮಾರಾಟ ತಾಣಗಳಾದ ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್‌ಗೆ ಜಾರಿ ನಿರ್ದೇಶನಾಲಯ (ಇ.ಡಿ.) ಗುರುವಾರ ಬಿಸಿ ಮುಟ್ಟಿಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಅಡಿಯಲ್ಲಿ ಇ.ಡಿ ಅಧಿಕಾರಿಗಳ ದೊಡ್ಡ ತಂಡ, ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ಗೆ ಸೇರಿದ ಬೆಂಗಳೂರು, ಹೈದರಾಬಾದ್, ದೆಹಲಿ ಸೇರಿ ದೇಶದ ವಿವಿಧೆಡೆಯ 16 ಕಚೇರಿ ಮತ್ತು ಗೋದಾಮುಗಳ ಮೇಲೆ ಹಾಗೂ ಎರಡೂ ಸಂಸ್ಥೆಗಳ ಮಾರಾಟ ಘಟಕಗಳ ಮೇಲೆ ಅಚ್ಚರಿಯ ದಾಳಿ ನಡೆಸಿ ಶೋಧ ಕೈಗೊಂಡಿದೆ.

ಪವಿತ್ರಾ ಜಾಮೀನು ಅರ್ಜಿ ಮುಂದಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ1 ಆರೋಪಿ ಪವಿತ್ರಾಗೌಡ ಸೇರಿದಂತೆ ಐವರ ಜಾಮೀನು ಅರ್ಜಿ ವಿಚಾರಣೆಯನ್ನು ನ.21 ಕ್ಕೆ ಹೈಕೋರ್ಟ್ ಮುಂದೂಡಿದೆ. ಪವಿತ್ರಾಗೌಡ, ನಾಗರಾಜ್, ಲಕ್ಷ್ಮಣ್, ಅನುಕುಮಾರ್ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಕೋರ್ಟ್‌ಗೆ ಆಗಮಿಸಿದ್ದ ಪವಿತ್ರಾಗೌಡ ತಾಯಿ, ಮಗಳಿಗೆ ಜಾಮೀನು ಸಿಗದ ಹಿನ್ನಲೆಯಲ್ಲಿ ಬೇಸರದಿಂದಲೇ ಹೊರನಡೆದರು. ಕೊಲೆ ಪ್ರಕರಣದಲ್ಲಿ ಎ2 ಆರೋಪಿ ದರ್ಶನ್ ಜಾಮೀನು ಅರ್ಜಿಯೂ 21ಕ್ಕೆ ವಿಚಾರಣೆ ನಡೆಯಲಿದೆ. ಸದ್ಯ ಮಧ್ಯಂತರ ಜಾಮೀನು ಪಡೆದು ದರ್ಶನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಂಚಿಕೆ ರದ್ದತಿಗೆ ಪ್ರಾಧಿಕಾರದ ಸಭೆಯಲ್ಲಿ ಒಮ್ಮತದ ನಿರ್ಣಯ

ಮುಡಾ: 50:50 ನಿವೇಶನಗಳಿಗೆ ಕಂಟಕ

ಮೈಸೂರು: ಅಕ್ರಮ ಪ್ರಕರಣ ಬೆಳಕಿಗೆ ಬಂದ ಬಳಿಕ ಇದೇ ಮೊದಲ ಬಾರಿಗೆ ಮುಡಾ ಸಭೆ ನಡೆಸಿದ್ದು, ಈ ಸಭೆಯಲ್ಲಿ 50:50 ನಿವೇಶನ ಗಳನ್ನು ಜಪ್ತಿ ಮಾಡಲು ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಗುರುವಾರ ನಡೆದ ಮುಡಾ ಸಭೆಯಲ್ಲಿ 50-50 ಸೈಟಗಳ ಜಪ್ತಿಗೆ ಸದಸ್ಯರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದು, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ವರದಿ ಬಂದ ಬಳಿಕ ಜಪ್ತಿಯ ವರದಿ ಅಂಗೀ ಕರಿಸಲು ತೀರ್ಮಾನಿಸಲಾಗಿದೆ. ಈ ಮೂಲಕ ಅಕ್ರಮವಾಗಿ 50:50 ಸೈಟ್ ಪಡೆದವರಿಗೆ ಸಂಕಷ್ಟ ಕಟ್ಟಿಟ್ಟ ಬುತ್ತಿ ಎನ್ನಲಾಗಿದೆ. ನಿವೇಶನ ಜಪ್ತಿಯಾದ ಬಳಿಕ ಕಾನೂನು ಬದ್ಧವಾಗಿ ದ್ದವರಿಗೆ ವಾಪಸ್ ನೀಡಲು ತೀರ್ಮಾನಕ್ಕೆ ಬರಲಾಗಿದೆ. ಇದೇ ತಿಂಗಳ 21ರಂದು ಮತ್ತೊಂದು ಸಾಮಾನ್ಯ ಸಭೆಯ ದಿನಾಂಕ ನಿಗದಿಯಾಗಿದೆ.

ಡಿ.ರೂಪಾಗೆ ಹಿನ್ನಡೆ

ದೆಹಲಿ: ಐಎಎಸ್ ರೋಹಿಣಿ ಸಿಂಧೂರಿ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆ ರದ್ದು ಕೋರಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದ ಐಪಿಎಸ್ ಡಿ.ರೂಪಾ ಮೌದ್ಗಿಲ್ ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ. ಅರ್ಜಿ ವಾಪಸ್ ಪಡೆಯದಿದ್ದರೆ ವಜಾ ಮಾಡುವುದಾಗಿ ಕೋರ್ಟ್ ಎಚ್ಚರಿಕೆ ನೀಡಿದ ಬಳಿಕ ಅರ್ಜಿ ವಾಪಸ್ ಪಡೆದಿದ್ದಾರೆ.

ರೈಲಿನಂಥ ಸಾಲಿದ್ದರೆ ಇದ್ದಲ್ಲಿಯೇ ರೈಲು ಟಿಕೆಟ್

ರೈಲು ಟಿಕೆಟ್ ಇನ್ನಷ್ಟು ಹತ್ತಿರ

● **ಅಪರ್ಣಾ ಎ.ಎಸ್.**

ಬೆಂಗಳೂರು: ಸೀಟು ಕಾಯ್ದಿರಿಸದೇ ಇರುವ ಪ್ರಯಾಣಿಕರಿಗೆ ಇನ್ನಷ್ಟು ಗ್ರಾಹಕಸ್ನೇಹಿ ಕ್ರಮ ಕೈಗೊಳ್ಳಲು ಮುಂದಾಗಿರುವ ನೈಋತ್ಯ ರೈಲ್ವೇ ಇಲಾಖೆ ಇದೀಗ ವಿನೂತನ ಯೋಜನೆಯೊಂದನ್ನು ಆರಂಭಿಸಿದೆ.

ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಸುವವರು ನಿಲ್ದಾಣಕ್ಕೆ ತೆರಳಿ ಕೆಲ ಗಂಟೆಗಳ ಮೊದಲು ಟಿಕೆಟ್ ಖರೀದಿಸಬೇಕು. ಆದರೆ ಅನೇಕ ಸಮಯದಲ್ಲಿ, ದೊಡ್ಡ ಸರತಿ ಸಾಲುಗಳಿರುವುದರಿಂದ ಅನೇಕರಿಗೆ ಟಿಕೆಟ್ ತಪ್ಪುವ ಸಾಧ್ಯತೆಯಿರುತ್ತದೆ. ಇದೀಗ ರೈಲ್ವೆ ಇಲಾಖೆಯು ನಗರದಲ್ಲಿ ಪ್ರಾಯೋಗಿಕವಾಗಿ ಪ್ರಯಾಣಿಕರು ಕ್ಯೂನಿಂತ ಜಾಗದಲ್ಲಿಯೇ ಅವರಿಗೆ ಟಿಕೆಟ್ ತಲುಪಿಸುವ ವ್ಯವಸ್ಥೆಯನ್ನು ಪರಿಚಯಿಸಿದ್ದು, ಕಾಯ್ದಿರಿಸದ ಮೊಬೈಲ್ ಕೌಂಟರ್ ಮೂಲಕ ಟಿಕೆಟ್ ವ್ಯವಸ್ಥೆ ಮಾಡಿರುವುದರಿಂದ ಪ್ರಯಾಣಿಕರು ನಿಂತಲ್ಲಿಯೇ ರೈಲ್ವೆ ಟಿಕೆಟ್‌ನ್ನು ಪಡೆಯಬಹುದಾಗಿದೆ.

ನೈಋತ್ಯ ರೈಲ್ವೆ ನಗರದ ಜನದಟ್ಟಣೆಯ ಮೂರು ರೈಲ್ವೆ ನಿಲ್ದಾಣಗಳಲ್ಲಿ ಸರತಿಯಲ್ಲಿ ನಿಂತ ಪ್ರಯಾಣಿಕರ ಕೈಗೆ ಟಿಕೆಟ್ ನೀಡುವ ವ್ಯವಸ್ಥೆಯನ್ನು ಮಾಡಿದ್ದು, ನಿಲ್ದಾಣದ 500ಮೀ. ವ್ಯಾಪ್ತಿಯಲ್ಲಿ ಪ್ರಯಾಣಿಕರು ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತಿದ್ದರೆ ಈ ಸೌಲಭ್ಯದಿಂದಾಗಿ ನಿಂತ ಜಾಗದಲ್ಲಿಯೇ ಟಿಕೆಟ್ ಖರೀದಿ ಮಾಡಬಹುದಾಗಿದೆ. ಈ ವ್ಯವಸ್ಥೆಯಲ್ಲಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್‌ಗೆ ಹಣ ಪಾವತಿಸುವ ವ್ಯವಸ್ಥೆಯನ್ನು ಕಲ್ಪಿಸಿದೆ.

→ 4

ಮೊಬೈಲ್ ಕೌಂಟರ್‌ಗಳ ವಿಶೇಷತೆ

- ಭಾರಿ ಜನದಟ್ಟಣೆ ಇರುವ ಸಮಯದಲ್ಲಿ ಸರತಿಯಲ್ಲಿ ನಿಂತಿರುವಲ್ಲಿಯೇ ಟಿಕೆಟ್ ಹಂಚಿಕೆ
- ಇದಕ್ಕಾಗಿ ನೈಋತ್ಯ ರೈಲ್ವೇ ಇಲಾಖೆಯಿಂದ ಪ್ರತ್ಯೇಕ ಟಿಕೆಟಿಂಗ್ ಯಂತ್ರಗಳ ಖರೀದಿ
- 500 ಮೀಟರ್ ವ್ಯಾಪ್ತಿಯಲ್ಲಿ ಸರತಿಯಿದ್ದರೆ, ಸಿಬ್ಬಂದಿಗಳಿಂದ ಟಿಕೆಟ್ ಹಂಚಿಕೆ, ಪ್ರಾಯೋಗಿಕವಾಗಿ ಬೆಂಗಳೂರಿನ ಪ್ರಮುಖ ಮೂರು ರೈಲು ನಿಲ್ದಾಣದಲ್ಲಿ ಜಾರಿ
- ಗ್ರಾಹಕರ ಪ್ರತಿಕ್ರಿಯೆ, ಈ ಯೋಜನೆಯ ಸಾಧಕ-ಬಾಧಕ ಗಮನಿಸಿ ಇತರೆ ನಿಲ್ದಾಣಗಳಿಗೆ ವಿಸ್ತರಣೆ

ಟಿಬಿ ಡ್ಯಾಂ ಗೇಟ್ ಮುರಿದ ಬೆನ್ನಲ್ಲೇ ಗಂಭೀರ ಚಿಂತನೆ । 10 ಸಾವಿರ ಕೋಟಿ ರು. ವೆಚ್ಚದಲ್ಲಿ ಕಾಯಕಲ್ಪ

ಅಣೆಕಟ್ಟುಗಳ ರಿಪೇರಿಗೆ ಸಿದ್ಧತೆ

ವಿಶ್ವವಾಣಿ ವಿಶೇಷ

ಬೆಂಗಳೂರು: ಕೆಲ ತಿಂಗಳ ಹಿಂದೆ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಮುರಿದು ಸಂಭವಿಸಿದ ಭಾರಿ ಅನಾಹುತದಿಂದ ಎಚ್ಚೆತ್ತಿರುವ ನೀರಾವರಿ ಇಲಾಖೆಯು ರಾಜ್ಯದಲ್ಲಿರುವ ಪ್ರಮುಖ ಜಲಾಶಯಗಳ ಪುನಶ್ಚೇತನಕ್ಕೆ ಸಿದ್ಧತೆ ನಡೆಸಿಕೊಂಡಿದೆ.

ಯಾವುದೇ ಒಂದು ಜಲಾಶಯ ನಿರ್ಮಾಣಗೊಂಡ 50 ವರ್ಷಗಳ ಬಳಿಕ ಅದರ ಕ್ರಸ್ಟ್‌ಗೇಟ್ ಸೇರಿದಂತೆ ಇತರೆ ವಸ್ತುಗಳನ್ನು ಬದಲಾಯಿಸಬೇಕು ಎನ್ನುವ ತಜ್ಞರ ವರದಿ ಇದೆ. ಆದರೆ ಕರ್ನಾಟಕದಲ್ಲಿರುವ ಬಹುತೇಕ ಬೃಹತ್ ಜಲಾಶಯಗಳು ನಿರ್ಮಾಣಗೊಂಡು 75ರಿಂದ ನೂರು ವರ್ಷ ಕಳೆದರೂ ಗೇಟ್‌ಗಳನ್ನು ಬದಲಾಯಿಸಿಲ್ಲ. ಆದ್ದರಿಂದ ಇದೀಗ ಹಂತಹಂತವಾಗಿ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸುವ ಯೋಜನೆಯನ್ನು ಇಲಾಖೆ ಕೈಗೆತ್ತಿಕೊಂಡಿದೆ.

ಮುಂಗಾರು ಮಳೆಗಾಲದ ಸಮಯದಲ್ಲಿ ಟಿಬಿ ಜಲಾಶಯಗಳ 17ನೇ ಗೇಟ್ ಕೊಚ್ಚಿಹೋಗಿ ಭಾರಿ ಅವಾಂತರ ಸೃಷ್ಟಿಸಿತ್ತು. ಇದರಿಂದ ಎಚ್ಚೆತ್ತ ನೀರಾವರಿ ಇಲಾಖೆ 50 ವರ್ಷ ಪೂರ್ಣಗೊಳಿಸಿರುವ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸಲು ಅಥವಾ ದುರಸ್ತಿ ಕಾಮಗಾರಿ ನೆರವೇರಿಸಲು ಚಿಂತನೆ ನಡೆಸಿದೆ. ಏಕಕಾಲಕ್ಕೆ ಎಲ್ಲ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸಲು ಸುಮಾರು 10 ಸಾವಿರ ಕೋಟಿ ರು. ಅಗತ್ಯವಿದೆ. ಆದ್ದರಿಂದ ಈ ಅನುದಾನವನ್ನು ಭರಿಸಲು ಕೇಂದ್ರ ಸರಕಾರಕ್ಕೆ ಮನವಿ ಮಾಡುವ ಸಾಧ್ಯತೆಯಿದೆ.

ಬೃಹತ್ ಜಲಾಶಯಗಳ ಗೇಟ್‌ಗಳನ್ನು ಬದಲಿಸಲು ಈಗಿನಿಂದಲೇ ತಯಾರಿ ಆರಂಭಿಸಿದರೆ, ಮುಂದಿನ ಬೇಸಿಗೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬಹುದು. ಒಂದೊಂದೇ ಜಲಾಶಯಗಳ ಬದಲಾವಣೆ ಮಾಡುವುದಕ್ಕಿಂತ ಕೇಂದ್ರ ಜಲಸಂಪನ್ಮೂಲ ಇಲಾಖೆಯಿಂದ ಆರ್ಥಿಕ ನೆರವಿನೊಂದಿಗೆ ನಿಗದಿತ ಸಮಯದಲ್ಲಿ ಎಲ್ಲ ಜಲಾಶಯಗಳ ರಿಪೇರಿ ಕಾರ್ಯ ಮಾಡುವ ಲೆಕ್ಕಾಚಾರದಲ್ಲಿ ರಾಜ್ಯ ಸರಕಾರವಿದೆ.

→ 4

ಏನಿದು ಡ್ರಿಪ್ ಯೋಜನೆ?

- ಜಲಾಶಯಗಳ ಪುನಶ್ಚೇತನಕ್ಕೆಂದೇ ಕೇಂದ್ರ ಸರಕಾರ ರೂಪಿಸಿರುವ ಯೋಜನೆ
- ಪ್ರಮುಖ ಜಲಾಶಯಗಳ ಪುನಶ್ಚೇತನಕ್ಕೆ ಈ ಯೋಜನೆಯಲ್ಲಿ ಅನುದಾನ ಬಿಡುಗಡೆ
- ಕರ್ನಾಟಕ ಸೇರಿದಂತೆ ಏಳು ರಾಜ್ಯಗಳನ್ನು ಗಮನದಲ್ಲಿರಿಸಿಕೊಂಡು ಡ್ರಿಪ್ ಸ್ಕೀಂ ಆರಂಭ
- ಕೇಂದ್ರ ಜಲಸಂಪನ್ಮೂಲ ಇಲಾಖೆ ಒಪ್ಪಿಗೆ ನೀಡಿದರೆ, ಬಹುಪಾಲು ಅನುದಾನ ಸಿಗುವ ಸಾಧ್ಯತೆ

ಡ್ರಿಪ್ಸ್ ಯೋಜನೆಯಿಂದ ಹಣ

ದೇಶದಲ್ಲಿರುವ ಜಲಾಶಯಗಳ ಪುನಶ್ಚೇತನ ಹಾಗೂ ದುರಸ್ತಿ ಕಾರ್ಯಗಳಿಗೆ ಅಗತ್ಯವಿರುವ ಅನುದಾನವನ್ನು ನೀಡುವುದಕ್ಕಾಗಿಯೇ ಕೇಂದ್ರ ಜಲಶಕ್ತಿ ಇಲಾಖೆಯು ಡ್ರಿಪ್ಸ್ ಎನ್ನುವ ಯೋಜನೆಯನ್ನು ಹೊಂದಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದೀಗ ಈ ಯೋಜನೆಯಡಿ ಯಲ್ಲಿ ಅನುದಾನ ಪಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ನಾಳೆ ಟಿಎಸ್ಎಸ್‌ನಲ್ಲಿ ತರಬೇತಿ ಕಾರ್ಯಾಗಾರ

ಶಿರಸಿ: ಇಲ್ಲಿನ ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ (ಟಿಎಸ್ಎಸ್) ಪ್ರಧಾನ ಕಚೇರಿಯ ವ್ಯಾಪಾರ ಅಂಗಳದಲ್ಲಿ ನ. 9 ರಂದು ಸಹಕಾರ ಸಂಘಗಳ ನಿರ್ದೇಶಕರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ. ಅಂದು ಬೆಳಗ್ಗೆ ಬೆಳಿಗ್ಗೆ 9.30 ಗಂಟೆಯಿಂದ ಆರಂಭ ವಾಗುವ ಈ ಕಾರ್ಯಕ್ರಮವನ್ನು ಟಿ.ಎಸ್.ಎಸ್. ಲಿ., ಶಿರಸಿ, ಉತ್ತರ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿ., ಕುಮಟ, ಪಿ.ಎಲ್.ಡಿ, ಬ್ಯಾಂಕ್ ಶಿರಸಿ, ಹಾಗೂ ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ಪ್ರಾಥಮಿಕ ಸಂಘಗಳ ಸಹಕಾರದೊಂದಿಗೆ ಆಯೋಜಿಸಲಾಗಿದೆ. ಸಾಗರದ ಚಾರ್ಟ್‌ಡ್ ಅಕೌಂಟಂಟ್ ಬಿ.ವಿ. ರವೀಂದ್ರನಾಥ ಅವರು ಸಹಕಾರ ಸಂಘಗಳ ಆಡಳಿತದಲ್ಲಿ ನಿರ್ದೇಶಕರ ಪಾತ್ರ ಎಂಬ ವಿಷಯ ವಾಗಿ ತರಬೇತಿ ನೀಡಲಿದ್ದಾರೆ. ಬೆಂಗಳೂರಿನ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಹೆಗಡೆ ಅವರು ಸಹಕಾರ ಸಂಘಗಳ ವ್ಯವಸ್ಥಾಪನೆಯಲ್ಲಿ ಆಡಳಿತ ಮಂಡಳಿ ಸದಸ್ಯರು ಅರಿಯಬೇಕಾದ ಆರ್ಥಿಕ ತಃಖ್ತೆಗಳು ವಿಷಯದ ಮೇಲೆ ಉಪನ್ಯಾಸ ನೀಡಲಿದ್ದಾರೆ.ಉತ್ತರ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ವಿ.ಎನ್.ಭಟ್ಟ ಅಳ್ಳಂಕಿ ಉದ್ಘಾಟಿಸಲಿದ್ದಾರೆ. ಶಿರಸಿ ಟಿಎಂಎಸ್ ಅಧ್ಯಕ್ಷ ಜಿ.ಟಿ.ಹೆಗಡೆ ತಟ್ಟೀಸರ, ಸಿದ್ದಾಪುರ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ, ಯಲ್ಲಾಪುರ ಟಿಎಂಎಸ್ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿಕುಂಬ್ರಿ, ಕದಂಬ ಮಾರ್ಕೆಟಿಂಗ್ ಸಹಕಾರ ಸಂಘ ಅಧ್ಯಕ್ಷ ಶಂಭುಲಿಂಗ ಹೆಗಡೆ ನಿಡಗೋಡ, ಜಿಲ್ಲಾ ಸಹಕಾರಿ ಯೂನಿಯನ್ ಉಪಾಧ್ಯಕ್ಷ, ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಶ್ರೀಪಾದ ಎನ್. ರಾಯ್ಸದ್ ಉಪಸ್ಥಿತರಿರಲಿದ್ದಾರೆ. ಎಲ್ಲ ಸಹಕಾರ ಸಂಘದ ನಿರ್ದೇಶಕರು, ಮತ್ತು ಮುಖ್ಯ ಕಾರ್ಯನಿರ್ವಾಹಕರು ಆಗಮಿಸಲು ಆಯೋಜಕರು ಹಾಗೂ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿರುವ ಟಿಎಸ್ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಪ್ರಕಟಣೆ ಮೂಲಕ ಆಮಂತ್ರಿಸಿದ್ದಾರೆ.

ಕಾನಸೂರು ಗೆಳೆಯರ ಬಳಗದಿಂದ ರಾಜ್ಯೋತ್ಸವ

ಶಿರಸಿ: ಕಾನಸೂರಿನ ಗೆಳೆಯರ ಬಳಗದ ವತಿಯಿಂದ 4 ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನ.9 ರಂದು ರಾತ್ರಿ 8.30 ರಿಂದ ನಡೆಯಲಿದೆ ಎಂದು ಸಂಘಟಕ ರಾಜು ಕಾನಸೂರು ತಿಳಿಸಿದ್ದಾರೆ. ಅವರು ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಸಭಾ ಕಾರ್ಯಕ್ರಮವನ್ನು ಅನಂತಮೂರ್ತಿ ಟ್ರಸ್ಟ್ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಉದ್ಘಾಟಿಸಲಿದ್ದು, ಗ್ರಾಪಂ ಅಧ್ಯಕ್ಷೆ ಅನಿತಾ ನಾಯ್ಕ ಅಧ್ಯಕ್ಷತೆ ವಹಿಸಲಿದ್ದಾರೆ. ಸನ್ಮಾನಿತರನ್ನು ಉದ್ಯಮಿ ಆರ್.ಜಿ.ಶೇಟ್ ಸನ್ಮಾನಿಸಲಿದ್ದು, ಅತಿಥಿಗಳಾಗಿ ಗ್ರಾಪಂ ಉಪಾಧ್ಯಕ್ಷೆ ಸವಿತಾ, ಸದಸ್ಯರಾದ ಶಶಿಕಾಂತ ಹೆಗಡೆ, ಮನೋಜ ಶಾನಭಾಗ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಾಘವೇಂದ್ರ ನಾಯ್ಕ ಉಪಸ್ಥಿತರಿರಲಿದ್ದಾರೆ. ಅಂತೆಯೇ ಅನೇಕ ಗಣ್ಯರನ್ನು ಸನ್ಮಾನಿಸಿ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದೆಂದು ತಿಳಿಸಿದ್ದಾರೆ.

ನಗರದಲ್ಲಿ ಹೊಂಡ, ಗುಂಡಿಗಳ ಗಂಡಾಂತರ

ನಗರ ಸಭೆ ಹಾಗೂ ಪಿ ಡಬ್ಲ್ಯೂ ಡಿ ಇಲಾಖೆಗೆ ಒಳಪಡದ ನಗರದ ರಸ್ತೆ | ನಗರದ ಎಲ್ಲ ಸಂಪರ್ಕ ಕೊಂಡಿಗಳೂ ಹೊಂಡಮಯ

ವಿನುತಾ ಹೆಗಡೆ

ಶಿರಸಿ: ಒಂದು ನಗರ ಅಥವಾ ಒಂದು ಊರು ಹೇಗಿದೆ ಎಂದು ಅರಿತುಕೊಳ್ಳಲು ಅಲ್ಲಿನ ರಸ್ತೆಯನ್ನು ನೋಡಿದರೆ ಸಾಕಂತೆ ಅದೆಷ್ಟು ಮುಂದುವರಿದಿದೆ ಅಥವಾ ಅದೆಷ್ಟು ಭಿವೃದ್ಧಿಹೊಂದಿದೆ, ಸಮೃದ್ಧವಾಗಿದೆ ಎಂದು ಅರಿತುಕೊಳ್ಳುವುದಕ್ಕೆ.

ಶಿರಸಿ ನಗರ ಸಮೃದ್ಧವಾಗಿಯೇ ಇದೆ ಆದರೆ ರಸ್ತೆಯೊಂದನ್ನು ಹೊರತು ಪಡಿಸಿ. ನಗರದ ಹೃದಯಭಾಗದ ರಸ್ತೆಯಲ್ಲಿ ವಾಹನ ಸವಾರರು ಚಲಿಸಿದರೆ ಸಾಕು ತಮ್ಮ ಹೃದಯವನ್ನೇ ಕೈನಲ್ಲಿ ಹಿಡುದುಕೊಂಡು ಸಾಗಬೇಕು ಅಂಥ ಸ್ಥಿತಿ ರಸ್ತೆಯದ್ದಾಗಿದೆ.

ಹೊರ ಭಾಗದಿಂದ ಶಿರಸಿ ನಗರಕ್ಕೆ ಬರುವ ಹುಬ್ಬಳ್ಳಿ ರಸ್ತೆಯ ನೋಡಿದರೆ ಅಬ್ಬಾ.. ಇದು ರಸ್ತೆಯೋ ಗುಂಡಿಯೋ ಎಂದುಕೊಂಡು ಜೀವ ಕೈನಲ್ಲಿ ಹಿಡಿದು ಸಾಗಬೇಕು. ಚಿಪಗಿ ಮಾರ್ಗದಾಟಿ ಮುಂಡುಗೋಡಿನ ವರೆಗೂ ಹೆದ್ದಾರಿ ಭಯಾನಕವಾಗಿದೆ.

ಇನ್ನು ಯಲ್ಲಾಪುರ ಮಾರ್ಗ ನೋಡಿದರೆ ಸೋಂದಾ ಕ್ರಾಸ್ ವರೆಗೂ ರಸ್ತೆ ಹದಗೆಟ್ಟು ಹಾಳಾಗಿದೆ. ಸೋಂದಾ ನಂತರದ ರಸ್ತೆ ಸ್ವಲ್ಪ ಮಟ್ಟಿಗೆ ಚನ್ನಾಗಿದೆ. ಅಂತೆಯೇ ಕುಮಟಾ ಮಾರ್ಗದ ಅಗಸೆ ಬಾಗಿಲು, ನಿಲೇಕಣಿ ಕಡೆಗಳಲ್ಲಿ ರಸ್ತೆ ಹುಡುಕುವುದೇ ಸವಾರರಿಗೆ ಸವಾಲಾಗಿದೆ. ಅಷ್ಟೊಂದು ಕೆಟ್ಟದಾಗಿ ರಸ್ತೆಯಲ್ಲಿ ಹೊಂಡವೇ ಎದ್ದಿದೆ. ಸವಾರರು ಹೊಂಡ ತಪ್ಪಿಸಲು ಹೋಗುವ ಪ್ರಮೇಯವೇ ಇಲ್ಲ. ಏಕೆಂದರೆ ರಸ್ತೆಯಲ್ಲಿ ಇರುವುದೆಲ್ಲ ಹೊಂಡವೇ ಆಗಿದೆ.

ಹೊಂಡದಿಂದ ಕೂಡಿದ ಶಿರಸಿ ನಗರದ ನಿಲೇಕಣಿ ರಸ್ತೆ.

ನಗರದ ನಗರ ಸಭೆ ಎದುರಿನ ರಸ್ತೆ, ತಹಸೀಲ್ದಾರ್ ಕಚೇರಿ ಎದುರಿನ ರಸ್ತೆ, ರಾಘವೇಂದ್ರ ವೃತ್ತದ ಬಳಿ, ಯಲ್ಲಾಪುರ ರಸ್ತೆ, ಇವೆಲ್ಲ ಪಿ ಡಬ್ಲ್ಯೂ ಡಿ ರಸ್ತೆಯೇ ಆಗಿದ್ದು, ಸ್ವಲ್ಪವೂ ಸರಿಯಾಗಿಲ್ಲ. ಗ್ರಾಮೀಣ ಭಾಗದ ಸವಾರರೆಲ್ಲ ನಗರ ಸಭೆ ಹಾಗೂ ಪಿ ಡಬ್ಲ್ಯೂ ಡಿ ಇಲಾಖೆಗೆ ಶಾಪ ಹಾಕುತ್ತ ಸಾಗುವಂತಾಗಿದೆ.

ಪಿ ಡಬ್ಲ್ಯೂ ಡಿ ಇಲಾಖೆಯವರ ಪ್ರಕಾರ ರಸ್ತೆಗೆ ಕಲ್ಲು, ಜೆಲ್ಲಿ ಹಾಕಿದರೂ ನಿಲ್ಲದು, ಅದು ಕಿತ್ತೆದ್ದು ಹೋಗುತ್ತದೆ. ಆದ್ದರಿಂದ ತೇಪ ಹಾಕುವ ಕೆಲಸ ಮಾಡುವುದಿಲ್ಲ. ಮಳೆ ಇದ್ದುದರಿಂದ ಅದು ಕಷ್ಟ ಆದ್ದರಿಂದ ರಸ್ತೆ ಹಾಗೆಯೇ ಬಿಡಲಾಗಿದೆ ಎನ್ನಲಾಗಿದೆ. ಇನ್ನು ನಗರ ಸಭೆ ವ್ಯಾಪ್ತಿಗೆ ಬರುವ ರಸ್ತೆಯನ್ನು ನಾವು ಈಗಾಗಲೇ ದುರಸ್ತಿ ಮಾಡಲು ಮುಂದಾಗಿದ್ದೇವೆ. ಅಂತೆಯೇ ನಾವು ಪಿ ಡಬ್ಲ್ಯೂ ಡಿಗೆ ಸಾಕಷ್ಟು ಮನವಿಯನ್ನೂ ಮಾಡಿದ್ದೇವೆ ರಸ್ತೆ ರಿಪೇರಿ ಮಾಡಲು ಎಂದು ನಗರ ಸಭೆ ಅಧ್ಯಕ್ಷೆ ಶರ್ಮಿಳಾ ಕೂಡಾ ವಿಶ್ವವಾಣಿಗೆ ತಿಳಿಸಿದ್ದಾರೆ.

ಮೊನ್ನೆ ಆಸ್ಪತ್ರೆಗೆಂದು ನಾನು ನಗರಕ್ಕೆ ಬಂದಿದ್ದು, ನಗರದ ರಸ್ತೆಯನ್ನು ನೋಡಿ, ನಗರ ಸಭೆಗೆ ಹಿಡಿಶಾಪ ಹಾಕಿದ್ದೇನೆ. ಈ ಮುಂಚೆ ನಗರ ಸಭೆಗೆ ಯಾರೂ ಅಧ್ಯಕ್ಷರಿಲ್ಲ, ಆಯ್ಕೆ ಆಗಿಲ್ಲ ಎಂದು ಕೊಳ್ಳುತ್ತಿದ್ದೆವು. ಆದರೆ ಇದೀಗ ಆಯ್ಕೆಯಾಗಿ ಹಲವು ತಿಂಗಳೇ ಕಳೆದರೂ ನಗರದೊಳಗಿನ ರಸ್ತೆ ನೋಡಿ ನಗರಸಭೆಗೆ ಉಗಿದಿದ್ದೇನೆ ಎಂದು ಸುಬ್ರಾಯ ಹೆಗಡೆ ಹೇಳುತ್ತಾರೆ.

> ಇನ್ನೂ ಒಂದುವಾರ ಮಳೆ ಬರುವ ಸಾಧ್ಯತೆ ಇದೆ. ಆದ್ದರಿಂದ ಒಂದುವಾರ ಬಿಸ್ತೆ ದುರಸ್ತಿ ಕಾರ್ಯ ಮೊಂದೇ ಇಲಾಖೆ ರಸ್ತೆ ನಗರದಲ್ಲಿಲ್ಲ. ನಗರ ಸಭೆಯವರದೂ ಇದೆ. ನಾವು ನಮ್ಮದನ್ನು ಮಾಡುತ್ತೇವೆ. ಅನುದಾನದ ಕೊರತೆ ಅನ್ನುವುದೇನೂ ಇಲ್ಲ. ನಾವು ರಸ್ತೆ ಮಾಡಿದರೆ ಹಣ ಬಂದೇ ಬರುತ್ತದೆ.
>
> -ಶಿವಾನಂದ ಜಾಡರ್, ಪಿ ಡಬ್ಲ್ಯೂ ಡಿ ಎಇಇ

ಇನ್ನು ನಗರದಲ್ಲಿ ದಿನ ನಿತ್ಯ ಓಡಾಡುವವರು ನಗರಸಭೆ ಹಾಗೂ ಪಿ ಡಬ್ಲ್ಯೂ ಡಿ ಇಲಾಖೆಗೆ ಬೈಯುತ್ತಲೇ ಇದ್ದಾರೆ. ಮಳೆಗಾಲ ಈಗಾಗಲೇ ಮುಗಿದಿದೆ ಆದರೂ ಇನ್ನೂ ರಸ್ತೆಯ ಹೊಂಡ ಮುಚ್ಚಿಲ್ಲ. ಸವಾರರ, ಸಾರ್ವಜನಿಕರ ಬಗ್ಗೆ ಕಾಳಜಿಯೇ ಇಲ್ಲ ಎಂದು.

ಆದರೆ ಸಾರ್ವಜನಿಕರೊಬ್ಬರು ಹೇಳುವ ಪ್ರಕಾರ ರಸ್ತೆಯಲ್ಲಿನ ಹೊಂಡದಲ್ಲಿ ಬಿದ್ದು ಸಾಕಷ್ಟು ಪ್ರಯಾಣಿಕರು, ದ್ವಿಚಕ್ರ ವಾಹನ ಸವಾರರು ಕೈ, ಕಾಲು ಪೆಟ್ಟು ಮಾಡಿಕೊಂಡಿರಬಹುದು. ಏಕೆಂದರೆ ಹೊಂಡವೇ ರಸ್ತೆಯಲ್ಲಿ ತುಂಬಿರುವುದರಿಂದ ಸವಾರರು ನಿಧಾನಕ್ಕೆ ಚಲಿಸುತ್ತಾರೆ. ರಸ್ತೆ ತುಂಬಾ ಚನ್ನಾಗಿದ್ದರೆ ರೋಯ್.. ಎಂದು ಹೋಗಿ ಸಾವೇ ಸಂಭವಿಸಬಹುದಿತ್ತೇನೋ, ಅದಕ್ಕಾಗಿ ಇನ್ನೂ ರಸ್ತೆ ಸುರಸ್ತಿ ಮಾಡಿರಲಿಕ್ಕಿಲ್ಲ ಎಂದು ಹಾಸ್ಯ ಮಾಡಿದ್ದಾರೆ. ಅದೇನೇ ಇದ್ದರೂ ನಗರದ ಅಂದ ಕೆಡಿಸುವ, ಸವಾರರ ಬದುಕ ಹದಗೆಡಿಸುವ ಹೊಂಡ ಮಯ ರಸ್ತೆ ದುರಸ್ತಿಯಾದರೆ ಸಾಕು ಎನ್ನುವುದು ನಗರದ ಜನತೆಯ ಸವಾರರ ಆಶಯವಾಗಿದೆ.

> ನಗರಸಭೆ ಅನುದಾನದಲ್ಲಿ ಮಾತ್ರ ನಾವು ನೋಡಿಕೊಳ್ಳುತ್ತೇವೆ. ನಮ್ಮ ವ್ಯಾಪ್ತಿಯಲ್ಲಿ ಬರುವ ರಸ್ತೆಯನ್ನು ನಮ್ಮ ನಗರ ಸಭೆ ಇಂದ ಮಾಡಬೇಕಿದೆ. ಇದೀಗ ಮಳೆಗಾಲ ಮುಗಿದಿದೆ. ನಮ್ಮ ನಗರಸಭೆ ಎದುರಿಗೆ ರಸ್ತೆ ಹಾಳಾಗಿದ್ದರೂ ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಇದರಿಂದ ಸವಾರರಿಗೆ ತೊಂದರೆಯಾಗುತ್ತಿದೆ. ಆದರೂ ಪಿ ಡಬ್ಲ್ಯೂಡಿ ಅವರಿಗೆ ನಮ್ಮ ಎಂಜಿನಿಯರ್ ರಸ್ತೆ ಸರಿಪಡಿಸುವಂತೆ ಹೇಳಿದ್ದಾರೆ ಆ ಮಾಡಿಲ್ಲ. ನನ್ನ ಕೈಲಾಗುವ ಪ್ರಯತ್ನ ನಾನು ಮಾಡುತ್ತೇನೆ. ಈಗ ನೀವು ಹೇಳಿದ ಮೇಲೆ ನಾನೂ ಏನಾದರೂ ಮಾಡಬೇಕು ಎಂದೆನಿಸಿದೆ.
>
> -ಶರ್ಮಿಳಾ ಮಾದನಗೇರಿ, ನಗರಸಭೆ ಅಧ್ಯಕ್ಷೆ.

ಸಂಡೂರಿನಲ್ಲಿ ರೂಪಾಲಿ ನಾಯ್ಕ ಪ್ರಚಾರ

ದಲಿತರು, ಬಡವರ ಸೌಲಭ್ಯ ಕಸಿದ ಕಾಂಗ್ರೆಸ್ ತಿರಸ್ಕರಿಸಿ, ಬಿಜೆಪಿ ಗೆಲ್ಲಿಸಲು ಮನವಿ

ಕಾರವಾರ: ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಬಳ್ಳಾರಿ ಜಿಲ್ಲೆಯ ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಭರ್ಜರಿ ಪ್ರಚಾರ ನಡೆಸಿದರು.

ಸಂಡೂರು ನಗರದ ವಿವಿಧ ವಾರ್ಡ್‌ಗಳಲ್ಲಿ ಗುರುವಾರ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತು ಪರವಾಗಿ ಬಿರುಸಿನ ಪ್ರಚಾರ ನಡೆಸಿದರು.

ಜನತೆಯನ್ನು ಉದ್ದೇಶಿಸಿ ಮಾತನಾಡಿದ ರೂಪಾಲಿ ಎಸ್.ನಾಯ್ಕ, ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆ ಮತ ಕೇಳುವ ಯಾವ ನೈತಿಕ ಹಕ್ಕೂ ಇಲ್ಲ, ವಾಲ್ಮೀಕಿ ನಿಗಮದಲ್ಲಿ ದಲಿತರಿಗೆ ಮೀಸಲಾದ ಹಣವನ್ನು ಲೂಟಿ ಮಾಡಿ ಕಾಂಗ್ರೆಸ್ ಲೋಕಸಭೆ ಚುನಾವಣೆ ಮಾಡಿದೆ. ಮುಡಾದಲ್ಲೂ ದಲಿತರಿಗೆ ನಿಗದಿ ಪಡಿಸಿದ ಸೈಟುಗಳನ್ನು ಕೊಳ್ಳೆ ಹೊಡೆದಿದೆ. ತಮ್ಮದೆ ಪಕ್ಷದ ದಲಿತ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ನಿವಾಸದ ಮೇಲೆ ದಾಳಿ ನಡೆದರೂ ಅವರಿಗೆ ರಕ್ಷಣೆ ಕೊಡದ ಕಾಂಗ್ರೆಸ್ ಯಾವ ಮುಖ ಹೊತ್ತು ದಲಿತರ, ಬಡವರ, ಹಿಂದುಳಿದವರ ಮತ ಕೇಳುತ್ತಿದೆ ಎಂದು ವ್ಯಂಗ್ಯವಾಡಿದರು. ಈ ದೇಶ, ದೇಶದ ಪ್ರತಿಯೊಬ್ಬರ ಅಭಿವೃದ್ಧಿ ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ಸಾಧ್ಯ ಎನ್ನುವುದು ಸ್ಪಷ್ಟವಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದೆ. ಅಭಿವೃದ್ಧಿಗೆ ಹಣ ಇಲ್ಲದೆ ಕೈಚೆಲ್ಲಿ ಕುಳಿತಿದೆ. ಈ ಸರ್ಕಾರದಿಂದ ಜನತೆಗೆ ಯಾವುದೆ ಪ್ರಯೋಜನ ಇಲ್ಲ ಎಂದು ತಿಳಿಸಿದರು. ರಾಜ್ಯದ ಕಾಂಗ್ರೆಸ್ ಸರ್ಕಾರದಿಂದ ಮಹಿಳೆಯರಿಗೆ ರಕ್ಷಣೆ ಇಲ್ಲ. ಬೆಳಗಾವಿ, ಹುಬ್ಬಳ್ಳಿ ಮತ್ತಿತರ ಕಡೆ ಮಹಿಳೆಯರ ಮೇಲೆ ನಡೆದ ದೌರ್ಜನ್ಯ, ಹತ್ಯೆ, ಅತ್ಯಾಚಾರದಂತಹ ಘಟನೆಗಳು ರಾಜ್ಯವೇ ತಲೆತಗ್ಗಿಸುವಂತೆ ಮಾಡಿದೆ. ಭಾರತೀಯ ಜನತಾ ಪಕ್ಷವನ್ನು ಗೆಲ್ಲಿಸಿ, ಕಾಂಗ್ರೆಸ್ ನ ದುರಾಡಳಿತಕ್ಕೆ ಜನತೆ ತಕ್ಕ ಪಾಠ ಕಲಿಸಬೇಕು ಎಂದು ರೂಪಾಲಿ ಎಸ್.ನಾಯ್ಕ ಮತದಾರರಲ್ಲಿ ಮನವಿ ಮಾಡಿದರು.

ಬಂಗಾರು ಹನುಮಂತು ಅವರ ಪತ್ನಿ ರೂಪಶ್ರೀ, ಮಹಿಳಾ ಮೋರ್ಚಾ ಅಧ್ಯಕ್ಷೆ ದೀಪಾ ಫೋಡ್ಕೆ, ನಗರ ಮಂಡಲ ಅಧ್ಯಕ್ಷೆ ನಾಗವೇಣಿ ಟಿ.ಜಿ. ರೂಪಾಲಿ ಎಸ್ .ನಾಯ್ಕ ಅವರೊಂದಿಗೆ ಪ್ರಚಾರದಲ್ಲಿ ಭಾಗಿಯಾಗಿದ್ದರು.

ಪ್ರಚಾರಕ್ಕೆ ಉತ್ತಮ ಸ್ಪಂದನೆ

ವಿವಿಧ ವಾರ್ಡಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ ರೂಪಾಲಿ ಎಸ್.ನಾಯ್ಕ, ಮನೆ ಮನೆಗೂ ತೆರಳಿ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಮಹಿಳೆಯರ ತಂಡದ ನೇತೃತ್ವ ವಹಿಸಿ ರೂಪಾಲಿ ನಾಯ್ಕ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತು ಅವರನ್ನು ಗೆಲ್ಲಿಸುವಂತೆ ಮನವಿ ಮಾಡುತ್ತಿದ್ದಾರೆ. ರೂಪಾಲಿ ಎಸ್.ನಾಯ್ಕ ಅವರು ನಡೆಸುತ್ತಿರುವ ಪ್ರಚಾರಕ್ಕೆ ಸ್ಥಳೀಯರಿಂದ ಉತ್ತಮ ಬೆಂಬಲ ವ್ಯಕ್ತವಾಗಿದೆ.

ಅಂಕಗಳಿಸುವುದೇ ಸಾಧನೆಯಲ್ಲ

ಕುಸ್ತಿಪಟು ಮನಿಷಾ ಸಿದ್ದಿ ಅಭಿನಂಧನಾ ಕಾರ್ಯಕ್ರಮದಲ್ಲಿ ವಿನುತಾ ಹೆಗಡೆ

ರಾಮನಗರ: ಜೋಯಿಡಾ ತಾಲೂಕು ಹಿಂದುಳಿದಿದೆ ಎಂದುಕೊಂಡು ಯಾವ ವಿದ್ಯಾರ್ಥಿಗಳೂ ಹಿಂದೆ ಉಳಿದಿಲ್ಲ. ಉಳಿಯುವುದೂ ಬೇಡ. ಎಲ್ಲ ಭಾಗದ ವಿಧ್ಯಾರ್ಥಿಗಳೂ ಅಂಕಕ್ಕೇ ಸೀಮಿತವಾಗಬೇಕು ಎಂದೇನಿಲ್ಲ, ಈ ಭಾಗದ ಜನರಿಗೆ, ವಿದ್ಯಾರ್ಥಿಗಳಿಗೆ ದಾಷ್ಟ್ಯ ಸಾಮರ್ಥ್ಯ ಹುಟ್ಟಿನಿಂದಲೇ ಬಂದಿದೆ. ಆದ್ದರಿಂದ ಕ್ರೀಡೆಯಂತಲ್ಲಿ ಸಾಧಿಸಿ ತೋರಿಸುವ ಅವಕಾಶ ಸಾಕಷ್ಟಿದೆ. ಮನಿಷಾ ಸಿದ್ದಿಯಂಥವರಿಂದ ಎಲ್ಲ ವಿದ್ಯಾರ್ಥಿಗಳು ಪ್ರೇರಣೆ ಪಡೆಯಬೇಕು ಎಂದು ವಿಶ್ವವಾಣಿ ಹುಬ್ಬಳ್ಳಿಯ ಸ್ಥಾನಿಕ ಸಂಪಾದಕಿ ವಿನುತಾ ಹೆಗಡೆ ಹೇಳಿದರು.

ಅವರು ಜೋಯಿಡಾ ತಾಲೂಕಿನ ರಾಮನಗರದ ಬಿಜಿ ವಿಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಕುಸ್ತಿಪಟು ಮನಿಷಾ ಸಿದ್ದಿ ಅಭಿನಂದನಾ ಕಾರ್ಯಕ್ರಮದಲ್ಲಿ ಮನಿಷಾ ಸಿದ್ದಿಯನ್ನು ಸನ್ಮಾನಿಸಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಿದ್ಯಾರ್ಥಿ ಮನಿಷಾ ಸಿದ್ದಿ, ನಾನು ದಿನಕ್ಕೆ ಮೂರು ಘಂಟೆಗಳ ಕಾಲ ಕುಸ್ತಿಯನ್ನು ಸಭ್ಯಾಸಿಸುತ್ತಿರುವುದಾಗಿ ಹೇಳಿ ಮುಂದಿನ ದಿನದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆವ ಕನಸಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಪ್ರೇಮಾನಂದ, ಕ್ಷೇತ್ರ ಶಿಕ್ಷಣಾಧಿಕಾರಿ ಬಶೀರ್ ಅಹ್ಮದ್, ರೆಮಿಟಾ ಸಿದ್ದಿ ಮುಂತಾದವರು ಉಪಸ್ಥಿತರಿದ್ದರು.

ಸಕ್ಕರೆ ಕಾರ್ಖಾನೆ ರೈತರಿಗೆ ಕಾಮಧೇನು

ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಹೇಳಿಕೆ

ಹಳಿಯಾಳ: ಪ್ಯಾರಿ ಕಾರ್ಖಾನೆ ನಿಗದಿತ ಸಮಯಕ್ಕೆ ಆರಂಭವಾಗಲಿದೆ. ರೈತರು ಈ ಸಕ್ಕರೆ ಕಾರ್ಖಾನೆಗೆ ಸಹಕರಿಸಬೇಕು ಎಂದು ಹಾಗೂ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಹೇಳಿದರು.

ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರಕಾರ ನಿಗದಿಪಡಿಸಿದ ದಿನಾಂಕದಂದೇ ಸಕ್ಕರೆ ಕಾರ್ಖಾನೆ ಪ್ರಸ್ತುತ ವರ್ಷದ ಕಬ್ಬು ನುರಿಸುವ ಕಾರ್ಯಕ್ಕೆ ಚಾಲನೆ ನೀಡಲಿದೆ. ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆ ರೈತರಿಗೆ ಕಾಮಧೇನುವಾಗಿದೆ ಎಂದು ಹೇಳಿದರು.

ಕಾರ್ಖಾನೆಯಿಂದ ರೈತರು ಹಾಗೂ ಕೂಲಿಕಾರರು ಆರ್ಥಿಕವಾಗಿ ಅಭಿವೃದ್ಧಿಯಾಗಿದ್ದಾರೆ ಇದನ್ನು ಎಲ್ಲರೂ ಅರಿತುಕೊಳ್ಳಬೇಕೆಂದು ಕಾರ್ಖಾನೆಯ ಬಗ್ಗೆ ತಮ್ಮ ನಿಲುವು ಪರೋಕ್ಷವಾಗಿ ಸ್ಪಷ್ಟಪಡಿಸಿದರು.

ತಾವು ಬೆಳೆದ ಕಬ್ಬನ್ನು ಇದೆ ಕಾರ್ಖಾನೆಗೆ ಮಾರಾಟ ಮಾಡಬೇಕು ಎಂದು ರೈತ ಸಮುದಾಯಕ್ಕೆ ಕರೆ ನೀಡಿದರ ಅವರು ರೈತರು ಸ್ವಇಚ್ಛೆಯಿಂದ ಕಟಾವು ಮಾಡಿ ತಮ್ಮ ವಾಹನಗಳ ಮೂಲಕ ಬೇರೆ ಕಾರ್ಖಾನೆಗಳಿಗೆ ಕಬ್ಬನ್ನು ರವಾನಿಸಬಹುದು. ಸಕ್ಕರೆ ಕಾರ್ಖಾನೆ ರೈತರಿಗೆ ಕಾಮಧೇನು

ಆದರೆ ಬೇರೆ ತಾಲೂಕುಗಳಲ್ಲಿರುವ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳು ಹಳಿಯಾಳ ತಾಲೂಕಿಗೆ ಆಗಮಿಸಿ ತಮ್ಮ ಕಟಾವು ಮಾಡುವ ಕೆಲಸಗಾರರನ್ನು ಮತ್ತು ವಾಹನ ಸೌಕರ್ಯ ಒದಗಿಸಿ ಸ್ಥಳೀಯ ರೈತರಿಂದ ಕಬ್ಬನ್ನು ಪಡೆಯುವುದು ಕಾನೂನು ಬಹಿರವಾಗಿದೆ ಇಂತಹ ದೂರುಗಳು ಕೇಳಿ ಬಂದರೇ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ರೈತರ ಬೇಡಿಕೆ ಹಾಗೂ ಯಾವುದಾದರೂ ಸಮಸ್ಯೆಗಳಿದ್ದರೆ ಜಿಲ್ಲಾಧಿಕಾರಿಗಳು ಪರಿಹರಿಸಬೇಕು.

ಶಾಸಕ ಹಳಿಯಾಳ ತಾಲೂಕು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಕೃಷ್ಣ ಪಾಟೀಲ್, ಜಿಲ್ಲಾ ಕೆಪಿಸಿಸಿ ಸದಸ್ಯ ಸುಭಾಷ್ ಕೊರೇಕರ, ರವಿ ತೋರಣಕಟ್ಟೆ, ಪ್ರಕಾಶ್ ಪ್ರಭು, ಉಪಸ್ಥಿತರಿದ್ದರು.

> ತಾಲೂಕಿನಲ್ಲಿ ಕೆಲವರು ರೈತ ಮುಖಂಡರು ಎಂದು ಹೇಳಿಕೊಂಡು ಸಭೆಗಳನ್ನು ನಡೆಸುತ್ತಿದ್ದಾರೆ. ಈ ಬಗ್ಗೆ ರೈತರು ತಲೆಕೆಡಿಸಿಕೊಳ್ಳದೆ ಇಐಡಿ ಪ್ಯಾರಿಗೆ ಕಬ್ಬು ಪೂರೈಸಿ.
>
> -ಆರ್.ವಿ. ದೇಶಪಾಂಡೆ

ಸೂಕ್ತ ಕ್ರಮಕ್ಕೆ ಸೂಚನೆ

ಪ್ರಸ್ತುತ ದಿನಗಳಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಯ ಸ್ಥಳಗಳನ್ನು ಅತಿಕ್ರಮಣ ಮಾಡಿಕೊಂಡು ಮತ್ತು ಕಾನೂನನ್ನು ಧಿಕ್ಕರಿಸಿ ರೆಸಾರ್ಟ್ ಹಾಗೂ ಹೋಂಸ್ಟೇಗಳನ್ನು ನಿರ್ಮಾಣ ಮಾಡಿರುವುದು ಬೆಳಕಿಗೆ ಬಂದಿದೆ. ಇದನ್ನು ತಡೆಗಟ್ಟಲು ಇಲಾಖೆ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಚುನಾವಣೆ ಭವಿಷ್ಯ

ರಾಜ್ಯದ ಶಿಗ್ಗಾಂವಿ, ಚನ್ನಪಟ್ಟಣ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ಜರುಗುತ್ತಿದ್ದು, ಕಾಂಗ್ರೆಸ್ ಪಕ್ಷದ ಮೂರು ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಆರ್‌ವಿಡಿ ಭವಿಷ್ಯ ನುಡಿದರು.

ಬೊಮ್ಮಾಯಿ ಅಧಿಕಾರ ಕೊನೆಗೊಳ್ಳಬೇಕು: ಡಿಕೆಶಿ

ಹಾವೇರಿ: ಶಿಗ್ಗಾಂವ ಕ್ಷೇತ್ರದಲ್ಲಿ ತಾತ, ಮಗನ ನಂತರ ಮೊಮ್ಮಗ ಚುನಾವಣಾ ಅಖಾಡಕ್ಕೆ ಬಂದಿದ್ದಾರೆ. ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡದ ಬೊಮ್ಮಾಯಿ ಅವರ 17 ವರ್ಷದ ರಾಜಕಾರಣ ಕೊನೆಯಾಗಬೇಕು. ಕ್ಷೇತ್ರದ ಜನ ಕಾಂಗ್ರೆಸ್ ಗೆ ಮತ ಹಾಕಬೇಕು ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಶಿಗ್ಗಾವಿಯ ಹೋತನಹಳ್ಳಿಯಲ್ಲಿ ಬುಧವಾರ ನಡೆದ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು ಬಸವರಾಜ ಬೊಮ್ಮಾಯಿ ಅವರ ವಿರುದ್ಧ ಸರಣಿ ವಾಗ್ದಾಳಿ ನಡೆಸಿದರು.

ಯಾರಿಗೂ ಹೆಣ್ಣು ನೋಡಲು ಹೋಗಿ ತಾನೇ ಮದುವೆ ಆದನಂತೆ. ಬಸವರಾಜ ಬೊಮ್ಮಾಯಿ ಅವರ ಸ್ಥಿತಿ ಇದೇ ರೀತಿಯಾಗಿದೆ. ನಾನು ಮಾಧ್ಯಮಗಳಲ್ಲಿ ನೋಡುತ್ತಿದ್ದೆ. ಟಿಕೆಟ್ ನನಗೆ ಬೇಡ ಕಾರ್ಯಕರ್ತರಿಗೆ ನೀಡಿ ಎಂದು ಬೊಮ್ಮಾಯಿ ಹೇಳುತ್ತಿದ್ದರು. ಕೊನೆಗೆ ತಮ್ಮ ಮಗನಿಗೆ ಟಿಕೆಟ್ ಕೊಡಿಸಿದ್ದಾರೆ. 17 ವರ್ಷಗಳಿಂದ ಬಸವರಾಜ ಬೊಮ್ಮಾಯಿವರು ಕ್ಷೇತ್ರದ ಅಭಿವೃದ್ಧಿ ಮಾಡಿಲ್ಲ.

ಬಸವರಾಜ ಬೊಮ್ಮಾಯಿ ಅವರೇ ಕಾಂಗ್ರೆಸ್ ನೀಡಿರುವ ಒಂದೇ ಒಂದು ಯೋಜನೆ ನಿಮ್ಮ ಅವಧಿಯಲ್ಲಿ ನೀಡಿದ್ದರೆ, ನಾವು ಈ ಕ್ಷೇತ್ರ ಬಿಟ್ಟು ಹೋಗುತ್ತೇವೆ ಎಂದು ಸವಾಲು ಹಾಕಿದರು.

ಚನ್ನಪಟ್ಟಣದ ಟಿಕೆಟ್ ಅನ್ನು ನನ್ನ ತಮ್ಮ ಸುರೇಶ್ ಗೆ ನೀಡಬಹುದಿತ್ತು. ಆದರೆ ಕಾಂಗ್ರೆಸ್ ಪಕ್ಷ ಹಾಗೂ ನಾನು ಆ ಕೆಲಸ ಮಾಡದೆ, ಬಿಜೆಪಿ ಸಹವಾಸ ಸಾಕು ಎಂದು ಕಾಂಗ್ರೆಸ್ ಸೇರಿದ ಯೋಗೇಶ್ವರ್ ಅವರಿಗೆ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಸೇರಿದ ಅವರು ದಡ್ಡರೇ? ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಅವರಿಗೆ ಅರಿವಾಗಿದೆ. ಶಿಗ್ಗಾವಿ ಕ್ಷೇತ್ರದ ಜನರೇ ನಿಮ್ಮ ಮನೆ ಬಾಗಿಲಿಗೆ ಅಧಿಕಾರ ಬಂದಿದೆ. ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಚುನಾವಣೆ ಎದುರಿಸಿತು, ಏಕೆ ಅಧಿಕಾರಕ್ಕೆ ಬರಲಿಲ್ಲ. ಯಡಿಯೂರಪ್ಪ ಅವರು ಆಪರೇಷನ್ ಕಮಲ ನಡೆಸಿ ಸರ್ಕಾರ ಮಾಡಿದರು.

ಆದರೆ ಈ ಬಾರಿ ಅವರ ನಾಣ್ಯ ಚಲಾಚಣೆಯಾಗಲಿಲ್ಲ ಎಂದರು.

ಬಡ, ಮಾಧ್ಯಮ ವರ್ಗದ ಜನರು ಬದುಕು ನಡೆಸಲು ತತ್ತರಿಸುತ್ತಿದ್ದರು. ಜನರ ಬವಣೆ ನೋಡಲು ಆಗದೆ ಅಧಿಕಾರಕ್ಕೆ ಬಂದ ತಕ್ಷಣ ಕೊಟ್ಟ ಮಾತಿನಂತೆ, ಐದು ಗ್ಯಾರಂಟಿಗಳನ್ನು ಕಾಂಗ್ರೆಸ್ ಸರ್ಕಾರ ನೀಡಿದೆ.

ಯುವಕರಿಗೆ ಉದ್ಯೋಗವಿಲ್ಲ ಮೋದಿ ಅವರು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಹೇಳಿ ಏನೂ ಮಾಡಿಲ್ಲ. ಅವರಿಗೂ ಸಹಾಯ ಮಾಡಿ ಎನ್ನುವ ಯುವ ಕಾಂಗ್ರೆಸ್ ಅವರ ಮನವಿಯ ಮೇರೆಗೆ ಯುವನಿಧಿ ನೀಡಲಾಗುತ್ತಿದೆ ಎಂದು ಸಮರ್ಥಿಸಿಕೊಂಡರು.

ಅಜ್ಜಂಪಿರ್ ಖಾದ್ರಿ ಅವರು ಪಕ್ಷಕ್ಕೆ ಬೆನ್ನೆಲುಬಾಗಿ, ಅಭ್ಯರ್ಥಿಯ ಗೆಲುವಿಗೆ ನಿಂತಿದ್ದಾರೆ. ಶಂಕರ್, ಬೇವಿನಮರದ, ಪ್ರೇಮಾ ಪಾಟೀಲ್, ರಾಜು ಕುನ್ನೂರು ಸೇರಿದಂತೆ ಅನೇಕ ಮುಖಂಡರು ಅಭ್ಯರ್ಥಿ ಯಾಸಿರ್ ಪಠಾಣ್ ಅವರ ಪರವಾಗಿ ನಿಂತಿದ್ದಾರೆ ಎಂದು ತಿಳಿಸಿದರು.

ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹರಪನಹಳ್ಳಿ.
ಕ್ರಿ.ಮಿಸ್. ನಂ.627/2024

ಅರ್ಜಿದಾರರು: ಶ್ರಿ ಬಂಕಾಪುರದ ರಾಮಶೆಟ್ಟಿ ಸತ್ಯಕೀರ್ತಿ ತಂದೆ ರಾಮಶೆಟ್ಟಿ, ವಯಸ್ಸು: 42 ವರ್ಷ, ವೃತ್ತಿ: ವ್ಯವಸಾಯ, ವಾಸ: 10ನೇ ವಾರ್ಡ್ ಬಣಗಾರಪೇಟೆ , ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

-: ವಿರುದ್ಧ :-

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ, ಹರಪನಹಳ್ಳಿ, ತಾಲೂಕು, ವಿಜಯನಗರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರನ ಅಜ್ಜಿಯಾದ ಬಂಕಾಪುರದ ನಾಗಮ್ಮ ಗಂಡ ಲೇಟ್ ಬಂಕಾಪುರದ ಕೊಟ್ರಬಸಪ್ಪ ಇವರು ದಿನಾಂಕ: 18.02.1985 ರಂದು ಹರಪನಹಳ್ಳಿ ಪಟ್ಟಣದ 10ನೇ ವಾರ್ಡ್ ಬಣಗಾರಪೇಟೆಯಲ್ಲಿ ಮರಣ ಹೊಂದಿದ್ದು,ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಘನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ: 23/11/2024 ರಂದು ವಿಚಾರಣೆಗೆ ಇರುತ್ತದೆ. ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟವರು ಯಾರಾದರೂ ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತಹವರು ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲಿ ಅಥವಾ ಅವರ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಹರಪನಹಳ್ಳಿ.

ಅರ್ಜಿದಾರರ ಪರ ವಕೀಲರು: ಶ್ರೀ ಕೆ.ಸುರೇಶ
ಸ್ಥಳ : ಹರಪನಹಳ್ಳಿ ದಿನಾಂಕ : 06.11.2024

ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹರಪನಹಳ್ಳಿ.
ಕ್ರಿ.ಮಿಸ್. ನಂ.628/2024

ಅರ್ಜಿದಾರರು: ಶ್ರೀ ಬಂಕಾಪುರದ ರಾಮಶೆಟ್ಟಿ ಸತ್ಯಕೀರ್ತಿ ತಂದೆ ರಾಮಶೆಟ್ಟಿ, ವಯಸ್ಸು: 42 ವರ್ಷ, ವೃತ್ತಿ; ವ್ಯವಸಾಯ, ವಾಸ: 10ನೇ ವಾರ್ಡ್ ಬಣಗಾರಪೇಟೆ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

-: ವಿರುದ್ಧ :-

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರನ ಅಜ್ಜನಾದ ಬಂಕಾಪುರದ ಕೊಟ್ರಬಸಪ್ಪ ತಂದೆ ಹನುಮಪ್ಪ ಇವರು ದಿನಾಂಕ: 24.02.1979 ರಂದು ಹರಪನಹಳ್ಳಿ ಪಟ್ಟಣದ 10ನೇ ವಾರ್ಡ್ ಬಣಗಾರಪೇಟೆಯಲ್ಲಿ ಮರಣ ಹೊಂದಿದ್ದು,ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಘನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ: 23/11/2024 ರಂದು ವಿಚಾರಣೆಗೆ ಇರುತ್ತದೆ. ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟವರು ಯಾರಾದರೂ ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತಹವರು ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲಿ ಅಥವಾ ಅವರ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಹರಪನಹಳ್ಳಿ.

ಅರ್ಜಿದಾರರ ಪರ ವಕೀಲರು: ಶ್ರೀ ಕೆ.ಸುರೇಶ
ಸ್ಥಳ : ಹರಪನಹಳ್ಳಿ ದಿನಾಂಕ : 06.11.2024

ಕ್ಷೇತ್ರದ ಅಭಿವೃದ್ಧಿ ಮುಂದುವರೆಸಲು ಭರತ್ ಬೊಮ್ಮಾಯಿ ಕಣಕ್ಕೆ: ಚನ್ನಮ್ಮ

ಹಾವೇರಿ: ಬಸವರಾಜ ಬೊಮ್ಮಾಯಿ ಶಿಗ್ಗಾವಿ ಕ್ಷೇತ್ರಕ್ಕೆ ಮಾಡಿರುವಂತಹ ಅಭಿವೃದ್ಧಿ ಕೆಲಸಗಳು ಇನ್ನೂ ಮುಂದುವರೆಯಬೇಕೆಂಬ ಉದ್ದೇಶ ದಿಂದ ಉಪಚುನಾವಣೆಗೆ ಭರತ್ ಬೊಮ್ಮಾಯಿಯನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಲಾಗಿದೆ ಎಂದು ಚನ್ನಮ್ಮ ಬಸವರಾಜ ಬೊಮ್ಮಾಯಿ ಹೇಳಿದರು.

ತಮ್ಮ ಪುತ್ರ ಹಾಗೂ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಚುನಾವಣೆ ಪ್ರಚಾರ ನಡೆಸಿ ಮಹಿಳಾ ಮತದಾರರನ್ನುದ್ದೇಶಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಟೆಕ್ಸಟೈಲ್ ಹಾಗೂ ಗಾರ್ಮೆಂಟ್ಸ್ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಬರಲು ಭರತ್ ಬೊಮ್ಮಾಯಿನೇ ಕಾರಣನಾಗಿದ್ದಾನೆ. ಅವನೇ ಇಲ್ಲಿನ ಮಹಿಳೆಯರು ಅಭಿವೃದ್ಧಿಯಾಗಬೇಕೆಂದು ಓಡಾಡಿ ಕೆಲಸ ಮಾಡಿದ್ದಾನೆ. ರಸ್ತೆ ಅಭಿವೃದ್ಧಿ, ಮನೆಮನೆಗೆ ಕುಡಿಯುವ ನೀರು, ಮಹಿಳೆಯರಿಗೆ ಉದ್ಯೋಗ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಬಸವರಾಜ್ ಬೊಮ್ಮಾಯಿ ಮಾಡಿದ್ದಾರೆ. 2008ಕ್ಕಿಂತ ಮೊದಲಿದ್ದ ಶಿಗ್ಗಾವಿ ಈಗಿಲ್ಲ. ಬಸವರಾಜ ಬೊಮ್ಮಾಯಿಯವರು ಈಗ ಸಂಸದಾಗಿದ್ದರಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ನಿಲ್ಲಬಾರದೆಂಬ ಉದ್ದೇಶವಿದೆ. ಬಸವರಾಜ ಬೊಮ್ಮಾಯಿಯವರನ್ನು ಕೈಹಿಡಿದಂತೆ ಈಗ ಮಹಿಳೆಯರು ಸೇರಿದಂತೆ ಎಲ್ಲರೂ ಭರತ್ ಬೊಮ್ಮಾಯಿಯನ್ನು ಕ್ಷೇತ್ರದ ಮತದಾರರರು ಕೈಹಿಡಿಯಬೇಕು ಎಂದು ಮನವಿ ಮಾಡಿದರು.

ಮಧ್ಯಂತರ ಬೆಳೆ ವಿಮೆ ಪರಿಹಾರ ನೀಡಲು ಒತ್ತಾಯ

ಹಾವೇರಿ: ಅಕ್ಟೋಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಹಾವೇರಿ ತಾಲೂಕಿನಲ್ಲಿ ಮೆಕ್ಕೆಜೋಳ. ಶೇಂಗಾ, ಸೋಯಾಬೀನ್ ಬೆಳೆಗಳು ಸಂಪೂರ್ಣವಾಗಿ ಜಲಾವೃತವಾಗಿ ಎಲ್ಲಾ ರೈತರು ಸಂಕಷ್ಟಕ್ಕೆ ಸಿಲುಕಿದ್ದು ಬೆಳೆ ವಿಮೆ ತುಂಬಿದ ರೈತರಿಗೆ ತಕ್ಷಣವೇ ಶೇಕಡಾ 25 ಮಧ್ಯಂತರ ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಸೇರಿದಂತೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಾ ಘಟಕದಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೆಳೆ ವಿಮಾ ಯೋಜನೆಯ ಜಿಲ್ಲಾ ಮಟ್ಟದ ಸಭೆ ನಡೆಸಿ ವಿಪತ್ತು ನಿರ್ವಹಣೆಯಡಿ ಬೆಳೆ ಹಾನಿ ಸಮೀಕ್ಷೆ ನಡೆಸಲು ನಿರ್ದೇಶನ ನೀಡಿದ್ದರೂ ಆ ಅರ್ಜಿ ಸಲ್ಲಿಸಿ ಒಂದು ತಿಂಗಳು ಗತಿಸಿದೆ ರೈತರು ಈಗ ಬೆಳೆ ಕಟಾವು ಮಾಡುತ್ತಿದ್ದಾರೆ ಇಲ್ಲಿಯವರೆಗೆ ಕೆಲವು ಗ್ರಾಮಗಳಲ್ಲಿ ಬೆಳೆ ಹಾನಿ ಸಮೀಕ್ಷೆಯು ಮಾಡಿಲ್ಲ. ರೈತರ ಸಮ್ಮುಖದಲ್ಲಿ ಬೆಳೆ ಸಮೀಕ್ಷೆ ನಡೆಸಿಲ್ಲ. ಶೇಕಡಾ 70 ರಿಂದ 90% ಬೆಳೆ ಹಾನಿ ಆಗಿದ್ದರು ಕೂಡ ಶೇಕಡಾ 25 ರಿಂದ 30 ಬೆಳೆ ಹಾನಿ ಆಗಿದೆ ಎಂದು ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ ಆರೋಪ ಮಾಡಿದರು. ಬೆಳೆ ಹಾನಿ ಸಮೀಕ್ಷೆ ಮಾಡುವಾಗ ತಹಸಿಲ್ದಾರ್ ರವರು ಸೂಚಿಸಿದ ಅಧಿಕಾರಿಗಳನ್ನು ಕಡೆಗಣನೆ ಮಾಡಿದ್ದಾರೆ. ಜಮೀನಿನ ಮೂಲ ಮಾಲಿಕರನ್ನು ಕೈಬಿಟ್ಟು ಬೇರೆ ರೈತರನ್ನು ಕರೆದು ಜಿಪಿಎಸ್ ಫೋಟೋ ತೆಗೆದಿದ್ದಾರೆ. ಅರ್ಜಿ ಸಲ್ಲಿಸಿ ಒಂದು ತಿಂಗಳು ಗತಿಸಿದ ಕಾರಣ ರೈತರು ಬೆಳೆ ಕಟಾವು ಮಾಡಿದ್ದು ಅಂತಹ ರೈತರನ್ನು ಕೈಬಿಟ್ಟಿದ್ದಾರೆ. ಮೂಲ ಮಾಲಿಕರನ್ನು ಕಡೆಗಣಿಸಿ ಗ್ರಾಮ ಪಂಚಾಯಿತಿ ಮೆಂಬರ್ ಗಳನ್ನು ಕರೆದು ಸಭೆ ನಡೆಸಿ ತಮಗೆ ಅನುಕೂಲವಾದ ಕಡೆ ಸಮೀಕ್ಷೆ ನಡೆಸಿದ್ದಾರೆ ಎಂದು ದೂರಿದರು.

2023-24 ರಲ್ಲಿ ಹಾವೇರಿ ತಾಲೂಕಿನಲ್ಲಿ 55 ರಿಂದ 60 ಸಾವಿರ ರೈತರು ಬೆಳೆ ವಿಮೆ ಕಟ್ಟಿದ್ದರು. ಆದರೆ ಇನ್ಸೂರೆನ್ಸ್ ಕಂಪನಿಯವರು ರೈತರಿಗೆ ಮಾಡುತ್ತಿರುವ ಮೋಸದಿಂದ ಈ ವರ್ಷ 2024-25 ರಲ್ಲಿ 3035 ಸಾವಿರ ರೈತರು ಮಾತ್ರ ಬೆಳೆ ವಿಮೆ ತುಂಬಿರುತ್ತಾರೆ ಒಂದು ನಯಾ ಪೈಸೆ ವಿಮೆ ಬಿಡುಗಡೆ ಮಾಡದೇ ರೈತರಿಗೆ ಅನ್ಯಾಯ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಾಲೂಕಾ ಅಧ್ಯಕ್ಷರಾದ ದಿಳ್ಳೆಪ್ಪ ಮಣ್ಣೂರ, ಶಿವಬಸಪ್ಪ ಗೋವಿ, ಶಿವಯೋಗಿ ಹೊಸಗೌಡ್ರ, ಸುರೇಶ್ ಚಲವಾದಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಹೊಸ ಜವಳಿ ಘಟಕ ಸ್ಥಾಪನೆಗೆ ಅರ್ಜಿ

ಧಾರವಾಡ: 2024-25ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ, ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ ಘಟಕಗಳ ಸ್ಥಾಪನೆಗೆ ಸಹಾಯಧನ ಯೋಜನೆಯಡಿ ಹೊಸ ಜವಳಿ ಘಟಕ ಸ್ಥಾಪನೆಗೆ ಅರ್ಹ ಆಸಕ್ತಿವುಳ್ಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸ್ತಕರು ನ. 2024 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0836-2448834 ಗೆ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪಕರಣ ಸೌಲಭ್ಯ ಕಾರ್ಯಕ್ರಮದಡಿ ಅರ್ಜಿ

ಧಾರವಾಡ: 2024-25 ನೇ ಸಾಲಿಗೆ ಜಿಲ್ಲಾ ವಲಯ ಯೋಜನೆಯಡಿ ಗ್ರಾಮೀಣ ಭಾಗದ ಕುಶಲಕರ್ಮಿಗಳಿಗೆ ಉಚಿತವಾಗಿ ವಿದ್ಯುತ್‌ಚಾಲಿತ ಹೊಲಿಗೆ ಯಂತ್ರ, ಬಡಗಿತನ ಸುಧಾರಿತ ಉಪಕರಣ ಮತ್ತು ಗೌಂಡಿ ಸುಧಾರಿತ ಉಪಕರಣ ಕಾರ್ಯಕ್ರಮದಡಿ ಸೌಲಭ್ಯ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಧಾರವಾಡ ಜಿಲ್ಲೆಯ ಗ್ರಾಮ ಪಂಚಾಯತ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಭಾಗದ ಕುಶಲಕರ್ಮಿಗಳು ಸೂಕ್ತ ದಾಖಲೆಗಳೊಂದಿಗೆ ಜನವೇರಿ 6-2025 ರೊಳಗಾಗಿ ವೆಬ್‌ಸೈಟ ಮೂಲಕ ಅರ್ಜಿ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ದೂರವಾಣಿ 0836-2324798 ಗೆ ಸಂಪರ್ಕಿಸಬಹುದು ಎಂದು ಕೈಗಾರಿಕಾ ವಿಭಾಗ ಜಿಲ್ಲಾ ಪಂಚಾಯತ, ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರೆಕಾಲಿಕ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಧಾರವಾಡ: ಕೃಷಿ ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳ ವಿವಿಧ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರ ತಾತ್ಕಾಲಿಕ ಹಾಗೂ ಅರೆಕಾಲಿಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ನವೆಂಬರ್ 12 ರಂದು ಕೃವಿವಿ ಕುಲಸಚಿವರ ಸಂದರ್ಶನ ಕೊಠಡಿಯಲ್ಲಿ ನಡೆಯುವ ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್‌ಗೆ ಭೇಟಿ ನೀಡಬಹುದು ಎಂದು ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿ.ವಿ.ರಾಮನ್ ಜನ್ಮ ದಿನಾಚರಣೆ ಸಂಪನ್ನ

ಧಾರವಾಡ: ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಸಿ.ವಿ. ರಾಮನ್ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ವಿಜ್ಞಾನ ಶಿಕ್ಷಕರಾದ ಆನಂದ ಪಾಟೀಲ್ ಇವರು ಸಿ.ವಿ. ರಾಮನ್ ಅವರ ಕುರಿತು ಮಾತನಾಡಿ, ಸಿ.ವಿ. ರಾಮನರು ನೋಬೆಲ್ ಪ್ರಶಸ್ತಿ ಗಳಿಸಿದ ಪ್ರಪ್ರಥಮ ಭಾರತೀಯ ವಿಜ್ಞಾನಿ. ಈ ಪ್ರಶಸ್ತಿಯನ್ನು ರಾಮನ್ ಎಫೆಕ್ಟ್ ಎಂಬ ಸಂಶೋಧನೆಗಾಗಿ ಭೌತಶಾಸ್ತ್ರ ಕ್ಷೇತ್ರದಲ್ಲಿ ಪಡೆದರು. ಅವರು ವಿಜ್ಞಾನ ಮತ್ತು ಭೌತಶಾಸ್ತ್ರ ಕ್ಷೇತ್ರದಲ್ಲಿ ಭಾರತದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯರಾದ ಡಾ. ಅನಿತಾ ರೈ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ಎಲ್ಲ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೇಂದ್ರದ ನೀತಿಗೆ ಕಪ್ಪಾದ ಬಿಳಿ ಬಂಗಾರ

ಮಾನ ಮುಚ್ಚುವ ಹತ್ತಿ ಬೆಳೆಗೆ ಕಡಿಮೆಯಾದ ಬೆಲೆ | ಖರೀದಿ ಕೇಂದ್ರದಲ್ಲೂ ಬೆಲೆ ಕಡಿಮೆ

ಮಾಳಿಂಗರಾಯ ಪೂಜಾರ

ಗದಗ: ಆರ್ಥಿಕವಾಗಿ ಹೇಳಬೇಕಾದರೆ ಬೇಡಿಕೆ ಹೆಚ್ಚಾದಂತೆ ಬೆಲೆ ಹೆಚ್ಚಾಗುತ್ತದೆ, ಇಳುವರಿ ಕಡಿಮೆ ಇರುವ ಬೆಳೆಗಳಿಗೆ ಬೆಲೆ ಹೆಚ್ಚಾಗಿರುತ್ತದೆ ಆದರೆ ಇಳುವರಿ ಕಡಿಮೆ ಇದ್ದು, ವಾಣಿಜ್ಯ ಪ್ರಮುಖ ಬೆಳೆ ಹತ್ತಿಗೆ ಬೆಲೆ ಇಲ್ಲದಾಗಿದೆ.

ಬಿಳಿ ಬಂಗಾರ ಖ್ಯಾತಿಯ ಹತ್ತಿ ಬೆಳೆಯನ್ನು ರೈತರು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತಾ ಬರುತ್ತಿದ್ದಾರೆ ಇದಕ್ಕೆ ಕಾರಣ ಹುಡುಕುತ್ತಾ ಹೋದಂತೆ ಕೇಂದ್ರ ಸರಕಾರದ ಧೋರಣೆಯಿಂದಾಗಿ ಹತ್ತಿಗೆ ಬೆಲೆ ಕಳೆದುಕೊಳ್ಳುತ್ತಿದೆ ಇದರಿಂದ ಹತ್ತಿ ಬೆಳೆಯುವದನ್ನು ರೈತರು ಕಡಿಮೆ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ದೊರೆಯುತ್ತಿದೆ.

ಕೇಂದ್ರದ ರಫ್ತು ನಿರ್ಬಂಧದಿಂದ ನೆಲ ಹಿಡಿದ ಹತ್ತಿ ವಹಿವಾಟು, ದರ ಕುಸಿತದಿಂದ ಇಕ್ಕಟ್ಟಿನಲ್ಲಿ ರೈತ ಸಮುದಾಯ ಸಿಲುಕಿದ್ದಾರೆ. ಈ ಮೊದಲು ಭಾರತದ ಹತ್ತಿ ನೂಲಿಗೆ ವಿದೇಶಗಳಲ್ಲಿ ಬೇಡಿಕೆ ಇತ್ತು ಆದರೆ ಕೇಂದ್ರ ಸರಕಾರವು ರಫ್ತಿಗೆ ನಿರ್ಬಂಧ ಹೇರಿರುವುದರಿಂದ ವಹಿವಾಟು ನಿಂತಿದೆ ಇದರಿಂದ ಹತ್ತಿಗೆ ಬೆಲೆ ಇಲ್ಲ ಎನ್ನುವಂತಾಗಿದೆ.

ಕಳೆದ ಎರಡ್ಮೂರು ವರ್ಷಗಳಿಂದ ಹತ್ತಿ ಬೆಲೆ ಪಾತಾಳ ಕಂಡಿದ್ದು, ಕ್ವಿಂಟಾಲ್‌ಗೆ 7 ಸಾವಿರ ಇದ್ದ ಬೆಲೆ ಹಾಗೆ ಯಥಾಸ್ಥಿತಿ ಕಾಯ್ದುಕೊಳ್ಳುತ್ತಿದೆ. ಇದರಿಂದ ರೈತರು ಹತ್ತಿ ಬೆಳೆ ಹಾಕುವುದನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆ. ಪ್ರಸಕ್ತ ಬೆಲೆ ಅಂದಾಜು ಪ್ರತಿ ಕೆ.ಜಿಗೆ 70 ರುಪಾಯಿ ಹತ್ತಿ ಬೆಲೆ ಇದ್ದರೆ, ಹತ್ತಿ ಬಿಡಿಸಲು ಕೂಲಿಕಾರ್ಮಿಕರ ಬೇಡಿಕೆ ಹೆಚ್ಚಾಗಿದೆ ಪ್ರತಿ ಕೆ.ಜಿ ಕೂಲಿ ಕಾರ್ಮಿಕರಿಗೆ 10 ರುಪಾಯಿಂದ 15 ರು. ವರೆಗೆ ನೀಡಬೇಕಾಗಿದೆ.

ಹತ್ತಿ ಬೆಳೆಗೆ ಹತ್ತು ಕುತ್ತು ಎನ್ನುವಂತೆ ಬೆಳೆ ಬೆಳೆಯಬೇಕಾದರೆ ಸಾಕಷ್ಟು ಪರಿಶ್ರಮ ಬೇಕಾಗಿದ್ದು, ಪ್ರತಿ ಎಕರೆಗೆ ಸುಮಾರು 20 ರಿಂದ 30 ಸಾವಿರ ಖರ್ಚು ಮಾಡಬೇಕಾಗಿದೆ ಆದರೆ ಕಳೆದ ಮೂರ್ನಾಲ್ಕು ವರ್ಷಗಳಿಂದ ಇಳುವರಿಯೂ ಇಲ್ಲದಂತಾಗಿದೆ ಅಲ್ಲದೆ ರೋಗ, ಬೀಜ ಮತ್ತು ಔಷಧ ಗುಣಮಟ್ಟದಲ್ಲಿನ ಕೊರತೆಯಿಂದ ಹತ್ತಿ ಇಳುವರಿ ಕುಸಿದಿದೆ. ಕಳೆದ ವರ್ಷ ಬರಗಾಲದಿಂದ ಇಳುವರಿ ಇಲ್ಲದಾದರೆ ಪ್ರಸಕ್ತ ವರ್ಷ ಮಳೆ ಹೆಚ್ಚಾಗಿ ಫಸಲು ಬಂದ ಬೆಳೆ ಹತ್ತಿ ಮೊಳಕೆ ಒಡೆದು ಹಾಳಾಗಿ ಹೋಗುತ್ತಿದೆ ಅಲ್ಲದೆ ಇಳುವರಿ ಸಹ ಕಡಿಮೆಯಾಗಿದೆ.

ಈ ಮೊದಲು ಪ್ರತಿ ಎಕರೆಗೆ ಸರಾಸರಿ ಇಳುವರಿ 15 ಕ್ವಿಂಟಾಲ್ ಇತ್ತು ಈಗ 4 ರಿಂದ 5 ಕ್ವಿಂಟಾಲ್‌ಗೆ ಇಳಿಕೆಯಾಗಿದೆ. ಕಳೆದ ಎರಡ್ಮೂರು ವರ್ಷದಿಂದ ಇಳುವರಿಯೂ ಇಲ್ಲ, ಬೆಲೆಯೂ ಇಲ್ಲ. ಇನ್ನೂ ಸಾಂಪ್ರದಾಯಕವಾಗಿ ಪ್ರತಿ ವರ್ಷ ಹತ್ತಿ ಬೆಳೆ ಹಾಕುತ್ತಾ ಬಂದಿರುವ ರೈತರು ಉತ್ತಮ ಬೆಲೆಗಾಗಿ ಕಾಯುತ್ತಾ ಕುಳಿತುಕೊಳ್ಳುವ ಸ್ಥಿತಿ ಇದ್ದು, ರೈತರಿಗೆ ಏನು ಗೊತ್ತು ಹತ್ತಿ ಬೆಲೆಗೆ ಕಡಿಮೆಯಾಗಲು ಮೂಲ ಕಾರಣ ಏನೆಂಬುವುದು. ಅಲ್ಲದೆ ಕೇಂದ್ರ ಸರ್ಕಾರ ಧೋರಣೆಯಿಂದ ರೈತರು ಅಷ್ಟೇ ಅಲ್ಲದೆ ಹತ್ತಿ ಜಿನ್ನಿಂಗ್ ಪ್ಯಾಕ್ಟರಿಗಳು ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ ಏಕೆಂದರೆ ಕಳೆದ ಎರಡ್ಮೂರು ವರ್ಷಗಳಿಂದ ಬೆಲೆ ಇಲ್ಲದೆ ಇರುವದರಿಂದ ರೈತರ ಹತ್ತಿ ಬೆಳೆ ಹಾಕುವುದನ್ನು ಕಡಿಮೆ ಮಾಡಿರುವುದರಿಂದ ಹಾಗೂ ಹತ್ತಿ ಇಳುವರಿ ಕೊರತೆಯಿಂದ ಸೇರಿದಂತೆ ಅನೇಕ ಕಾರಣಗಳಿಂದ ಪ್ಯಾಕ್ಟರಿಗಳು ತನ್ನ ಕೆಲಸವನ್ನು ನಿಲ್ಲಿಸಿವೆ. ಇದರಿಂದ ಪ್ಯಾಕ್ಟರಿಗಳ ಮಾಲೀಕರು ಸಾಲದ ಸುಳಿಯಲ್ಲಿ ಸಿಲುಕಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಹತ್ತಿ ಜಿನ್ನಿಂಗ್ ಪ್ಯಾಕ್ಟರಿಯಲ್ಲಿರುವ ಹತ್ತಿ .

ಕಡಿಮೆಯಾಗುತ್ತಿರುವ ಹತ್ತಿ ಬೆಳೆ

ಗದಗ ಜಿಲ್ಲೆಯಲ್ಲಿ ಹತ್ತಿ ಬೆಳೆ ಹಾಕುವ ಪ್ರದೇಶ ಕಳೆದ ಎರಡ್ಮೂರು ವರ್ಷಗಳಿಂದ ಕಡಿಮೆಯಾಗುತ್ತ ಹೋಗುತ್ತಿದೆ. ವರ್ಷ 2022- 22722 ಹೆಕ್ಟೇರ್ ಪ್ರದೇಶ ವರ್ಷ 2023- 9002 ಹೆಕ್ಟೇರ್ ಪ್ರದೇಶ ಹಾಗೂ 2024- 8540 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆಯನ್ನು ಬೆಳೆಯುವ ಪ್ರದೇಶವಾಗಿದೆ. ವರ್ಷದಿಂದ ವರ್ಷಕ್ಕೆ ಹತ್ತಿ ಬೆಳೆಯುವ ಪ್ರದೇಶ ಕುಂಠಿತವಾಗುತ್ತಿದೆ.

ಹತ್ತಿ ಬೆಳೆಯನ್ನು ಬೆಳೆದು ಕಟಾವು ಮಾಡುವವರೆಗೂ ಖರ್ಚು ಹೆಚ್ಚಾಗುತ್ತದೆ ಆದ್ದರಿಂದ ರೈತ ಪರ್ಯಾಯವಾಗಿ ಮೆಕ್ಕೆಜೋಳ, ಹೆಸರು ಸೇರಿದಂತೆ ಬೇರೆ ಬೆಳೆ ಬೆಳೆಯಲು ಮುಂದಾಗುತ್ತಿದ್ದಾರೆ ಇದರಿಂದ ಹತ್ತಿ ಬೆಳೆ ಬೆಳೆಯುವ ಪ್ರದೇಶ ವರ್ಷದಿಂದ ವರ್ಷಕ್ಕೆ ಕುಸಿಯುತ್ತಾ ಸಾಗುತ್ತಿದೆ.

-ತಾರಾಮಣಿ ಜಂಟಿ ನಿರ್ದೇಶಕರು ಕೃಷಿ ಇಲಾಖೆ ಗದಗ

ಕಳೆದ ಎರಡ್ಮೂರು ವರ್ಷಗಳಿಂದ ಹತ್ತಿ ಜಿನ್ನಿಂಗ ಪ್ಯಾಕ್ಟರಿಗಳನ್ನು ಬಂದ್ ಮಾಡಲಾಗಿದ್ದು, ಹತ್ತಿ ಬೆಳೆ ಬೆಳೆಯುವ ಪ್ರದೇಶವು ಕಡಿಮೆ ಯಾಗಿರುವುದರಿಂದ ಹತ್ತಿ ಬರುತ್ತಿಲ್ಲ ಪ್ಯಾಕ್ಟರಿ ಕಟ್ಟಲು ಮಾಡಿದ ಸಾಲ ದುಪ್ಪಟ್ಟು ಆಗುತ್ತಿದೆ. ಬಹಳಷ್ಟು ನಷ್ಟವನ್ನು ಅನುಭವಿಸುತ್ತಿದ್ದೇವೆ.

-ಪೂರ್ಣಾಜಿ ಕರಾಟೆ, ಹತ್ತಿ ಜಿನ್ನಿಂಗ ಪ್ಯಾಕ್ಟರಿ ಮಾಲಿಕ

ಫಸಲು ಬಂದಾಗ ಇರದ ಬೆಂಬಲ ಬೆಲೆ ಕೇಂದ್ರ

ಗದಗ ಜಿಲ್ಲೆಗಳಲ್ಲಿ ಈ ಮೊದಲು ಹತ್ತಿ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಈ ನಡುವೆ, ಮಳೆ ಕೊರತೆ ಹಾಗೂ ರೋಗ ಬಾಧೆಯಿಂದ ಇಳುವರಿ ಕುಂಠಿತವಾಗಿದೆ. ಮತ್ತೊಂದು ಕಡೆ ಬೆಲೆಯೂ ಇಲ್ಲದೆ ರೈತರು ದುಪ್ಪಟ್ಟು ನೋವು ಅನುಭವಿಸುವಂತಾಗಿದೆ ಎನ್ನುವ ದೃಷ್ಟಿಯಿಂದ ಬೇರೆ ವಾಣಿಜ್ಯ ಬೆಳೆಯಾದ ಮೆಕ್ಕೆಜೋಳ ಹಾಗೂ ಹೆಸರು ಬೆಳೆಯತ್ತ ಮುಖ ಮಾಡಿದ್ದಾರೆ ಏಕೆಂದರೆ ಹತ್ತಿ ಫಸಲು ಬಂದ ಮೇಲೆ ಬಿಡಿಸಲು ಕೂಲಿ ಕಾರ್ಮಿಕರು ಅತಿ ಅವಶ್ಯವಾಗಿದೆ. ಆದರೆ ಹೆಸರು ಮೆಕ್ಕೆಜೋಳ ಸೇರಿದಂತೆ ಅನೇಕ ಬೆಳೆ ಕಟಾವು ಯಂತ್ರ ಬಂದಿದ್ದು, ಇದರಿಂದ ಹತ್ತಿ ಬೆಳೆ ಹಾಕುವುದು ಕಡಿಯಾಗಿದೆ. ಒಟ್ಟಾರೆ ಹತ್ತಿ ಬೆಲೆಗೆ ಖರ್ಚು ಹೆಚ್ಚಾಗಿದೆ. ಅಲ್ಲದೆ ಹತ್ತಿ ಬೆಂಬಲ ಬೆಲೆ ಖರೀದಿ ಕೇಂದ್ರದ ಮೂಲಕ ಹತ್ತಿ ಖರೀದಿ ಮಾಡುವ ದರವು ಕಡಿಮೆ ಇದೆ ಮಧ್ಯಮ ಗಾತ್ರದ ಹತ್ತಿ 7121 ಹಾಗೂ ಉದ್ದ ಗಾತ್ರದ ಹತ್ತಿ 7521 ಇದ್ದು, ಆದರೆ ರೈತರು ಫಸಲು ಬಂದಾಗ ಈ ಕೇಂದ್ರ ಪ್ರಾರಂಭ ಇರುವುದಿಲ್ಲ ಎನ್ನುವುದು ರೈತರ ನೋವಿನ ಸಂಗತಿಯಾಗಿದೆ.

ಕಲ್ಯಾಣ ಸಮಿತಿ ಸಭೆಗೆ ಅಧಿಕಾರಿಗಳು ಕಡ್ಡಾಯ ಹಾಜರಾಗಿ: ಜಿಲ್ಲಾಧಿಕಾರಿ

ಧಾರವಾಡ: ಕರ್ನಾಟಕ ರಾಜ್ಯ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಹಾಗೂ ಸದಸ್ಯರು ನವೆಂಬರ್ 14 ರಂದು ಜಿಲ್ಲೆಗೆ ಭೇಟಿ ನೀಡಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನೆ ನಡೆಸಲಿದ್ದು, ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ನೂತನ ಸಭಾಂಗಣದಲ್ಲಿ, ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯ ಪೂರ್ವಸಿದ್ಧತೆ ಕುರಿತು ಅಧಿಕಾರಿಗಳೊಂದಿಗೆ ಸಭೆ ಜರುಗಿಸಿ, ಮಾತನಾಡಿದ ಜಿಲ್ಲಾಧಿಕಾರಿ, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಜಿಲ್ಲೆಯಲ್ಲಿರುವ ಎಲ್ಲಾ ಇಲಾಖೆಗಳಲ್ಲಿನ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ ಕಾರ್ಯಕ್ರಮಗಳು ಮತ್ತು ಎಸ್.ಸಿ.ಪಿ ಹಾಗೂ ಟಿ.ಎಸ್.ಪಿ ಯೋಜನೆಗಳಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಕಲ್ಯಾಣ ಕಾರ್ಯಕ್ರಮಗಳು, ವಿವಿಧ ಯೋಜನೆಗಳ ಕುರಿತು ಪ್ರಶ್ನಾವಳಿಗಳ ರೀತಿಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಲಿದ್ದಾರೆ. ಎಲ್ಲಾ ಇಲಾಖೆಗಳ ಅಧಿಕಾರಿಗಳು ನಿಖರವಾದ ಮಾಹಿತಿಯನ್ನು ಹೊಂದಿರಬೇಕು ಎಂದು ಅವರು ಹೇಳಿದರು.

ಕಲ್ಯಾಣ ಸಮಿತಿಯ ಸಭೆಗೆ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಿ, ಸಮಿತಿಯು ಕೇಳುವ ಎಲ್ಲ ಮಾಹಿತಿಯನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು. ಸಮಿತಿಯ ಸಭೆ ನಡೆಸಲು ಸೂಕ್ತ ವ್ಯವಸ್ಥೆ ಮಾಡುವುದರ ಜೊತೆಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಲು ಅವಶ್ಯವಿರುವ ಎಲ್ಲಾ ರೀತಿಯ ಶಿಷ್ಟಾಚಾರ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿನಿರ್ದೇಶಕರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಆಯಾ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದವರಿಗೆ ಇರುವ ಸೌಲಭ್ಯಗಳು ಯಾವವು, ಅನುದಾನ ಬಂದಿದ್ದು ಎಷ್ಟು ಹಾಗೂ ಬಳಕೆಯಾದ ಮತ್ತು ಉಳಿದಿರುವ ಅನುದಾನ ಮತ್ತು ಈ ಕುರಿತ ಅಂಕಿ ಅಂಶಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಇಟ್ಟುಕೊಂಡಿರಬೇಕು ಎಂದರು.

ಸುಳ್ಳು ಜಾತಿ ಸರ್ಟಿಫಿಕೇಟ್ ಪ್ರಕರಣಗಳು, ದಲಿತ ಸಮುದಾಯದವರ ಮೇಲೆ ಹಲ್ಲೆ ಪ್ರಕರಣಗಳ ಕುರಿತು ಮಾಹಿತಿ ಕೇಳುವದರಿಂದ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸರಿಯಾದ ಮಾಹಿತಿ ಹೊಂದಿರಬೇಕು. ಸಮಿತಿ ಅಧ್ಯಕ್ಷರು, ಸದಸ್ಯರು ಕೇಳುವ ಎಲ್ಲ ಮಾಹಿತಿಯನ್ನು ನೀಡುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ವೇದಿಕೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಅವರು ಇದ್ದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪಿ.ಶುಭ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್.ಮುಗನೂರಮಠ, ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕ ಅಜೀಜ್ ದೇಸಾಯಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಆಟೋ ರಿಕ್ಷಾ ಕಳ್ಳನ ಬಂಧನ

ಲಕ್ಷ್ಮೇಶ್ವರ: ಆಟೋ ರಿಕ್ಷಾ ಕಳ್ಳತನ ಮಾಡಿದ್ದ ಕಳ್ಳನನ್ನು ಪತ್ತೆ ಮಾಡಿ ಬಂದಿಸುವಲ್ಲಿ ಲಕ್ಷ್ಮೇಶ್ವರ ಪೊಲೀಸರು ಯಶಸ್ವಿಯಾಗಿದ್ದಾರೆ.

ಕಳೆದ 2ತಿಂಗಳು ಹಿಂದೆ ಪಟ್ಟಣದ ದೂದ ನಾನಾ ದರ್ಗಾ ಆಟೋ ಸ್ಟಾಂಡ್ ನಲ್ಲಿ ನಿಲ್ಲಿಸಿದ್ದ ಆಟೋರಿಕ್ಷಾ ಕಳ್ಳತನ ಆಗಿತ್ತು. ಇದರ ಬಗ್ಗೆ ದೂರ ದಾಖಲು ಆಗಿತ್ತು. ಜಿಲ್ಲಾ ಎಸ್ ಪಿ,ಬಿ ಎಸ್ ನೇಮಗೌಡ ಹೆಚ್ಚುವರಿ ಪೊಲೀಸ್ ಅದಿಕ್ಷಕ ಎಂ ಬಿ ಸಂಕದ, ಡಿಎಸ್ಪಿ ಜೆ ಎಚ್ ಇನಾಮದಾರ, ಮಾರ್ಗದರ್ಶನದಲ್ಲಿ ಸಿಪಿಐ ನಾಗರಾಜ ಮಾಡಳ್ಳಿ ಪಿ ಎಸ್ ಐ ಈರಪ್ಪ ರಿತ್ತಿ ಅಪರಾಧ ವಿಭಾಗದ ಪಿ ಎಸ್ ಐ ಟಿ ಕೆ ರಾಠೋಡ ಅವರ ನೇತ್ರತ್ವದಲ್ಲಿ ಒಂದು ತಂಡ ರಚನೆ ಮಾಡಿ ಕಳ್ಳನನ್ನು ಪತ್ತೆ ಹಚ್ಚುವ ಕಾರ್ಯಕೈಗೊಂಡಿದ್ದರು ಗದಗ ನಿವಾಸಿ ಸದ್ದಾಂ ಇಮಾಮ ಹುಸೇನ ಎಂಬುವ ಆರೋಪಿಯನ್ನ ಬಂದಿಸುವಲ್ಲಿ ಪೊಲೀಸ್‌ರು ಯಶಸ್ವಿಯಾಗಿದ್ದು 1.50ಲಕ್ಷ ಕಿಮ್ಮತ್ತಿನ ಆಟೋ ರಿಕ್ಷಾ ವಶಪಡಿಸಿಕೊಂಡಿದ್ದು, ಕಳ್ಳನನ್ನು ಬಂದಿಸುವಲ್ಲಿ ಯಶಸ್ವಿಯಾದ ಲಕ್ಷ್ಮೇಶ್ವರ ಪೊಲೀಸ್ ಠಾಣೆ ,ಎ ಎಸ್ ಐ ಗಳಾದ ಎನ್ ಎ ಮೌಲ್ವಿ, ಗುರು ಬೂದಿಹಾಳ, ಸಂಜು ಕೊರಡೂರ, ಆರ್ ಎಸ್ ಯರಗಟ್ಟಿ,ಎಮ್ ಎ ಶೇಖ, ಎಚ್ ಎಸ್ ಬಳ್ಳಾರಿ, ಆನಂದ ಕಮ್ಮಾರ, ಸಿ ಎಸ್ ಮಠಪತಿ, ಡಿ ಎಸ್ ನದಾಫ್ ಎಚ್.ಐ ಕಲ್ಲಣ್ಣವರ, ಪಾಂಡುರಂಗ ರಾವ, ಮದುಚಂದ್ರ ಧಾರವಾಡ, ಅಪ್ಪಣ್ಣ ರಾಠೋಡ, ತಾರಿಕೊಪ್ಪ ಇವರುಗಳು ಕಳ್ಳನನ್ನ ಪತ್ತೆಹಚ್ಚುವಲ್ಲಿ ಯಶಸ್ವಿ ಯಾಗಿದ್ದು ಎಸ್ ಪಿ ನೇಮಗೌಡ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಲಕ್ಷ್ಮೇಶ್ವರ ಪೊಲೀಸರು ಆಟೋ ರಿಕ್ಷಾ ಕಳ್ಳತನ ಮಾಡಿದ್ದ ಕಳ್ಳನನ್ನು ಪತ್ತೆ ಮಾಡಿ ಬಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜ್ಯ ಸರಕಾರ ಇದ್ದರೂ ಸತ್ತಂತೆ

ಹುಬ್ಬಳ್ಳಿ: ರಾಜ್ಯದಲ್ಲಿ ಮೂರು ಕ್ಷೇತ್ರಗಳಿಗೆ ಉಪಚುನಾವಣೆ ನಡೀತಿದೆ. ಮೋದಿ ಅಮಿತ್ ಶಾ, ಬಸವರಾಜ್ ಬೊಮ್ಮಾಯಿಗೆ ನೀವೆ ಚುನಾವಣೆಗೆ ನಿಲ್ಲಬೇಕು ಅಂದ್ರು. ಹೀಗಾಗಿ ಶಿಗ್ಗಾಂವಿಗೂ ಉಪಚುನಾವಣೆ ನಡೀತಿದೆ. ರಾಜ್ಯಸರಕಾರ ಇದ್ದು ಸತ್ತಂತಾಗಿದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.

ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ರಾಷ್ಟ್ರದಲ್ಲಿ ಯಾವುದಾದರೂ ಸರಕಾರ ಸತ್ತಂತಾಗಿದೆ ಅಂದ್ರೆ ಅದು ಕಾಂಗ್ರೆಸ್ ಸರಕಾರ. ಸಿದ್ದರಾಮಯ್ಯ ಪಂಜರದ ಗಿಳಿ ಆಗಿದ್ದಾರೆ. ಮೊದಲ ಬಾರಿ ಸಿಎಂ ಇದ್ದ ಹಾಗೆ ಸಿದ್ದರಾಮಯ್ಯ ಈಗಿಲ್ಲ ಎಂದರು.

ಚುನಾವಣೆ ಮುಗಿದ ಬಳಿಕ ಸರಕಾರ ಇರತ್ತೆ ಇಲ್ವೋ ಅನ್ನೋ ನಂಬಿಕೆ ಇಲ್ಲ. ಶಿಗ್ಗಾಂವಿ ಅಲ್ಲಿ ನಾವು ಗೆಲ್ತೀವಿ.

ಇವತ್ತು ಜನ ಅಸಹ್ಯ ಪಡತೀದಾರೆ. ಆಟಾಟೋಪ ನಡೆಯಲ್ಲ.ಸಿದ್ದರಾಮಯ್ಯ ಯಾಕೆ ಹಂಗಾಗಿದೆ ಅನ್ನೋದು ಅರ್ಥ ಆಗತಿಲ್ಲ. ಹಳೇ ಸಿದ್ದರಾಮಯ್ಯ ಈಗಿಲ್ಲ. ಜಮೀರ್ ಅಹಮ್ಮದ್ ನನ್ನ ಸ್ನೇಹಿತ. ಅವರಿಗೆ ಕಾನೂನು ಓದಕೊಬೇಕು. ಮಂತ್ರಿಯಾಗಿ ಒಳ್ಳೆ ಕೆಲಸ ಮಾಡಿ ಎಂದ ಸೋಮಣ್ಣ ತಿಳಿಸಿದರು.

ಸಕಾಲ ಅರ್ಜಿಗಳ ವಿಲೇವಾರಿ ತೃಪ್ತಿದಾಯಕವಿರಲಿ

ಗದಗ: ಸಕಾಲ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ಮೊದಲಿಗಿದ್ದ ಸ್ಥಾನವನ್ನು ಪುನಃ ಪಡೆದು ಉತ್ತಮ ಪ್ರಗತಿ ಸಾಧಿಸಲು ಸ್ವೀಕರಿಸಿದ ಅರ್ಜಿಗಳನ್ನು ನಿಗದಿತ ಸಮಯದಲ್ಲಿಯೇ ವಿಲೇವಾರಿ ಮಾಡಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಸಕಾಲ ಯೋಜನೆಯ ಜಿಲ್ಲಾ ಮಟ್ಟದ ವಿವಿಧ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಮೊದಲು ಗದಗ ಜಿಲ್ಲೆಯೂ ಸಕಾಲ ಅರ್ಜಿಗಳ ವಿಲೇವಾರಿಯಲ್ಲಿ 6 ನೇ ಸ್ಥಾನವನ್ನು ಪಡೆದಿತ್ತು, ಈಗ 13 ನೇ ಸ್ಥಾನದಲ್ಲಿರುವುದು ತೃಪ್ತಿಕರವಿಲ್ಲ, ಮೊದಲಿಗಿದ್ದ ಉತ್ತಮ ಸ್ಥಾನವನ್ನು ಪುನಃ ಪಡೆಯಲು ಅಧಿಕಾರಿಗಳು ಸಕಾಲ ಯೋಜನೆ ಕುರಿತು ಹೆಚ್ಚು ನಿಗಾ ವಹಿಸುವ ಮೂಲಕ ಯೋಜನೆಯನ್ನು ಯಶಸ್ವಿಗೊಳಿಸುವುದರೊಂದಿಗೆ ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸಬೇಕು. ಈ ಕುರಿತು ನಿರ್ಲಕ್ಷ್ಯ ಮಾಡಬಾರದು ಎಂದು ಸಲಹೆ ಮಾಡಿದರು.

ಪ್ರತಿದಿನ ಅಧಿಕಾರಿಗಳು ಕಚೇರಿಯಲ್ಲಿ ಸಕಾಲ ನಿರ್ವಹಿಸುವ ಕೆಲಸಗಾರರೊಂದಿಗೆ ಚರ್ಚಿಸುವ ಮೂಲಕ ಸಕಾಲ ಅರ್ಜಿಗಳ ವಿಲೇವಾರಿಗೆ ಆದ್ಯತೆ ವಹಿಸಬೇಕು. ಜಿಲ್ಲೆಯು ಸಕಾಲ ಯೋಜನೆಯಡಿ ಉತ್ತಮ ಪ್ರಗತಿಯ ಹಂತದಲ್ಲಿರುವಂತೆ ನೋಡಿಕೊಳ್ಳುವುದು ಪ್ರತಿ ಅಧಿಕಾರಿಗಳ ಜವಾಬ್ದಾರಿ ಎಂದರಿತು ಕರ್ತವ್ಯ ನಿರ್ವಹಿಸಬೇಕೆಂದು ಸೂಚಿಸಿದರು.

ಸಕಾಲ ಯೋಜನೆಯಡಿ ಸ್ವೀಕರಿಸಿದ ಅರ್ಜಿಗಳನ್ನು ವಿನಾಕಾರಣ ತಿರಸ್ಕಾರ ಮಾಡಬಾರದು ಹಾಗೂ ಸ್ವೀಕರಿಸಿದ ಅರ್ಜಿಗಳಿಗೆ ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು. ಸಕಾಲದಲ್ಲಿ ಅರ್ಜಿಗಳ ವಿಲೇವಾರಿ ಸಮರ್ಪಕ ಕೆಲಸ ನಿರ್ವಹಣೆಯಾಗದಿದ್ದರೆ ಸಂಬಂಧಿಸಿದ ಅಧಿಕಾರಿಗಳಿಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಸಕಾಲ ಯೋಜನೆಯ ಯಶಸ್ವಿಗಾಗಿ ಅಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ.ಸಂಕದ,ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಶಶಿಕಾಂತ ಕೋಟಿಮನಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ ಹಾಜರಿದ್ದರು.

ವಿದ್ಯಾರ್ಥಿಗಳ ಪ್ರೋತ್ಸಾಹ ಧನ ಹೆಚ್ಚಳ

ಧಾರವಾಡ: ಐಐಟಿ, ಐಐಎಂ, ಐಐಎಸ್‌ಸಿ, ಎನ್‌ಐಟಿ ಯಂತಹ ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು 1 ರಿಂದ 2 ಲಕ್ಷಕ್ಕೆ ಹೆಚ್ಚಳ ಮಾಡಿ ಸರಕಾರವು ಆದೇಶ ಹೊರಡಿಸಿದ್ದು, ಇದು ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳ ಹೆಚ್ಚಿನ ಶೈಕ್ಷಣಿಕ ಸಾಧನೆಗೆ ಕಾರಣವಾಗಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ ಹೆಚ್ ಸಿ ಮಹದೇವಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಇನ್ನು ಪಿಯುಸಿ ಪರೀಕ್ಷೆಯಲ್ಲಿ 95 ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದು, ನೀಟ್ ಪ್ರವೇಶ ಪರೀಕ್ಷೆಯ ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ದೊರಕದೇ ಮ್ಯಾನೇಜ್ ಮೆಂಟ್ ಕೋಟಾದಡಿ ಎಂಬಿಬಿಎಸ್ ಕೋರ್ಸ್ ಗೆ ಸೀಟು ಪಡೆದುಕೊಂಡ ಪರಿಶಿಷ್ಟ ಜಾತಿಯ ಮಕ್ಕಳಿಗೆ 25 ಲಕ್ಷ ರೂಪಾಯಿಗಳ ಶುಲ್ಕ ಧನವನ್ನು ಒದಗಿಸಲು ಸರ್ಕಾರ ತೀರ್ಮಾನಿಸಿದೆ.

ಎಂಬಿಬಿಎಸ್ ಪದವಿಯನ್ನು ಪಡೆಯುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಮೊದಲ ವರ್ಷ 60% ಗೂ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣ ರಾದರೆ ಅವರಿಗೆ ಅವರಿಗೆ ಮತ್ತೆ 25 ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುವುದು.

ಶಿಕ್ಷಣವೇ ಸಮಾಜವನ್ನು ಬದಲಿಸುವ ಕೀಲಿಕೈ ಎಂಬ ಅಂಶವನ್ನು ಮನಗಂಡು ಈ ಒಂದು ಮಹತ್ವದ ಘೋಷಣೆಯನ್ನು ಸರ್ಕಾರವು ಮಾಡಿದ್ದು, ಇದರಿಂದ ಉನ್ನತ ಶಿಕ್ಷಣ ಮಾಡಬೇಕೆಂಬ ವಿದ್ಯಾರ್ಥಿಗಳ ಕನಸು ನನಸಾಗಲಿದೆ.

ಐಐಟಿ ಐಐಎಂ ನಂತಹ ಶಿಕ್ಷಣ ಸಂಸ್ಥೆಗಳಲ್ಲಿ ಓದುವಂತಹ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳು ದೇಶ ನಿರ್ಮಾಣದಲ್ಲಿ ಸಕ್ರಿಯವಾಗಿ ತೊಡಗಬೇಕು, ಆ ಮೂಲಕ ಸಮೃದ್ಧ ಮತ್ತು ಸಶಕ್ತ ರಾಷ್ಟ್ರದ ನಿರ್ಮಾಣವಾಗಬೇಕು ಎಂದು ಮಾನ್ಯ ಸಚಿವರು ತಿಳಿಸಿದರು.

ಇನ್ನು ಬಡತನದ ಬೇಗೆಗೆ ಸಿಲುಕಿ ಎಂಬಿಬಿಎಸ್ ಓದುವ ಬಯಕೆ ಇರುವಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ಸೀಟು ಸಿಗದೇ ಅವರು ಖಾಸಗೀ ಸಂಸ್ಥೆಗಳಲ್ಲಿ ಓದುತ್ತಿದ್ದರೆ, ಅಂತಹ ಪ್ರತಿಭಾವಂತ ಮಕ್ಕಳ ಶುಲ್ಕವನ್ನು ಸರ್ಕಾರ ಭರಿಸಲಿದ್ದು, ಇದಕ್ಕಾಗಿ ಆರಂಭಿಕವಾಗಿ 25 ಲಕ್ಷ ರೂಪಾಯಿಗಳನ್ನು ನೀಡುವ ನಿರ್ಧಾರವನ್ನು ತೆಗೆದುಕೊಂಡಿದೆ.

ಈಗಾಗಲೇ ಪ್ರಬುದ್ಧ ಯೋಜನೆಯಡಿ ವಿದೇಶಿ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿರುವ ನಮ್ಮ ಸರ್ಕಾರವು ಇದೀಗ ಮಕ್ಕಳ ಉತ್ತಮ ಶಿಕ್ಷಣವನ್ನು ಗಮನದಲ್ಲಿಟುಕೊಂಡು ಮುಖ್ಯ ಘೋಷಣೆಯನ್ನು ಮಾಡಿರುತ್ತದೆ.

ಹೀಗಾಗಿ ಬಾಬಾ ಸಾಹೇಬರ ಆಶಯದಂತೆ ನಮ್ಮೆಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ಹೊಂದಿ, ಶ್ರಮ ಹಾಕಿ ಓದಬೇಕೆಂದು ಮಾನ್ಯ ಸಚಿವರು ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಇರಲಿ

ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ಪರಿಶಿಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಸೂಚನೆ

ಗದಗ: ಪ.ಜಾ,ಪ.ಪಂ. ಉಪಹಂಚಿಕೆ ಯೋಜನೆಯಡಿ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಇರಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ನಿಗದಿತ ಕಾಲಾವಧಿಯಲ್ಲಿಯೇ ದೊರಕು ವಂತಾಗಬೇಕು ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ.ಜಾ/ಪ.ಪಂ. ಉಪಹಂಚಿಕೆ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆ ಮಾಡುವಾಗ ಪಾರದರ್ಶಕತೆಯಿರಬೇಕು. ತಾಲೂಕು ಮಟ್ಟದಲ್ಲಿ ಎಸ್‌ಸಿಪಿ/ ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯನ್ನು ನಿಯಮಿತವಾಗಿ ಜರುಗಿಸಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ವಿಳಂಬವಾಗದೇ ಶೀಘ್ರಗತಿಯಲ್ಲಿ ತಲುಪು ವಂತಾಗಬೇಕು. ಯಾವುದೇ ಕಾರಣಕ್ಕೂ ಬಿಡುಗಡೆಯಾದ ಅನುದಾನ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕು. ಸದರಿ ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು ಹಾಗೂ ಇಲಾಖಾವಾರು ಸಾಧಿಸಿದ ಪ್ರಗತಿ ವಿವರವನ್ನು ಇಲಾಖೆ ಅಂತರ್ಜಾಲದಲ್ಲಿ ತಪ್ಪದೇ ಅಪ್ ಡೇಟ್ ಮಾಡಬೇಕು ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ಅವರು ಮಾತನಾಡಿ ಇಲಾಖೆಯ ವಿವಿಧ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ ಪ್ರಕ್ರೀಯೆಯನ್ನು ಆದಷ್ಟು ಬೇಗನೆ ಅಂತಿಮಗೊಳಿಸ ಬೇಕು ಮತ್ತು ಇಲಾಖೆಗಳಿಂದ ಟೆಂಡರ್,ಕೋಟೆಶನ್ಗಳನ್ನು ನಿಯಮಿತ ಸಮಯದೊಳಗೆ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ ಅವರು ಮಾತನಾಡಿ 2024-25ನೇ ಸಾಲಿನ ಪರಿಶಿಷ್ಟ ಜಾತಿ ಉಪ ಹಂಚಿಕೆ (ಎಸ್‌ಸಿಎಸ್‌ಪಿ) ಯೋಜನೆಯಡಿ ಅಕ್ಟೋಬರ್ 2024 ರ ಅಂತ್ಯದವರೆಗೆ ವಿವಿಧ ಇಲಾಖೆಗಳಡಿ ಒಟ್ಟಾರೆ 5134.52 ಲಕ್ಷ ರೂ.ಅನುದಾನ ಬಿಡುಗಡೆಯಾಗಿದ್ದು ಆ ಪೈಕಿ 3906.48 ಲಕ್ಷ ರೂ.ಖರ್ಚಾಗಿದೆ. 37707 ಫಲಾನುಭವಿಗಳು ಯೋಜನೆಯ ಸೌಲಭ್ಯ ಪಡೆದಿದ್ದು ಶೇ.76 ರಷ್ಟು ಪ್ರಗತಿಯಾಗಿದೆ. ಪರಿಶಿಷ್ಟ ಪಂಗಡ ಉಪಹಂಚಿಕೆ (ಟಿಎಸ್‌ಪಿ) ಯೋಜನೆಯಡಿ ವಿವಿಧ ಇಲಾಖೆಗಳಡಿ 1372.46 ಲಕ್ಷ ರೂ.ಬಿಡುಗಡೆಯಾಗಿದ್ದು ಆ ಪೈಕಿ 983.07 ಲಕ್ಷ ರು. ಖರ್ಚಾಗಿದೆ. 16722 ಫಲಾನುಭವಿಗಳು ಯೋಜನೆಯ ಸೌಲಭ್ಯ ಪಡೆದಿದ್ದು ಶೇ. 72 ರಷ್ಟು ಪ್ರಗತಿಯಾಗಿದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ನಗರಾಭಿವೃದ್ಧಿ ಕೋಶ, ತೋಟಗಾರಿಕೆ, ಹೆಸ್ಕಾಂ, ಕೌಶಲ್ಯಾಭಿವೃದ್ಧಿ, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ, ಸೇರಿದಂತೆ ವಿವಿಧ ಇಲಾಖೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಎಂ.ಬಿ. ಸಂಕದ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸವನಗೌಡ ಕೊಟ್ಟೂರ,ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್ ಎಸ್ ಬುರಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಶಿಕಾಂತ ಕೋಟಿಮನಿ ಹಾಜರಿದ್ದರು.

ಯೋಗ ಶಿಕ್ಷಕಿಯನ್ನು ಜೀವಂತವಾಗಿ ಗುಂಡಿಯಲ್ಲಿ ಹೂತುಹಾಕಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಶಿಕ್ಷಕಿಯನ್ನು ಜೀವಂತವಾಗಿ ಹೂತಿದ್ದ ದುಷ್ಕರ್ಮಿಗಳ ಸೆರೆ

ಚಿಕ್ಕಬಳ್ಳಾಪುರ: ಬೆಂಗಳೂರಿನ ಯೋಗ ಶಿಕ್ಷಕಿಯೊಬ್ಬರನ್ನು ಅಪಹರಿಸಿ ಅರೆಬೆತ್ತಲೆಗೊಳಿಸಿ ಜೀವಂತವಾಗಿ ಗುಂಡಿಯಲ್ಲಿ ಹೂತುಹಾಕಿದ್ದ ಐವರು ಆರೋಪಿಗಳನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರಹಳ್ಳಿಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಖಾಸಗಿ ಡಿಟೆಕ್ಟಿವ್ ಏಜೆನ್ಸಿ ಮಾಲೀಕ ಸತೀಶ್ ರೆಡ್ಡಿ, ರಮಣ, ಸಲ್ಮಾನ್ ಮತ್ತು ರವಿ ಎಂದು ಗುರುತಿಸಲಾಗಿದೆ. ಆರೋಪಿ ಸತೀಶ್ ರೆಡ್ಡಿ ಶಿಕ್ಷಕಿಯ ಬಳಿ ಯೋಗ ಕಲಿಯಲು ಹೋಗುತ್ತಿದ್ದ. ನಂತರ ಗನ್ ತರಬೇತಿ ಕೊಡುವುದಾಗಿ ಆಕೆಯ ಮನೆಗೆ ಬಂದಿದ್ದ. ಈ ವೇಳೆ ಆರೋಪಿಗಳ ಗ್ಯಾಂಗ್ ಶಿಕ್ಷಕಿಯನ್ನು ಅಪಹರಿಸಿತ್ತು. ಬೆಂಗಳೂರಿನ ಕೆ.ಆರ್.ಪುರಂ ನಿವಾಸಿಯಾದ ಶಿಕ್ಷಕಿಯನ್ನು ಅ.23ರಂದು ಆರೋಪಿಗಳ ಗ್ಯಾಂಗ್ ಅಪಹರಿಸಿತ್ತು. ಬಳಿಕ ಶಿಡ್ಲಘಟ್ಟ ತಾಲೂಕಿನ ಧನಮಿಟ್ಟೇನ ಹಳ್ಳಿ ಬಳಿ ಜೀವಂತವಾಗಿ ಹೂತುಹಾಕಿ ಪರಾರಿಯಾಗಿದ್ದರು. ಸತ್ತಂತೆ ನಟಿಸಿದ್ದ ಶಿಕ್ಷಕಿ ಬಳಿಕ ಪಾರಾಗಿ ಬಂದು ಪೊಲೀಸರಿಗೆ ದೂರು ನೀಡಿದ್ದರು. ಶಿಕ್ಷಕಿಯ ಕೊಲೆಗೆ ಆಕೆಯ ಪ್ರಿಯಕರನ ಪತ್ನಿ ಸುಪಾರಿ ನೀಡಿದ ಆರೋಪ ಕೇಳಿಬಂದಿದೆ.

ವಕ್ಫ್ ಬೇಲಿ: ಜೆಪಿಸಿಗೆ ದೂರುಗಳ ಸುರಿಮಳೆ

← ಮೊದಲಪುಟದಿಂದ

ಕಮಲ ನಾಯಕರಲ್ಲೇ ಅಸಹಕಾರ: ವಕ್ಫ್ ವಿಚಾರ ಸಂಬಂಧ ಬಿಜೆಪಿಯು ರಾಜ್ಯವ್ಯಾಪಿ ಹೋರಾಟ ಕೈಗೆತ್ತಿಕೊಂಡಿತ್ತು. ಮೊದಲು ವಿಜಯಪುರ, ಹುಬ್ಬಳ್ಳಿ, ಬೀದರ್, ಕಲಬುರಗಿ, ಶಿವಮೊಗ್ಗ, ಚಿತ್ರದುರ್ಗ ಸೇರಿದಂತೆ ರಾಜ್ಯದ ಹಲವೆಡೆ ವಕ್ಫ್ ಮಂಡಳಿ ನೋಟಿಸ್ ಸಂಬಂಧ ಪ್ರತಿಭಟನೆಗಳಾಗಿದ್ದವು. ರಾಜಧಾನಿಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರು, ಪ್ರತಿಪಕ್ಷದ ನಾಯಕರು ಸೇರಿದಂತೆ ಪ್ರಮುಖರು ಹೋರಾಟ ನಡೆಸಿದ್ದರು. ಆದರೆ, ಈ ವಿಚಾರ ಗಂಭೀರವಾಗಿ ಪರಿಗಣಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಸಚಿವ ಜಮೀರ್ ಅವರಿಗೆ ಸೆಡ್ಡು ಹೊಡೆದು ವಿಜಯಪುರದಲ್ಲಿ ಅಮರಣಾಂತ ಸತ್ಯಾಗ್ರಹ ನಡೆಸಿದ್ದರು. ಇದಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಾಥ್ ಕೂಡ ನೀಡಿದ್ದರು. ಹೀಗಿದ್ದರೂ ಬಿಜೆಪಿಯ ಪ್ರಮುಖ ನಾಯಕರು ಇತ್ತ ಕಡೆ ತಲೆ ಹಾಕಿಲ್ಲ. ಈ ಹೋರಾಟ ಎರಡು ಭಾಗವಾಗಿ ಮಾಡುವಂತಾಯಿತು ಎಂದು ಕಾರ್ಯಕರ್ತರು ಕೊರಗಿಕೊಂಡರು.

ಮುಸ್ಲಿಂ ಮುಖಂಡರೊಂದಿಗೆ ಜಮೀರ್ ಸಭೆ: ವಕ್ಫ್ ವಿವಾದ ತಾರಕಕ್ಕೇರುತ್ತಿದ್ದಂತೆ ಸಚಿವ ಜಮೀರ್ ಅವರ ನಿಲುವು ಖಂಡಿಸಿ ಕೆಲ ಕಾಂಗ್ರೆಸ್ ಶಾಸಕರು ಅಸಮಾಧಾನ ವ್ಯಕ್ತಪಡಿಸಿ, ಎಐಸಿಸಿ ಅಧ್ಯಕ್ಷರಿಗೆ ದೂರು ಕೂಡ ನೀಡಿದ್ದರು. ಗುರುವಾರದಂದು ಸಚಿವರು ಹುಬ್ಬಳ್ಳಿಯಲ್ಲಿ ಸಮುದಾಯದವರ ಸಭೆ ಕರೆದಿದ್ದರು ಎನ್ನಲಾಗಿದೆ. ಇದರಲ್ಲಿ ಮುಂದೆ ತೆಗೆದುಕೊಳ್ಳಬೇಕಾದ ನಡೆಯ ಬಗ್ಗೆ ಚರ್ಚಿಸಲಾಗಿದೆ ಎನ್ನಲಾಗಿದೆ. ಸಭೆಯ ಬಳಿಕ ಮಾತನಾಡಿದ ಸಚಿವ ಜಮೀರ್, 19ರಂದು ವಕ್ಫ್ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ನಡೆಸಿರುವ ಸಭೆಗೆ ಯಾವ ಮುಸ್ಲಿಂ ರೈತರೂ ಬಂದಿಲ್ಲ. ರೈತರು ಯಾರಾದರೇನು?. ಅವರಿಗೆ ನೋಟಿಸ್ ಕೊಟ್ಟಿದ್ದರೆ ನಾನು ಮತ್ತು ಸಿಎಂ ಹಿಂಪಡೆಯಲು ಸೂಚನೆ ನೀಡಿದ್ದೇವೆ. ಯಾವ ಕಾರಣಕ್ಕೂ ರೈತರಿಗೆ ತೊಂದರೆ ಕೊಡಲು ನಾನು ಸಿದ್ಧವಿಲ್ಲ. ರೈತರು ನಮ್ಮ ಅನ್ನದಾತರು, ತೊಂದರೆ ಕೊಡುವುದಿಲ್ಲ. ಧಾರವಾಡ ಜಿಲ್ಲೆಯ ಸಭೆ ಅಷ್ಟೇ ಇದು. ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ. ನಾವು ಮಾಡುವ ಒಳ್ಳೆಯ ಕೆಲಸಗಳನ್ನು ನೋಡಿ ಅವರಿಗೆ ಸಹಿಸಲು ಆಗುತ್ತಿಲ್ಲ ಎಂದು ಟೀಕಿಸಿದರು. ಡಿಡಿ

> ಚುನಾವಣೆಗಾಗಿ ಇಡಿ, ಸಿಬಿಐ ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಬಿಜೆಪಿ ಇದೀಗ ಜೆಪಿಸಿಯನ್ನು ಸಹ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಜೆಪಿಸಿ ರಾಜ್ಯಕ್ಕೆ ಬಂದಿರುವುದಕ್ಕೆ ಮಾನ್ಯತೆಯೇ ಇಲ್ಲ. ಅವರು ಅಧಿಕೃತವಾಗಿ ರಾಜ್ಯಕ್ಕೆ ಬಂದಿಲ್ಲ, ಇದು ಅನಧಿಕೃತ ಭೇಟಿ. ಕಮಿಟಿಗೆ ರೈತರು ಮನವಿ ಕೊಟ್ಟರಾ? ರಾಜ್ಯ ಸರಕಾರಕ್ಕೆ ಮಾಹಿತಿ ನೀಡದೆ ಬಂದಿದ್ದಾರೆ.
>
> -**ಎಚ್.ಕೆ.ಪಾಟೀಲ್** ಕಾನೂನು ಸಚಿವ

ದೂರಿನಲ್ಲಿ ಏನಿದೆ?

ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡಿಕೊಂಡಿರುವ ರೇಣುಕಾ ಉತ್ತಪ್ಪ ಮುಳ್ಳುಸೋಗೆಯಲ್ಲಿ ಪಿತ್ರಾರ್ಜಿತ ಆಸ್ತಿ ಹೊಂದಿದ್ದಾರೆ. ಕಳೆದ ಅಕ್ಟೋಬರ್ 25ರಂದು ಬೆಳಗ್ಗೆ 11 ಗಂಟೆಗೆ, ತಾವೊಬ್ಬರೇ ಮನೆಯಲ್ಲಿ ಇರುವಾಗ ಅನ್ಯ ಸಮುದಾಯಕ್ಕೆ ಸೇರಿದ ಇಬ್ಬರು ವ್ಯಕ್ತಿಗಳು ಮನೆಯ ಆವರಣಕ್ಕೆ ಪ್ರವೇಶಿಸಿದ್ದಾರೆ. ಇದು ವಕ್ಫ್ ಆಸ್ತಿ, ತಕ್ಷಣವೇ ಮನೆ ತೆರವುಗೊಳಿಸಿ ಮಂಡಳಿಗೆ ಒಪ್ಪಿಸುವಂತೆ ಬೆದರಿಸಿದ್ದಾರೆ. ಆಗ ನಾನು, ನನ್ನ ತಂದೆ 1984 ರಲ್ಲಿ ಮುಳ್ಳುಸೋಗೆಯಲ್ಲಿ ಸರ್ವೆ ನಂಬರ್ 79/2 ರಲ್ಲಿ 36 ಸೆಂಟ್ ಜಮೀನನ್ನು ಮಾನ್ಯಪಂಡ ಬೋಪಣ್ಣ ಎಂಬುವವರಿಂದ ಖರೀದಿಸಿದ್ದರು. ಅಂದಿನಿಂದ ನಾವು ಇದೇ ಆಸ್ತಿಯಲ್ಲಿ ವಾಸಿಸುತ್ತಿದ್ದೇವೆ. ಇತ್ತೀಚೆಗೆ ನನ್ನ ಪೋಷಕರು ನಿಧನರಾದರು. ನಂತರ ನಾನು ಇದನ್ನು ಪಿತ್ರಾರ್ಜಿತವಾಗಿ ಪಡೆದಿದ್ದೇನೆ, ಏಕೆ ತೆರವು ಗೊಳಿಸಬೇಕು? ನಿಮ್ಮ ಬಳಿ ಯಾವುದಾದರೂ ನ್ಯಾಯಾಲಯದ ನೋಟಿಸ್ ಅಥವಾ ವಕ್ಫ್‌ಗೆ ಸೇರಿರುವುದಕ್ಕೆ ದಾಖಲೆ ಕೊಡಿ ಎಂದು ಪ್ರಶ್ನಿಸಿದೆ. ಆಗ ಅವರು ನೀವು ಮನೆ ಖಾಲಿ ಮಾಡದಿದ್ದರೇ ಹೊರಗೆ 15 ಜನರು ಇದ್ದಾರೆ. ಅವರನ್ನು ಕರೆಯುವುದಾಗಿ ಬೆದರಿಸಿದರು. ಇದರಿಂದ ಕೋಪಗೊಂಡ ಮಹಿಳೆ ಕೂಡಲೇ ಮನೆಯ ಆವರಣದಿಂದ ಹೊರ ಹೋಗುವಂತೆ ಗದರಿಸಿದ್ದಾರೆ. ಆಗ ಅವರು ನಮಗೆ ಷರಿಯಾ ಕೋರ್ಟ್ ಇದೆ. ನೀವು ಬೆಂಗಳೂರಿನ ಷರಿಯಾ ಕೋರ್ಟ್‌ಗೆ ಬರ ಬೇಕಾಗುತ್ತದೆ. ಅಲ್ಲಿ ನಿಮ್ಮ ಮಾಲೀಕತ್ವ ಸಾಬೀತಪಡಿಸಬೇಕು ಎಂದು ಬೆದರಿಸಿ ತೆರಳಿದ್ದಾರೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಕೊಡಗಿನಲ್ಲಿ ಮಹಿಳೆಗೆ ಬೆದರಿಕೆ

ಮಹಿಳೆಯೊಬ್ಬರ ಮನೆಯ ಆವರಣಕ್ಕೆ ಪ್ರವೇಶಿಸಿ ನೀವು ವಕ್ಫ್ ಆಸ್ತಿ ಅತಿಕ್ರಮಿಸಿಕೊಂಡು ಮನೆ ಕಟ್ಟಿದೀರಿ, ತೆರವುಗೊಳಿಸಿ ಎಂದು ಕೆಲವರು ಬೆದರಿಕೆ ಹಾಕಿರುವ ಘಟನೆ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಮುಳ್ಳುಸೋಗೆ ಗ್ರಾಮದಲ್ಲಿ ನಡೆದಿದೆ. ಈ ಕುರಿತು ಕೊಡಗು ಎಸ್ಪಿಗೆ ಗ್ರಾಮದ ಮಹಿಳೆ ರೇಣುಕಾ ಉತ್ತಪ್ಪ ಎಂಬುವವರು ದೂರು ನೀಡಿದ್ದಾರೆ. ತಾವು ತಮ್ಮ ಕುಶಾಲನಗರದ ಮುಳ್ಳುಸೋಗೆ ಮನೆಯಲ್ಲಿ ಒಬ್ಬರೇ ಇರುವಾಗ ಇಬ್ಬರು ಬಂದು ಬೆದರಿಕೆ ಒಡ್ಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ),
6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–1/ಉಮುಅ(ನಿ)–2/ತಾಂಅ(ಪ)/7091/2024–25
ದಿನಾಂಕ: 07.11.2024

ಟೆಂಡರ್ ಪ್ರಕಟಣೆ (3ನೇ ಕರೆ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಕಾನಿಅ(ಪಶ್ಚಿಮ)–2–2 ಉಪ–ವಿಭಾಗದ ನಾಗರಭಾವಿ ಸೇವಾಠಾಣೆಯಡಿ ಬರುವ ಎನ್‌ಜಿಇಎಫ್ ಬಡಾವಣೆಯಲ್ಲಿ ನಮ್ಮೂರ ತಿಂಡಿ ಹೋಟೆಲ್ ಹಿಂಭಾಗದ ನಾಗರಭಾವಿ 12ನೇ ಬ್ಲಾಕ್‌ವರೆಗಿನ ಹಾಲಿ ಇರುವ ಸಿಐ ಮಾರ್ಗಗಳ ಬದಲಾಗಿ ವಿವಿಧ ವ್ಯಾಸದ ಡಿಐ ನೀರು ಸರಬರಾಜು ಮಾರ್ಗಗಳನ್ನು ಒದಗಿಸಿ, ಅಳವಡಿಸುವ ಕಾಮಗಾರಿ.

ಟೆಂಡರ್‌ಗಿಟ್ಟ ಮೊತ್ತ: **ರೂ. 115.88 ಲಕ್ಷಗಳು.**
ಬಿಡ್ ಭದ್ರತೆ: **ರೂ. 2.00 ಲಕ್ಷಗಳು.**
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22.11.2024 ರಂದು ಸಂಜೆ 4:00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **25.11.2024 ರಂದು ಸಂಜೆ 5:00 ಗಂಟೆಯ ನಂತರ.** ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು **https://kppp.karnataka.gov.in** ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಪಶ್ಚಿಮ).
ವಾ.ಸಾ.ಸಂ.ಇ/ವಾ.ಪ್ರ/ರೆ.ಅ/2989/2024–25

KARNATAKA POWER TRANSMISSION CORPORATION LIMITED

(CIN:U40109KA1999SGC025521)
No. SE(E)/Tr(M)/BMAZ(S)/AEE(W)/2024-25/5597-99 Dt: .06.11.2024

Brief Tender Notification (Through KPP Portal only)

KPTCL invites tenders for the various Civil Works in Hoody and Somanahalli Divisions through KPP Portal only. The details regarding participating in the tender can be obtained by website **https://kppp.karnataka.gov.in on or after 08.11.2024.**

Sd/- Superintending Engineer(Ele.),Tr(M),
BMAZ South Circle, Ground Floor, KPTCL Office Complex,
A.R. Circle, Bengaluru-09, Phone: 080-22386686/85.

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ

ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ – 560100.
ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸ/ಕೋ/ತಾಂ/ಶಾ/12/2024–25 ದಿನಾಂಕ: 06–11–2024

ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ **ದಿನ ನಿತ್ಯದ ಘನ ತ್ಯಾಜ್ಯವಸ್ತು ನಿರ್ವಹಣೆಗಾಗಿ ಅಗತ್ಯ ಮಾನವ ಸಂಪನ್ಮೂಲವನ್ನು ಒದಗಿಸಲು** ನಿಯಮಾನುಸಾರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ಈ ಕೆಳಕಂಡಂತಿದೆ.

ಕ್ರ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2024-25/SE3928	85.15

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 19–11–2024 ರಂದು ಸಂಜೆ 17.00 ಗಂಟೆವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 21–11–2024 ರಂದು ಸಂಜೆ 17.30 ಗಂಟೆಗೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ತಾಂತ್ರಿಕ ಶಾಖೆಯ ಅಭಿಯಂತರರಿಂದ ಪಡೆಯತಕ್ಕದ್ದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.
ವಾಸಾಸಂಇ/ವಾ.ಪ್ರ/2983/ಅಡ್ವಟೋರ್/2024–25

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ.: 08182–222943, Email- spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ)

ಐ.ಎಫ್.ಟಿ ಸಂಖ್ಯೆ: 24/2024–25 ದಿನಾಂಕ: 06.11.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1&2 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಲೆಕ್ಕಶೀರ್ಷಿಕೆ 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ವಾರ್ಷಿಕ ನಿರ್ವಹಣೆ & 3054–03–102–0–01–200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ ತೀರ್ಥಹಳ್ಳಿ ತಾಲ್ಲೂಕಿನ ಒಟ್ಟು 02 ಕಾಮಗಾರಿಗಳಿಗೆ ಟೆಂಡರ್‌ನ್ನು ಏಕ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ. 42.36 ಲಕ್ಷ ಮತ್ತು ಟೆಂಡರ್ ಗಿಟ್ಟ ಕನಿಷ್ಠ ಮೊತ್ತ ರೂ. 21.18 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಟ ಮೊತ್ತ ರೂ. 0.85 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ. 0.42 ಲಕ್ಷ. ಕಾಲಾವಧಿ ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನಮೂದಿಸಿದಂತೆ. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 06–11–2024 ರಿಂದ 13–11–2024 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 13–11–2024 ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್ ನಲ್ಲಿ ದಿನಾಂಕ: 14–11–2024 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/24/11/984

ಕರ್ನಾಟಕ ಸರ್ಕಾರ ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ವಿಜಯನಗರ.

ಸಂಖ್ಯೆ: EE/RWS&SD/VJNR/e-tender/Tech/2024-25/740
ದಿನಾಂಕ:06–11–2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–13/2024–25.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2024–25ನೇ ಸಾಲಿನ 2215 ಎಮ್.ವಿ.ಎಸ್– ಓ&ಎಂ ಯೋಜನೆಯಡಿ ಅನುಮೋಧನೆಯಾದ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 01 ಕಾಮಗಾರಿಗಳಿಗೆ ರೂ137.50 ಲಕ್ಷ ರೂಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:07.11.2024 ರಿಂದ 22.11.2024ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:25.11.2024ರಂದು ಮುಂಜಾನೆ 11.00 ಗಂಟೆಗೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.kppp.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರ್,
ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/349

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,

ಚಾಮುಂಡಿಬೆಟ್ಟ, ಮೈಸೂರು–570010
ದೂರವಾಣಿ ಸಂಖ್ಯೆ :0821–2590027
ಇ–ಮೇಲ್ :eochamunditemple@gmail.com
ಪತ್ರ ಸಂಖ್ಯೆ:ಎಸ್‌ಸಿಟಿ(5)ಸಿಆರ್:/2024–25 ದಿನಾಂಕ: 04.11.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು. **ಕ್ರ.ಸಂ.1 ಟೆಂಡರ್ ವಿವರ:** ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ದೇವಸ್ಥಾನದ ದಾಸೋಹ ಭವನದಲ್ಲಿ ಪ್ರಸಾದ ತಯಾರಿಸಿ, ಬಡಿಸಿ, ಸ್ವಚ್ಛತೆ ಮಾಡಿಕೊಡಲು ಈ ಕೆಳಕಂಡ ಜನ ಅಡುಗೆ ಕೆಲಸಗಾರರನ್ನು 12 ತಿಂಗಳ ಅವಧಿಗೆ ಹೊರಗುತ್ತಿಗೆಯಲ್ಲಿ ಒದಗಿಸುವ ಗುತ್ತಿಗೆ ಹಕ್ಕು ಮುಖ್ಯ ಅಡುಗೆಯವರು–3 ಅಡುಗೆ ಸಹಾಯಕರು–3, ತರಕಾರಿ ಕತ್ತರಿಸುವವರು–16, ಸ್ವಚ್ಛತೆ ಮಾಡುವವರು–16 ಒಟ್ಟು 38 ಜನ. **ಅಂದಾಜು ಮೊತ್ತ (ರೂ.ಗಳಲ್ಲಿ):** 90,00,000 **ಇಎಂಡಿ ಮೊತ್ತ (ರೂ.ಗಳಲ್ಲಿ):** 1,80,000

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ. 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು ದಿ:05.11.2024ರ ಬೆಳಿಗ್ಗೆ 11.00 ಗಂಟೆ ನಂತರ. 2) ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ. ದಿ:15.11.2024ರ ಸಂಜೆ 5.00 ಗಂಟೆ ವರೆಗೆ. 3) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: ದಿ:16.11.2024ರ ಬೆಳಿಗ್ಗೆ 11.00 ಗಂಟೆ ನಂತರ. 4) ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿ: 20.11.2024ರ ಬೆಳಿಗ್ಗೆ 11.00 ಗಂಟೆ ನಂತರ

ಸಹಿ/– ಕಾರ್ಯದರ್ಶಿ,
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ
DIPR/DDMYS-758/KSMCA-520/2024-25

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563 103
Email:bnuregistrar@karnataka.gov.in
web:www.bnu.karnataka.gov.in
ದಿನಾಂಕ: 07.11.2024

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಕೇಂದ್ರ, ಮಂಗಸಂದ್ರ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಸಿ.ಸಿಕ್ಯಾಮೆರಾಗಳನ್ನು ಅಳವಡಿಸುವ ಬಗ್ಗೆ. **ಟೆಂಡರ್ ನಂ: BNU/2024-25/ IND0027.** (2) ಮೂಲಭೂತ ಸೌಕರ್ಯ ವಸ್ತುಗಳು (Infrastructure Items) ಖರೀದಿಸುವ ಬಗ್ಗೆ. **ಟೆಂಡರ್ ನಂ: BNU/2024-25/IND0026.** (3) ಅಗ್ನಿ ಸುರಕ್ಷತಾ ಸಾಧನಗಳ ಪೂರೈಕೆ, ಸ್ಥಾಪನೆ ಮತ್ತು ವಾರ್ಷಿಕ ನಿರ್ವಹಣೆ (Supply, Installation & Annual Maintenance of Fire Safety Equipments) ಒದಗಿಸುವ ಬಗ್ಗೆ. **ಟೆಂಡರ್ ನಂ: BNU/2024-25/IND0022/CALL-2.** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು **ದಿನಾಂಕ:06.11.2024** ರಿಂದ **http://kppp.karnataka.gov.in** ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ–563103
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:307/ಕೆಎಸ್‌ಎಂಸಿಎ/2024–25

ರೈಲಿನಂಥ ಸಾಲಿದ್ದರೆ ಇದ್ದಲ್ಲಿಯೇ ರೈಲು ಟಿಕೆಟ್

← ಮೊದಲಪುಟದಿಂದ

ಇದರಿಂದ ರೈಲ್ವೆ ನಿಲ್ದಾಣಗಳಲ್ಲಿ ಜನರು ಟಿಕೆಟ್‌ಗಾಗಿ ಕಾಯುವ ಅಗತ್ಯವಿರುವುದಿಲ್ಲ. ಸಾಂಪ್ರದಾಯಿಕ ಟಿಕೆಟ್ ಕೌಂಟರ್‌ಗಳ ಮುಂದೆ ಪ್ರಯಾಣಿಕರ ದಟ್ಟಣೆಯೂ ಕಡಿಮೆಯಾಗಲಿದೆ.

ರೈಲ್ವೆ ಟಿಕೆಟ್ ನೀಡುವ ಪ್ರಕ್ರಿಯೆ ಸರಳಗೊಳಿಸಲು ಮತ್ತು ಪ್ರಯಾಣಿಕರು ತಾಸುಗಟ್ಟಲೇ ಟಿಕೆಟ್‌ಗಾಗಿ ಕಾಯುವುದನ್ನು ತಪ್ಪಿಸಲು ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಇದಕ್ಕಾಗಿಯೇ ಬಸ್ ನಿರ್ವಾಹಕರ ಕೈಯಲ್ಲಿರುವ ಮಾದರಿಯಲ್ಲಿ ಟಿಕೆಟಿಂಗ್ ಯಂತ್ರಗಳನ್ನು ಪರಿಚಯಿಸಲಾಗಿದೆ. ರೈಲ್ವೆ ಇಲಾಖೆ ಸಿಬ್ಬಂದಿ ಈ ಸಾಧನದ ಮೂಲಕ ಹಣ ಪಡೆದು, ಸ್ಥಳದಲ್ಲಿಯೇ ಪ್ರಯಾಣಿಕರಿಗೆ ತ್ವರಿತವಾಗಿ ಟಿಕೆಟ್‌ಗಳನ್ನು ನೀಡಲಿದ್ದಾರೆ.

ಯಾವ್ಯಾವ ನಿಲ್ದಾಣಗಳು?: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗ ಕೆಎಸ್‌ಆರ್ ಬೆಂಗಳೂರು (ಮೆಜೆಸ್ಟಿಕ್), ಯಶವಂತಪುರ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೈಯಪ್ಪನಹಳ್ಳಿ ರೈಲು ನಿಲ್ದಾಣದೊಳಗೆ 500 ಮೀ. ವ್ಯಾಪ್ತಿಯಲ್ಲಿ ಪ್ರಯಾಣಿಕರು ಟಿಕೆಟ್‌ಗಾಗಿ ಸಾಲುಗಟ್ಟಿ ನಿಂತಿದ್ದರೆ ಅವರ ಕೈಗೆ ಟಿಕೆಟ್ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ಕುರಿತು ಹಿರಿಯ ಅಧಿಕಾರಿಗಳು ಮಾತನಾಡಿ, ಮೊಬೈಲ್ ಟಿಕೆಟ್ ವ್ಯವಸ್ಥೆ ಅಡಿ ಪ್ರಯಾಣಿಕರು ಕೌಂಟರ್ ಬದಲು, ತ್ವರಿತವಾಗಿ ನಿಂತ ಜಾಗದಲ್ಲಿಯೇ ಟಿಕೆಟ್ ಪಡೆಯಬಹುದಾಗಿದೆ. ಸದ್ಯ ಮೂರು ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಜನದಟ್ಟಣೆಯ ಎಲ್ಲಾ ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ ಎಂದರು.

> ಭಾರಿ ಜನ ಸಂದಣಿಯಿರುವ ಸಮಯದಲ್ಲಿ ಅದರಲ್ಲಿಯೂ ಬೆಳಗ್ಗೆ ಹಾಗೂ ಸಂಜೆಯ ಸಮಯದಲ್ಲಿ ಈ ವ್ಯವಸ್ಥೆಯನ್ನು ಬಳಸಲಾಗುವುದು. ಇದರಿಂದ ಸರತಿ ಸಾಲಿನ ಉದ್ದವನ್ನು ಕಡಿತಗೊಳಿಸಬಹುದು. ಹಬ್ಬದ ಸಮಯದಲ್ಲಿಯೂ ಈ ವ್ಯವಸ್ಥೆ ಸಹಕಾರಿಯಾಗಲಿದೆ. ಸದ್ಯ ಬೆಂಗಳೂರಿನ ಮೂರು ನಿಲ್ದಾಣದಲ್ಲಿ ಈ ಸೇವೆ ಆರಂಭಿಸಲಾಗಿದ್ದು, ಮುಂದಿನ ದಿನದಲ್ಲಿ ಇನ್ನಷ್ಟು ನಿಲ್ದಾಣಗಳಿಗೆ ವಿಸ್ತರಿಸುವ ಯೋಜನೆಯಿದೆ.
>
> -ತ್ರಿನೇತ್ರ, ಸಾರ್ವಜನಿಕ ಸಂಪರ್ಕಾಧಿಕಾರಿ, ನೈರುತ್ಯ ರೈಲ್ವೆ

ಅಣೆಕಟ್ಟುಗಳ ರಿಪೇರಿಗೆ ಸಿದ್ಧತೆ

← ಮೊದಲಪುಟದಿಂದ

ಆಲಮಟ್ಟಿ ಹೊರತು ಎಲ್ಲ ಜಲಾಶಯಗಳ ಗೇಟ್ ಬದಲಾವಣೆ?: ಕರ್ನಾಟಕದಲ್ಲಿ ಸುಮಾರು 230ಕ್ಕೂ ಹೆಚ್ಚು ಜಲಾಶಯಗಳಿವೆ. ಆದರೆ ಇವುಗಳಲ್ಲಿ 12ರಿಂದ 15 ಜಲಾಶಯಗಳು ಮಾತ್ರ ಬೃಹತ್ ಪ್ರಮಾಣದ ಡ್ಯಾಮ್‌ಗಳಿವೆ. ಬೃಹತ್ ಜಲಾಶಯಗಳ ಪೈಕಿ ಆಲಮಟ್ಟಿ, ಗಾಜನೂರು, ಗೋರುರು, ಹಾರಂಗಿ ಹೊರತುಪಡಿಸಿ ಇನ್ನುಳಿದ ಬಹುತೇಕ ಜಲಾಶಯಗಳು 1974ಕ್ಕೂ ಹಿಂದೆಯೇ ನಿರ್ಮಿಸಲಾಗಿದೆ. ಆದ್ದರಿಂದ ತಾಂತ್ರಿಕವಾಗಿ ಈ ಎಲ್ಲ ಜಲಾಶಯಗಳ ಕ್ರಸ್ಟ್‌ಗೇಟ್‌ಗಳನ್ನು ಬದಲಾಯಿಸಬೇಕು. ಟಿಬಿ ಡ್ಯಾಮ್‌ನಲ್ಲಿ ಗೇಟ್ ಮುರಿದ ಬಳಿಕ 50 ವರ್ಷ ದಾಟಿರುವ ಎಲ್ಲ ಜಲಾಶಯಗಳ ಗೇಟ್‌ಗಳನ್ನು ಬದಲಾಯಿಸ ಬೇಕಿದೆ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ಕೇಂದ್ರಕ್ಕೆ ಪತ್ರ ಬರೆಯಲು ಸಿದ್ಧತೆ: ಎಲ್ಲ ಜಲಾಶಯಗಳ ಕ್ರಸ್ಟ್‌ಗೇಟ್‌ಗಳ ಬದಲಾವಣೆಗೆ 10 ಸಾವಿರ ಕೋಟಿ ರು. ಅಗತ್ಯವಿದೆ. ಸದ್ಯ ನೀರಾವರಿ ಇಲಾಖೆಯಿಂದ ಈ ಪ್ರಮಾಣದಲ್ಲಿ ಅನುದಾನದ ಸಮಸ್ಯೆಯಿರುವುದರಿಂದ ಕೇಂದ್ರ ಸರಕಾರ ಡ್ರಿಪ್ ಯೋಜನೆಯಲ್ಲಿ ಅನುದಾನಕ್ಕೆ ಮನವಿ ಮಾಡಲು ಚಿಂತನೆ ನಡೆಸಲಾಗಿದೆ. ಆದ್ದರಿಂದ ಉಪ ಚುನಾವಣೆ ಮುಗಿಯುತ್ತಿದ್ದಂತೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ದೆಹಲಿಗೆ ತೆರಳಿ ಕೇಂದ್ರ ಸಚಿವರೊಂದಿಗೆ ಈ ಸಂಬಂಧ ಚರ್ಚೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜಮ್ಮು-ಕಾಶ್ಮೀರ ಸದನ ರಣರಂಗ

← ಮೊದಲಪುಟದಿಂದ

ಬಾವಿಗಿಳಿದು ಪ್ರತಿಭಟಿಸುತ್ತಿದ್ದ ಶಾಸಕರನ್ನು ಅವರ ಸ್ಥಾನಗಳಿಗೆ ಮರಳಲು ಸ್ಪೀಕರ್ ಅಬ್ದುಲ್ ರಹೀಮ್ ರಾಥರ್ ಸೂಚನೆ ನೀಡಿದರು. ಸದನದಲ್ಲಿ ಬ್ಯಾನರ್ ಪ್ರದರ್ಶನ ವಿರೋಧಿಸಿ, ಹಲ್ಲೆ ಖಂಡಿಸಿ ಬಿಜೆಪಿ ಶಾಸಕರು ಪ್ರತಿಭಟನೆ ನಡೆಸಲು ಆರಂಭಿಸಿದರು. ಆಗ ಸ್ಪೀಕರ್, ಬಾವಿಗಿಳಿದು ಪ್ರತಿಭಟನೆ ನಡೆಸಿದ್ದ ಬಿಜೆಪಿ ಶಾಸಕರನ್ನು ಹೊರಹಾಕಲು ಸೂಚನೆ ನೀಡಿದರು. ಆಗ ಬಿಜೆಪಿ ಸದಸ್ಯರು ಮತ್ತು ಮಾರ್ಷಲ್‌ಗಳ ನಡುವೆ ದೊಡ್ಡ ವಾಗ್ವಾದವೇ ನಡೆಯಿತು. ಬಳಿಕ ಸದನ ತಹಬಂದಿಗೆ ಬಂದ ಬಳಿಕ ಸ್ಪೀಕರ್ ನಿರ್ದೇಶನದ ಮೇರೆಗೆ ಮೂವರು ಬಿಜೆಪಿ ಶಾಸಕರನ್ನು ಮಾರ್ಷಲ್‌ಗಳು ಪ್ರತ್ಯೇಕಗೊಳಿಸಿ ಎಳೆದೊಯ್ದು ಸದನದಿಂದ ಹೊರಹಾಕಿದರು.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. CIN:U4010KA2002SGC030436
E-mail:eeetpgescom@gmail.com Website:gescom.in

ಸಂಖ್ಯೆ:–ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ–1(ತಾ)/ಸಇಂ–1(ತಾ)/2024-25/39289-307
ದಿನಾಂಕ : 06–11–2024

:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ) ::

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ರೂ. 10,000/– ಮೂಲಸೌಕರ್ಯ ಶುಲ್ಕವನ್ನು ಪಾವತಿಸಿದ ಮತ್ತು ಗ್ರಿಡ್‌ನಿಂದ 500 ಮೀಟರ್ ಒಳಗೆ ಅಸ್ತಿತ್ವದಲ್ಲಿರುವ ಮತ್ತು 22.09.2023ಕ್ಕೆ ವಿದ್ಯುತ್ ಸರಬರಾಜು ಮಾಡಲು ಬಾಕಿ ಇರುವ UAIP ಅರ್ಜಿದಾರರಿಗೆ ಮೂಲ ಸೌಕರ್ಯ ರಚಿಸಲು ಪಿಟಿಕೆ ರೇಟ್ ಕಾಂಟ್ರ್ಯಾಕ್ಟ್ ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ **ಬೀದರ ಜಿಲ್ಲೆಯ** (ಬೀದರ ವಿಭಾಗ & ಹುಮನಾಬಾದ ವಿಭಾಗ, Bid Enq no:TP-077/UAIP/2024-25/Bidar District and Approximate amount put to tender: **1499.80 Lakhs),** **ಬಳ್ಳಾರಿ ಜಿಲ್ಲೆ** (ಬಳ್ಳಾರಿ ಗ್ರಾಮೀಣ ವಿಭಾಗ, Bid Enq no:TP-078 /UAIP /2024-25 /Ballari District and Approximate amount put to tender: **124.32 Lakhs)** ಹಾಗೂ **ಕೊಪ್ಪಳ ಜಿಲ್ಲೆ** (ಕೊಪ್ಪಳ ವಿಭಾಗ & ಗಂಗಾವತಿ ವಿಭಾಗ, Bid Enq no:TP-079 /UAIP /2024-25 /Koppal District and Approximate amount put to tender: **192.42 Lakhs)** ಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ.

ಆಸಕ್ತ ಬಿಡ್‌ದಾರರು ದಿನಾಂಕ: **11.11.2024** ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್‌ಆನ್ ಮಾಡಲು ಕೋರಲಾಗಿದೆ. **https://kppp.karnataka.gov.in**

ಸಹಿ/– ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/594/ಕೆ.ಎಸ್.ಎಂ.ಸಿ.&ಎ/2024–25

ಸೈಯದ್ ಷಾ ಖುಸ್ರೋ ಹುಸೈನಿ ನಿಧನ

ಕಲಬುರಗಿ: ಸೂಫಿ ಸಂತ ಹಜರತ್ ಖಾಜಾ ಬಂದಾ ನವಾಜ್ ದರ್ಗಾದ ಪೀಠಾಧಿಪತಿ ಹಾಗೂ ಕೆಬಿಎನ್ ವಿಶ್ವವಿದ್ಯಾಲಯದ ಕುಲಾಧಿಪತಿ, ವಿದ್ವಾಂಸರಾಗಿದ್ದ ಡಾ. ಸೈಯದ್ ಷಾ ಖುಸ್ರೋ ಹುಸೈನಿ (79) ಬುಧವಾರ ರಾತ್ರಿ ನಿಧನ ಹೊಂದಿದರು. ಅವರು ಪತ್ನಿ, ಮಕ್ಕಳಾದ ಖಾಜಾ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಸೈಯದ್ ಮಹಮ್ಮದ್ ಅಲಿ ಅಲ್ ಹುಸೇನ್ ಹಾಗೂ ಕೆಬಿಎನ್ ವಿವಿ ನಿರ್ದೇಶಕ ಡಾ. ಸೈಯದ್ ಮುಸ್ತಫಾ ಅಲ್ ಹುಸೇನ್ ಸೇರಿ ಅಪಾರ ಬಂಧುಗಳು ಹಾಗೂ ಅನುಯಾಯಿಗಳನ್ನು ಅಗಲಿದ್ದಾರೆ.

Norican Group Shaping Industry — ಡೀಸಾ ಇಂಡಿಯಾ ಲಿಮಿಟೆಡ್

ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್–604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ–ರಾಜಾಜಿನಗರ, ಬೆಂಗಳೂರು–560055.
ಫೋನ್: +91 80 22496700. ಇ–ಮೇಲ್: bangalore@noricangroup.com www.disagroup.com
CIN No: L85110KA1984PLC006116

ಸೆಪ್ಟಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ (ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಸ್ವತಂತ್ರ			ಕ್ರೋಢೀಕರಿಸಿದ		
	30.09.2024ಕ್ಕೆ ಕೊನೆಗೊಂಡ 3 ತಿಂಗಳು	30.09.2024ಕ್ಕೆ ವರ್ಷದಿಂದ ಇಲ್ಲಿಯವರೆಗೆ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.09.2023ಕ್ಕೆ ಕೊನೆಗೊಂಡ 3 ತಿಂಗಳು	30.09.2024ಕ್ಕೆ ಕೊನೆಗೊಂಡ 3 ತಿಂಗಳು	30.09.2024ಕ್ಕೆ ವರ್ಷದಿಂದ ಇಲ್ಲಿಯವರೆಗೆ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.09.2023ಕ್ಕೆ ಕೊನೆಗೊಂಡ 3 ತಿಂಗಳು
	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ
ವಹಿವಾಟಿನಿಂದ ಬಂದ ಆದಾಯ	852.9	1,793.2	774.6	867.4	1,826.7	804.5
ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು)	167.5	368.6	132.2	168.9	374.3	136.7
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ)	167.5	368.6	106.7	168.9	374.3	111.2
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	123.9	272.6	79.6	124.9	276.8	83.1
ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ)	122.9	270.6	78.8	123.9	274.8	82.3
ಈಕ್ವಿಟಿ ಷೇರು ಬಂಡವಾಳ	14.5	14.5	14.5	14.5	14.5	14.5
ಮೀಸಲುಗಳು (ಮರು–ಮೌಲ್ಯಮಾಪನ ಮೀಸಲು ಹೊರತುಪಡಿಸಿ ಹಿಂದಿನ ವರ್ಷದ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ)	—	—	—	—	—	—
ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/– ಪ್ರತಿ) ಮೂಲ : ರೂ.	85.20	187.46	54.74	85.88	190.34	57.14
ನಿಸಾರಗೊಂಡದ್ದು: ರೂ.	85.20	187.46	54.74	85.88	190.34	57.14

ಟಿಪ್ಪಣಿ: ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕ/ ಅರ್ಧವಾರ್ಷಿಕ ಲೆಕ್ಕಪರಿಶೋಧನೆಗೊಳ್ಳದ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ. ಪೂರ್ಣ ವಿವರವು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disagroup.com ನಲ್ಲಿ ಕೂಡ ಲಭ್ಯವಿದೆ.

ಸ್ಥಳ : ಬೆಂಗಳೂರು
ದಿನಾಂಕ : ನವಂಬರ್ 7, 2024

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಲೋಕೇಶ್ ಸಕ್ಸೇನ,
ವ್ಯವಸ್ಥಾಪಕ ನಿರ್ದೇಶಕರು.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸುಳ್ಳೇ ಬಿಜೆಪಿಯ ಮನೆ ದೇವರು ಎಂದು ನಾವು ಹೇಳುತ್ತಿರುವುದು ಸುಳ್ಳಲ್ಲ. ಮಹಾರಾಷ್ಟ್ರದ ಬಿಜೆಪಿಯವರು ನಮ್ಮ ಯಶಸ್ವಿ ಗ್ಯಾರಂಟಿ ಯೋಜನೆ ಗೃಹಲಕ್ಷ್ಮೀ ಬಗ್ಗೆ ಅಪ್ಪಟ ಸುಳ್ಳನ್ನು ಮಾಧ್ಯಮಗಳಲ್ಲಿ ಜಾಹೀರಾತು ಮೂಲಕ ಪ್ರಕಟಿಸಿ ಸಿಕ್ಕಿಹಾಕಿಕೊಂಡಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಭರವಸೆ ನೀಡಿದಂತೆ ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆ ತರದೆ ಮೋಸಮಾಡಿದೆ ಎಂಬುದು ಬಿಜೆಪಿ ಆರೋಪ. ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿಯವರೇ ಇದೇನು ನಮಗೆ ಆಶ್ಚರ್ಯ ಉಂಟುಮಾಡಿಲ್ಲ. ಮನೆಯೊಡೆಯನ ಬುದ್ಧಿ ಮನೆಯವರಿಗೆಲ್ಲ ಬಂದಿದೆ.

ಲಕ್ಷ್ಮೀಕಾಂತ ಹೊಸಮನಿ, ಬೆಂಗಳೂರು

ಉಪಯೋಗವಿಲ್ಲ ಎಲ್ಲ ಖಾಲಿ ಖಾಲಿ.. ಕಾಂಗ್ರೆಸ್‌ನವರು ಫ್ರೀ ಕೊಟ್ಟು ಬೇರೆ ರೇಟ್ ಜಾಸ್ತಿ ಮಾಡವ್ರೆ. ತೆರಿಗೆ ದರವನ್ನು ಹೆಚ್ಚಿಸಲಾಗಿದೆ. ಕರೆಂಟ್ ಬಿಲ್ ಹೆಚ್ಚಾಗಿದೆ. ಪಾನೀಯಗಳ ದರ ಜಾಸ್ತಿ. ನೀರಿನ ಬಿಲ್ ಜಾಸ್ತಿ. ಯಾವುದೇ ಇಲಾಖೆಯಲ್ಲಿ ನಿಧಿ ಇಲ್ಲ. ಸುಧಾರಣೆ ಇಲ್ಲ.



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೀದರ್**

ಸಮಸ್ಯೆಯೇನು..?

- ಬೀದರ್ ಜಿಲ್ಲೆಯ ಹಳ್ಳಿಖೇಡ (ಬಿ) ಪುರಸಭೆ ಕಚೇರಿ ಹತ್ತಿರ ಇರುವ ಕಾಲುವೆ ಸ್ವಚ್ಛತೆ ಇಲ್ಲದಿರುವುದು.
- **ಇಲಾಖೆ:** ಪುರಸಭೆ
- **ಪರಿಹಾರ:** ಹಳ್ಳಿಖೇಡ(ಬಿ) ಪುರಸಭೆ ಕಚೇರಿಯ ಎದುರುಗಡೆ ಇರುವ ಕಾಲುವೆಯನ್ನು ಸ್ವಚ್ಛಗೊಳಿಸಲಾಗಿದೆ. ಹಾಗೆಯೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಸಂಡೂರು ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ಮೋದಿಗೆ ಸಿದ್ದರಾಮಯ್ಯ ಪ್ರಶ್ನೆ

ಲೂಟಿ ಮಾಡಿದ ರೆಡ್ಡಿಯನ್ನು ಬಿಜೆಪಿಗೆ ಸೇರಿಸಿಕೊಂಡಿದ್ದೇಕೆ?

ಬಳ್ಳಾರಿ: ನಾ ಖಾವುಂಗಾ, ಖಾನೇ ದೂಂಗಾ ಎನ್ನುತ್ತಿದ್ದ ನರೇಂದ್ರ ಮೋದಿ ಜನಾರ್ದನ ರೆಡ್ಡಿಯನ್ನು ಮತ್ತೆ ಬಿಜೆಪಿಗೆ ಸೇರಿಸಿಕೊಂಡಿದ್ದು ಏಕೆ. ಲೂಟಿಮಾಡಿ ಜೈಲಿಗೆ ಹೋಗಿದ್ದ ರೆಡ್ಡಿಯನ್ನು ಪಕ್ಷಕ್ಕೆ ಯಾಕೆ ಸೇರಿಸಿಕೊಂಡಿದ್ದೀರಿ. ನರೇಂದ್ರ ಮೋದೀಜಿ ಕ್ಯೂ ಐಸೇ ಬೋಲತಾ ಹೈ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಂಡೂರು ಉಪಚುನಾವಣೆ ನಿಮಿತ್ತ ಬೊಮ್ಮಘಟ್ಟದಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಇದೇ ಜನಾರ್ದನರೆಡ್ಡಿ ಬಳ್ಳಾರಿಗೆ ಕಾಲಿಟ್ಟು ನೋಡಿ ಎಂದಿದ್ದರು. ರಿಪಬ್ಲಿಕ್ ಬಳ್ಳಾರಿ ಮಾಡಿದವರು ಯಾರು? ಅಂತಹವರಿಗೆ ವೋಟು ಕೊಡುತ್ತೀರಾ? ಬಿಜೆಪಿ ಎರಡು ಸಲ ಅಧಿಕಾರಕ್ಕೆ ಬಂದರೂ ಬಹುಮತ ಬಂದಿತ್ತಾ? ಯಾವತ್ತೂ ಜನ ಆಶೀರ್ವಾದ ಮಾಡಿಲ್ಲ. ಜನಾರ್ದನ ರೆಡ್ಡಿ ಉಪಯೋಗಿಸಿಕೊಂಡು ಆಪರೇಷನ್ ಕಮಲ ಮಾಡಿದರು. 2008, 2019ರಲ್ಲಿ ಕೋಟ್ಯಂತರ ಖರ್ಚುಮಾಡಿ ಅಧಿಕಾರಕ್ಕೆ ಬಂದರು. ಅಧಿಕಾರದಲ್ಲಿದ್ದ ಯಡಿಯೂರಪ್ಪ, ಬೊಮ್ಮಾಯಿ ಏನೂ ಮಾಡಲಿಲ್ಲ. ಇವರಿಗೆ ಮಾನ-ಮರ್ಯಾದೆ ಇದೆಯಾ? ಬಡವರ ಬಗ್ಗೆ ಬಿಜೆಪಿಯವರು ಒಂದೂ ಯೋಜನೆ ಮಾಡಲಿಲ್ಲ. ಏನೂ ಮಾಡದ ಅವರಿಗೆ ಮತ ಕೊಡಬೇಕಾ ಎಂದು ಪ್ರಶ್ನಿಸಿದರು.

ಸಂಡೂರಿನಲ್ಲಿ ಅಭಿವೃದ್ಧಿ ಆಗಬೇಕಾದರೆ ಅನ್ನಪೂರ್ಣ ತುಕಾರಾಂ ಗೆಲ್ಲಬೇಕು. ಗಂಡ-ಹೆಂಡತಿ ಇಬ್ಬರೂ ಸೇರಿದರೆ ಒಳ್ಳೆ ಕೆಲಸವಾಗುತ್ತದೆ. ನನ್ನ ಸ್ನೇಹಿತ ರುದ್ರಪ್ಪನವರ ಮಗಳು ಈ ಅನ್ನಪೂರ್ಣ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಈ ಸಂದರ್ಭದಲ್ಲಿ ಸಹಕಾರ ಸಚಿವ ಕೆ.ಎನ್ ರಾಜಣ್ಣ, ಶಾಸಕರಾದ ಗೋಪಾಲಕೃಷ್ಣ, ಎನ್‌ಟಿ ಶ್ರೀನಿವಾಸ್. ವಿಜಯನಗರ ಜಿಲ್ಲೆಯ ಶಾ ಗವಿಯಪ್ಪ, ಮಾಜಿ ಸಚಿವರಾದ ಪಿ ಟಿ ಪರಮೇಶ್ವರ ನಾಯಕ್, ಶಾಸಕ ರಘುಮೂರ್ತಿ, ಲತಾ ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.



ಸಂಡೂರು ವಿಧಾನಸಭಾ ಕ್ಷೇತ್ರದ ಬೊಮ್ಮಘಟ್ಟದಲ್ಲಿ ನಡೆದ ಬೃಹತ್ ಜನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

7 ತಿಂಗಳಲ್ಲಿ ಎಲ್ಲ ಭರವಸೆ ಈಡೇರಿಕೆ

5 ಕೆಜಿ ಅಕ್ಕಿ ಹೆಚ್ಚಿಗೆ ಕೊಡುತ್ತೇವೆ ಎಂದರೂ ಬಿಜೆಪಿಯವರು ಕೊಡಲಿಲ್ಲ. ಹೀಗಾಗಿ 175 ರು.ಗಳನ್ನು ಬಡವರಿಗೆ ಕೊಡ್ತಿದ್ದೇವೆ. 1.61 ಕೋಟಿ ಕುಟುಂಬಗಳಿಗೆ ಗೃಹಜ್ಯೋತಿ ಹೆಸರಲ್ಲಿ ಉಚಿತ ವಿದ್ಯುತ್ ಕೊಡ್ತಿದ್ದೇವೆ. ಬಿಜೆಪಿಯವರು ಎಲ್ಲೂ ಮಾಡಿಲ್ಲ, ನಾವು ಮಾತ್ರ ಮಾಡಿರುವುದು. ಯಾರಿಗೆ ಮತ ಹಾಕಬೇಕು ನೀವೇ ಯೋಚನೆ ಮಾಡಿ. ಅಧಿಕಾರಕ್ಕೆ ಬಂದ ಮೊದಲ ಸಂಪುಟ ಸಭೆಯಲ್ಲೇ ತೀರ್ಮಾನ ಮಾಡಿದ್ದೆವು. ನಾವು ಅಧಿಕಾರಕ್ಕೆ ಬಂದ 7 ತಿಂಗಳಲ್ಲಿ ಎಲ್ಲ ಭರವಸೆ ಈಡೇರಿಸಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

- ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ
- ನಾ ಖಾವುಂಗಾ , ನಾ ಖಾನೇ ದೂಂಗಾ ಎನ್ನುತ್ತಿದ್ದ ಮೋದಿ ಜನಾರ್ದನ ರೆಡ್ಡಿ ವಿಷಯದಲ್ಲಿ ಸುಮ್ಮನಾಗಿದ್ದೇಕೆ..?
- ರಿಪಬ್ಲಿಕ್ ಬಳ್ಳಾರಿ ಮಾಡಿದವರು ಯಾರು..?
- ಎರಡು ಬಾರಿ ಬಹುಮತ ಬರದಿದ್ದರೂ ಆಪರೇಷನ್ ಕಮಲ ಮೂಲಕ ಅಧಿಕಾರಕ್ಕೆ
- ಜನರ ಆಶೀರ್ವಾದ ಇಲ್ಲದಿದ್ದರೂ ಹಿಂಬಾಗಿಲ ಮೂಲಕ ಸರಕಾರ ರಚನೆ
- ಕೋಟ್ಯಂತರ ರು. ಖರ್ಚುಮಾಡಿ ಅಧಿಕಾರಕ್ಕೆ ಬಂದರೂ ಬಡವರಿಗೆ ಬಿಜೆಪಿ ಏನೂ ಮಾಡಲಿಲ್ಲ

ನಾವು 2023ರ ಚುನಾವಣೆಗೆ ಮೊದಲು ಗ್ಯಾರಂಟಿ ಜಾರಿ ಮಾಡುವುದಾಗಿ ಹೇಳಿದ್ದೆವು. ಈಗ ಮಾಡಿದ್ದೇವೆ, ಸುಮ್ಮನೆ ಕೂತ್ರೆ ಹೆಂಗವ್ವಾ ತಾಯಿ. 3.50 ಕೋಟಿ ಹೆಣ್ಣು ಮಕ್ಕಳು ಉಚಿತವಾಗಿ ಸರಕಾರಿ ಬಸ್ ನಲ್ಲಿ ತಿರುಗಾಡಬಹುದು. ಬಿಜೆಪಿಯವರು ಮಾಡಿದ್ರಾ? ಅವರಿಗೆ ಮತ ಹಾಕ್ತೀರಾ? ಕಾಂಗ್ರೆಸ್ ಮಾತ್ರ ಮತ ಹಾಕಬೇಕು ಎಂದು ನೀವು ಎಲ್ಲರಿಗೂ ಹೇಳಬೇಕು. ಮಹಿಳೆಯರಿಗೆ ಪ್ರತಿ ತಿಂಗಳು ಎರಡು ಸಾವಿರ ಕೊಡುತ್ತಿರುವುದು ಯಾರು?

-ಸಿದ್ದರಾಮಯ್ಯ , ಮುಖ್ಯಮಂತ್ರಿ

ಚನ್ನಪಟ್ಟಣದಲ್ಲಿ ನಿಖಿಲ್‌ಕುಮಾರಸ್ವಾಮಿ ಪರ ದೇವೇಗೌಡರಿಂದ 3ನೇ ದಿನವೂ ಪ್ರಚಾರ

ಚನ್ನಪಟ್ಟಣಕ್ಕೆ ನೀರು ಕೊಟ್ಟಿದ್ದೇ ನಾನು

ಚನ್ನಪಟ್ಟಣ ಕ್ಷೇತ್ರದ ರಾಮಪುರದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಪ್ರಚಾರ ಕೈಗೊಂಡರು.

ರಾಮನಗರ: ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಮೂರನೇ ದಿನವೂ ಪ್ರಚಾರ ನಡೆಸಿದರು.

ಚನ್ನಪಟ್ಟಣ ತಾಲೂಕಿನ ರಾಂಪುರ ಗ್ರಾಮದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮತದಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಕ್ಷೇತ್ರವನ್ನು ನಾನೇ ಸೃಷ್ಟಿಸಿದ್ದೇನೆ ಎಂದು ಹೇಳಿಕೊಳ್ಳುವುದಿಲ್ಲ, ನಾನು ನಿಖಿಲ್ ಕುಮಾರಸ್ವಾಮಿ ಅವರಿಗೆ ನನ್ನ ಬೆಂಬಲವನ್ನು ನೀಡಲು ಇಲ್ಲಿ ಬಂದಿದ್ದೇನೆ, ಜನತೆ ಆತನನ್ನು ಗೆಲ್ಲಿಸಿಕೊಡುವ ವಿಶ್ವಾಸ ನನಗಿದೆ ಎಂದರು.

ಕೆಎಂಎಫ್ ಸ್ಥಾಪನೆಯ ಯಶೋಗಾಥೆ

ಹೈನುಗಾರಿಕೆ ಕ್ಷೇತ್ರವನ್ನು ಬಲಪಡಿಸುವುದು ಸೇರಿದಂತೆ ಈ ಪ್ರದೇಶಕ್ಕೆ ಗಣನೀಯ ಕೊಡುಗೆ ನೀಡಿದ್ದೇನೆ, ಅಮುಲ್ ಸಂಸ್ಥಾಪಕ ಕುರಿಯನ್ ಅವರಿಗೆ ನಾನು ಕರ್ನಾಟಕಕ್ಕೆ ಹಾಲು ಒಕ್ಕೂಟಕ್ಕೆ ಮನವಿ ಮಾಡಿದ್ದೆ, ಅವರು ಸಾಧ್ಯವಿಲ್ಲ ಎಂದು ಹೇಳಿದ್ದರು, ಇದು ಮತ್ತೊಂದು ತಾಜ್ ಮಹಲ್ ಕಟ್ಟಿದಂತೆ ಎಂದು ಹೇಳಿದ್ದರು. ಆದರೂ, ನಾವು ಅದನ್ನು ಸವಾಲಾಗಿ ತೆಗೆದುಕೊಂಡು ಹಾಲು ಒಕ್ಕೂಟವನ್ನು ಕರ್ನಾಟಕದಲ್ಲಿ ಸ್ಥಾಪಿಸಿದೆವು ಎಂದು ಮಾಜಿ ಪ್ರಧಾನಿಯವರು ಕೆಎಂಎಫ್ ಯಶೋಗಾಥೆಯನ್ನು ವಿವರಿಸಿದರು.

ಚನ್ನಪಟ್ಟಣಕ್ಕೆ ನೀರು ಕೊಟ್ಟಿದ್ದೇ ನಾನು : ಈ ಭಾಗಕ್ಕೆ ನೀರು ಹರಿಸಲು ನಡೆಸಿದ ಹೋರಾಟದ ಬಗ್ಗೆ ಮಾತನಾಡಿದ ಅವರು, ನಾನು ಇಗ್ಗಲೂರು ಅಣೆಕಟ್ಟು ಕಟ್ಟಿದ್ದೇನೆ. ಆದರೆ ಕೆಲವರು ಇಲ್ಲಿ ತಾವೇ ನೀರು ತಂದಂತೆ ವರ್ತಿಸುತ್ತಾರೆ. ಇದು ರೈತನ ಮಗನ ಕೆಲಸ ಎಂದು ಅವರು ನೀರಾವರಿ ತಮ್ಮದೇ ಕೊಡುಗೆ ಎಂದವರಿಗೆ ಗೌಡರು ತಿರುಗೇಟು ನೀಡಿದರು.

ಕೊನೆ ಉಸಿರು ಎಳೆಯುವ ಮುನ್ನ ಮೇಕೆದಾಟುಗೆ ಒಪ್ಪಿಗೆ ಕೊಡಿಸುತ್ತೇನೆ

ನಾನು ನನ್ನ ಕೊನೆ ಉಸಿರು ಎಳೆಯುವ ಮುನ್ನ ಮೇಕೆದಾಟು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಒಪ್ಪಿಗೆ ಕೊಡಿಸುತ್ತೇನೆ. ಮೇಕೆದಾಟು ಯೋಜನೆ ಆಗುತ್ತೆ ಎಂದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಾತ್ರ ಸಾಧ್ಯ. ಇದರಲ್ಲಿ ಎರಡು ಮಾತಿಲ್ಲ. ಆದರೆ ತಮಿಳುನಾಡಿನವರು ನಮ್ಮ ಕುತ್ತಿಗೆ ಹಿಡಿದಿದ್ದಾರೆ ಎಂದು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಚುನಾವಣಾ ಪ್ರಚಾರ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ

ಶಿಗ್ಗಾವಿಗೆ ಸಾಕ್ಷಿಗುಡ್ಡೆ ಬಿಟ್ಟು ಹೋಗದ ಬೊಮ್ಮಾಯಿ

ಶಿಗ್ಗಾವಿ ಕ್ಷೇತ್ರದ ದುಂಡಸಿಯಲ್ಲಿ ಚುನಾವಣಾ ಪ್ರಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಹಾವೇರಿ: ರಾಜ್ಯದ ಮುಖ್ಯಮಂತ್ರಿಯಾದರೂ ಯಾವುದೇ ಸಾಕ್ಷಿಗುಡ್ಡೆಗಳನ್ನು ಬಸವರಾಜ ಬೊಮ್ಮಾಯಿ ಅವರು ಕ್ಷೇತ್ರದ ಜನತೆಗೆ ನೀಡಿಲ್ಲ. ನಮ್ಮ ಗ್ಯಾರಂಟಿ ಯೋಜನೆಗಳಂತೆ ಒಂದೇ ಒಂದು ಗುರುತರವಾದ ಯೋಜನೆಗಳನ್ನು ಅವರು ಜಾರಿಗೊಳಿಸಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತರಾಟೆ ತೆಗೆದುಕೊಂಡರು.

ಶಿಗ್ಗಾವಿ ಉಪಚುನಾವಣೆ ಅಂಗವಾಗಿ ಕ್ಷೇತ್ರದ ದುಂಡಸಿಯಲ್ಲಿ ಗುರುವಾರ ನಡೆದ ಬಹಿರಂಗ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕೊಟ್ಟ ಮಾತನ್ನು ಉಳಿಸಿಕೊಳ್ಳದ ಬೊಮ್ಮಾಯಿ ನಡೆಯ ಬಗ್ಗೆ ಕ್ಷೇತ್ರದ ಜನರು ತೀರ್ಮಾನಿಸುತ್ತಾರೆ. ಬಸವರಾಜ ಬೊಮ್ಮಾಯಿ ಅವರೇ ನೀವು ಎರಡೂವರೆ ವರ್ಷಗಳ ಕಾಲ ಸಿಎಂ ಆಗಿದ್ದಿರಿ, ಜೊತೆಗೆ ಕೇಂದ್ರದಲ್ಲಿಯೂ ನಿಮ್ಮ ಸರಕಾರ ಅಧಿಕಾರದಲ್ಲಿತ್ತು. ಅಧಿಕಾರ ಇದ್ದರೂ ನಿಮ್ಮ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಏನು? ಯಾವ ಸಾಕ್ಷಿಗುಡ್ಡೆಗಳನ್ನು ಬಿಟ್ಟು ಹೋಗಿದ್ದೀರಿ ಎಂದು ಅವರು ಪ್ರಶ್ನಿಸಿದರು.

ಶಿಗ್ಗಾವಿ ಜನರ ಸೇವೆಗೆ ಪಠಾಣ್ ಇರಲಿ: ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಪಠಾಣ್ ಉಪಕಾರ ಸ್ಮರಣೆ ಇರುವ ಅಭ್ಯರ್ಥಿ. ಅವರನ್ನು ನೀವು ವಿಧಾನಸಭೆಗೆ ಕಳುಹಿಸಬೇಕು. ಸಂಸದ ಬಸವರಾಜ ಬೊಮ್ಮಾಯಿ ಅವರು ದೆಹಲಿಯಲ್ಲಿ ಇರಲಿ, ನಿಮ್ಮ ಸೇವೆಗೆ ಪಠಾಣ್ ಇರಲಿ. ಮುಂದೆಯೂ ಕಾಂಗ್ರೆಸ್ ಸರಕಾರ ಇರಲಿದ್ದು, ನಿಮ್ಮ ಎಲ್ಲಾ ಕೆಲಸಗಳನ್ನು ಈಡೇರಿಸುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಿಗ್ಗಾವಿ ಮತದಾರರಿಗೆ ಭರವಸೆ ಕೊಟ್ಟರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಕೆ.ಜೆ.ಜಾರ್ಜ್, ಕೃಷ್ಣಬೈರೇಗೌಡ ಪ್ರಚಾರ

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಗೆಲುವು ಖಚಿತ

ಚನ್ನಪಟ್ಟಣ: ಕ್ಷೇತ್ರದಲ್ಲಿ ಉಪಚುನಾವಣೆ ಕಾವು ದಿನೇದಿನೇ ರಂಗೇರುವುದರ ಜೊತೆಗೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಘಟಾನುಘಟಿ ಕಾಂಗ್ರೆಸ್ ನಾಯಕರು ಪ್ರಚಾರದಲ್ಲಿ ತೊಡಗಿಕೊಳ್ಳುವ ಮೂಲಕ ಕ್ಷೇತ್ರದಲ್ಲಿ ಕಾಂಗ್ರೆಸ್ ಅಬ್ಬರ ಜೋರಾಗತೊಡಗಿದೆ.

ಜನರ ಬದುಕಿಗಾಗಿ ಸರಕಾರ ಜಾರಿಗೆ ತಂದಿರುವ ಯೋಜನೆಗಳು, ಅಭಿವೃದ್ಧಿ ಕಾರ್ಯಗಳನ್ನು ಮತದಾರರಿಗೆ ಮನವರಿಕೆ ಮಾಡಿಕೊಟ್ಟು ಮತಯಾಚಿಸುವಲ್ಲಿ ಕಾಂಗ್ರೆಸ್ ನಾಯಕರು ಮುಂದಾಗಿದ್ದು, ಭಾವನೆಗಳಿಗಿಂತ ಜನರ ಬದುಕು ಮುಖ್ಯ. ಈ ಉಪಚುನಾವಣೆಯಲ್ಲಿ ಭಾವನೆಗಳಿಗೆ ಸೋಲಾಗಲಿದ್ದು ಜನರ ಬದುಕಿಗೆ ಗೆಲುವಾಗಲಿದೆ ಎಂಬ ವಿಶ್ವಾಸವನ್ನು ಕಾಂಗ್ರೆಸ್ ನಾಯಕರು ವ್ಯಕ್ತಪಡಿಸಿದ್ದಾರೆ.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಗೆಲುವು ಖಚಿತ

ಚನ್ನಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮಾತನಾಡಿದ ಜಾರ್ಜ್ ಅವರು, ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ಕೈ ಬಲ ಪಡಿಸಲು ಈ ಉಪ ಚುನಾವಣೆಯಲ್ಲಿ ನಮ್ಮ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ಚನ್ನಪಟ್ಟಣದಲ್ಲಿ ನಮ್ಮ ಅಭ್ಯರ್ಥಿಗೆ ಜಯ ಖಚಿತ. ಯೋಗೇಶ್ವರ್ ನನ್ನ ಸ್ನೇಹಿತರು, ನೇರ ಮಾತಿನ ವ್ಯಕ್ತಿ, ಬಿಜೆಪಿಯವರಿಂದ ಮೋಸ ಹೋಗಿ ನಮ್ಮ ಪಕ್ಷಕ್ಕೆ ವಾಪಸ್ ಬಂದಿದ್ದಾರೆ. ಕಾಂಗ್ರೆಸ್ ಇಲ್ಲಿ ಗೆದ್ದರೆ ರಾಜ್ಯಕ್ಕೆ ಮಾತ್ರವಲ್ಲ ಇಡೀ ರಾಷ್ಟ್ರಕ್ಕೆ ಒಳಿತಾಗುವುದು ಎಂದರು.

ಸಚಿವರು, ಸಂಸದರು, ಶಾಸಕರಿಂದ ಪ್ರಚಾರ

ಯೋಗೇಶ್ವರ್‌ಪರವಾಗಿ ಸಚಿವರಾದ ಕೃಷ್ಣಬೈರೇಗೌಡ, ಕೆ.ಜೆ.ಜಾರ್ಜ್, ಚಲುವರಾಯ ಸ್ವಾಮಿ, ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕರಾದ ಕೃಷ್ಣಪ್ಪ, ಹಿರಿಯ ಕಾಂಗ್ರೆಸ್ ಮುಖಂಡರು ಹಾಗೂ ಮಾಜಿ ಸಭಾಪತಿ ಬಿ. ಎಲ್.ಶಂಕರ್, ಕಾಂಗ್ರೆಸ್ ನಾಯಕರಾದ ರಘುನಂದನ್ ರಾಮಣ್ಣ, ಕೆ.ಪಿ.ನಂಜುಂಡಿ ಸೇರಿದಂತೆ ಅನೇಕ ನಾಯಕರುಗಳು ಚನ್ನಪಟ್ಟಣ ನಗರದ ನಾನಾ ವಾರ್ಡ್ ಗಳಲ್ಲಿ ಮತಪ್ರಚಾರದಲ್ಲಿ ತೊಡಗಿದ್ದರು.



ಚನ್ನಪಟ್ಟಣದ ವಿವಿಧ ವಾರ್ಡುಗಳಲ್ಲಿ ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಯೋಗೇಶ್ವರ್ ಪರ ಮತಯಾಚನೆ ಮಾಡಿದರು.

ಚನ್ನಪಟ್ಟಣ ಸಮಗ್ರ ಅಭಿವೃದ್ಧಿಗೆ ಗೆಲ್ಲಿಸಿ

ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾತನಾಡಿ, ಸಾಮಾನ್ಯ ಶಾಸಕನಾಗಿ ನಾನು ಪಟ್ಟಣ ವ್ಯಾಪ್ತಿಯಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣ, ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡಿಸಿದ್ದೇನೆ. ಆದರೆ ಎರಡು ಬಾರಿ ಶಾಸಕರಾಗಿ ಅವರು ನಗರಸಭೆಗೆ ಸೇರಿದ ಬಸ್ ನಿಲ್ದಾಣ ಜಾಗದ ಸಣ್ಣ ವಿವಾದ ಬಗೆಹರಿಸಲು ಆಗಲಿಲ್ಲ, ಎಲ್ಲವನ್ನೂ ನಾನೇ ಮಾಡಿದ್ದೇನೆ ಎನ್ನುತ್ತಾರೆ. ಯುಜಿಡಿ ಕಾಮಗಾರಿ ಆರಂಭಿಸಿಯೇ ಇಲ್ಲ. ಎರಡು ಬಾರಿ ಜನತೆ ಗೆಲ್ಲಿಸಿಕೊಟ್ಟಿದ್ದಕ್ಕೆ ಜನತೆಗೆ ಅವರು ನೀಡಿದ ಕೊಡುಗೆ ಹದಗೆಟ್ಟ ರಸ್ತೆಗಳು, ಗಬ್ಬುನಾರುತ್ತಿರುವ ಚರಂಡಿಗಳು ಎಂದು ಜರಿದರು. ಇವೆಲ್ಲವುಗಳ ಅಭಿವೃದ್ಧಿಗಾಗಿ ತಮ್ಮನ್ನು ಗೆಲ್ಲಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಎಚ್.ಡಿ.ಕುಮಾರಸ್ವಾಮಿ ಅವರು ಈ ಕ್ಷೇತ್ರದಿಂದ ಗೆದ್ದು ಮುಖ್ಯಮಂತ್ರಿಯಾಗಿದ್ದವರು, ಆದರೆ ಚನ್ನಪಟ್ಟಣ ನಗರದ ಸ್ಥಿತಿ ನೋಡಿದರೆ ಇದು ಯಾವುದೋ ಅತೀ ಹಿಂದುಳಿದ ಪಟ್ಟಣದಂತೆ ಗೋಚರವಾಗುತ್ತಿದೆ. ಪ್ರಮುಖವಾಗಿ ಇರಬೇಕಾದ ರಸ್ತೆಗಳು, ಮೋರಿ, ಒಳಚರಂಡಿ ವ್ಯವಸ್ಥೆಗಳನ್ನೇ ಇಲ್ಲಿ ಅವರು ಮಾಡಿಲ್ಲ, ಹೆಸರಿಗೆ ಮಾತ್ರ ನಿಮ್ಮಿಂದ ಆಯ್ಕೆಯಾಗಿ ಮುಖ್ಯಮಂತ್ರಿ ಆಗಿದ್ದಾರೆ, ಆದರೆ ಅದಕ್ಕೆ ತಕ್ಕ ಅಭಿವೃದ್ಧಿಯನ್ನು ಮಾಡಿಲ್ಲ.

-ಕೃಷ್ಣ ಬೈರೇಗೌಡ, ಸಚಿವ

ಗ್ಯಾರಂಟಿ ಯೋಜನೆಗಳು ಯಶಸ್ವಿ

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿವೆ. ನಾವು ಆರ್ಥಿಕವಾಗಿ ದಿವಾಳಿಯಾಗುತ್ತೇವೆ ಎಂಬ ಪ್ರತಿಪಕ್ಷಗಳ ದುರಾಲೋಚನೆ ಸುಳ್ಳಾಗಿದೆ. ಕರ್ನಾಟಕ ಆರ್ಥಿಕವಾಗಿ ಸದೃಢವಾಗಿದೆ. ಇತ್ತೀಚಿನ ವರದಿಯಿಂದ ಅದು ಸಾಬೀತು ಆಗಿದೆ. ಪ್ರಸ್ತುತ ಹಣಕಾಸು ಸಾಲಿನ ಆರಂಭಿಕ ಏಳು ತಿಂಗಳ ಅವಧಿಯಲ್ಲಿ ಕರ್ನಾಟಕವು ಗಣನೀಯ ಆರ್ಥಿಕ ಪ್ರಗತಿ ಸಾಧಿಸಿದ್ದು, 1,03,683 ಕೋಟಿ ರು. ಆದಾಯ ಸಂಗ್ರಹ ಮಾಡಿದೆ ಎಂದು ಕೆ.ಜೆ.ಜಾರ್ಜ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಬಿಜೆಪಿಯಿಂದ ರೈತರ ದಾರಿತಪ್ಪಿಸುವ ಕೆಲಸ

ಕಲಬುರಗಿ: ಮೊದಲಿನಿಂದಲೂ ರೈತರಿಗೆ ವಕ್ಫ್ ಬೋರ್ಡ್ ನಿಂದ ನೋಟಿಸ್ ಬಂದಿವೆ. ಚುನಾವಣೆ ಬಂದಾಗ ಇದನ್ನು ಬಿಜೆಪಿಗರು ದೊಡ್ಡ ವಿಚಾರ ಮಾಡುತ್ತಿದ್ದಾರೆ. ನಾಚಿಕೆಯಾಗಲ್ವಾ ನಿಮಗೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ಆಸ್ತಿಯನ್ನು ಜಿಐಎಸ್ ಮ್ಯಾಪ್ ಮಾಡಿಸುತ್ತಿರುವುದು ಯಾರು? ಬಿಜೆಪಿಯವರೇ ಮಾಡುತ್ತಿರುವುದು. ಜಿಐಎಸ್ ಮ್ಯಾಪಿಂಗ್ ಗೆ 330 ಕೋಟಿ ಖರ್ಚು ಮಾಡಿದ್ದು ಬಿಜೆಪಿಯ ಕೇಂದ್ರ ಸರಕಾರ. ಆವಾಗ ಇವರಿಗೆ ಇದರ ಅರಿವಿತ್ತಲ್ಲ. ಈಗ್ಯಾಕೆ ಇಂತಹ ಡ್ರಾಮಾಗಳನ್ನು ಮಾಡಿ ರೈತರನ್ನು, ಜನರನ್ನು ದಾರಿತಪ್ಪಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು. ವಕ್ಫ್ ಆಸ್ತಿ ರಕ್ಷಣೆಗೆ ಹಣ ಖರ್ಚುಮಾಡಿದ್ದು ಬಿಜೆಪಿಯವರು. ಕೇಂದ್ರದಲ್ಲಿ ಬಿಜೆಪಿ ಸರಕಾರಕ್ಕೆ 11 ವರ್ಷವಾಯಿತು, ಇನ್ನೂ ಏಕೆ ನಿಷೇಧ ಮಾಡಿಲ್ಲ.? ವಕ್ಫ್ ರದ್ದಾಗಬೇಕೆಂದು ಬಿಜೆಪಿಯವರು ಹೇಳ್ತಾರಲ್ಲ, ಒಂದೂವರೆ ವರ್ಷದ ಹಿಂದೆ ಬಿಜೆಪಿ ಸರಕಾರವೇ ಇತ್ತು. ಆಗ ಇವರು ಕತ್ತೆ ಕಾಯುತ್ತಿದ್ದರಾ.? ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೇ ಇದೆಲ್ಲಾ ನೆನಪಾಗುತ್ತಾ. ಕಾಂಗ್ರೆಸ್ ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಮಾತ್ರವೇ ನಿಮಗೆ ವಕ್ಫ್ ರದ್ದುವಿಚಾರ ಹೊಳೆಯುತ್ತದೇನು ಎಂದು ಕುಟುಕಿದರು.

ವಕ್ಫ್ ಅವಾಂತರ | ಕಾಂಗ್ರೆಸ್ ವಿರುದ್ಧ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಕಿಡಿ

ಕೃಷಿಭೂಮಿ, ಮಠ-ಮಂದಿರ ಆಸ್ತಿ ಕಸಿಯಲು ಹುನ್ನಾರ

ಬೆಳಗಾವಿ: ರಾಜ್ಯ ಸರಕಾರದ ಆದೇಶದ ಮೇರೆಗೆ ವಕ್ಫ್ ಬೋರ್ಡ್ ನೋಟಿಸ್ ನೀಡದೆ ರೈತರ ಪಹಣಿಯಲ್ಲಿ ಹೆಸರು ಹಾಕಿಕೊಂಡಿದೆ. ಕಳೆದ ಎರಡು ತಿಂಗಳ ಅವಧಿಯಲ್ಲಿ ಸಾವಿರಾರು ಕೃಷಿ ಭೂಮಿ ಹಾಗೂ ಮಠ, ಮಂದಿರದ ಆಸ್ತಿ ಹೊಡೆಯಲು ಹುನ್ನಾರ ನಡೆಸಲಾಗಿದೆ ಎಂದು ವಕ್ಫ್ ತಿದ್ದುಪಡಿ ಕಾಯ್ದೆ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಗುರುವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ನೂರಾರು ವರ್ಷಗಳಿಂದ ರೈತರು ಉಳುಮೆ ಮಾಡುತ್ತಿರುವ ಜಮೀನು ತನ್ನದು ಎಂದು ವಕ್ಫ್ ಬೋರ್ಡ್ ಹೇಳುತ್ತಿದೆ. ಹುಬ್ಬಳ್ಳಿ -ಧಾರವಾಡ ಹಾಗೂ ವಿಜಯಪುರದಲ್ಲಿ ಬೇಕಾಬಿಟ್ಟಿಯಾಗಿ ರೈತರ ಪಹಣಿಯಲ್ಲಿ ವಕ್ಫ್ ಬೋರ್ಡ್ ತನ್ನ ಹೆಸರು ಸೇರಿಸಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಈ ರೀತಿಯ ಗೊಂದಲ ಉಂಟಾಗಿದ್ದು ಜೆಪಿಸಿ ಗಂಭೀರವಾಗಿ ಪರಿಗಣಿಸಿ ವರದಿ ತಯಾರಿಸಲಿದೆ ಎಂದರು.

ಮುಸ್ಲಿಂ ಓಲೈಕೆ: ಸಂಸದ ಟೀಕೆ: ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮಾತನಾಡಿ. ದಾಖಲೆಗಳಲ್ಲಿ ನಿಜವಾದ ವಕ್ಫ್ ಆಸ್ತಿ ಇದ್ದರೆ ಅದು ಬೋರ್ಡ್‌ಗೆ ಸೇರಲಿ. ಆದರೆ ಕಾಂಗ್ರೆಸ್ ಸರಕಾರ ಮುಸ್ಲಿಂ ಸಮುದಾಯವನ್ನು ಓಲೈಸುವ ಉದ್ದೇಶದಿಂದ ಈ ಹುನ್ನಾರ ನಡೆಸಿದೆ. ಮಹಾರಾಷ್ಟ್ರ ಹಾಗೂ ಕರ್ನಾಟಕ ದಲ್ಲಿ ನಡೆಯಲಿರುವ ಉಪ ಚುನಾವಣೆಯಲ್ಲಿ ಲಾಭ ಪಡೆಯಲು ಈ ರೀತಿಯ ಕೆಲಸಕ್ಕೆ ಮುಂದಾಗಿದೆ ಎಂದು ಕಟುಟೀಕೆ ಮಾಡಿದರು.

ರಾಜ್ಯದಲ್ಲಿ ವಕ್ಫ್ ಬೋರ್ಡ್ ನಡೆಸಿದ ಅವಾಂತರ ಕುರಿತು ಸಮಗ್ರ ವರದಿ ತಯಾರಿಸಿ ಜೆಪಿಸಿ ಮುಂದೆ ಇಡಲಿದ್ದೇವೆ. ಸಚಿವರ ಆದೇಶದ ಮೇರೆಗೆ ಅನೇಕ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಸೇರಿದಂತೆ ಅನೇಕ ಅಧಿಕಾರಿಗಳು ಬೇಕಾಬಿಟ್ಟಿ ರೈತರ ಜಮೀನಿನಲ್ಲಿ ವಕ್ಫ್ ಬೋರ್ಡ್ ಹೆಸರು ಸೇರಿಸಿದ್ದಾರೆ ಅವರು ಜೆಪಿಸಿ ಮುಂದೆ ಹಾಜರಾಗಿ ಅವರು ಕೇಳುವ ಪ್ರಶ್ನೆಗೆ ಉತ್ತರಿಸಲಿ ಎಂದರು.

ಬೆಳಗಾವಿ ಜಿಲ್ಲೆಯಲ್ಲಿ ರೈತರ ಭೂಮಿ ಕಿತ್ತುಕೊಳ್ಳಲು ವಕ್ಫ್ ಮಂಡಳಿ ನೀಡಿರುವ ನೋಟಿಸ್ ವಿರುದ್ಧ ಬಿಜೆಪಿಯ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಗುರುವಾರ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರಿಗೆ ಮನವಿ ಸಲ್ಲಿಸಿದರು.

- ರಾಜ್ಯ ಸರಕಾರದ ಧೋರಣೆಗೆ ಪಾಲ್ ತೀವ್ರ ಅಸಮಾಧಾನ
- ವಕ್ಫ್ ಮಂಡಳಿಯಿಂದ ಬೇಕಾಬಿಟ್ಟಿಯಾಗಿ ರೈತರ ಪಹಣಿಯಲ್ಲಿ ಹೆಸರು ಸೇರ್ಪಡೆ
- ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲು ವಕ್ಫ್ ಗೊಂದಲ, ಶೀಘ್ರ ವರದಿ ಸಲ್ಲಿಕೆ

ಕಾಂಗ್ರೆಸ್‌ನಿಂದ ರೈತರ ಆಸ್ತಿ ಕೊಳ್ಳೆ ಯತ್ನ

ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮಾತನಾಡಿ ರಾಜ್ಯದಲ್ಲಿ ರೈತರ ಜಮೀನುಗಳನ್ನು ಕಾಂಗ್ರೆಸ್ ಸರ್ಕಾರ ವಕ್ಫ್ ಹೆಸರಿನಲ್ಲಿ ಕೊಳ್ಳೆ ಹೊಡೆಯಲು ಯತ್ನಿಸಿದೆ. ಇದರಿಂದ ರೈತರು ಭಯದಿಂದ ಇದ್ದಾರೆ. ಕೂಡಲೇ ಜೆಪಿಸಿ ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮ ಜರುಗಿಸುವಂತೆ ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರಿಗೆ ಮನವಿ ಸಲ್ಲಿಸಿದರು.

ಎನ್‌ಡಿಎ ಅಭ್ಯರ್ಥಿ ನಿಖಿಲ್ ಪರ ಎಚ್.ಡಿ.ಕುಮಾರಸ್ವಾಮಿ ಪ್ರಚಾರ

ಅಂದು ಬೀದಿ ಜಗಳ, ಇಂದು ನಾಟಕ

ರಾಮನಗರ: ಚುನಾವಣೆಗೆ ಮೊದಲು ಡಿ.ಕೆ. ಸಹೋದರರು ಹಾಗೂ ಕಾಂಗ್ರೆಸ್ ಅಭ್ಯರ್ಥಿ ಹಾದಿಬೀದಿಯಲ್ಲಿ ಬೈದಾಡಿಕೊಂಡಿದ್ದರು. ಈಗ ಪರಸ್ಪರ ಅಪ್ಪಿಕೊಂಡು ನಾಟಕ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರವಾಗಿ ಚನ್ನಪಟ್ಟಣದ ವಿರೂಪಾಕ್ಷಿಪುರ ಗ್ರಾಮದಲ್ಲಿ ಪ್ರಚಾರ ಕೈಗೊಂಡು ಮಾತನಾಡಿ, ಸಿ.ಪಿ. ಯೋಗೇಶ್ವರ್, ಅವನು ಯಾರು ಯಾರಿಗೆ ಟೋಪಿ ಹಾಕವ್ನೇ, ಬಿಡದಿನಲ್ಲಿ ಹೋಗಿ ಹೇಳಿದ್ರೆ, ಎಲ್ಲಾ ಹೇಳ್ತಾರೆ, ಹೇಳಿದ್ನಲ್ಲಪ್ಪಾ, ಬಿಡದಿನಲ್ಲಿ ಎಲ್ಲರಿಗೂ ಮೆಗಾಸಿಟಿ ಮಾಡ್ತಿನಿ ಅಂತ ಟೋಪಿ ಹಾಕಿದ್ನಲ್ಲಾ, ಮರೆತೋಗಿದ್ದಾನಾ ಎಂದು ಡಿ.ಕೆ ಸುರೇಶ್ ಅವರು ಯೋಗೇಶ್ವರ್ ಅವರಿಗೆ ಬೈದಿರುವ ಆಡಿಯೊ ಬಿಡುಗಡೆ ಮಾಡಿದರು. ಕಾಂಗ್ರೆಸ್ ಪ್ರಚಾರ ಸಭೆಗಳಲ್ಲಿ ವಿಧಾನಸಭೆಯಲ್ಲಿ ಚುನಾವಣಾ ವ್ಯವಸ್ಥೆ ಸುಧಾರಣೆ ಬಗ್ಗೆ ನಾನು ಮಾತನಾಡಿ ರುವ ಆಡಿಯೊವನ್ನು ಎಷ್ಟು ಬೇಕೋ ಅಷ್ಟು ಕತ್ತರಿಸಿ ಜನರಿಗೆ ಕೇಳಿಸುತ್ತಿದಾರೆ. ಆ ವ್ಯಕ್ತಿಗೆ ನಾನು ಹೇಳಲು ಇಚ್ಛಿಸುತ್ತೇನೆ, ನಾನು ಮಾಡಿರುವ ಆಡಿಯೊ ಹತ್ತು ಹದಿನೈದು ನಿಮಿಷ ಇದೆ. ಅಷ್ಟನ್ನೂ ಕೇಳಿಸಲಿ ಎಂದು ಸವಾಲು ಹಾಕಿದರು.

ಕೃಷ್ಣ ಬೈರೇಗೌಡ ಅವರ ಕ್ಷೇತ್ರ ಬ್ಯಾಟರಾಯಣಪುರದಲ್ಲಿ ಮಳೆಯಿಂದ ಪ್ರವಾಹ ಉಂಟಾಗಿ ಜನ ಬೀದಿಗೆ ಬಂದಿದ್ದಾರೆ. ಅಲ್ಲಿ ಏನಪ್ಪಾ, ನೀನು ಅಭಿವೃದ್ಧಿ ಮಾಡಿರೋದು? ಅಧಿಕಾರಿಗಳಿಗೆ ಕೈ ಮುಗಿದು ಗೋಗರೆದಿದ್ದೀರಿ. ಚನ್ನಪಟ್ಟಣದಲ್ಲಿ ನಾನು ಮಾಡಿರುವ ಕೆಲಸದ 10 ಪರ್ಸೆಂಟ್ ಮಾಡಿದ್ದೀರಾ ನೀವು ನಿಮ್ಮಿಂದ ಅಭಿವೃದ್ಧಿ ಮಾಡೋದು ಕಲಿಬೇಕಾ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜೆಡಿಎಸ್ ಮುಖಂಡರು ಹಾಜರಿದ್ದರು.



ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರವಾಗಿ ಚನ್ನಪಟ್ಟಣದ ವಿರೂಪಾಕ್ಷಿಪುರ ಗ್ರಾಮದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ. ವಿಪಕ್ಷ ನಾಯಕ ಆರ್. ಅಶೋಕ್ ಪ್ರಚಾರ ನಡೆಸಿದರು.

ಜನರ ಆಶೀರ್ವಾದದಿಂದ ನಿಖಿಲ್ ಕುಮಾರಸ್ವಾಮಿ ಅವರು ಶಾಸಕರಾಗಿ ಆಯ್ಕೆ ಆಗುವುದು ಖಚಿತ. ಅವರು ವಿಧಾನಸೌಧಕ್ಕೆ ಹೋಗಿಯೇ ಹೋಗ್ತಾರೆ. ವಿಧಾನಸಭೆಯಲ್ಲಿ ಅಭಿವೃದ್ಧಿ ಎಂದರೇನು ಎಂದು ನಿಖಿಲ್ ಅವರೇ ವಿಧಾನ ಕಲಾಪದಲ್ಲಿ ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡುತ್ತಾರೆ. ಇವರ ಎಲ್ಲಾ ಟೀಕೆಗೂ ನಿಖಿಲ್ ವಿಧಾನಸಭೆಗೆ ಪ್ರವೇಶ ಮಾಡಿ ಉತ್ತರ ಕೊಡುತ್ತಾರೆ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ವಿಶ್ವವಾಣಿ

ಸಂಪಾದಕೀಯ

370ನೇ ವಿಧಿ ಮುಗಿದ ಅಧ್ಯಾಯ

ಜಮ್ಮು-ಕಾಶ್ಮೀರದಲ್ಲಿ ಅಧಿಕಾರ ಸೂತ್ರ ಹಿಡಿದ ಬೆನ್ನಿಗೇ ಒಮರ್ ಅಬ್ದುಲ್ಲಾ ಸರಕಾರ ರಾಜ್ಯ ಸ್ಥಾನಮಾನ ಮರುಸ್ಥಾಪನೆಯ ನಿರ್ಣಯವನ್ನು ಅಂಗೀಕರಿಸಿತ್ತು. ಇದೀಗ ನಿರೀಕ್ಷಿಸಿದಂತೆ ಸಂವಿಧಾನದ 370ನೇ ವಿಧಿ ಮರುಸ್ಥಾಪನೆ ಸಂಬಂಧ ನಿರ್ಣಯ ಅಂಗೀಕರಿಸಿದೆ. ಈ ವಿದ್ಯಮಾನ ಸದನದಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಗಿದೆ. ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಬಿಜೆಪಿ ಶಾಸಕರು ಪರಸ್ಪರ ಕೈ ಕೈ ಮಿಲಾಯಿಸುವ ದೃಶ್ಯಗಳಿಗೆ ವಿಧಾನಸಭೆಯ ಮೊದಲ ಅಧಿವೇಶನ ಸಾಕ್ಷಿಯಾಗಿದೆ. ಅಸೆಂಬ್ಲಿ ಚುನಾವಣೆ ಪ್ರಚಾರದ ವೇಳೆ ನ್ಯಾಷನಲ್ ಕಾನ್ಫರೆನ್ಸ್ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ಮರುಸ್ಥಾಪನೆಗೆ ಶ್ರಮಿಸುವುದಾಗಿ ಭರವಸೆ ನೀಡಿತ್ತು. ಸದನದ ಕಲಾಪ ಪಟ್ಟಿಯಲ್ಲಿ ಇಲ್ಲದಿದ್ದರೂ ಬುಧವಾರ ಉಪಮುಖ್ಯಮಂತ್ರಿ ಸುರೀಂದರ್ ಚೌಧರಿ ಈ ಕುರಿತ ನಿರ್ಣಯವನ್ನು ಮಂಡಿಸಿದ್ದರು. ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆ ಧ್ವನಿಮತದ ಮೂಲಕ ನಿರ್ಣಯ ಅಂಗೀಕರಿಸಲಾಗಿತ್ತು. ಈ ನಿರ್ಣಯವು ರಾಜ್ಯದಲ್ಲಿ ದೊಡ್ಡ ಮಟ್ಟದ ರಾಜಕೀಯ ಸಂಘರ್ಷಕ್ಕೆ ಕಾರಣವಾಗುವ ನಿರೀಕ್ಷೆ ಇದೆ. 370ನೇ ವಿಧಿ ರದ್ದತಿಯನ್ನು ಬಹುತೇಕ ದೇಶವಾಸಿಗಳು ಬೆಂಬಲಿಸಿದ್ದಾರೆ. ದೇಶದ ಸರ್ವೋಚ್ಚ ನ್ಯಾಯಾಲಯವೂ ನಿರ್ಧಾರವನ್ನು ಎತ್ತಿ ಹಿಡಿದಿದೆ. ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಗರಿಗೆದರಲು ಕಾರಣವಾಗಿದ್ದು, ನೂರಾರು ಕಾಶ್ಮೀರಿ ಪಂಡಿತರ ಮಾರಣಹೋಮ ನಡೆದಿದ್ದು, ಲಕ್ಷಾಂತರ ಮಂದಿ ಮನೆ ಮಠ ಕಳೆದುಕೊಂಡು ದೆಹಲಿಯಲ್ಲಿ ನಿರಾಶ್ರಿತರ ಕ್ಯಾಂಪ್ ಸೇರಿದ್ದು ಈ ವಿಧಿಯ ಕಾರಣದಿಂದ ಎನ್ನುವುದರಲ್ಲಿ ಸಂಶಯವಿಲ್ಲ. ಉಳಿದ ರಾಜ್ಯಗಳಂತೆ ಜಮ್ಮು-ಕಾಶ್ಮೀರದಲ್ಲಿ ಮನೆ-ಭೂಮಿ ಖರೀದಿಸಲು, ಕಾಯಂ ವಾಸ್ತವ್ಯ ಹೂಡಲು ಅವಕಾಶವಿರುತ್ತಿದ್ದರೆ ರಾಜ್ಯದ ಚಿತ್ರಣ ಬೇರೆಯೇ ಇರುತ್ತಿತ್ತು. ಆದರೆ ರಾಜ್ಯದ ವಿಲೀನದ ಅವಧಿಯಲ್ಲಿ ಮಾಡಿದ ಎಡವಟ್ಟಿನ ಕಾರಣಕ್ಕೆ ದೇಶ ಇಂದಿಗೂ ಬೆಲೆ ತೆರುವಂತಾಗಿದೆ. ಒಮರ್ ಸರಕಾರ ಅಧಿಕಾರ ಸ್ವೀಕರಿಸಿದ ದಿನದಿಂದಲೇ ರಾಜ್ಯದಲ್ಲಿ ಉಗ್ರರ ಅಟ್ಟಹಾಸ ಮರುಕಳಿಸಿದೆ. 370ನೇ ವಿಧಿ ಮೇಲಿನ ಪರ- ವಿರೋಧ ಚಳವಳಿ ಇನ್ನಷ್ಟು ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ ಸಾಧ್ಯತೆ ಇದೆ. ಕಾಶ್ಮೀರದಲ್ಲಿ ಪ್ರಾದೇಶಿಕ ಪಕ್ಷಗಳ ನಿಲುವು ಏನೇ ಆಗಿರಲಿ, ರಾಷ್ಟ್ರೀಯ ಪಕ್ಷಗಳು ದೇಶದ ಸುರಕ್ಷತೆಯನ್ನು ಆದ್ಯತೆಯಾಗಿಟ್ಟುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಬೇಕಿದೆ. 370ನೇ ವಿಧಿಯ ಸಮಾಧಿಯನ್ನು ಮತ್ತೆ ಕೆದಕುವುದರಲ್ಲಿ ಅರ್ಥವಿಲ್ಲ.

ಸೊಂಪಾದಕೀಯ

ಮತ್ತೆ ಟ್ರಂಪ್ ಕಾರ್ಡ್

ಭಾರಿ ಕುತೂಹಲ ಮೂಡಿಸಿದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಜಯಭೇರಿ ಮೊಳಗಿಸಿದ್ದಾರೆ. ಈ ಮೂಲಕ ನಾಲ್ಕು ವರ್ಷದ ನಂತರ ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. ಭಾರತದ ಪ್ರಧಾನಿ ಮೋದಿ ಸೇರಿದಂತೆ ವಿಶ್ವದ ಹಲವು ಗಣ್ಯರು ಟ್ರಂಪ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಬೈಡನ್ ಆಡಳಿತದಿಂದ ಬೇಸತ್ತಿದ್ದ ಜನರ ಆಕ್ರೋಶವನ್ನು ಅವಕಾಶವಾಗಿ ಬಳಸಿಕೊಂಡು ಮತ್ತೊಮ್ಮೆ ಗದ್ದುಗೆಗೇರಿದ್ದಾರೆ ಟ್ರಂಪ್. ಸದ್ಯಕ್ಕೆ ಗರಿಷ್ಠ ಮತ ಪಡೆದ ಅಭ್ಯರ್ಥಿಯನ್ನು ಘೋಷಿಸಿದ್ದರೂ ಅಧಿಕೃತ ಮತ ಎಣಿಕೆ ನಡೆಯುವುದು 2025ರ ಜನವರಿ 6 ಕ್ಕೆ. ವಾಡಿಕೆ ಪ್ರಕಾರ ಜನವರಿ 20ಕ್ಕೆ ಹೊಸ ಅಧ್ಯಕ್ಷರ ಪದಗ್ರಹಣ ಆಗಲಿದೆ. ಟ್ರಂಪ್ ಅವರ ಈ ಗೆಲುವು ಭಾರತದಲ್ಲೂ ಸದ್ದು ಮಾಡುತ್ತಿದೆ. ಅದರಲ್ಲೂ ಭಾರತದಲ್ಲಿನ ಮೋದಿ ಸಮರ್ಥಕರು ಟ್ರಂಪ್ ಗೆಲುವನ್ನು ಸಂಭ್ರಮಿಸುತ್ತಿದ್ದಾರೆ. ಹೇಳಿಕೇಳಿ ಮೋದಿ ಮತ್ತು ಟ್ರಂಪ್ ಸ್ನೇಹಿತರು ಎಂದೇ ಎಲ್ಲ ಕಡೆ ಬಿಂಬಿತವಾಗಿದೆ. ಹಾಗಾಗಿ ಬಿಜೆಪಿ ಮತ್ತು ಮೋದಿ ಸಮರ್ಥಕರಿಗೆ ಮೋದಿಯೇ ಮತ್ತೊಮ್ಮೆ ಗೆದ್ದು ಬಂದಂತೆ ಅನಿಸುತ್ತಿರುವುದು ಸಹಜ. ಚುನಾವಣೆ ಸಮಯದಲ್ಲಿ ಗುಂಡೇಟು ತಿಂದರೂ ಟ್ರಂಪ್ ಛಲ ಬಿಡದೆ ತಮ್ಮ ಗುರಿ ಸಾಧಿಸಿದ್ದಾರೆ. ಕಳೆದ ಬಾರಿ ಟ್ರಂಪ್ ಅಧಿಕಾರ ಕಳೆದುಕೊಂಡ ಮೇಲೆ ಮೋದಿ ಟ್ರಂಪ್ ಅವರ ಜೊತೆಗಿನ ಸಂಬಂಧವನ್ನು ಸಂಪೂರ್ಣ ಕಳೆದುಕೊಂಡಿರಲಿಲ್ಲ. ಆಗಾಗ ಅಡ್ಡ ಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದರೂ ಟ್ರಂಪ್ ಅವರ ಬೆಳವಣಿಗೆಗೆ ತಾನು ಅಡ್ಡ ಬರುವುದಿಲ್ಲ ಎಂದು ಇಂಡೈರೆಕ್ಟ್ ಆಗಿ ಸ್ಪಷ್ಟಪಡಿಸಿದ್ದರು. ಈಗ ಟ್ರಂಪ್ ಗೆದ್ದಿರುವುದರಿಂದ ಅವರು ನನ್ನ ಗೆಳೆಯ ಎಂದು ಘಂಟಾಘೋಷವಾಗಿ ಹೇಳುವುದು ಮೋದಿ ಅವರಿಗೆ ಸುಲಭವಾಗಿದೆ. ಹಾಗಾಗಿ ಈಗ ಅಮೆರಿಕದಲ್ಲೂ ಅಚ್ಛೇದಿನ್ ಬರುತ್ತದೆ ಎಂದು ಮೋದಿ ಸಮರ್ಥಕರು ಖುಷಿಯಾಗಿದ್ದಾರೆ. ಟ್ರಂಪ್ ಅವರ ಈ ಗೆಲುವಿನಿಂದ ಭಾರತ ಮತ್ತು ಅಮೆರಿಕದ ಸಂಬಂಧ ಅದೆಷ್ಟು ಸುಧಾರಿಸುತ್ತದೆಯೋ ಗೊತ್ತಿಲ್ಲ. ಆದರೆ ಒಟ್ಟಿನಲ್ಲಿ ಅಮೆರಿಕದಲ್ಲಿ ಮಾತ್ರ ಈಗ ಮತ್ತೆ ಟ್ರಂಪ್ ಕಾರ್ಡ್ ವರ್ಕೌಟ್ ಆಗಿದೆ. ಇನ್ನು, ಬಿಜೆಪಿ ಮೋದಿ ಮತ್ತು ರಿಪಬ್ಲಿಕನ್ ಪಕ್ಷದ ಟ್ರಂಪ್ ಅವರ ಜುಗಲ್ ಬಂದಿಯಲ್ಲಿ ಜಾಗತಿಕ ಮಟ್ಟದಲ್ಲಿ ಅದ್ಯಾವ ಬದಲಾವಣೆಗಳು ಆಗುತ್ತವೆ ಎಂಬುದನ್ನು ಕಾದು ನೋಡಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ದಕ್ಷತೆ ಮತ್ತು ಅಂಚೆ ಇಲಾಖೆ

ಇತ್ತೀಚೆಗೆ ಪತ್ರಿಕೆಯನ್ನು ಓದುವಾಗ ಒಂದು ಸುದ್ದಿ ಗಮನ ಸೆಳೆಯಿತು. ಉತ್ತರಪ್ರದೇಶದ ಮೈನ್ಪುರಿ ಜಿಲ್ಲೆಯ ಆಗೊಂತಾದಲ್ಲಿ ಓಂ ಪ್ರಕಾಶ್ ಶಾಕ್ಯ ಎಂಬ ಪೋಸ್ಟ್ ಮಾಸ್ಟರ್ ಸ್ಥಳೀಯ ನಿವಾಸಿಗಳಿಂದ ಸಂಗ್ರಹಿಸಿದ ನಾಲ್ಕು ಕೋಟಿ ರುಪಾಯಿಗಳನ್ನು ವಂಚಿಸಿದ ವಿಚಾರ ಬಹಿರಂಗವಾಗಿದೆ. ಇದೀಗ ಆತ ತಲೆಮರೆಸಿಕೊಂಡಿದ್ದು, ಪೊಲೀಸರು ಆತನನ್ನು ಬೆನ್ನಟ್ಟಿದ್ದಾರೆ. ಆತ ಪೊಲೀಸ್ ಬಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ಈ ಘಟನೆಯಿಂದ ಕಂಗಾಲಾಗಿದ್ದಾರೆ. ಇಲಾಖೆಯು ಆಂತರಿಕ ತನಿಖೆಗೆ ಆದೇಶಿಸಿದೆ ಮತ್ತು ಶಾಕ್ಯ ಅವರಲ್ಲದೇ, ಅವರೊಂದಿಗಿದ್ದ ಇನ್ನೂ ನಾಲ್ವರು ಉದ್ಯೋಗಿಗಳನ್ನು ಅವರ ನಿರ್ಲಕ್ಷ್ಯಕ್ಕಾಗಿ ಅಮಾನತುಗೊಳಿಸಿದೆ. ಅನೇಕ ಗ್ರಾಮಸ್ಥರು ತಮ್ಮ ಉಳಿತಾಯದ ಹಣವನ್ನು ಹಿಂಪಡೆಯಲು ಅಂಚೆ ಕಚೇರಿಗೆ ಹೋದಾಗ ಅವರ ಖಾತೆಯಲ್ಲಿ ಹಣವಿಲ್ಲ ಎಂದು ಹೇಳಿದಾಗ ಹಗರಣ ಬೆಳಕಿಗೆ ಬಂದಿದೆ. ಕೆಲವರಂತೂ ತಮ್ಮ ಉಳಿತಾಯದ ಹಣವನ್ನು ಅಂಚೆ ಕಚೇರಿಯಲ್ಲಿ ಠೇವಣಿ ಹೂಡಿದ್ದರು. ಏನೇ ಆದರೂ ಅಂಚೆ ಇಲಾಖೆಯಲ್ಲಿ ಹಣವಿಟ್ಟರೆ ಮೋಸ ಆಗುವುದಿಲ್ಲ ಎಂದು ಭಾವಿಸಿದ್ದ ಜನರಿಗೆ ಆಘಾತವಾಗಿದೆ. ಈ ಘಟನೆಯಿಂದ ಜನರ ನಂಬಿಕೆ ಮೇಲೆ ದೊಡ್ಡ ದ್ರೋಹ ಎಸಗಿದಂತಾಗಿದೆ. ಪೋಸ್ಟ್ ಮಾಸ್ಟರ್ ಪರಾರಿಯಾಗಿದ್ದು, ನಾಲ್ವರು ನೌಕರರನ್ನು ಅಮಾನತುಗೊಳಿಸಿರುವ ದೂರುಗಳು ದಾಖಲಾಗಿವೆ. ಹಲವು ಗ್ರಾಮಸ್ಥರ ಬಳಿ ಎಫ್‌ಡಿ ದಾಖಲೆಗಳಿವೆ, ಆದರೆ ಅಂಚೆ ಕಚೇರಿಯಲ್ಲಿ ಯಾವುದೇ ದಾಖಲೆಗಳಿಲ್ಲ. ಗ್ರಾಮಸ್ಥರು ಇದುವರೆಗೆ ಕನಿಷ್ಠ 70 ಖಾತೆದಾರರ ವಿವರಗಳನ್ನು ಸಂಗ್ರಹಿಸಿದ್ದಾರೆ ಮತ್ತು ಇತರರು ಅಂಚೆ ಕಚೇರಿಗೆ ಭೇಟಿ ನೀಡಿ ತಮ್ಮ ಉಳಿತಾಯದ ಬಗ್ಗೆ ತಿಳಿಸಲು ಕೇಳುತ್ತಿದ್ದಾರೆ. ಅಂಚೆ ಕಚೇರಿಯಲ್ಲಿ ಹಣ ಇಟ್ಟರೆ ಮೋಸ ಇಲ್ಲ ಎಂದೇ ಭಾವಿಸಲಾಗಿತ್ತು. ಯಾವುದೇ ರೀತಿಯಲ್ಲೂ ಹಣ ಲಪಟಾಯಿಸಲು ಸಾಧ್ಯವೇ ಇಲ್ಲ ಎಂದು ಭಾವಿಸಿದ್ದವರಿಗೂ ಅಚ್ಚರಿಯಾಗಿದೆ. ನಮ್ಮ ದೇಶದಲ್ಲಿ ಭ್ರಷ್ಟಾಚಾರ ಇಲ್ಲದ, ಅತ್ಯಂತ ಪ್ರಾಮಾಣಿಕ ಇಲಾಖೆ ಅಂದ್ರೆ ಅಂಚೆ ಇಲಾಖೆ ಎಂಬ ಅಭಿಪ್ರಾಯ ದೇಶದೆಲ್ಲೆಡೆ ಇದೆ. ಅಂಚೆ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ. ಅಂಚೆ ಡಬ್ಬಕ್ಕೆ ಹಾಕಿದ ಪತ್ರ ಯಾರಿಗೆ ಸೇರಬೇಕೋ, ಸೇರಿಯೇ ಸೇರುತ್ತದೆ. ಈ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ, ಸಂಪೂರ್ಣ ವಿಳಾಸ ಬರೆಯದ, ಕೇವಲ ವ್ಯಕ್ತಿಯ ಹೆಸರು ಮತ್ತು ಊರಿನ ಹೆಸರು ಬರೆದ ಪತ್ರ ಕೂಡ ಯಾರಿಗೆ ಸೇರಬೇಕೋ ಅವರ ಕೈಸೇರಿದ ಸಾವಿರಾರು ಪ್ರಕರಣಗಳಿವೆ. ಅಸ್ಪಷ್ಟ ವಿಳಾಸ ಬರೆದಾಗ, ಒಂದು ವರ್ಷದ ನಂತರ ಪತ್ರ ತಲುಪಿದ ನಿದರ್ಶನಗಳಿವೆ. ಅಂಚೆ ಇಲಾಖೆ ದಕ್ಷತೆ ಪರೀಕ್ಷಿಸಲೆಂದು ಅಸ್ಪಷ್ಟ ವಿಳಾಸ ಬರೆದ, ಖಾಲಿ ಪೋಸ್ಟ್ ಕಾರ್ಡನ್ನು ಡಬ್ಬಕ್ಕೆ ಹಾಕಿದಾಗಲೂ, ಅದು ತಲುಪಬೇಕಾದವರಿಗೆ ತಲುಪಿದ ಅಪರೂಪದ ನಿದರ್ಶನಗಳಿವೆ. ಅಂಚೆ ಇಲಾಖೆಯ ಕಾರ್ಯವೈಖರಿ ಮತ್ತು ದಕ್ಷತೆ ಅಂಥದ್ದು. ನಮ್ಮ ದೇಶದಲ್ಲಿ ಒಂದು ಲಕ್ಷದ 55 ಸಾವಿರ ಅಂಚೆ ಕಚೇರಿಗಳಿವೆ. ಆರೂವರೆ ಲಕ್ಷ ಹಳ್ಳಿಗಳು, 5,730 ಪಟ್ಟಣಗಳಲ್ಲಿ ಅಂಚೆ ಕಚೇರಿಗಳು ವ್ಯಾಪಿಸಿವೆ. ನಮ್ಮ ದೇಶದಲ್ಲಿ ಅಂಚೆ ಇಲಾಖೆಯ 19,101 ಪೋಸ್ಟಲ್ ಇಂಡೆಕ್ಸ್ ನಂಬರ್ (ಪಿನ್ ಕೋಡ್)ಗಳಿವೆ. ದೇಶಾದ್ಯಂತ ಕೇಂದ್ರ ಸರಕಾರದ ಅಸ್ತಿತ್ವ ಅಂಚೆ ಇಲಾಖೆಯ ಮೂಲಕವೂ ಸ್ಥಾಪಿತವಾಗಿದೆ. 1766 ರಲ್ಲಿ ಆರಂಭವಾದ ಅಂಚೆ ಇಲಾಖೆ, ಜಗತ್ತಿನಲ್ಲಿಯೇ ಅತಿ ವಿಸ್ತಾರವಾದ ಜಾಲ ಹೊಂದಿದ ಒಂದು ಅಗಾಧ ಮತ್ತು ಅದ್ಭುತ ವ್ಯವಸ್ಥೆಯಾಗಿದೆ. ಈ ದೇಶದಲ್ಲಿ ಪ್ರತಿ ಹಳ್ಳಿಯನ್ನು ಸರಕಾರ ತಲುಪಿದ್ದರೆ ಅದು ಅಂಚೆ ಇಲಾಖೆ ಮೂಲಕ. ಇಂಥ ವ್ಯವಸ್ಥೆ ದೋಷರಹಿತ ವ್ಯವಸ್ಥೆಯನ್ನು ಹೊಂದಿದ್ದರೂ, ಉತ್ತರಪ್ರದೇಶದ ಮೈನ್ಪುರಿ ಜಿಲ್ಲೆಯಲ್ಲಾದ ಘಟನೆ ಜನರ ನಂಬಿಕೆಗೆ ದ್ರೋಹ ಬಗೆದಂತಾಗಿದೆ. ಇಂಥ ಒಂದು ಘಟನೆ ಜನರ ವಿಶ್ವಾಸವನ್ನೇ ಕದಡುವ ಸಾಧ್ಯತೆ ಇರುತ್ತದೆ.

ಜೀವತಜ್ಞರೊಂದಿಗೆ ಸಾಗರದಲ್ಲೊಂದು ಸುತ್ತು

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ಕೆಲ ದಿನಗಳ ಹಿಂದೆ ಅಮೆರಿಕದ ಮೇಯ್ನ್ ರಾಜ್ಯಕ್ಕೆ ಒಂದು ವಿಭಿನ್ನ ಪ್ರವಾಸಕ್ಕೆಂದು ಹೋಗಿದ್ದೆ. ಮೇಯ್ನ್ ಇರುವುದು ಅಮೆರಿಕದ ಈಶಾನ್ಯ ಭಾಗದ ಸಮುದ್ರತಟದಲ್ಲಿ, ಅಲ್ಲಿಂದ ಮೇಲೆ ಕೆನಡಾ ದೇಶ. ಮೇಯ್ನ್ ರಾಜ್ಯವೆಂದರೆ ಅದು ಜೀವವೈವಿಧ್ಯಕ್ಕೆ ಹೆಸರುವಾಸಿ. ಆ ರಾಜ್ಯವಿರುವುದು ಉತ್ತರ ಅಟ್ಲಾಂಟಿಕ್ ಮಹಾಸಾಗರದ ಅಂಚಿನಲ್ಲಿ, ಅಲ್ಲಿ ಚಿಕ್ಕ ಚಿಕ್ಕ ಚಿಂದಿಚಿತ್ರಾನ್ನದಂತಹ ದ್ವೀಪಗಳಿವೆ. ಒಂದೆರಡಲ್ಲ - ಬರೋಬ್ಬರಿ 4600 ದ್ವೀಪಗಳು! ಈ ದ್ವೀಪಗಳು ಸುತ್ತುವರಿದ ಸಮುದ್ರಮಧ್ಯದಲ್ಲಿ ಅಸಂಖ್ಯ ಜೀವಜಂತುಗಳಿವೆ. ಕೆನಡಾ ಮತ್ತು ಉತ್ತರಕ್ಕೆ ಚಳಿ ಹೆಚ್ಚಿದಂತೆ ಕೆಲವು ವಿಶೇಷ, ಭಾರೀ ಗಾತ್ರದ ಮೀನುಗಳು, ಶಾರ್ಕ್, ತಿಮಿಂಗಿಲಗಳು ಈ ದ್ವೀಪಗಳತ್ತ ವಾರ್ಷಿಕ ದೌಡಾಯಿಸುತ್ತವೆ. ಅಕ್ಟೋಬರ್, ನವೆಂಬರ್ ಇನ್ನೇನು ಚಳಿಗಾಲ ಶುರುವಾಗುವ ಹಂತದಲ್ಲಿ ಅವುಗಳೆಲ್ಲ ಈ ದ್ವೀಪಗಳ ಸಂಧಿಗಳಲ್ಲಿ ಸಂತಾನೋತ್ಪತ್ತಿಯಲ್ಲಿ ತೊಡಗುತ್ತವೆ. ಡಿಸೆಂಬರ್ ಎನ್ನುವಾಗ ಎಲ್ಲಿಲ್ಲದ ಚಳಿ ಶುರುವಾಗುವುದರಿಂದ ಇದೊಂದು ಚಿಕ್ಕ ಸಮಯಾವಕಾಶದಲ್ಲಿ ಅವುಗಳ ಎಲ್ಲ ವ್ಯವಹಾರ ನಡೆಯಬೇಕು. ಹಾಗಾಗಿ ಈ ತಿಂಗಳುಗಳಲ್ಲಿ ಮೈನ್ ರಾಜ್ಯದ ದ್ವೀಪಗಳಲ್ಲಿ ಎಲ್ಲಿಲ್ಲದ ಚಟುವಟಿಕೆಗಳು.

ಅಲ್ಲಿನ ಜೀವಸಂಭ್ರಮವನ್ನು ಪ್ರತ್ಯಕ್ಷ ನೋಡಲಿಕ್ಕೆಂದೇ ಅಲ್ಲಿ ಎರಡು ರೀತಿಯ ಬೋಟುಗಳ ವ್ಯವಸ್ಥೆ ಇದೆ. ಮೊದಲನೆಯದು ಸಾಮಾನ್ಯ ಪ್ರವಾಸಿಗರು ಟಿಕೆಟ್ ಪಡೆದು ಹತ್ತಿ ಹೋಗಿ ನೋಡಿ ಬರುವ, ಒಂದೆರಡು ಗಂಟೆಯ ಪ್ರವಾಸ. ಇನ್ನೊಂದು ವಿಶೇಷ ಬೋಟ್ ವ್ಯವಸ್ಥೆ. ಅದು ಎಲ್ಲರಿಗೂ ಅಲ್ಲ, ಅದರಲ್ಲಿ ಹೋಗಬೇಕೆಂದರೆ ಒಂದೋ ವಿಜ್ಞಾನಿ, ಸಾಗರ ಜೀವತಜ್ಞರಾಗಿರಬೇಕು. ಇಲ್ಲವೇ ಮೊದಲೇ ಅಪ್ಲಿಕೇಶನ್ ಬರೆದು ಜೊತೆಯಲ್ಲಿ ನಮ್ಮ ಹವ್ಯಾಸ, ವೃತ್ತಿ, ಇತ್ಯಾದಿ ವಿವರಗಳ ಒಂದು ಪುಟದ ರಿಪೋರ್ಟ್ ಅವರಿಗೆ ಮುಂಗಡ ಕಳುಹಿಸಬೇಕು. ಅವರು ಹೀಗೆ ಬಂದಿರುವ ಕೋರಿಕೆಗಳನ್ನು ಪರಾಮರ್ಶಿಸಿ, ಚಿಕ್ಕದೊಂದು ಆನ್ಲೈನ್ ಸಂದರ್ಶನ ಮಾಡುತ್ತಾರೆ. ಅದಾದ ನಂತರವಷ್ಟೇ ಈ ವಿಶೇಷ ಬೋಟಿನಲ್ಲಿ ಅವಕಾಶ ಸಿಗುತ್ತದೆ. ಆ ಅದೃಷ್ಟ ನನಗೂ ಒಲಿದಿತ್ತು. ಈ ವಿಶೇಷ ಬೋಟುಗಳು ಮಾತ್ರ ದ್ವೀಪಗಳ ನಡುವಿನ ತೀರಾ ಆಯಕಟ್ಟಿನ ಜಾಗಗಳಲ್ಲಿ ಅತ್ಯಂತ ಜಾಗರೂಕತೆಯಿಂದ ಸುತ್ತು ಹಾಕುತ್ತವೆ. ಆ ಬೋಟುಗಳ ಎಂಜಿನ್ ವಿಶೇಷದ್ದು, ಜಾಸ್ತಿ ಸಪ್ಪಳ ಮಾಡುವುದಿಲ್ಲ, ಅಷ್ಟೇ ಅಲ್ಲ, ಬೃಹತ್ ಮೀನುಗಳು, ತಿಮಿಂಗಿಲ ಮೊದಲಾದುವುಗಳು ಈ ಬೋಟಿನ ಅಕ್ಕಪಕ್ಕ ಬಂದರೆ ಎಂಜಿನ್ ತನ್ನಷ್ಟಕ್ಕೆ ತಾನೇ ನಿಂತು ಬಿಡುತ್ತದೆ.

ನಮ್ಮ ಪ್ರವಾಸಕ್ಕಿದ್ದುದು ಎರಡೇ ರೂಲ್. ಮೊದಲನೆಯದು - ನಾವು ಕೂತ ಜಾಗದಿಂದ ಏಳುವಂತಿಲ್ಲ, ಇನ್ನೊಂದು - ಮಾತನಾಡುವಂತಿಲ್ಲ. ನಮ್ಮ ಸಾಗರ ಪ್ರವಾಸ ಹೇಗೆಂದರೆ, ಒಂದೊಮ್ಮೆ ನಾವಿದ್ದ ಬೋಟ್ ಸುತ್ತಮುತ್ತ ಈ ದೊಡ್ಡ ಮೀನುಗಳ ಗುಂಪು ಬಂತೆಂದರೆ, ಅವು ಅಲ್ಲಿಂದ ಹೊರಡುವಲ್ಲಿಯವರೆಗೆ ಬೋಟ್ ಹಂದಾಡಿಸುವಂತಿಲ್ಲ. ನಿಂತಲ್ಲೇ ನಿಲ್ಲಬೇಕು. ನಮ್ಮ ವಿಶೇಷ ಬೋಟಿನ ಕ್ಯಾಪ್ಟನ್ ಕೆಲವೊಮ್ಮೆ ಆರೇಳು ತಾಸು ನಿಂತಲ್ಲಿಯೇ ಇರಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ, ಹಾಗಾಗಿ ನೀರು, ತಿಂಡಿ ಎಲ್ಲವೂ ತುಂಬಿಸಿಕೊಳ್ಳಿ ಎಂದು ಸ್ವೀಕೃತ ಇಮೇಲ್‌ನಲ್ಲಿಯೇ ನಮಗೆಲ್ಲ ಮುಂಚಿತವಾಗಿ ಎಚ್ಚರಿಕೆ ಹೇಳಿದ್ದರು.

ಆ ದಿನ ಬೆಳಿಗ್ಗೆ ಅಂದುಕೊಂಡದ್ದಕ್ಕಿಂತ ಹೆಚ್ಚಿನ ಚಳಿಯೇ ಇತ್ತು. ಆಗಿನ್ನೂ ಮಂಜು ಸರಿದಿರಲಿಲ್ಲ, ನಾವು ಎಂಟು ಮಂದಿ, ಇಬ್ಬರು ಕ್ಯಾಪ್ಟನ್, ಮತ್ತೊಬ್ಬ ಸಹಾಯಕ. ಎಂಟರಲ್ಲಿ ಐವರು ಸಾಗರಜೀವತಜ್ಞರು (Marine Biologist), ನನ್ನನ್ನೂ ಸೇರಿಸಿ ಉಳಿದ ಮೂವರು ಆಸಕ್ತರು. ನಿಧಾನಕ್ಕೆ - ಜಾಸ್ತಿ ಸದ್ದುಗದ್ದಲವಿಲ್ಲದೆ ನಮ್ಮ ಚಿಕ್ಕ ಬೋಟ್ ಹೊರಟಿತು. ಇಲ್ಲಿ ವಾರ್ಷಿಕ ಬರುವ ಸಹಸ್ರಾರು ಗಜಗಾತ್ರದ ಮೀನುಗಳು, ಶಾರ್ಕ್, ತಿಮಿಂಗಿಲಗಳನ್ನು ಅಮೆರಿಕನ್ನರು ಜಿಯೋ ಟ್ಯಾಗ್ ಮಾಡಿರುತ್ತಾರೆ. ಅವುಗಳು ಎಲ್ಲಿವೆ ಎಂಬ ನಿಖರ ಮಾಹಿತಿ ವಿಜ್ಞಾನಿಗಳಿಗೆ, ಈ ಬೋಟ್ ಕ್ಯಾಪ್ಟನ್‌ಗಳಿಗೆ ತಿಳಿದಿರುತ್ತದೆ. ಹಾಗಂತ ಈ ಬೋಟ್ ಅವುಗಳನ್ನು ಅರಸಿ ಹೋಗುವುದಿಲ್ಲ. ಇವುಗಳದ್ದು ನಿಗದಿತ ದಾರಿ. ಅಲ್ಲಿ ಏನು ಸಿಗುತ್ತದೆಯೋ ಅವುಗಳನ್ನು ನೋಡಿ ಬರುವುದು. ಮಧ್ಯದಲ್ಲಿ ಸುಮಾರು ಮೂರು ತಾಸಿನ ಲಂಗರು - ಆ ಸಮಯದಲ್ಲಿ ಈ ಸಾಗರಜೀವತಜ್ಞರು ಏನೇನೋ ಮಾಡಿಕೊಳ್ಳುತ್ತಾರೆ - ಆದರೆ ನಾವು ಕೂತಲ್ಲಿಯೇ ಇರಬೇಕು ಎಂದು ಮೊದಲೇ ಮಾತಾಗಿತ್ತು. ನಮ್ಮ ಜೊತೆಯಿದ್ದ ಜೀವಶಾಸ್ತ್ರಜ್ಞರ ಬಳಿ ಒಂದಿಷ್ಟು ಸಲಕರಣೆಗಳಿದ್ದವು, ವಿಶೇಷ ಕ್ಯಾಮರಗಳಿದ್ದವು. ಜೊತೆಯಲ್ಲಿ ಅವರ ಬಳಿ ಜಲಾಂತರ್ಗಾಮಿ ಡ್ರೋನ್‌ಗಳೂ ಇದ್ದವು. ಆದರೆ ಉಳಿದ ನಮಗೆ ಮೊಬೈಲ್ ಒಯ್ಯುವುದೂ ನಿಷಿದ್ಧವಾಗಿತ್ತು.

ನಾವು ಹೋಗುವ ಸಮುದ್ರ ಮಾರ್ಗದಲ್ಲಿ ಒಂದಿಷ್ಟು ಡಾಲ್ಫಿನ್‌ಗಳು, ಕೆಲವು ತಿಮಿಂಗಿಲಗಳು ಮತ್ತೊಂದಿಷ್ಟು ಶಾರ್ಕ್ ಮೀನುಗಳು ಸಿಗಲಿವೆ ಎಂದು ಹೊರಟಾಗಲೇ ಎಲ್ಲರಿಗೂ ತಿಳಿಸಲಾಗಿತ್ತು. ಕ್ಯಾಪ್ಟನ್ - ನಿಮ್ಮ ನಸೀಬು ಸರಿಯಿದ್ದರೆ ಇವತ್ತೊಂದು ವಿಶೇಷ ಶಾರ್ಕ್ ತೋರಿಸುತ್ತೇನೆ ಎಂದಷ್ಟೇ ಹೇಳಿದ್ದ. ಬಹುಶಃ ಈ ಜೊತೆಯಲ್ಲಿದ್ದ ಜೀವತಜ್ಞರಿಗೆ ಅದೇನೆಂದು ಗೊತ್ತಿತ್ತೋ ಏನೋ. ಏಕೆಂದರೆ ಅವರ್ಯಾರೂ ಇವನ ಈ ಮಾತಿಗೆ ತೇಜಿ ಪ್ರತಿಕ್ರಿಯಿಸಲಿಲ್ಲ. ನಾವು ಮೂವರಿಗಂತೂ ಕುತೂಹಲ ಪಡಬೇಕೋ ಅಥವಾ ಸುಮ್ಮನೆ ಅತಿರಂಜಿಸಿ ನಮ್ಮನ್ನು ಮಂಗ ಮಾಡುತ್ತಿದ್ದಾರೆಯೇ ತಿಳಿಯಲಿಲ್ಲ.

ಹೋಗುತ್ತಿದ್ದಂತೆ ನಮ್ಮ ಬೋಟ್ ಒಂದು ಕಡೆ ನಿಂತು ಬಿಟ್ಟಿತು. ಸಮುದ್ರ ಮಧ್ಯದಲ್ಲಿ ಬೋಟ್ ಎಂಜಿನ್ ನಿಂತಿತು ಎಂದರೆ ಏನೋ ಒಂದು ಜೀವಾದಿ ಅಲ್ಲಿ ಇದೆ ಎಂಬುದು ಗೊತ್ತಿತ್ತು. ಬೋಟ್ ನಿಂತಿದ್ದೇ ಇಡೀ ಬೋಟಿನೊಳಗಿನ ಎಲ್ಲ ಜೀವಾದಿಗಳೂ ಜಾಗೃತವಾದವು. ಕ್ಯಾಪ್ಟನ್ ಡಾಲ್ಫಿನ್ ಎಂದ. ನಾನು ಈಗಾಗಲೇ ಸಮುದ್ರದ ವೈಲ್ಡ್ ಡಾಲ್ಫಿನ್‌ಗಳನ್ನು ಹಿಂದೆಯೂ ನೋಡಿದ್ದೆ. ಸುಮಾರು ಹತ್ತು ವರ್ಷದ ಹಿಂದೆ ನ್ಯೂಜರ್ಸಿಯ ಕೇಪ್ ಮೇ ಎಂಬ ಇನ್ನೊಂದು ಪಡುಕಡಲ ಊರಿನಲ್ಲಿ ಸಮುದ್ರದ ಡಾಲ್ಫಿನ್‌ಗಳು ಇದೆ ರೀತಿಯ ಇನ್ನೊಂದು ಪ್ರವಾಸದಲ್ಲಿ ನಮ್ಮ ಹಡಗಿನ ಆಸುಪಾಸಿನಲ್ಲಿಯೇ ಹತ್ತಾರು ಹಾರುತ್ತ ಇಳಿಯುತ್ತ ಈಜಾಡಿದ್ದವು. ಆಗ ಸುಮಾರು ದೂರದಲ್ಲಿ ತಿಮಿಂಗಿಲವೂ ಸಿಕ್ಕಿತ್ತು. ಆದರೆ ಆಗ ಕಂಡದ್ದು ತಿಮಿಂಗಿಲದ ಮೇಲ್ಮೈ ಮತ್ತು ಅದು ಉಸಿರು ಬಿಡುವಾಗ ಕಾರಂಜಿಯಂತೆ ನೀರಿನ ಮಧ್ಯೆ ಉಸಿರು ಹಾರುವುದಷ್ಟೇ ಕಂಡಿತ್ತು. ಇದೆಲ್ಲ ನೆನಪಿಸಿಕೊಳ್ಳುತ್ತಿದ್ದಾಗಲೇ ಮೂರು ತಿಮಿಂಗಿಲಗಳು ನಮ್ಮ ಬೋಟಿನ ತುಸು ದೂರದಲ್ಲಿಯೇ ಇವೆ ಎಂದು ಕ್ಯಾಪ್ಟ ಹೇಳಿದ. ಅದಾದ ಸುಮಾರು ಅರ್ಧ ಗಂಟೆ ಅಲ್ಲಿಯೇ ನಮ್ಮ ಬೋಟ್‌ನಿಂತಿತ್ತು. ತಿಮಿಂಗಲ ನಾವಿದ್ದ ತುಸುವೇ ದೂರದಲ್ಲಿ ಈಜುತ್ತಿರುವುದು ಹಡಗಿನ ರೇಡಾರ್ ಸ್ಕ್ರೀನ್‌ನಲ್ಲಿ ಕಾಣಿಸುತ್ತಿತ್ತು. ನಮ್ಮ ಜೊತೆಯಿದ್ದ ಜೀವಶಾಸ್ತ್ರಜ್ಞರು ಏನೇನೋ ಸಲಕರಣೆಗಳನ್ನು ನೀರಿನೊಳಕ್ಕೆ ಬಿಟ್ಟರು. ಅವರ ಏನೇನೋ ಪ್ರಯೋಗಗಳು ಸ್ವಲ್ಪ ಹೊತ್ತು ನಡೆದವು. ಅದೇನೆಂದು ನಮಗೆ ನೋಡಿ ವಿವರ ಕೇಳುವಂತಿರಲಿಲ್ಲ. ಆಮೇಲೆ ಎಲ್ಲ ಕೇಳಿದರಾಯ್ತು ಎಂದು ನಾವು ಮೂವರು ಸುಮ್ಮನೆ ಕೂತೆವು. ನಮಗೋ, ತಿಮಿಂಗಿಲ ರೇಡಾರ್ ಸ್ಕ್ರೀನಿನಲ್ಲಷ್ಟೇ ಚುಕ್ಕೆಗಳಾಗಿ ಇತ್ತಿಂದತ್ತ ಸರಿದಾಡುತ್ತಿರುವುದು ಕಾಣುತ್ತಿದ್ದವು.

ಇದೆಲ್ಲ ನಡೆಯುತ್ತಿದ್ದಾಗ, ನನಗಂತೂ ಬೇಜಾರುಬಂದು ಹೋಗಿತ್ತು. ಏಕೆಂದರೆ ನಾವು ನಿಂತಲ್ಲೇ ನಿಂತು ಸುಮಾರು ಎರಡು ಗಂಟೆ ಕಳೆದಿದ್ದವು. ಹೀಗಿರುವಾಗ ಒಮ್ಮಿಂದೊಮ್ಮೆಲೆ ತಿಮಿಂಗಿಲಗಳು ಅಲ್ಲಿಂದ ಹೊರಟಂತೆ ರೇಡಾರ್ ಪರದೆಯಲ್ಲಿ ಕಂಡವು. ಯಾವುದೂ ಇನ್ನೊಂದು ಗಾತ್ರದ ಮೀನು ಅವುಗಳನ್ನು ಅಟ್ಟಿಸಿಕೊಂಡು ಬರುವುದು ಗೋಚರವಾಯಿತು. ಸುಮಾರು ನಲವತ್ತು ಮೀಟರ್ ದೂರದಲ್ಲಿದ್ದ ತಿಮಿಂಗಿಲಗಳು ಹದಿನೈದು ಇಪ್ಪತ್ತು ನಿಮಿಷಕ್ಕೊಮ್ಮೆ ಮೇಲಕ್ಕೆ ಬಂದು ಉಸಿರುಬಿಡುತ್ತಿದ್ದವು. ಆಗ ಅವುಗಳ ಗಾತ್ರದ ಅಂದಾಜು ನಮಗಾಗುತ್ತಿತ್ತು. ಆದರೆ ಅವುಗಳ ಹತ್ತಿರ ಹೋಗುವಂತಿಲ್ಲ - ಅದು ಕಾನೂನು. ಒಮ್ಮಿಂದೊಮ್ಮೆಲೆ ಈ ತಿಮಿಂಗಿಲಗಳು ಇನ್ನಷ್ಟು ಹತ್ತಿರಕ್ಕೆ ಬಂದವು. ಒಂದು ಹಂತದಲ್ಲಿ ಬೋಟಿನಿಂತ ಸುಮಾರು ಹತ್ತೇ ಮೀಟರ್ ದೂರದಲ್ಲಿ, ನಮ್ಮ ಬೋಟಿಗೆ ಸಮನಾಂತರವಾಗಿ ತಿಮಿಂಗಿಲಗಳಿದ್ದವು. ತಿಮಿಂಗಲ ಎಂದರೆ ಅದರ ಗಾತ್ರ ವೈಭವದ ಬಗ್ಗೆ ನಿಮಗೆಲ್ಲ ಗೊತ್ತೇ ಇರುತ್ತದೆ. ಅಮೆರಿಕ ಮೊದಲಾದ ದೇಶಗಳಿಗೆ ಪ್ರವಾಸ ಮಾಡಿದ್ದರೆ ಅಲ್ಲಲ್ಲಿ ತಿಮಿಂಗಿಲಗಳನ್ನು ನೋಡುವ ವ್ಯವಸ್ಥೆಗಳಿರುತ್ತವೆ. ಅದು ಬಿಟ್ಟರೆ ಟಿವಿಯಲ್ಲಿ ನೋಡಿಯೇ ಇರುತ್ತೇವೆ.

ಆದರೆ ನಿಮಗೊಂದು ಹೇಳಬೇಕು. ಕೆಲವೊಂದನ್ನು ಪ್ರತ್ಯಕ್ಷ ನೋಡುವುದಕ್ಕೂ ಟಿವಿ / ಮೊಬೈಲ್ ಪರದೆಯ ಮೇಲೆ ನೋಡುವುದಕ್ಕೂ ಅಜ-ಗಜಾಂತರ ವ್ಯತ್ಯಾಸವಿರುತ್ತದೆ. ಉದಾಹರಣೆಗೆ ನಮ್ಮ ಜೋಗ ಜಲಪಾತ. ಜೋಗದ ಜಲಪಾತವಾಗುವ ಆ ಕಂದಕದ ವಿಸ್ತಾರ, ಅಗಾಧತೆ ಕಣ್ಣಾರೆ ಕಂಡಾಗಲಷ್ಟೇ ತಿಳಿಯುವುದು. ಆದರೂ ನಮ್ಮ ಕಣ್ಣಿಗೆ ಎದುರಿಗಿರುವ ನೋಟ ಒಂದು ಅಳತೆಯನ್ನು ಮೀರಿದರೆ ಅಂದಾಜು ಹತ್ತುವುದಿಲ್ಲ. ಜೋಗದಲ್ಲೆಂದರೆ ಅಲ್ಲಿ ಮರಗಿಡಗಳಿವೆ, ಅತ್ತ ಕಡೆ ಮೇಲೆ ಬಂಗಲೆಯೊಂದು ಕಾಣಿಸುತ್ತದೆ. ಈ ಮೂಲಕ ಸಾಪೇಕ್ಷ ಸ್ವಲ್ಪಮಟ್ಟಿಗೆ ಅಂದಾಜಿಸಬಹುದು. ಆದರೂ ನಮಗೆ ಅದೆಷ್ಟು ಆಳ ಎತ್ತರ ಎಂಬುದು ಸರಿಯಾಗಿ ತಿಳಿಯುವುದಿಲ್ಲ, ಕಣ್ಣು ಕಂಡದ್ದು ಮೆದುಳು ಸರಿಯಾಗಿ ಗ್ರಹಿಸಬೇಕೆಂದರೆ ಹೋಲಿಕೆಗೆ ಸಾಕ್ಷ್ಯಗಳು ಬೇಕಾಗುತ್ತವೆ. ಅದಿಲ್ಲದ ಫೋಟೋ ಚಿಕ್ಕದಾಗಿಯೇ ಕಾಣಿಸುತ್ತದೆ. ವಿಧಾನಸೌಧ ಎಷ್ಟು ದೊಡ್ಡದು ಎಂಬುದರ ಅಂದಾಜು ಫೋಟೋ ನೋಡಿದಕ್ಕಿಂತ ಎದುರಿಗೆ ನಿಂತು ನೋಡಿದರೆ ಹೆಚ್ಚು ಗ್ರಾಹ್ಯವಾಗುತ್ತದೆ. ಆದರೆ ಕೆಲವೊಂದಿಷ್ಟು ಗ್ರಹಿಸಲು ಹೋಲಿಕೆಯೇ ಅಕ್ಕಪಕ್ಕ ಇರುವುದಿಲ್ಲ. ಉದಾಹರಣೆಗೆ ಮೌಂಟ್ ಎವರೆಸ್ಟ್, ಹಿಮಾಚಲದ ಕಂದಕಗಳು, ಶ್ರೀನಗರದ ಕಣಿವೆಗಳು. ಈಗ ಕೆಲವು ವರ್ಷದ ಹಿಂದೆ ಅರಿಝೋನಾದ ಗ್ರಾಂಡ್ ಕಾನ್ಯನ್ ಎಂಬ ಜಾಗಕ್ಕೆ ಹೋದಾಗಲೂ ಇದೆ ಅನುಭವವಾಯಿತು. ಅದು ಆರುಸಾವಿರ ಫೂಟಿನ ಮಹಾ ಕಂದಕ. ಅಲ್ಲಿ ಹೋಗಿ ನಿಂತರೆ ಅದೆಷ್ಟು ದೊಡ್ಡದು ಎಂಬ ಅಂದಾಜಾಗುವುದಿಲ್ಲ, ನಾನು ಹೋದಾಗ ಅಲ್ಲೊಂದು ಹೆಲಿಕಾಪ್ಟರ್ ಕಂದಕದಲ್ಲಿ ಹಾರುತ್ತಿತ್ತು. ಅದನ್ನು ಕಂಡಾಗ ನನಗೆ ಈ ಕಂದಕ ಎಷ್ಟು ದೊಡ್ಡದು ಎಂಬ ಅಂದಾಜಾದದ್ದು. ಅವೆಲ್ಲವೂ ಅಂದಾಜಾಗದಷ್ಟು ಗಾತ್ರದವು. ಎದುರಿಗೆ ನಿಂತಾಗ ಮೆದುಳು ಅಂಡಜಗದೇ ಗೋಜಲು ಗೋಜಲಾಗುತ್ತದೆ. ಆ ಅನುಭವವನ್ನೇ ಖುಚ್ಚಿಜಿಳಿಳಿ ಅಭಿಚ್ಚಿಠಿಳಿ ಎನ್ನುವುದು. ಅಂದಾಜಾಗದ ಗಾತ್ರದ ವಸ್ತು, ಸ್ಥಳ, ರಚನೆ, ಸಮುದ್ರದ ಅಗಾಧತೆ, ಭೋರ್ಗರೆವ ಗುಡುಗು ಸಿಡಿಲಿನ ಕರಾವಳಿಯ ಮಳೆ, ಎಪ್ಪತ್ತು ನೂರು ಮಹಡಿಯ ಕಟ್ಟಡ ಇವೆಲ್ಲವೂ ಹಾಗೆಯೇ. ಅಂತೆಯೇ ತಿಮಿಂಗಿಲ. ನಮಗೆ ಮೊನ್ನೆ ಕಾಣಿಸಿದ್ದು ಬ್ಲೂ ವೇಲ್ - ನೀಳ ತಿಮಿಂಗಿಲ. ಬ್ಲೂ ವೇಲ್ ಅದೆಷ್ಟು ದೊಡ್ಡದೆಂದರೆ ಅದರ ನಾಲಿಗೆಯ ತೂಕ ಒಂದು ಬಲಿತ ಆನೆಯಷ್ಟು. ಸೈದ್ಧಾಂತಿಕವಾಗಿ ಅದರ ಬಾಯಲ್ಲಿ ನೂರು ಮಂದಿಯನ್ನು ತುಂಬಿಸಬಹುದು. ಅದರ ಹೃದಯ ಮಧ್ಯಗಾತ್ರದ ಕಾರಿನಷ್ಟು. ಅವುಗಳ ಮರಿಗಳು ದಿನವೊಂದಕ್ಕೆ 250 ಲೀಟರ್ ಹಾಲು ಕುಡಿಯುತ್ತವೆ ಎಂದರೆ ಯೋಚಿಸಿ. ನನಗಂತೂ ಅವನ್ನು ಕಂಡಾಗ ಅವಷ್ಟು ದೊಡ್ಡಕ್ಕಿವೆ ಎಂಬ ಅಂದಾಜು ಫಕ್ಕನೆ ಹತ್ತಲಿಲ್ಲ. ಏಕೆಂದರೆ ಅದು ಸಮುದ್ರ. ಅಲ್ಲಿ ಮರ-ಗಿಡ ಯಾವುದೂ ಹೋಲಿಕೆಗಿಲ್ಲ. ಸಮುದ್ರವೇ ಅಗಾಧ - ಅದರೆದುರು ತಿಮಿಂಗಿಲವೂ ಚಿಕ್ಕದಾಗಿ ಕಾಣಿಸುತ್ತಿತ್ತು.

ಈ ತಿಮಿಂಗಿಲಗಳು ಮಾಯವಾಗುತ್ತಿದ್ದಂತೆ ಜೊತೆಯಲ್ಲಿದ್ದ ಸಾಗರಜೀವತಜ್ಞರು ತಮ್ಮ ಜೊತೆಯಿದ್ದ 'Deepwater Drone' ಅನ್ನು ಕೆಳಕ್ಕೆ ಬಿಟ್ಟರು. ನಿಮಗೆ ಆಕಾಶಕ್ಕೆ ಹಾರುವ ಡ್ರೋನ್ ಗೊತ್ತಿರುತ್ತದೆ. ಚಿಕ್ಕದೊಂದು ಹಾರುವ ಯಂತ್ರ - ಅದಕ್ಕೊಂದು ಕ್ಯಾಮರಾ, ಅದನ್ನು ನಿಯಂತ್ರಿಸಲು ಕೈಯ್ಯಲ್ಲೊಂದು ಕಂಟ್ರೋಲರ್- ಇದು ಸಾಮಾನ್ಯ ಕಲ್ಪನೆಯ, ಆಕಾಶಕ್ಕೆ ಹಾರುವ ಡ್ರೋನ್ .'ಈಟ್ಟಛಿ'ಎಂದರೆ 'ಗುಸ್' ಎಂದು ನಿರಂತರ (ಜೇನು ಹುಳುವಿನಂತೆ) ಶಬ್ದ ಮಾಡುವುದು ಎಂಬ ಅರ್ಥ ಇಂಗ್ಲೀಷಿನಲ್ಲಿದೆ. ಬಹುಶಃ ಡ್ರೋನ್ ಕೂಡ ಹಾರಿಸಿದಾಗ ಹಾಗೆಯೇ ಶಬ್ದಮಾಡುವುದರಿಂದ ಆ ಹೆಸರು ಬಂದಿರಬೇಕು. ಸಾಮಾನ್ಯವಾಗಿ ಡ್ರೋನ್ ಎಂದಾಕ್ಷಣ Unmanned Aerial Vehicle& ಮಾನವರಹಿತ ಚಿಕ್ಕ ವಿಮಾನ ನೆನಪಾಗುತ್ತದೆ. ಅದು ಬಿಟ್ಟು Land Drone ಗಳಿವೆ. ಇವನ್ನು ಸಾಮಾನ್ಯವಾಗಿ ಯುದ್ಧಗಳಲ್ಲಿ, ಅದರಲ್ಲಿಯೂ ಶತ್ರು ಗುಡ್ಡದ ಮೇಲಿದ್ದು ಕೆಳಗಿನಿಂದ ದಾಳಿಮಾಡಲು, ಬಾಂಬ್ ಕೃತಕವಾಗಿ ಸ್ಫೋಟಿಸಲು ಇತ್ಯಾದಿ ಬಳಸುವುದಿದೆ. ಅದು ಬಿಟ್ಟರೆ Deepwater Drone- ಸಮುದ್ರದಾಳಕ್ಕಿಳಿಯಬಲ್ಲ ಡ್ರೋನ್‌ಗಳಿವೆ. ಅವು ನೋಡಲಿಕ್ಕೆ ಚಿಕ್ಕ ಪೆಟ್ಟಿಗೆಯಂತಿರುತ್ತವೆ. ನೀರಿನಲ್ಲಿ ಆಳಕ್ಕಿಳಿದಂತೆ ಒತ್ತಡ ಹೆಚ್ಚುವುದರಿಂದ ಅವುಗಳನ್ನು ಸಾಮಾನ್ಯವಾಗಿ ಲೋಹದಿಂದ ಮಾಡಲಾಗುತ್ತದೆ. ಚಿಕ್ಕದೊಂದು ಪೆಟ್ಟಿಗೆಯನ್ನು ಸಮುದ್ರದೊಳಕ್ಕೆ ಬಿಟ್ಟರೆ ಅವು ಸರಾಗವಾಗಿ ಮೀನಿನಂತೆ ಈಜಿ ಹೇಳಿದಲ್ಲಿ ಹೋಗಬಲ್ಲವು. ಸಮುದ್ರದಲ್ಲಿ ಕೆಳಕ್ಕಿಳಿದಂತೆ ಒತ್ತಡ ಹೆಚ್ಚುವುದು ಮಾತ್ರವಲ್ಲ, ಬೆಳಕೂ ಕ್ಷೀಣಿಸುತ್ತಾ ಹೋಗುತ್ತದೆ. ಇಂದಿನ ಜಲಾಂತರ್ಗಾಮಿ ಡ್ರೋನ್‌ಗಳು ಎಷ್ಟು ಸದೃಢವೆಂದರೆ ಅವನ್ನು ನೀರಿನೊಳಕ್ಕೆ ಸುಮಾರು ಹತ್ತು ಸಾವಿರ ಮೀಟರ್‌ವರೆಗೂ ಇಳಿಸಬಹುದು. ಸಮುದ್ರದ ಅತ್ಯಂತ ಆಳ ಪ್ರದೇಶವಾದ ಮರಿಯಾನಾ ಟ್ರೆಂಚ್‌ಗೆ ಆರಾಮಾಗಿ ಹೋಗಬಲ್ಲವು. ಅಲ್ಲಿ ಹೋಗಿ ಅಲ್ಲಿಂದ ವಿಡಿಯೋ ಲೈವ್ ಮೇಲಿನ ಬೋಟಿಗೆ ಕಳುಹಿಸಬಲ್ಲವು.

ಜಲಾಂತರ್ಗಾಮಿ ಡ್ರೋನ್ ಕೆಳಕ್ಕಿಳಿಯುತ್ತಿದ್ದಂತೆ ಅಲ್ಲಿ ನಮ್ಮೆಲ್ಲರಿಗೆ ಆಶ್ಚರ್ಯವೆನಿಸುವ ಬೃಹತ್ ಜೀವಿಯೊಂದು ಡ್ರೋನಿನ ಕಂಟ್ರೋಲರ್ ಸ್ಕ್ರೀನಿನಲ್ಲಿ ಕಾಣಿಸತೊಡಗಿತು. ಅದೊಂದು ವಿಶೇಷ, ವಿಚಿತ್ರ ಜೀವಿ. ಸಾಗರಂತರಾಳದಲ್ಲಿಯೇ ಬದುಕುವ, ಸುಮಾರು 20-25 ಫೂಟ್ ಉದ್ದದ ಬೃಹತ್ ಜೀವಿ. ಅದು ಹುಟ್ಟು ಕುರುಡಲ್ಲ - ಆದರೆ ಬೇಕೆಂತಲೇ ಕುರುಡಾಗುವ, ಕಣ್ಣು ಕುರುಡಾದರೂ ತಲೆಕೆಡಿಸಿಕೊಳ್ಳದ ಜೀವಿ.

ಅದರ ಅನುಭವ ಮತ್ತು ಇನ್ನೊಂದಿಷ್ಟು ವಿಚಾರಗಳು - ಮುಂದಿನ ವಾರಕ್ಕೆ.

ಹಾಲಿನೊಳಗೆ ಸಕ್ಕರೆಯಂತಾದ ಜೊರಾಸ್ಟ್ರಿಯನ್ನರು

ಇತಿಹಾಸ
ಶಶಿಕುಮಾರ್ ಕೆ.
vveditoped@gmail.com

ಕಳೆದ ತಿಂಗಳು ಉದ್ಯಮ ಲೋಕದ ದಿಗ್ಗಜ ರತನ್ ಟಾಟಾ ನಿಧನರಾದರು. ಅಂದು ಇಡೀ ದೇಶವೇ ಅವರಿಗಾಗಿ ಕಂಬನಿ ಮಿಡಿಯಿತು. ಇವರು ಉದ್ಯಮಿಯಾಗಿದ್ದರೂ ಸಹ ಪರೋಪಕಾರದ ಮನಸ್ಥಿತಿ ಉಳ್ಳಂತಹ ಮನುಷ್ಯ. ಇವರು ಮೂಲತಃ ಪಾರ್ಸಿ ಸಮುದಾಯಕ್ಕೆ ಸೇರಿದಂತವರು. ಪಾರ್ಸಿ ಸಮುದಾಯದ ಇತಿಹಾಸವೇ ರೋಚಕ. ಇವರ ಮೂಲ ನೆಲೆ ಇಂದಿನ ಇರಾನ್ ದೇಶ. ಇವರನ್ನು ಜೊರಾಸ್ಟ್ರಿಯನ್ನರು ಎಂದು ಸಹ ಕರೆಯುತ್ತಾರೆ. ಇವರು ಅಗ್ನಿ ಆರಾಧಕರು.

ಸಾ.ಶ. 8ನೇ ಶತಮಾನದಲ್ಲಿ ಇಸ್ಲಾಮಿನ ಮೊದಲ ದಾಳಿ ಪರ್ಷಿಯಾದ (ಇಂದಿನ ಇರಾನ್) ಮೇಲಾದಾಗ ಆ ದಾಳಿಗೆ ಸಿಲುಕಿ ಬಹಳಷ್ಟು ಜನ ಸಾವನ್ನಪ್ಪಿದರೆ ಉಳಿದವರು ಮತಾಂತರವಾಗಬೇಕಾಗಿತು. ಅಳಿದುಳಿದವರು ಜೀವ ಉಳಿಸಿಕೊಳ್ಳಲು ಹಡಗನ್ನು ಹತ್ತಿ ಶರಣಾರ್ಥಿಗಳಾಗಿ ಯಾವುದಾದರೂ ದೇಶದಲ್ಲಿ ವಾಸಿಸೋಣ ಎಂದು ಹೊರಟರು. ಯಾವುದೇ ದೇಶಕ್ಕೆ ಹೋಗಲಿ, ಯಾವುದೇ ಬಂದರಿಗೆ ಹೋಗಲಿ ಇವರಿಗೆ ಆ ದೇಶಗಳು ಅಗತ್ಯವಾದ ಆಹಾರವನ್ನು, ಹಡಗಿಗೆ ಅಗತ್ಯವಾಗಿ ಬೇಕಾದ ಇಂಧನವನ್ನು ನೀಡುತ್ತಿದ್ದರೆ ಹೊರತು ಆಶ್ರಯ ನೀಡಲು ನಿರಾಕರಿಸುತ್ತಿದ್ದರು. ಏಕೆಂದರೆ ಇವರಿಗೆ ಆಶ್ರಯ ನೀಡಿದರೆ ನಮ್ಮ ಮೇಲೂ ಇಸ್ಲಾಂ ದಾಳಿಗಳಾಗಬಹುದು ಎಂಬ ಭಯ ಅವರಿಗಿತ್ತು.

ಇಂತಹ ಸಂದರ್ಭದಲ್ಲಿ ಅವರ ಹಡಗು ಭಾರತದ ಗುಜರಾತಿಗೆ ಬಂದು ತಲುಪಿತು. ಪಾರ್ಸಿಗಳು ಗುಜರಾತಿನ ವಡೋದರದ ರಾಜನನ್ನು ಭೇಟಿಯಾಗಿ ನಮಗೆ ನಿಮ್ಮ ರಾಜ್ಯದಲ್ಲಿ ಆಶ್ರಯ ನೀಡಬೇಕೆಂದು ಕೇಳಿಕೊಂಡರು. ವಡೋದರದ ರಾಜ ನಮ್ಮಲ್ಲಿಯೇ ಸಾಕಷ್ಟು ಜನರಿದ್ದಾರೆ ನಿಮಗೆ ಆಶ್ರಯ ನೀಡಲು ಸಾಧ್ಯವಾಗುವುದಿಲ್ಲ ಎಂದು ಹೇಳಬೇಕಾಗಿತ್ತು. ಅದನ್ನು ನೇರವಾಗಿ ಹೇಳಲು ಸಾಧ್ಯವಾಗದೆ ರಾಜ್ಯ ತುಂಬಿಹೋಗಿದೆ ಎಂಬ ಸಂಕೇತವಾಗಿ ಮಡಿಕೆ ತುಂಬಾ ಹಾಲನ್ನು ಕಳುಹಿಸುತ್ತಾನೆ. ಇದನ್ನು ನೋಡಿದ ತಕ್ಷಣ ಅರ್ಥ ಮಾಡಿಕೊಂಡ ಪಾರ್ಸಿಗಳ ನಾಯಕ ಹಾಲಿನೊಳಕ್ಕೆ ಒಂದು ಹಿಡಿ ಸಕ್ಕರೆಯನ್ನು ಹಾಕುತ್ತಾನೆ. ಇದರರ್ಥ ಹಾಲಿನೊಳಗಿನ ಸಕ್ಕರೆಯಂತೆ ನಾವು ನಿಮ್ಮ ಜನಗಳ ಜೊತೆ ಬದುಕುತ್ತೇವೆ ಎಂದು. ಇದನ್ನು ನೋಡಿದ ವಡೋದರರ ರಾಜನಿಗೆ ಬಹಳ ಸಂತೋಷವಾಗಿ ಪಾರ್ಸಿಗಳಿಗೆ ತಮ್ಮ ರಾಜ್ಯದಲ್ಲಿ ಇರಲು ಅವಕಾಶ ನೀಡುತ್ತಾನೆ. ಆಗ ಪಾರ್ಸಿಗಳು ಒಂದು ಕಂಡೀಶನ್ ವಿಧಿಸುತ್ತಾರೆ ಅದೇನೆಂದರೆ ನಾವು ಅಗ್ನಿ ಆರಾಧಕರು, ನಮ್ಮ ದೇಶದಿಂದ ಪವಿತ್ರ ಅಗ್ನಿಯನ್ನು ತಂದಿದ್ದೇವೆ ಇದನ್ನು ಎಲ್ಲಿ ಪ್ರತಿಷ್ಠಾಪಿಸುತ್ತೇವೆಯೋ ಅದರ ಮೂರು ಮೈಲು ಸುತ್ತಾ ಜೊರಾಸ್ಟ್ರಿಯನ್ ಹೊರತುಪಡಿಸಿ ಬೇರೆ ಯಾರೂ ಸಹ ಬರಬಾರದೆಂದು ಹೇಳುತ್ತಾರೆ. ಅದಕ್ಕೆ ವಡೋದರದ ರಾಜ ಶರಣಾರ್ಥಿಗಳಾಗಿ ನೀವು ಬಂದಿದ್ದೀರಿ ನಿಮ್ಮ ಧರ್ಮ, ಧಾರ್ಮಿಕ ಸಂಪ್ರದಾಯಗಳನ್ನು ಉಳಿಸುವುದು ಕೂಡ ನನ್ನ ಜವಾಬ್ದಾರಿ ನೀವು ನಿಮ್ಮ ಅಗ್ನಿಯನ್ನು ಪ್ರತಿಷ್ಠಾಪಿಸಿ ಅದರ ಮೂರು ಮೈಲು ಸುತ್ತಾ ನಮ್ಮವರು ಬರದೇ ಇರುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದು ಪಾರ್ಸಿಗಳಿಗೆ ರಾಜನು ಅಭಯ ನೀಡುತ್ತಾನೆ.

ಕೊಟ್ಟ ಮಾತಿನಂತೆ ಹಾಲಿನಲ್ಲಿ ಸಕ್ಕರೆಯಂತೆ ಬದುಕಿದವರು ಪಾರ್ಸಿಗಳು. ಇದುವರೆಗೂ ಪಾರ್ಸಿಗಳು ಯಾರದ್ದೋ ಧಾರ್ಮಿಕ ಕೇಂದ್ರಗಳನ್ನು ಒಡೆದು ಹಾಕುವುದಾಗಲಿ, ಬೇರೆ ಧರ್ಮದವರನ್ನು ಮತಾಂತರ ಮಾಡುವುದಾಗಲಿ, ಇಲ್ಲವೇ ನಮ್ಮ ಧಾರ್ಮಿಕ ಕೇಂದ್ರಗಳ ಮುಂದೆ ನಿಮ್ಮ ಮೆರವಣಿಗೆ ಹೋಗಬಾರದೆಂದು ತಡೆದಂತಹ ಒಂದೇ ಒಂದು ಉದಾಹರಣೆ ಹುಡುಕಿದರೂ ಸಹ ಸಿಗುವುದಿಲ್ಲ. ಪಾರ್ಸಿಗಳು ಭಾರತಕ್ಕೆ ಬಂದಾಗ ವಡೋದರದ ರಾಜನೂ ಸಹ ಒಂದು ಕಂಡೀಶನ್ ವಿಧಿಸುತ್ತಾನೆ. ನಿಮ್ಮ ದೇಶದಲ್ಲಿ ನೀವು ಗೋಮಾಂಸದ ಪದ್ಧತಿ ಇಟ್ಟುಕೊಂಡಿದ್ದೀರಾ ನಮ್ಮ ದೇಶದಲ್ಲಿ ಗೋವನ್ನು ನಾವು ಪವಿತ್ರ ಎಂದು ಪೂಜಿಸುತ್ತೇವೆ. ಆದ್ದರಿಂದ ನೀವು ನಮ್ಮ ದೇಶದಲ್ಲಿ ಇರುವವರೆಗೂ ಗೋಮಾಂಸ ತಿನ್ನಬಾರದೆಂದು ಹೇಳುತ್ತಾನೆ. ಅಂದು ವಡೋದರದ ರಾಜನಿಗೆ ಕೊಟ್ಟ ಮಾತಿನಂತೆ ಇಂದಿಗೂ



ಜೊರಾಸ್ಟ್ರಿಯನ್ನರು ಪಾಲಿಸುತ್ತಿದ್ದಾರೆ. ಈ ಸಮುದಾಯ ಭಾರತದ ಬೆಳವಣಿಗೆಗೆ ಕೊಟ್ಟ ಕೊಡುಗೆ ಅಷ್ಟಿಷ್ಟಲ್ಲ.

ಜಗತ್ತಿನಲ್ಲಿಯೇ ಅತಿ ಹೆಚ್ಚು ಪಾರ್ಸಿಗಳು ಇರುವುದು ಭಾರತದಲ್ಲಿ ಮಾತ್ರ. ಭಾರತದಲ್ಲಿ 57,264 ಜನ ಪಾರ್ಸಿಗಳಿದ್ದರೆ, ಪಕ್ಕದ ಪಾಕಿಸ್ತಾನದಲ್ಲಿ 2,348 ಜನ, ಖಲಿಸ್ತಾನಿಗಳ ಅಡಗುದಾಣವಾಗಿರುವ ಕೆನಡಾದಲ್ಲಿ 3,630 ಜನ ಪಾರ್ಸಿಗಳು ನೆಲೆಸಿದ್ದಾರೆ. ಪಾರ್ಸಿಗಳ ಮೂಲ ನೆಲೆಯಾದ ಇರಾನ್ (ಅಂದಿನ ಪರ್ಷಿಯಾ)ನಲ್ಲಿ ಹೇಳಿಕೊಳ್ಳುವುದಕ್ಕೂ ಸಹ ಒಬ್ಬ ಪಾರ್ಸಿ ಇಲ್ಲದಂತಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾರ್ಸಿಗಳ ಕೊಡುಗೆ ಅವಿಸ್ಮರಣೀಯವಾಗಿದೆ. ಫಿರೋಜ್ ಷಾ ಮೆಹತಾ, ದಾದಾಬಾಯಿ ನವರೋಜಿ, ಬಿಕಾಜಿಕಾಮ ಮೊದಲಾದವರು ಈ ಸಾಲಿಗೆ ಸೇರುತ್ತಾರೆ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಇವರದ್ದು ಎತ್ತಿದ ಕೈ. ಭೌತಶಾಸ್ತ್ರಜ್ಞ ಹೋಮಿ ಜೆ ಬಾಬಾ, ಪರಮಾಣು ವಿಜ್ಞಾನಿ ಹೋಮಿ ಎನ್ ಸೇತ್ನಾ ಈ ಸಾಲಿಗೆ ಸೇರುತ್ತಾರೆ. ಪಾರ್ಸಿ ಸಮುದಾಯಕ್ಕೆ ಸೇರಿದ ಹಲವಾರು ಜನ ಕೈಗಾರಿಕೋದ್ಯಮಿಗಳು ಸಾಲು ಸಾಲಾಗಿ ಕಾಣಸಿಗುತ್ತಾರೆ. ಭಾರತೀಯ ಉದ್ಯಮ ರಂಗದ ಪಿತಾಮಹ ಜೆಮ್ ಶೆಡ್ ಜಿ ಟಾಟಾ, ಜೆ ಆರ್‌ಡಿ ಟಾಟಾ, ಉದ್ಯಮ ಲೋಕದ ಭೀಷ್ಮ ರತನ್ ಟಾಟಾ, ನಿರ್ಮಾಣ ಉದ್ಯಮಿ ಪೆಲ್ಲೋಂಜಿ ಮಿಸ್ತ್ರಿ, ಗೋದ್ರೇಜ್, ಸೀರಮ್ ಇನ್‌ಸ್ಟಿಟ್ಯೂಟ್‌ನ ಸ್ಥಾಪಕ ಸೈರಸ್ ಪೂನಾವಾಲಾ, ಕರೋನಾ ಸಂದರ್ಭದಲ್ಲಿ ಇಡೀ ದೇಶಕ್ಕೆ ಕೋವಿಶೀಲ್ಡ್ ಲಸಿಕೆ ಪೂರೈಸಿದ ಅಡರ್ ಪೂನಾವಾಲಾ, ಸೈರಸ್ ಮಿಸ್ತ್ರಿ, ದಿನ್ ಶಾ ಮಾನಕ್ ಜಿ, ನೆಸ್ವಾಡಿಯಾ, ನೆವಿಲ್ಲೆವಾಡಿಯಾ, ನುಸ್ಲಿವಾಡಿಯಾ ಮುಂತಾದವರಿದ್ದಾರೆ.

ಪಾರ್ಸಿ ಸಮುದಾಯವು ಭಾರತಕ್ಕೆ ಹಲವಾರು ವಿಶಿಷ್ಟ ಸೇನಾ ಪದಕಗಳನ್ನು ನೀಡಿದೆ. ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ರವರು 1971ರ ಯುದ್ಧದಲ್ಲಿ ಭಾರತದ ವಿಜಯದ ವಾಸ್ತುಶಿಲ್ಪಿ. ಇವರು ಫೀಲ್ಡ್ ಮಾರ್ಷಲ್ ಆಗಿ ನೇಮಕಗೊಂಡ ಭಾರತೀಯ ಸೇನೆಯ ಮೊದಲ ಅಧಿಕಾರಿ. ಅಡ್ಮಿರಲ್ ಜಾಲ್ ಕರ್ಸೆಟ್ಜಿರವರು ಭಾರತೀಯ ನೌಕಾಪಡೆಯ ಮುಖ್ಯಸ್ಥರಾಗಿ ನೇಮಕಗೊಂಡ ಮೊದಲ ಪಾರ್ಸಿಯಾಗಿದ್ದಾರೆ ಮತ್ತು ಏರ್ ಚೀಫ್ ಮಾರ್ಷಲ್ ಪಾಲಿ ಹೋಮಿ ಮೇಜರ್‌ರವರು 18ನೇ ವಾಯುಪಡೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಲೆಫ್ಟಿನೆಂಟ್ ಕರ್ನಲ್ ತಾರಾಪೋರ್‌ರವರು 1965 ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧ ಹೋರಾಡಿ ವೀರಮರಣವನ್ನಪ್ಪಿದರು ಮತ್ತು ಮರಣೋತ್ತರವಾಗಿ ಭಾರತದ ಅತ್ಯುನ್ನತ ಮಿಲಿಟರಿ ಪ್ರಶಸ್ತಿಯಾದ ಪರಮ ವೀರ ಚಕ್ರವನ್ನು ಇವರಿಗೆ ನೀಡಲಾಯಿತು.

ಕ್ರೀಡಾಕ್ಷೇತ್ರದಲ್ಲಿಯೂ ಸಹ ಈ ಸಮುದಾಯ ಗಮನಾರ್ಹ ಸಾಧನೆ ಮಾಡಿದೆ. ಕ್ರಿಕೆಟ್‌ನಲ್ಲಿ ನಾರಿ ಕಾಂಟ್ರಾಕ್ಟರ್, ರುಸಿ ಮೋದಿ, ಫರೋಕ್ ಇಂಜಿನಿಯರ್ ಮತ್ತು ಪಾಲಿ ಉಮ್ರಿಗಾರ್ ತಮ್ಮ ಅಸಾಧಾರಣ ಕೌಶಲ್ಯ ಮತ್ತು ನಾಯಕತ್ವಕ್ಕೆ ಹೆಸರುವಾಸಿಯಾಗಿದ್ದಾರೆ. ಸಂಗೀತದಲ್ಲಿ ರಾಕ್ ಸಂಗೀತಗಾರ ಫ್ರೆಡ್ಡಿ ಮರ್ಕ್ಯುರಿ, ಸಂಯೋಜಕ ಶಾಪೂರ್ಜಿ ಸೊರಾಬ್ಜಿ, ಜುಬಿನ್ ಮೆಹ್ತಾ ಮುಂತಾದವರು ಈ ಸಾಲಿನಲ್ಲಿದ್ದಾರೆ. ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಲೇಖಕರಾದ ರೋಹಿಂಟನ್ ಮಿಸ್ತ್ರಿ, ಫಿರ್ದೌಸ್ ಕಂಗಾ, ಬಾಪ್ಸಿಸಿದ್ವಾ ಅರ್ದಾಶಿರ್ ವಕೀಲ್ ಮತ್ತು ಪತ್ರಕರ್ತರಾದ ಅರ್ದಾಶಿರ್ ಕೋವಾಸ್ಜಿ, ರುಸ್ಸಿ ಕರಂಜಿಯಾ ಮತ್ತು ಬೆಹರಂ ಗುತ್ತಿಗೆದಾರರ ಕುರಿತು ದೇಶ ಇಂದಿಗೂ ಹೆಮ್ಮೆಪಡುತ್ತಿದೆ.

ಸಂವಿಧಾನ ತಜ್ಞರಾದ ಪಾಲಿ ಎಸ್. ನಾರಿಮನ್ ಮತ್ತು ನಾನಿ ಅರ್ದಾಶಿರ್ ಪಾಲ್ಕಿವಾಲಾ ಸೇರಿದ್ದಾರೆ. ಭಾರತದ ಮಾಜಿ ಅಟಾರ್ನಿ ಜನರಲ್ ಸೋಲಿ ಸೊರಾಬ್ಜಿ ಮತ್ತು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ರೋಹಿಂಟನ್ ಎಫ್ ನಾರಿಮನ್, ಭಾರತದ ಮೊದಲ ಮಹಿಳಾ ಫೋಟೋ ಜರ್ನಲಿಸ್ಟ್ ವ್ಯಾರವಲ್ಲ ಕೂಡ ಈ ಸಮುದಾಯದಿಂದ ಬಂದವರು. ಮುಂಬೈನಲ್ಲಿರುವ ಮಲಬಾರ್ ಹಿಲ್ ಹಲವಾರು ಪಾರ್ಸಿಗಳಿಗೆ ಪ್ರಮುಖ ನೆಲೆಯಾಗಿದೆ. ದೇಶಕ್ಕೆ ಪಾರ್ಸಿಗಳ ಕೊಡುಗೆಯನ್ನು ಗಮನಿಸಿ ಮುಂಬೈನಲ್ಲಿನ ಹಲವಾರು ಹೆಗ್ಗುರುತುಗಳಿಗೆ ನಾರಿಮನ್ ಪಾಯಿಂಟ್ ಸೇರಿದಂತೆ ಪಾರ್ಸಿಗಳ ಹೆಸರನ್ನು ಇಡಲಾಗಿದೆ.

ಹೀಗೆ ಒಂದು ಕಾಲದಲ್ಲಿ ಆಶ್ರಯಕ್ಕಾಗಿ ಪರ್ಷಿಯಾದಿಂದ ಭಾರತಕ್ಕೆ ಬಂದು ನೆಲೆಸಿದ ಪಾರ್ಸಿಗಳು ಅಂದು ವಡೋದರದ ರಾಜನಿಗೆ ಕೊಟ್ಟ ಮಾತಿನಂತೆ ಹಾಲಿನೊಳಗೆ ಸಕ್ಕರೆಯಂತೆ ಬೆರೆತು ಹೋಗಿ ಭಾರತದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿದ್ದು ಇವರ ಈ ಕೊಡುಗೆಗಳು ಅವಿಸ್ಮರಣೀಯವಾಗಿವೆ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬದಲಾವಣೆಯೇ ಕಾಣದ ಮೊದ್ದುಬಂಗಾರ

ನಾನು ನನ್ನ ಜೀವಮಾನದಲ್ಲಿ ಪತ್ರಿಕೆಯ ಮುಖೇಣ ಸದ್ಭಾವನೆಯುಳ್ಳ, ಕೇವಲ ತಿದ್ದುವ, ರೀತಿಯಲ್ಲಿ ನಿರ್ಭೀತಿಯಿಂದ ಬರೆದ ಸಂಪಾದಕರ ಪತ್ರವನ್ನು ನೂರೆಂಟು ವಿಶ್ವದಲ್ಲಿ ಮೊದಲ ಬಾರಿಗೆ ಮೇ ತಿಂಗಳ ಎರಡನೇ ವಾರದಲ್ಲಿ ಓದಿದ ನೆನಪು . ನಿನ್ನೆಯ (07/11/24) ರ ನೂರೆಂಟು ವಿಶ್ವದಲ್ಲಿ ಮತ್ತೊಮ್ಮೆ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಖಾತೆ ಸಚಿವರ ಕನ್ನಡ ಪಾಂಡಿತ್ಯದ ಬಗ್ಗೆ ಸಂಪಾದಕರ ಅಂಕಣ ಕನ್ನಡಾಭಿಮಾನಿಗಳಿಗೆ ಓದಿ ಹಣೆ ಹಣೆ ಚಚ್ಚಿಕೊಳ್ಳುವುದಲ್ಲ, ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸಿರಬಹುದು.

ಸರಕಾರ ಕನಿಷ್ಠ ಪಕ್ಷ ಕನ್ನಡವನ್ನು ತಪ್ಪಿಲ್ಲದೆ ಓದಲೂ ಬಾರದ ಹಾಗೂ ಅವಲಕ್ಷಣವಾಗಿ ಕ್ರಾಪು ತೆಗೆದುಕೊಂಡಿರುವ ಇಂತಹ ಸಚಿವರನ್ನು ಮುಂದುವರಿಸಿರುವುದು ಶೋಚನೀಯ. ಇನ್ನಾದರೂ ಕನ್ನಡ ವ್ಯಾಕರಣ ಪಾಠ ಮಾಡುವ ಮುಖ್ಯಮಂತ್ರಿಗಳು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡ ಬಗ್ಗೆ ಅಭಿಮಾನ ತೋರಿಸುವ ಕನ್ನಡದ ಹೋರಾಟಗಾರರು ಇದರ ಬಗ್ಗೆ ಚಳುವಳಿಯನ್ನು ನಡೆಸಿ ಮೊದ್ದು ನ ಖಾತೆ ಬದಲಾಯಿಸುವ ಪ್ರಯತ್ನ ಮಾಡುವರೆಂದು ಆಶಿಸೋಣವೇ?

- ಮಹೇಶ್ ಹೊಸಮನಿ

ಹೊಸ ಹಳವಂಡ!

ಇತ್ತೀಚೆಗೆ ಅಂತರ್ಜಾಲದ ಫೇಸ್ ಬುಕ್ ತೆರೆದಾಗ, ಹೊಸ ಹೊಸ ಹಳವಂಡಗಳು ಕಾಣುತ್ತಿವೆ. ಯಾವುದೋ ಸುಂದರ ಹುಡುಗಿಯ ಫೋಟೋ ಹಾಕಿ ಕೆಳಗೆ ಬರೆದಿರುತ್ತಾರೆ. ವರ ಬೇಕಾಗಿದೆ. ಅವಳ ಎತ್ತರ, ತೂಕ, ಬಣ್ಣ, ವಿದ್ಯಾಭ್ಯಾಸ, ಕುಟುಂಬ ಎಲ್ಲದರ ವಿವರ ಕೊಟ್ಟಿರುತ್ತಾರೆ. ವಾಸ್ತವದಲ್ಲಿ ಆ ಕನ್ಯೆ ಯಾರೋ? ಅಂತರ್ಜಾಲದಲ್ಲಿ ಕೈಗೆ ಸಿಕ್ಕ ಫೋಟೋವನ್ನು ಈ ರೀತಿ ಪ್ರಕಟಿಸಿ ತಮ್ಮ ವಿಕೃತಿಯ ತೆವಲನ್ನು ತೀರಿಸಿಕೊಳ್ಳುತ್ತಾರೆ! ಹೆಚ್ಚಾಗಿ ಆ ಕನ್ಯೆ ದೂರದ ಅನ್ಯ ರಾಜ್ಯದವಳಾಗಿರುತ್ತಾಳೆ ಅಥವಾ ಅವರಿಗೆ ಪ್ರೀತಿಸಿ ಕೈ ಕೊಟ್ಟ ಪ್ರಿಯತಮೆಯಾಗಿರುತ್ತಾಳೆ. ಇನ್ನೂ ಕೆಲವರಿರುತ್ತಾರೆ. ಇದೇ ರೀತಿ ಯಾವುದೋ ಚಂದದ ಹುಡುಗಿಯ ಫೋಟೋ ಹಾಕಿ ಕೆಳಗೆ ನಾನು ವಿಚ್ಛೇದಿತೆ . ನನಗೊಬ್ಬ ಬಾಳಸಂಗಾತಿ ಬೇಕಾಗಿದೆ. ಆಸಕ್ತರು ಫೋನಾಯಿಸಿ ಎಂದು ಬರೆದಿರುತ್ತಾರೆ. ಪುಂಡ ಪ್ರಭೃತಿಗಳು ತಮ್ಮ ಕಿಡಿಗೇಡಿತನದಿಂದ ಸದರಿ ತರುಣಿಗೆ ಅದೆಷ್ಟು ಅವಮಾನವಾಗಬಹುದೆಂದು ಯೋಚಿಸುವುದಿಲ್ಲ. ಕೆಲವೊಮ್ಮೆ ಅಲ್ಲಿ ಪ್ರದರ್ಶಿಸಿದ ಫೋಟೋದಲ್ಲಿನ ಯುವತಿಯರು ಅವಮಾನದ ಬೇಗುದಿಯಿಂದ ಆತ್ಮಹತ್ಯೆಗೆ ಎಳಸುವುದುಂಟು. ಕನ್ಯೆಯರೇ ಸಿಗದ ಪ್ರಸಕ್ತ ಸಂದರ್ಭದಲ್ಲಿ ಯಾವ ಕನ್ಯೆ, ಅದರಲ್ಲೂ ಸುಂದರ ಕನ್ಯೆ ಫೇಸ್ ಬುಕ್ ಮೂಲಕ ಕೋರುತ್ತಾರೆ? ಇಂತಹ ವಿಷಯಗಳು ಅಂತರ್ಜಾಲದಲ್ಲಿ ಕಂಡಾಗ ಪೊಲೀಸರು ದೂರಿಗೆ ಕಾಯದೇ ತನಿಖೆ ನಡೆಸಿ ಅಪರಾಧಿಗಳನ್ನು ಕಂಡುಹಿಡಿದು ಶಿಕ್ಷೆಗೊಳಪಡಿಸುವುದು ಒಳಿತು. ಎಲ್ಲದಕ್ಕೂ ಮೊದಲು ನಮ್ಮ ಮಹಿಳಾಮಣಿಗಳು ನಿಂತಿದ್ದು, ಕುಂತಿದ್ದು ಎಲ್ಲವನ್ನೂ ಕ್ಲಿಕ್ಕಿಸಿ ಇನ್‌ಸ್ಟಾಗ್ರಾಂ, ಫೇಸ್ ಬುಕ್‌ನಲ್ಲಿ ಅಪ್‌ಲೋಡ್ ಮಾಡುವ ಕಾಯಕವನ್ನು ಬಿಡಬೇಕು.

- ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಭಟ್ಟರ್ ಸ್ಕಾಚ್

- ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)
ಭಟ್ರೇ, ಹಳೇ ಗೆಳೆಯ ಹೊಸ ಶತ್ರು, ಹಳೇ ಗೆಳತಿ?
– **ಯಾವತ್ತೂ ಆಗೊಲ್ಲ ಸತಿ!**

- ರಾಘೋಜಿ, ಕೃಷ್ಣಮೂರ್ತಿಪುರಂ
ಭಟ್ರೇ, ಮಹೇಶ್ ಜೋಷಿ ಹಾಡು ಕೇಳುವುದೆಂದರೆ 'ಮಧುರ ಮಧುರವೀ ಮಂಜುಳ ಗಾನ..'. ಅದೇ ಮಧು ಬಂಗಾರಪ್ಪನ ಕನ್ನಡ ಭಾಷಣ?
– **ಕಾರ್ಕೋಟಕ ವಿಷ ಪಾನ!**

- ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)
ಭಟ್ರೇ, ಕುಮಾರಸ್ವಾಮಿಯವರು ಕಣ್ಣೀರು ಹಾಕುವುದು ಜನರ ಕಷ್ಟ ನೋಡಿ ಅಂತೆ?
– **ಜನರ ಕಷ್ಟ ನೋಡಿಯೂ ತಾವು ಸ್ಪಂದಿಸದಿರುವುದಕ್ಕೆ ಕಣ್ಣೀರು ಹಾಕಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು!**

- ವಿಶಾಲಾಕ್ಷಿ ಎಂ., ಬಾಗೇನಹಳ್ಳಿ
ಭಟ್ರೇ, ನಮ್ಮ ಮನೆಯವರಿಗೆ ಅರವತ್ತೈದಾದರೂ ನಾಚಿಕೆ ಇಲ್ಲ ಅಂತ ನನ್ನ ಗೆಳತೀ ಹೇಳ್ತಾಳಲ್ಲ?
– **ವಯಸ್ಕರ ಶಿಕ್ಷಣ ಈ ರೀತಿ ಅಡ್ಡ ಪರಿಣಾಮ ಬೀರುತ್ತೆ ಅನ್ನೋದು ಗೊತ್ತಿರಲಿಲ್ಲ!**

- ವಿಠೋಬ ಕಾಂಬಳೆ, ಬೆಳಗಾವಿ
ಭಟ್ರೇ, ನಿಮ್ಮನ್ನು 'ಸದಾ ಬರೆಯುವ ಕತ್ತೆ' ಎಂದು ಕರೆಯಬಹುದಾ?
– **ಸುಮ್ಮನಿರುವ ಪುನುಗನ ಬೆಕ್ಕು ಎಂದು ಹೇಳುವುದಕ್ಕಿಂತ ಇದೇ ವಾಸಿ, ವಿಠೋಬಾ !**

- ವೀರೇಶ ಕಮತಗಿ, ಅಡಗೂರು
ಭಟ್ರೇ, ಕನ್ನಡ ಸಿನಿಮಾ ನಿರ್ದೇಶಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಲ್ಲ?
– **ಹೂಂ.. ಕನ್ನಡ ಸಿನಿಮಾಗಳು ಶವಾಗಾರ ಸೇರುತ್ತಿದ್ದುದೇ ಒಳ್ಳೆಯದಿತ್ತು ಅಂತೀಯಾ?!**

- ಸುದೇಶ ಕೆ.ಚಂದ್ರ, ಬೆಂಗಳೂರು
ಭಟ್ರೇ, ಹುಚ್ಚ ವೆಂಕಟ್ ನೀಟಾಗಿ ಹೇರ್ ಕಟಿಂಗ್ ಮಾಡಿಸಿಕೊಂಡರೆ ಆತನನ್ನು ನೋಡಿ ಯಾರೂ ಹೆದರಲಿಕ್ಕಿಲ್ಲ ಅಲ್ವಾ?
– **ಸಲೂನಿನಲ್ಲಿ ಕತ್ತರಿಸಿದ ಕೂದಲುಗಳನ್ನು ನೋಡಿದ್ದರೆ ಕಿಟಾರನೆ ಕಿರುಚಿಕೊಳ್ತಾ ಇದ್ದೆ ಹೂಂ..!**

- ರವಿ ಕದಿರೇನಹಳ್ಳಿ, (ಇಮೇಲ್ ಮೂಲಕ)
ಭಟ್ರೇ, ಕುಮಾರಣ್ಣನಿಗೆ ಕಣ್ಣೀರು ವರವೋ, ಶಾಪವೋ?
– **ತಿಳ್ಕೋ, ರಾಜಕೀಯ ಅಸ್ತ್ರಕಣೋ !**

- ಸೂರಜ್ ಹೆಗಡೆ, ಶಿರಸಿ
ಭಟ್ರೇ, ಕುಮಾರಸ್ವಾಮಿ ರಾಜಕಾರಣಿ ಆಗದಿದ್ದರೆ ಏನಾಗ್ತಾ ಇದ್ದರು?
– **ಸಿದ್ದರಾಮಯ್ಯ, ಡಿಕೆಶಿ ಮಾತ್ರ ಆಗಬೇಕಾ ಅಂತ ಉಪವಾಸ ಸತ್ಯಾಗ್ರಹ ಮಾಡ್ತಾ ಇದ್ರು!**

- ರವಿ ಕಾಗಲ್, (ಇಮೇಲ್ ಮೂಲಕ)
ಭಟ್ರೇ, ನನ್ನ ಸ್ನೇಹಿತ ಮಂಜ ಯಾವಾಗ ಒರಿಜಿನಲ್ಲಾಗಿ ಕಾಣ್ತಾನೆ ಭಟ್ರೇ?
– **ಮುಂಜಾನೆ ಮಂಜಿನಲ್ಲಿ!**

ಕಲ್ಲೇಟಿಗೆ ಉದುರುವ ಮಾವಿನ ಕಾಯಿ

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ನಾನಾ ತೆರನ ರುಚಿ, ಗಾತ್ರ, ಬಣ್ಣ, ಸೊನೆ, ಘಮಲು ಹೊಂದಿರುವ ಮಾವಿನಮಿಡಿಗಳನ್ನು ನೋಡಬೇಕೆಂದರೆ ನಮ್ಮ ರಾಜ್ಯದ ಮಲೆನಾಡು ಮತ್ತು ಕರಾವಳಿಗೆ ಹೋಗಬೇಕು. ಕಲ್ಲುಪ್ಪು ಹಾಕಿ, ಹದವಾಗಿ ಚಿರುಟಿಸಿ, ಕ್ರಮಬದ್ಧವಾಗಿ ತಯಾರಿಸಿದ ಅಂತಹ ಮಾವಿನ ಮಿಡಿಯ ಉಪ್ಪಿನಕಾಯಿಯು, ಮೂರು ವರ್ಷವಾದರೂ ಕೆಡದೇ, ಗುಣಮಟ್ಟದಲ್ಲಿ ಮೂಲ ರುಚಿಯನ್ನೇ ಹೊಂದಿ, ಬಾಳಿಕೆ ಬರುತ್ತದೆ. ಒಳ್ಳೆಯ ಮಾವಿನ ಮಿಡಿ ಅಥವಾ ಜೀರಿಗೆ ಮಿಡಿ ಉಪ್ಪಿನ ಕಾಯಿಯು, ಮೂರು ವರ್ಷವಂತೂ ಭರಣಿಯಲ್ಲಿ ಕೆಡದೇ ಉಳಿಯಬಲ್ಲದು. ಮಲೆನಾಡಿನ ಮೂಲೆಯ ಗೃಹಿಣಿಯರು, ಶಿಸ್ತಿನಿಂದ, ಒಂದು ಹನಿಯೂ ನೀರು ತಗಲದಂತೆ ತಯಾರಿಸಿದ ಮಾವಿನ ಮಿಡಿ ಉಪ್ಪಿನ ಕಾಯಿಯು, ಮೂರೇನು ನಾಲ್ಕಾರು ವರ್ಷಗಳ ಕಾಲವೂ ಬಾಳಿಕೆ ಬರಬಲ್ಲದು ಎಂದು ಅನಿಸುತ್ತದೆ – ಹಳೆಯ ವೈನು ಅದೆಷ್ಟೋ ವರ್ಷ ರುಚಿಕರವಾಗಿರುತ್ತದಲ್ಲ, ಆ ರೀತಿ; ಮಾವಿನಮಿಡಿ ಉಪ್ಪಿನ ಕಾಯಿಯನ್ನು ಸಹ ಯಾರಾದರೂ ಇದೇ ರೀತಿ ಕಾಪಿಟ್ಟು, ಪರೀಕ್ಷಿಸಿ ನೋಡಬೇಕು.

ಮಾವಿನ ಮಿಡಿಗಳು ಉಪ್ಪಿನ ಕಾಯಿಯ ಜಾಡಿಯೊಳಗೆ ಭದ್ರವಾಗಿ ಸೇರುವ ಮುಂಚೆ, ನಾನಾ ರೀತಿಯ ಸಂಕಷ್ಟಗಳಿಗೆ ಒಳಗಾಗುವುದುಂಟು. ಅಂತಹ ಸಂಕಷ್ಟದ ಹಾದಿಯನ್ನು ದಾಟಿದ ನಂತರವಷ್ಟೇ, ಗೃಹಿಣಿಯರ ಕೈಗೆ ಸಿಕ್ಕು ಚಿರುಟಿಸಿಕೊಳ್ಳುವ ಭಾಗ್ಯ ಅವಕ್ಕೆ ದೊರಕೀತು! ಅಂಬರದಲ್ಲಿ ಜೋತಾಡುವ ಜೊಂಪೆ ಜೊಂಪೆ ಮಾವಿನ ಮಿಡಿಗಳಿಗೆ ಎದುರಾಗುವ ಒಂದು ಸಂಕಷ್ಟವೆಂದರೆ, ಮಕ್ಕಳ ಕೈಯ ಕಲ್ಲೇಟು! ಶಾಲೆಗೆ ಹೋಗುವಾಗ, ಗದ್ದೆ, ಹಾಡಿ, ಹಕ್ಕಲು, ಬ್ಯಾಣದುದ್ದಕ್ಕೂ ನಡೆದುಕೊಂಡೇ ಹೋಗುತ್ತಿದ್ದ ಮಕ್ಕಳಿಗೆ, ಕಾಟು ಮಾವಿನ ಮರಗಳಲ್ಲಿ ಮಾವಿನ ಮಿಡಿಗಳು ಪ್ರತ್ಯಕ್ಷವಾದಾಗ, ಹೆಚ್ಚಿನ ಕೆಲಸ, ಓವರ್ ಟೈಂ. ಯಾವ ಮರದ ಮಾವಿನ ಮಿಡಿ ಯಾವ ರುಚಿ ಎಂದು ಪರೀಕ್ಷಿಸುವುದೇ ಶಾಲಾ ಮಕ್ಕಳ ಒಂದು ಪ್ರಮುಖ ಹವ್ಯಾಸ! ಇವರ ಜತೆ, ಗಂಟಿ ಮೇಯಿಸುವ ಮಕ್ಕಳೂ ಈ ಕೆಲಸದಲ್ಲಿ ಹಿಂದೆ ಬೀಳುವುದಿಲ್ಲ ಎಂದರೂ ಸರಿಯೇ; ಆದರೆ, ಗುಂಪು ಗುಂಪಾಗಿ ಶಾಲೆಗೆ ನಡೆದುಕೊಂಡೇ ಹೋಗುವ ಗ್ರಾಮೀಣ ಮಕ್ಕಳಲ್ಲಿ ಇರುವ ಒಗ್ಗಟ್ಟು, ಸಂಘಬಲ, ಸ್ವಾತಂತ್ರ್ಯದಿಂದಾಗಿ, ಇವರ ಕಲ್ಲುಗಳಿಗೆ ಬಲಿಯಾಗುವ ಮಾವಿನಮಿಡಿಗಳ ಸಂಖ್ಯೆಯೇ ಅಧಿಕ.

ಶಾಲೆ ನಡೆದೇ ಹೋಗುವ (ಅಂದರೆ, ಶಾಲಾ ವ್ಯಾನ್, ಆಟೊ, ಸ್ಕೂಟರ್, ಬೈಕ್, ಕಾರು, ಶಾಲಾ ಬಸ್ಸು ಇತ್ಯಾದಿ ಬಳಸದೇ) ಮಕ್ಕಳ ಕಣ್ಣು ಬಹಳ ಚುರುಕು – ತಮ್ಮ ದಾರಿಯ ಇಕ್ಕೆಲಗಳ ನೂರಿನ್ನೂರು ಮೀಟರ್ ವ್ಯಾಪ್ತಿಯಲ್ಲಿ ಯಾವ ಮರದಲ್ಲಿ, ಯಾವಾಗ, ಎಷ್ಟು ಮಾವಿನ ಮಿಡಿಗಳಾಗುತ್ತವೆ ಎಂದು ಹುಡುಕುತ್ತಲೇ ಇರುತ್ತಾರೆ, ಅಂತಹ ಸುದ್ದಿ ಸಂಗ್ರಹಿಸುತ್ತಲೇ ಇರುತ್ತಾರೆ. ಉದಾಹರಣೆಗೆ, ನಮ್ಮ ಮನೆಯಿಂದ ಶಾಲೆಗೆ ಸುಮಾರು ಮೂರು ಕಿ.ಮೀ. ಕಾಲುಹಾದಿ; ಅದರಲ್ಲಿ ಎರಡು ಕಿ.ಮೀ. ಗಳಷ್ಟು ದೂರದ ದಾರಿಯು ಹಕ್ಕಲು, ಹಾಡಿ, ಕಾಡಂಚಿನಲ್ಲೇ ಸಾಗುತ್ತದೆ. ನಾನಾ ರೀತಿಯ ಮರ–ಗಿಡ–ಬಳ್ಳಿಗಳು, ಅವು ಬಿಡುವ ಹೂವು, ಕಾಯಿ, ದ್ವಾರೆ, ಕೋಡು, ಹೀಚು, ಎಲೆಗಳು ಸದಾ ಕಣ್ಣಿಗೆ ಬೀಳುವಂತಹ ವಾತಾವರಣ. ಇವೆಲ್ಲವನ್ನೂ ಹುಡುಕಿ ತಿನ್ನುವ ಪರಿಪಾಠ ನಮಗಿತ್ತು – ಮಾವಿನ ಮಿಡಿ, ಕಾಡು ಹಣ್ಣುಗಳಂತೂ ಸರಿಯೇ; ಕಾಡು ಹೂವು, ಎಲೆಗಳನ್ನೂ ತಿನ್ನಬಹುದೇ ಎಂದು ನೀವು ಕೇಳಬಹುದು; ಕೆಲವು ಕಾಡುಗಿಡಗಳ ಎಲೆಗಳನ್ನು, ಹೂವುಗಳನ್ನು ಆರಿಸಿ ತಿನ್ನಲು ಸಾಧ್ಯ! ಗರ್ಚನ ಕಾಯಿ (ಕವಳೆ ಕಾಯಿ) ಹುಳಿ ರುಚಿ, ಹಣ್ಣು ಕಪ್ಪು ದ್ರಾಕ್ಷಿಯ ರೀತಿ ರುಚಿ; ಅದರ ಬಿಳಿ ಹೂವುಗಳು ಸಹ ತುಸು ಹುಳಿ ಹುಳಿಯಾಗಿ, ಮಕ್ಕಳ ಬಾಯಿಗೆ ರುಚಿಕರವಾಗಿವೆ! ಆ ಹೂವುಗಳು ಮಲ್ಲಿಗೆ ಹೂವನ್ನು ಹೋಲುವುದರಿಂದಾಗಿ, ನಾವೆಲ್ಲಾ ರುಚಿಯಾದ ಮಲ್ಲಿಗೆಯನ್ನೇ ತಿನ್ನುತ್ತಿದ್ದೇವೆ ಎಂದು ಆನಂದಿಸುತ್ತಿದ್ದೆವು.

ಕಾಡಿನ ನಡುವೆ ಸಾಗುವ ಇಂತಹ ದಾರಿಯಲ್ಲಿರುವ ನಾನಾ ರೀತಿಯ ಸಸ್ಯ ಸಿರಿವಂತಿಕೆಯ ನಡುವೆ, ಮಧ್ಯಮ ಗಾತ್ರದ ಕಾಟುಮಾವಿನ ಮರಗಳಲ್ಲಿ ಯಾವಾಗ ಹೂವಾಯಿತು, ಯಾವಾಗ ಮಿಡಿಯಾಯಿತು, ಯಾವಾಗ ಆ ಮಿಡಿಗಳು ತಿನ್ನಲು ರುಚಿಕರವಾದ ಹಂತವನ್ನು ತಲುಪುತ್ತವೆ ಎಂದು, ಶಾಲಾಮಕ್ಕಳು ಗಮನಿಸುತ್ತಲೇ ಇರುತ್ತಾರೆ. ಒಂದು ದಿನ, ಮಾತನಾಡಿಕೊಂಡು, ಒಂದಿಬ್ಬರು ಬೆಳಗ್ಗೆ ಮನೆಯಿಂದ ಹೊರಡುವಾಗಲೇ, ಸ್ವಲ್ಪ ಉಪ್ಪನ್ನು ಕಾಗದದಲ್ಲಿ ಕಟ್ಟಿ ತರುತ್ತಾರೆ. ಆದಿನ ಮಧ್ಯಾಹ್ನ ಊಟಕ್ಕೆ ಬಿಟ್ಟಾಗಲೋ, ಸಂಜೆಯೋ ಅಂತಹ ಮರದ ಮಾವಿನ ಮಿಡಿಗಳನ್ನು ಸ್ವಾಹಾ ಮಾಡುವ ಯೋಜನೆ ಸಿದ್ಧ.

ಅಂಬರದಲ್ಲಿ ತೂಗಾಡುತ್ತಾ, ನೀಲಿ ಬಾನಿನ ಹಿನ್ನೆಲೆಯಲ್ಲಿ ಅದ್ಭುತವಾದ ಸೌಂದರ್ಯದಿಂದ ಕಂಗೊಳಿಸುವ ಮಾವಿನ ಮಿಡಿಗಳು, ಆ ಎತ್ತರದಿಂದ, ಕೆಳಗೆ ನಿಂತಿರುವ ಮಕ್ಕಳ ಕೈಗೆ ಬರುವುದಾದರೂ ಹೇಗೆ? ಅದಕ್ಕಿರುವ ಹಲವು ಉಪಾಯಗಳಲ್ಲಿಂದೆಂದೆ, ಕಲ್ಲೇಟು! ಜೊಂಪೆ ಜೊಂಪೆ ತೂಗುವ ಮಾವಿನ ಮಿಡಿಗಳ ಗೊಂಚಲಿಗೆ ಗುರಿಯಿಟ್ಟು ಕಲ್ಲೆಸದರೆ, ಒಂದೆರಡಾದರೂ ಮಿಡಿ ಉದುರುತ್ತವೆ. ಈ ರೀತಿ ಆರೆಂಟು ಬಾರಿ ಕಲ್ಲು ಹೊಡೆದಾಗ, ಹತ್ತೈವತ್ತು ಮಿಡಿ ಉದುರಿಯಾವು; ಮಕ್ಕಳ ಬಾಯಿರುಚಿಗೆ ಅಷ್ಟು ಸಾಕು. ಒಮ್ಮೊಮ್ಮೆ ಒಬ್ಬೊಬ್ಬರೂ ಆರೇಳು ಮಿಡಿಗಳನ್ನು ಉಪ್ಪು ಬೆರೆಸಿ ತಿನ್ನುವುದುಂಟು; ಕೊನೆ ಕೊನೆಗೆ, ಮಾವಿನ ಮಿಡಿಯ ಹುಳಿಯಿಂದಾಗಿ, ಹಲ್ಲುಗಳು ಕಟ ಕಟ ಎನ್ನುವ ಹಂತಕ್ಕೆ ಬರುತ್ತವೆ; ಆದರೂ ಇನ್ನೊಂದು ಮಿಡಿ ತಿಂದಾಗಲೇ ತೃಪ್ತಿ!

ಇನ್ನೂ ಜಾಸ್ತಿ ಸಂಖ್ಯೆಯ ಮಾವಿನ ಮಿಡಿಗಳನ್ನು ಉದುರಿಸಲು, ಶಾಲಾ ಮಕ್ಕಳ ಕೈಗೆ ಸಿಗುವ ಅಸ್ತ್ರವೆಂದರೆ 'ಬಡ್ತಿಗೆ' ಅಥವಾ ಉದ್ದನೆಯ ಕೋಲು. ಅದನ್ನು ರಭಸದಿಂದ ಎಸೆದಾಗ ಒಂದೇ ಏಟಿಗೆ ಹತ್ತಾರು ಮಿಡಿಗಳು ಉದುರುತ್ತವೆ. ಈ ರೀತಿ 'ಹೆಗ್ಗ' ಪಡೆಯಲು, ಕೆಲವು ಸನ್ನಿವೇಶಗಳ ಕೂಟ ಕೂಡಿ ಬರಬೇಕು – ಒಳ್ಳೆಯ ಬಡ್ತಿಗೆ ಬೇಕು; ಅದನ್ನು ಬಲವಾಗಿ ಮರದೆತ್ತರಕ್ಕೆ ಎಸೆಯಲು ಶಕ್ತಿ ಇರುವಂತಹ ಹುಡುಗರು ಜತೆಯಲ್ಲಿರಬೇಕು, ಹತ್ತಾರು ಮಾವಿನ ಮಿಡಿಯ ಗೊಂಚಲುಗಳು ಆ ಬಡ್ತಿಗೆಯ ವ್ಯಾಪ್ತಿಗೆ ಸಿಗುವಂತಿರಬೇಕು – ಹೀಗೆ. ದಟ್ಟವಾಗಿ ಎಲೆಗಳನ್ನು ಬಿಟ್ಟುಕೊಂಡ ಮರದ ರೆಂಬೆಗಳ ನಡುವೆ ಇರುವ ಗೊಂಚಲುಗಳಿಂದ ಮಾವಿನ ಮಿಡಿ ಉದುರಿಸಲು ಬಡ್ತಿಗೆಯಿಂದಾಗದು, ಎಲೆಗಳ ಬೇಲಿಯನ್ನು ತೂರಿ ಬಡ್ತಿಗೆ ಸಾಗಲಾರದು.

ಆಗ ಒದಗಿಬರುವ ಅಸ್ತ್ರವೇ ಕಲ್ಲೇಟು! ಮಾವಿನ ಮಿಡಿಗಳಿಗೆ ಕಲ್ಲು ಹೊಡೆದು, ಕಲ್ಲು ಹೊಡೆದು, ನಮ್ಮಲ್ಲಿ ಕೆಲವರು 'ಗುರಿ ಪ್ರವೀಣ'ರಾಗಿದ್ದೆವು. ಮಾವಿನ ಮಿಡಿ ಶ್ರಾಯದಲ್ಲಿ ಅಂತಹವರಿಗೆ ಬಹು ಬೇಡಿಕೆ! ಒಂದೇ ಗುರಿಯಲ್ಲಿ ನಾಲ್ಕಾರು ಮಾವಿನ ಮಿಡಿ ಉದುರಿಸಿದರಂತೂ, ಹೆಚ್ಚು ಶ್ರಮವಿಲ್ಲದೇ ರುಚಿಕರ ಮಿಡಿಗಳನ್ನು ತಿನ್ನುವ ಅವಕಾಶ; ಕೆಲವು ಕಾಟು ಮಾವಿನ ಮರಗಳು ಬಿಡುವ ಮಿಡಿಗಳು ಹೆಚ್ಚು ರುಚಿ ಹೊಂದಿದ್ದು, ಕಡಿಮೆ ಹುಳಿ ಇದ್ದು, ತುಸು ಸಿಹಿ ಸಿಹಿ ಎನಿಸುತ್ತವೆ. ಆದರೆ, ದಿಂಡಿನ ಕಾಯಿಯಂತಹ ಮಾವಿನ ಪ್ರಭೇದದ ಮಿಡಿಗಳ ಹುಳಿಯನ್ನು ತಡೆಯುವುದು ಕಷ್ಟ; ಒಂದೆರಡು ಮಿಡಿ ತಿನ್ನುವುದರಲ್ಲೇ ಹಲ್ಲುಗಳು 'ಕಟ ಕಟ' ಎನ್ನತೊಡಗುತ್ತವೆ.

ಮಾವಿನ ಮರ ಪತ್ತೆ ಹಚ್ಚಿ, ಮಿಡಿಗಳನ್ನು ಸಂಗ್ರಹಿಸಿ ತಿನ್ನುವಂತಹ ಕೆಲಸಗಳು ಬೇಗನೆ ಆಗಬೇಕಾದ ಸಾಹಸಕಾರ್ಯಗಳು– ಏಕೆಂದರೆ, ಅದೇ ಮಾವಿನ ಮರದ ಮಿಡಿಗಳನ್ನು ಕೊಯ್ದು, ಉಪ್ಪಿನ ಕಾಯಿ ಮಾಡಬೇಕು ಎಂದು ಯೋಜನೆ ಹಾಕಿಕೊಂಡವರ ಮನೆಗಳು, ಅದೇ ಸರಹದ್ದಿನಲ್ಲಿರುವ ಸಾಧ್ಯತೆ ಇರುತ್ತದೆ. ಅವರಿಗೆ ಗೊತ್ತಾಗದಂತೆ, ಹೆಚ್ಚು ಸದ್ದು ಮಾಡದೇ, ಕಲ್ಲು ಹೊಡೆದು ಮಿಡಿಗಳನ್ನು ಅಂಬರದಿಂದ ಬೀಳಿಸುವುದೂ ಒಂದು ಕಲೆ!

ಮಧ್ಯಮ ಗಾತ್ರದ ಮರಗಳಲ್ಲಿರುವ ಮಾವಿನ ಮಿಡಿಗಳನ್ನು ಪಡೆಯಲು ಒದಗಿ ಬರುವ ಇನ್ನೊಂದು ವಿಧಾನವೆಂದರೆ, ಮರ ಏರುವುದು! ನಮ್ಮ ಜತೆಯಲ್ಲೇ ಕೆಲವು 'ಡುಂಕಿ' ಪ್ರವೀಣರಿದ್ದರು; ಆಗೆಲ್ಲಾ ಪ್ರಾಥಮಿಕ ಶಾಲಾ ಹಂತದಲ್ಲೂ ನಪಾಸು ಮಾಡುವ ಪರಿಪಾಠವಿತ್ತು – ಮರ ಏರುವ ಕೌಶಲ ಹೊಂದಿದ್ದ, ಎತ್ತರವಾಗಿದ್ದ ಅಂತಹ ಕೆಲವು ಹುಡುಗರು, ಮರ ಹತ್ತಿ ಮಾವಿನ ಮಿಡಿ ಕೊಯ್ದು, ಕೆಳಗೆ ಎಸೆದು ಎಲ್ಲರಿಗೂ ಕೊಡುತ್ತಿದ್ದುದುಂಟು. ಆದರೆ, ಶಾಲಾ ಮಕ್ಕಳ ಬಾಯಿರುಚಿಗಾಗಿ ತಿನ್ನುವಷ್ಟು ಮಾವಿನ ಮಿಡಿಗಳನ್ನು ಪಡೆಯಲು, ಕಲ್ಲೇಟು ವಿಧಾನವೇ ಅತಿ ಪ್ರಶಸ್ತ. ಏಕೆಂದರೆ, ಅಕಸ್ಮಾತ್ ಆ ಸರಹದ್ದಿನ ಮನೆಯವರು ಈ ಸಾಹಸವನ್ನು ಗಮನಿಸಿ 'ಯಾರೋ ಅದು! ಶಾಲೆ ಮಕ್ಕಳಾ? ಮಾವಿನ ಮಿಡಿ ಕೊಯ್ಯಬೇಡಿ, ನಮಗೆ ಮಿಡಿ ಹಾಕಲು ಬೇಕು' ಎಂದು ಗದರಿಸಿದರೆ, ತಕ್ಷಣ ಓಟ ಹೊಡೆಯಲು ಸಾಧ್ಯ.

ಮರ ಹತ್ತಿ ಕೊಯ್ಯಲು ಹೊರಟಾಗ, ಇಂತಹ ಸಂದರ್ಭ ಎದುರಾದರೆ, ಮರ ಹತ್ತಿದ ಸಹಪಾಠಿ, ಮರದಿಂದ ಇಳಿಯುವ ತನಕ ಕಾಯಲೇಬೇಕಾದ ಅನಿವಾರ್ಯತೆ; ಗದರಿದವರ ಕೈಗೆ ಸಿಕ್ಕಿಬಿದ್ದು ಪೆಚ್ಚುಮೋರೆ ಹಾಕುವ ಮುಜುಗರದ ಸನ್ನಿವೇಶ. ಅದೇನೇ ಇದ್ದರೂ, ನಮ್ಮ ಊರಿನ ಜನರು ಸಜ್ಜನರು; ಬಾಯಿರುಚಿಗಾಗಿ ನಾಲ್ಕಾರು ಮಾವಿನ ಮಿಡಿ ಪಡೆಯುವ ಶಾಲಾ ಮಕ್ಕಳಿಗೆ ಹೆಚ್ಚು ಮುಜುಗರ ತರಲಾರರು, ಶಿಕ್ಷೆಯನ್ನೂ ಕೊಡಲಾರರು. 'ಬೇಕಿದ್ದರೆ, ಇನ್ನೂ ನಾಲ್ಕು ಮಿಡಿಗಳನ್ನು ಕೊಯ್ದುಕೊಳ್ಳಿ' ಎಂದು ಕೊಕ್ಕೆಯನ್ನೂ (ದೋಟಿ) ಕೊಡುವಂತಹ ಸಜ್ಜನರೂ ಇದ್ದರು. ಆದರೆ, ಉಪ್ಪಿನಕಾಯಿ ಮಾಡಲು ಸೂಕ್ತವಾಗಿ ಬೆಳವಣಿಗೆ ಹೊಂದಿದ, ಹೆಚ್ಚು ರುಚಿ, ಸುವಾಸನೆ ಹೊಂದಿದ, ಹೆಚ್ಚು ಸೊನೆ ಇರುವ ಮಾವಿನ ಮಿಡಿಗಳನ್ನು ಜತನದಿಂದ ಕೆಲವರು ಕಾಯುವುದಂತೂ ನಿಜ. ಅಂತಹ ಮಿಡಿಯಿಂದ ಉಪ್ಪಿನಕಾಯಿ ಮಾಡಿ, ಜಾಡಿಯಲ್ಲಿಟ್ಟು ಕಾಪಾಡಿದರೆ, ಮಳೆಗಾಲದಲ್ಲಿ ಕಾಡುವ ನೆಗಡಿ ಜ್ವರವನ್ನೂ ವಾಸಿಮಾಡಿಕೊಳ್ಳಬಹುದು ಎಂಬ ಅನುಭವ ಅವರಿಗಿತ್ತು. ಅಂತಹ ಮಿಡಿ ನೀಡುವ ಕಾಟುಮಾವಿನ ಮರಗಳಿಗೆ ಕಲ್ಲು ಹೊಡೆಯುವ ತುಂಟಾಟವನ್ನು ತಡೆಯಲು ಪ್ರಯತ್ನಿಸುತ್ತಿದ್ದರು.

ಮಾವಿನ ಕಾಯಿಗೆ ಕಲ್ಲೇಟು ಹೊಡೆಯುವ ವಿಚಾರ ಬಂದಾಗ, ಹೈಸ್ಕೂಲಿನ ದಿನಗಳಲ್ಲಿ ನಾವೆಲ್ಲಾ ಮಾವಿನ ಮಿಡಿ ತಿಂದ ಪ್ರಸಂಗ ನೆನಪಾಗುತ್ತದೆ. ನಮ್ಮ ಹೈಸ್ಕೂಲಿನ ಆಟದ ಮೈದಾನದ ಉದ್ದಕ್ಕೂ, ಸಾಲಾಗಿ ಮಾವಿನ ಮರಗಳನ್ನು ಬೆಳೆಸಿದ್ದರು. ಅವುಗಳ ಮಿಡಿಗಳನ್ನು ಕೀಳಲು ಹೊರಟರೆ ಅಥವಾ ಕಲ್ಲು ಹೊಡೆಯುವುದಾದರೆ, ಅದು ನೇರವಾಗಿ ಹೆಡ್‌ಮಾಸ್ಟರ್ ಅವರ ಕೊಠಡಿಯ ಕಣ್ಣಳತೆಯಲ್ಲೇ ಆಗಬೇಕು – ಆ ರೀತಿ ಇತ್ತು, ಆ ಮರಗಳ ಸಾಲು. ಇದಕ್ಕೆ ಮಕ್ಕಳು ಕಂಡುಕೊಂಡ ಒಂದು ಉಪಾಯವೆಂದರೆ, ಒಂದು ತುದಿಯಲ್ಲಿದ್ದ ಹೊಸ ಲ್ಯಾಬೊರೇಟರಿಯ ಮರೆಯಲ್ಲಿ ನಿಂತು, ಮಾವಿನ ಮರಗಳಿಗೆ ಕಲ್ಲು ಹೊಡೆಯುವುದು! ಅಲ್ಲಿಂದ ಅವು ತುಸು ಹತ್ತಿರದಲ್ಲಿದ್ದವು. ಒಂದಿಬ್ಬರು ಕಲ್ಲು ಹೊಡೆದ ನಂತರ, ಇತರರು ನಿಧಾನವಾಗಿ ಆ ಮರಗಳ ಅಡಿಗೆ ಆಡುತ್ತಾ ಹೋದಂತೆ ಮಾಡಿ, ಮಾವಿನ ಮಿಡಿಗಳನ್ನು ಹೆಕ್ಕಿ ತರುವುದು! ಒಂದು ಮಧ್ಯಾಹ್ನ ಊಟಕ್ಕೆ ಬಿಟ್ಟಾಗ, ಈ ರೀತಿ ಮಾವಿನ ಕಾಯಿಗಳಿಗೆ ಕಲ್ಲು ಹೊಡೆಯುತ್ತಿದ್ದೆವು; ಸದ್ದು ಕೇಳಿಯೇ ಇರಬೇಕು, ಆಗಿನ ಹೆಡ್‌ಮಾಸ್ಟರ್ ಕಂ ಪ್ರಿನ್ಸಿಪಾಲರಾದ ಪಿ.ಎಸ್.ಕಾರಂತರು, ನಿಧಾನವಾಗಿ ನಾವಿದ್ದಲ್ಲಿಗೆ ಬಂದು, ಗಂಭೀರವದನದಿಂದ ನಮ್ಮ ಕಿತಾಪತಿಯನ್ನು ನೋಡಿದರು.

ನಾವೆಲ್ಲಾ ಬಹು ದೂರದ ಹಳ್ಳಿ ಮನೆಗಳಿಂದ ಬರುವ ಹುಡುಗರು, ಕೈಯಲ್ಲಿ ಮಾವಿನ ಕಾಯಿಯನ್ನು ಹಿಡಿದು, ತಿನ್ನುತ್ತಿದ್ದುದನ್ನು ಗಮನಿಸಿದರು – ಅದೇನನ್ನಿಸಿತೋ, ಏನೂ ಹೇಳದೇ, ತಮ್ಮ ಕೊಠಡಿಗೆ ವಾಪಸಾದರು. ಪಾಪ, ಮಕ್ಕಳು ತಿಂದರೆ ತಿನ್ನಲಿ ಎಂಬ ಮಾತೃ ಹೃದಯದಿಂದಲೇ ಇರಬಹುದು. ನಮ್ಮಲ್ಲಿ ಹೆಚ್ಚಿನ ಹಳ್ಳಿ ಹುಡುಗರು ಬೆಳಗ್ಗೆ ಸ್ವಲ್ಪ ಅನ್ನ ತಿಂದು ಬರುವವರು; ಕೆಲವರು ಸಂಜೆಯ ತನಕವೂ ಉಪವಾಸವಿದ್ದು, ಮನೆಗೆ ವಾಪಸಾದ ನಂತರ ಊಟ ಮಾಡುತ್ತಿದ್ದವರು. ಪ್ರತಿದಿನ ಮಧ್ಯಾಹ್ನದ ಬುತ್ತಿಯೂಟವಾಗಿ, ಒಂದು ಸಣ್ಣ ಉಗ್ಗದ ಪಾತ್ರೆಯಲ್ಲಿ ಎರಡು ಮುಷ್ಟಿ ಬೆಳ್ತಿಗೆ ಅಕ್ಕಿ ಗಂಜಿ ಮತ್ತು ಸ್ವಲ್ಪ ಮೊಸರು, ಉಪ್ಪಿನಕಾಯಿ ತಿನ್ನುತ್ತಿದ್ದ ನನ್ನಂತಹವರಿಗೆ, ಈ ರೀತಿ ಕಲ್ಲೇಟಿನಿಂದ ಉದುರಿದ ಮಾವಿನ ಮಿಡಿಗಳನ್ನು ತಿಂದಾಗ, ಒಳ್ಳೆಯ ಕಬ್ಬಿಣದ ಅಂಶ ದೇಹಕ್ಕೆ ಸೇರಿರಲೇಬೇಕು; ರುಚಿಕರ ಮಿಡಿಯ ಸೇವನೆಯಿಂದ ಅತ್ತ ಹೊಟ್ಟೆಯೂ ತುಸು ತುಂಬುತ್ತಿತ್ತು. ಮಾವಿನ ಮಿಡಿಗಳ ಹುಳಿ ರುಚಿಯು, ಕಬ್ಬಿಣದ ಅಂಶವನ್ನು ದೇಹಕ್ಕೆ ಒದಗಿಸಿಕೊಡುತ್ತದೆ – ಇದನ್ನು ಗಮನಿಸಿಯೇ, ಆ ಮಧ್ಯಾಹ್ನ ಪಿ.ಎಸ್.ಕಾರಂತರು, ನಮ್ಮನ್ನು ಗದರದೇ ವಾಪಸಾಗಿರಬೇಕು!

ದಳಪತಿ ವಿಜಯ್ ದಡ ಸೇರಬಹುದೇ?



ರಾಜಕೀಯ ರಂಗ
ರಮಾನಂದ ಶರ್ಮಾ
vveditoped@gmail.com

ತಮಿಳು ಸಿನಿಮಾದ ದಳಪತಿ ವಿಜಯ್ (ವಿ.ಜೋಸೆಫ್ ವಿಜಯ್)ಅಧಿಕೃತವಾಗಿ ರಾಜಕೀಯಕ್ಕೆ ಎಂಟ್ರಿ ಕೊಟ್ಟಿದ್ದು, ವರ್ಷಗಳ ಕಾಯುವಿಕೆ ಮತ್ತು ಕುತೂಹಕ್ಕೆ ಅಂತಿಮ ತೆರೆ ಬಿದ್ದಿದೆ. ಇತ್ತೀಚೆಗೆ ರಾಜಕೀಯಕ್ಕೆ ತಮ್ಮ ಪ್ರವೇಶವನ್ನು ಭರ್ಜರಿಯಾಗಿ ಮಾಡಿದ್ದು ದೇಶಾದ್ಯಂತ, ಮುಖ್ಯವಾಗಿ ತಮಿಳುನಾಡಿನಾದ್ಯಂತ ರಾಜಕೀಯ ವೀಕ್ಷಕರು, ತಮಿಳುನಾಡಿನ ಜನತೆ ಭಾರೀ ಕುತೂಹಲದಿಂದ ಮುಂದಿನ ರಾಜಕೀಯ ಬೆಳವಣಿಗೆಯನ್ನು, ತಿರುವನ್ನು ಮತ್ತು ಕ್ಲೈಮಾಕ್ಸ್‌ನ್ನು ಎದುರು ನೋಡುತ್ತಿದ್ದಾರೆ. ಸಿ.ಎನ್. ಅಣ್ಣಾದೊರೈ, ಕೆ. ಕರುಣಾನಿಧಿ, ಎಮ್.ಜಿ.ರಾಮಚಂದ್ರನ್, ಜಯಲಲಿತಾ, ವಿಜಯ ಕಾಂತ್, ಶಿವಾಜಿ ಗಣೇಶನ್, ಕಮಲಹಾಸನ್ ನಂತರ ವಿಜಯ್ ಸಿನಿಮಾ ರಂಗದಿಂದ ರಾಜಕೀಯಕ್ಕೆ ಧುಮುಕುತ್ತಿರುವ ತೀರಾ ಇತ್ತೀಚಿನ ಸಿನಿಮಾತಾರೆ. ಸಿನಿಮಾ ರಂಗಕ್ಕೂ ರಾಜಕೀಯಕ್ಕೂ ತಮಿಳುನಾಡಿನಲ್ಲಿ ಅವಿನಾಭಾವ ಸಂಬಂಧ ಇದೆ ಎನ್ನುವುದು ಇನ್ನೊಮ್ಮೆ ದೃಢಪಟ್ಟಿದೆ ಮತ್ತು ಆ ಪರಂಪರೆ ಮುಂದುವರೆಯುತ್ತಲೇ ಇದೆ ಎನ್ನುವುದು ಇನ್ನೊಂದು ವಿಶೇಷ.

ಒಂದು ಹೊಸ ರಾಜಕೀಯ ಪಕ್ಷವನ್ನು ಹುಟ್ಟುಹಾಕಿದಾಗ ಭಾರೀ ಜನಸಂದಣಿ ಸೇರುವುದು ತೀರಾ ಸಾಮಾನ್ಯ. ಭಾರತದ ರಾಜಕೀಯ ಇತಿಹಾಸದ ಪುಟಗಳನ್ನು ತಿರುವಿದರೆ ನೂರಾರು ಉದಾಹರಣೆಗಳು ಕಾಣಸಿಗುತ್ತವೆ. ಅರಂಭೋತ್ಸವದ ಸಂಭ್ರಮ, ಸೇರಿದ ಜನಸಂದಣಿ, ಉತ್ಸಾಹ, ಉದ್ವೇಗ, ಧುರೀಣರು ಮಾಡುವ ಕ್ರಾಂತಿಕಾರಿ, ಪ್ರಚೋದನಕಾರಿ ಭಾಷಣಗಳು, ಅವುಗಳನ್ನು ಕೇಳಿ ಮಾರ್ದನಿಸುವ ಕರಡತಾನ ನೋಡಿದಾಗ ಮತ್ತು ಕೇಳಿದಾಗ, ಮುಂದಿನ ಚುನಾವಣೆಯಲ್ಲಿ ಜಯ ಇವರಿಗೇ ಕಟ್ಟಿಟ್ಟ ಬುತ್ತಿ ಎನ್ನುವ ಭರವಸೆ ಮೂಡುತ್ತದೆ. ಅದರೆ, ಕೆ. ಕರುಣಾನಿಧಿ (ಡಿಎಂಕೆ), ಚಂದ್ರಶೇಖರ (ಜನತಾ ಪಕ್ಷ) ಎನ್.ಟಿ.ಆರ್ (ತೆಲುಗು ದೇಶಂ), ವಿ.ಪಿ ಸಿಂಗ್(ಜನತಾದಳ) ಬಿಜು ಪಾಟ್ನಾಯಕ್ (ಬಿಜು ಜನತಾ ದಳ), ಮಮತಾ ಬ್ಯಾನರ್ಜಿ, (ತೃಣಮೂಲ ಕಾಂಗ್ರೆಸ) ಕೆ.. ಚಂದ್ರಶೇಖರ ರಾವ್ (ತೆಲಂಗಾಣ) ರಾಷ್ಟ್ರ ಸಮಿತಿ, ಜಗನ್ ಮೋಹನ ರೆಡ್ಡಿ (ವೈ.ಎಸ್. ಅರ್.ಕಾಂಗ್ರೆಸ್) ಹೊರತಾಗಿ ಬೇರೆ ಯಾರಿಗೂ ಪ್ರಥಮ ಪ್ರಯತ್ನದಲ್ಲಿ ಗದ್ದುಗೆಗೆ ಏರಿಸುವಷ್ಟು ಜಯಲಕ್ಷ್ಮೀ ಒಲಿಯಲಿಲ್ಲ ಎನ್ನುವುದೂ ಸತ್ಯ. ತಮಿಳುನಾಡಿನಲ್ಲಿ ರಾಜಕೀಯ ಮತ್ತು ಸಿನಿಮಾ ರಂಗ ಒಂದೇ ಹಳಿಯ ಮೇಲೆ ಹರಿಯುತ್ತಿದ್ದು, ಗದ್ದುಗೆ ಏರುವ ವಿಜಯ್ ಪ್ರಯತ್ನ ಪೂರ್ಣ ಫಲ ಕೊಡದಿದ್ದರೂ ಗದ್ದುಗೆ ಸಮೀಪ ಬರಬಹುದು ಎನ್ನುವ ರಾಜಕೀಯ ಲೆಕ್ಕಾಚಾರ ಕೇಳುತ್ತಿದೆ. ತಲೈವಾ ರಜನಿಕಾಂತ ಇದೇ ಲೆಕ್ಕಾಚಾರದಲ್ಲಿ ಒಂದು ಹೆಜ್ಜೆ ಮುಂದಿಟ್ಟರೂ, ತಮ್ಮ ವಯಸ್ಸು, ಆರೋಗ್ಯ ಮತ್ತು ತಮ್ಮಧಾರ್ಮಿಕ ಭಾವನೆಗಳು ದ್ರಾವಿಡ ಚಿಂತನೆಯಯೊಂದಿಗೆ ಸರಿಹೊಂದದು ಎನ್ನುವ ದೂರದೃಷ್ಟಿಯಲ್ಲಿ ಅವರು ಮುಂದಿನ ಹೆಜ್ಜೆ ಇಡದೆ ಎಚ್ಚರಿಕೆಯ ಆಟ ಅಡಿದರು. ಅದರೆ, ವಿಜಯ್ ತಮಿಳುನಾಡಿನ ರಾಜಕಾರಣದಲ್ಲಿ ಮನೆ ಮಾತಾಗಿರುವ ಸಾಮಾಜಿಕ ನ್ಯಾಯ, ದ್ರಾವಿಡ ಸಂಸ್ಕೃತಿ, ತಮಿಳು ಭಾಷೆ ಮತ್ತು ಅತ್ಮಾಭಿಮಾನದ ಪಿಚ್‌ನ್ನು ಬಳಸಿ ಬ್ಯಾಟಿಂಗ್ ಮಾಡಿ ತಮಿಳರ ರಾಜಕೀಯ ನಾಡಿಯನ್ನು ಭದ್ರವಾಗಿ ಹಿಡಿಯಲು ಪ್ರಯತ್ನಿಸಿದ್ದಾರೆ. ತಮ್ಮ ಸಮಾವೇಶದಲ್ಲಿ ಇ.ವಿ. ರಾಮಾಸ್ವಾಮಿ ನಾಯ್ಕರ ಮತ್ತು ಕೆ. ಕಾಮರಾಜರ ಭಾವಚಿತ್ರಗಳನ್ನು ವೇದಿಕೆಯ ಮೇಲೆ ಪ್ರದರ್ಶಿಸಿ ಭಾಷಣದಲ್ಲಿ ತಮಿಳರ ಭಾವನೆಗಳಿಗೆ ಮೀಟುವುದರೊಂದಿಗೆ, ಅನುಭವಿ ರಾಜಕಾರಣಿಗಳಂತೆ ತಮಿಳುನಾಡಿನಲ್ಲಿನ ಕುಟುಂಬ ರಾಜಕಾರಣ ಮತ್ತು ಭ್ರಷ್ಟಾಚಾರವನ್ನು ತರಾಟೆಗೆ ತೆಗೆದುಕೊಂಡಿದ್ದು. ಅದನ್ನು ಎಲ್ಲಿ ನಾಟಿಸಬೇಕೋ ಅಲ್ಲಿ ನಾಟಿಸಿದ್ದಾರೆ. ಅವರ ಈ ರಾಜಕಾರಣದ ಚಾಕ್ಯತೆಗೆ ಸಮಾವೇಶದಲ್ಲಿ ಸೇರಿದ ಜನತೆ ತಲೆ ದೂಗಿದ್ದಾರೆ. ವಿಜಯ್ ತಮ್ಮ ತಮಿಳು ವೇಟ್ರಿ ಕಳಗಂ (ಟಿವಿಕ) ಪಕ್ಷವನ್ನು ಕಳೆದ ಫೆಬ್ರುವರಿಯಲ್ಲಿ ಘೋಷಣೆ ಮಾಡಿದರೂ, ಎಂಟು ತಿಂಗಳ ನಂತರ ಬೃಹತ್ ಸಾರ್ವಜನಿಕ ಸಭೆಯ ಮೂಲಕ ತಮ್ಮ ರಾಜಕೀಯ ರಣಕಹಳೆಯನ್ನು ವಿದ್ಯುಕ್ತವಾಗಿ ಮೊಳಗಿಸಿದ್ದಾರೆ. ಈ ಸಮಾವೇಶಕ್ಕೆ ಸುಮಾರು ಐದು ಲಕ್ಷ ಜನ ಸೇರಿದ್ದು, ಈ ಸಂಖ್ಯೆ ರಾಜ್ಯ,ರಾಜಕಾರಣದಲ್ಲಿ ಮತ್ತು ರಾಜಕಾರಣಿಗಳಲ್ಲಿ ಸಂಚಲನ ಮೂಡಿಸಿದೆ ಎಂದು ಹೇಳಲಾಗುತ್ತದೆ. ಹಲವರು ಧಿಗಿಲು ಬಿದ್ದಿದ್ದು ಮುಂದಿನ ದಾರಿ ಯಾವುದೆಂದು ಗೊಂದಲದಲ್ಲಿ ಇದ್ದಾರಂತೆ. ತಮಿಳುನಾಡಿನ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಲಾಗಾಯ್ತುನಿಂದ ಉಳಿಸಿ ಬೆಳೆಸಿಕೊಂಡು ಬಂದಿರುವ ಡಿಎಮ್‌ಕೆ ಸಂಪ್ರದಾಯವನ್ನು ಮುರಿದು ರಾಜ್ಯದ ಜನತೆಗೆ ದೀಪಾವಳಿ ಶುಭಾಯವನ್ನು ಕೋರಿರುವ ಹಿಂದೆ ದಳಪತಿ ವಿಜಯ್ ಉಂಟುಮಾಡಿದ ರಾಜಕೀಯ ಕಂಪನದ ಪರಿಣಾಮ ಇರಬೇಕು ಎನ್ನುವ ಮಾತು ಕೇಳಿ ಬರುತ್ತಿದೆ.

ಅಧಿಕಾರದಲ್ಲಿ ಇದ್ದವರು ಇಂತಹ ಜನಸಂದಣಿಯನ್ನು ಸೇರಿಸುವುದು ಸುದ್ದಿಯಲ್ಲ. ಅದರೆ, ಅಧಿಕಾರದಲ್ಲಿರದ ರಾಜಕಾರಣಿಗಳು ತಮ್ಮ ಸಮಾವೇಶಕ್ಕೆ ಇಂತಹ ಬೃಹತ್ ಜನಸಂದಣಿಯನ್ನು ಸೇರಿಸುವುದು ಸ್ವಲ್ಪವಿಶೇಷ. ಕೇವಲ 18ನೇ ವರ್ಷಕ್ಕೆ ಹೀರೋ ಅಗಿ 69 ಚಿತ್ರಗಳಲ್ಲಿ ನಟಿಸಿರುವ ದೇಶದ ಅತ್ಯಂತ ದುಬಾರಿ ನಟ ಎಂದು ಹಣೆ ಪಟ್ಟಿಕಟ್ಟಿಕೊಂಡಿರುವ ಮತ್ತು ಒಂದು ಚಿತ್ರಕ್ಕೆ ಸುಮಾರು 300 ಕೋಟಿ ರು. ಸಂಭಾವನೆ ಪಡೆಯುತ್ತಾರೆ ಎಂದು ಹೇಳಲಾಗುವ ವಿಜಯ್‌ರ ಜನಪ್ರಿಯತೆ ಮತ್ತು ಸಿನಿಮಾ ತಾರೆಯರ ಬಗೆಗೆ ತಮಿಳರ ಪ್ರೀತಿ ಮತ್ತು ಆಭಿಮಾನ ಈ ಬೃಹತ್ ಜನಸಂದಣಿಯ ಹಿಂದೆ ಎಂದು ಕೆಲವರು ಹೇಳಬಹುದಾದರೂ, ವಾಸ್ತವದಲ್ಲಿ ಎರಡು ದ್ರಾವಿಡ ಪಕ್ಷಗಳ ಸುದೀರ್ಘ ಅಡಳಿತದಿಂದ ಭ್ರಮನಿರಸಗೊಂಡ ಜನತೆ ಮೂರನೇ ಪ್ರಾದೇಶಿಕ ಶಕ್ತಿಯತ್ತ ಹೊರಳಬಹುದೇ ಎನ್ನುವ ಜಿಜ್ಞಾಸೆ ತಮಿಳರಲ್ಲಿ ಕಾಣುತ್ತಿದೆ ಎಂದು ರಾಜಕೀಯ ವಿಶ್ಲೇಷಕರು ಭಾಷ್ಯ ಬರೆಯತ್ತಿದ್ದಾರೆ. ತಮಿಳುನಾಡಿನ ರಾಜಕೀಯದ ವಿಶೇಷತೆ ಎಂದರೆ ಇಲ್ಲಿ ರಾಷ್ಟ್ರೀಯ ಪಕ್ಷಗಳು ನಾಮಕಾವಾಸ್ತೆಯಾಗಿದ್ದು ಎರಡು ಪ್ರಾದೇಶಿಕ ಪಕ್ಷಗಳ ಬಾಲಂಗೋಚಿಯಾಗಿ ಚುನಾವಣೆಯಲ್ಲಿ ಹತ್ತಾರು ಸ್ಥಾನಗಳಿಗೆ ತೃಪ್ತಿಪಟ್ಟು ತಮ್ಮ ಇರುವನ್ನು ತೋರಿಸಿಕೊಳ್ಳುತ್ತವೆ. ಯಾವುದೇ ಕಾರಣಕ್ಕೂ, ಯಾವುದೇ ಸಂದರ್ಭದಲ್ಲಿ ಕೂಡಾ ರಾಷ್ಟ್ರೀಯ ಪಕ್ಷಗಳಿಗೆ ತಮಿಳರು ಮಣೆ ಹಾಕುವುದಿಲ್ಲ. ತಮಿಳುನಾಡಿನಲ್ಲಿ ಚುನಾವಣಾ ಹೋರಾಟ ಯಾವಾಗಲೂ ಡಿಮ್‌ಕೆ ಮತ್ತು ಎಡಿಎಮ್‌ಕೆ ರಂಗಗಳ ಮಧ್ಯೆ ನಡೆಯುತ್ತಿದ್ದು ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಚಲಾವಣೆಯಾದ ಮತಗಳಲ್ಲಿ ಶೇ.70 ಮತಗಳನ್ನು ಇವು ಬಾಚಿಕೊಂಡರೆ. ಇದರೊಟ್ಟಿಗೆ ಮೂರನೇ ಪ್ರಾದೇಶಿಕ ಪಕ್ಷವಾದ ಎಡಿಎಂಡಿಕೆ ಗಮನಾರ್ಹ ಶೇ.8.70 ಮತವನ್ನು ಪಡೆದುಕೊಂಡಿದೆ. ವಿಜಯ್ ತಮ್ಮಹೋರಾಟದಲ್ಲಿ ಡಿಎಂಕೆಯ 75 ವರ್ಷ ಮತ್ತು ಎಡಿಎಂಕೆಯ 50 ವರ್ಷಗಳ ರಾಜಕೀಯವನ್ನು ಎದುರಿಸಬೇಕಾಗಿದ್ದು, ಮುಂದಿನ ಚುನಾವಣೆ ಮಹಾಯುದ್ಧವೇ ಅಗಬಹುದು ಎನ್ನಲಾಗುತ್ತಿದೆ.

ತಮಿಳುನಾಡಿನ ರಾಜಕೀಯ ಇತಿಹಾಸ ತಮಿಳು ಚಲನಚಿತ್ರಗಳಂತೆ ರಂಗು ರಂಗಾಗಿದೆ. ಡಿಎಮ್‌ಕೆ ಸ್ಥಾಪಕರಾದ ಅಣ್ಣಾ ದೊರೈಯಿಂದ ಅರಂಭವಾದ ಈ ಪರಂಪರೆಗೆ ಈಗ 75 ವರ್ಷಗಳಾಗಿದೆ. ಅವರು ಮದ್ರಾಸ ರಾಜ್ಯದ ಕೊನೆಯ ಮತ್ತು ತಮಿಳುನಾಡಿನ ಮೊದಲನೇ ಮುಖ್ಯಮಂತ್ರಿಯಾಗಿದ್ದರು. ತಮಿಳು ಚಲನಚಿತ್ರಗಳಿಗೆ ಸಂಭಾಷಣೆ ಬರೆಯುತ್ತಿದ್ದ ಕರುಣಾನಿಧಿ 13 ಬಾರಿ ಚುನಾವಣೆಗೆ ಸ್ಪರ್ದಿಸಿ ಅಯ್ಕೆಯಾಗಿ 5 ಬಾರಿ ಮುಖ್ಯಮಂತ್ರಿಯಾಗಿದ್ದರು. ವೈಯಕ್ತಿಕ ಭಿನ್ನಾಭಿಪ್ರಾಯದ ಅಡಿಯಲ್ಲಿ ಡಿಎಮ್‌ಕೆ ಯಿಂದ ಹೊರಬಂದು ಎಡಿಎಮ್‌ಕೆ ಸ್ಥಾಪಿಸಿದ ಜನಪ್ರಿಯ ನಟ ಎಮ್ ಜಿಅರ್ 3 ಬಾರಿ ಮುಖ್ಯ ಮಂತ್ರಿ ಯಾಗಿದ್ದರು. ಅವರ ಉತ್ತರಾಧಿಕಾರಿಯಾಗಿ ಕನ್ನಡತಿ ಜಯಲಲಿತ ತಮಿಳುನಾಡಿನಲ್ಲಿ 5 ಬಾರಿ ಮುಖ್ಯಮಂತ್ರಿಯಾಗಿದ್ದರು. ಕ್ಯಾಪ್ಟನ್ ಎಂದೇ ಕರೆಯಲ್ಪಡುತ್ತಿದ್ದ ವಿಜಯಕಾಂತ್ ಎಮ್‌ಡಿಎಮ್‌ಕೆ ಪಕ್ಷವನ್ನು ಸ್ಥಾಪಿಸಿದಾಗ ದ್ರಾವಿಡ ಪಕ್ಷಗಳಿಗೆ ಚಾಲೆಂಜ್ ಮಾಡಬಹುದು ಎನ್ನುವ ಮಾತು ಕೇಳಿಬರುತ್ತಿತ್ತು. ಅದರೆ ಯಾಕೋ ಎನೋ ಈ ಪಕ್ಷ ಕ್ಲಿಕ್ ಆಗಲಿಲ್ಲ. 2018ರಲ್ಲಿ ಕಮಲ ಹಾಸನ್ ಭಾರೀ ಮಹತ್ವಾಕಾಂಕ್ಷೆಯಿಂದ ಮಕ್ಕಳ ನೀಡಿ ಮಯ್ಯಂ ಹೆಸರಿನ ಪಕ್ಷವನ್ನು ಸ್ಥಾಪಿಸಿದರು. ದ್ರಾವಿಡ ಪಕ್ಷಗಳ ಹೋರಾಟದ ಮಧ್ಯೆ ಈ ಪಕ್ಷವೂ ಕ್ಲಿಕ್ ಅಗಲಿಲ್ಲ, ಕಾಂಗ್ರೆಸ್ ಧುರೀಣ ಕೆ. ಕಾಮರಾಜರೊಡನೆ ಗುರುತಿಸಿಕೊಂಡಿರುವ ಶಿವಾಜಿ ಗಣೇಶನ್ 1989 ರಲ್ಲಿ ತಮಿಳು ಮುನ್ನೇತ್ರ ಮುನ್ನಾನಿ (ಟಿ.ಎಮ್. ಎಮ್). ಸ್ಥಾಪಿಸಿ ಅದೇ ವರ್ಷ ತಮ್ಮ ಪಕ್ಷವನ್ನು ಜನತಾ ಪಕ್ಷದೊಡನೆ ವಿಲೀನ ಗೊಳಿಸಿದರು.

ವಿಜಯ್ ತಮ್ಮ ಹೋರಾಟ ಯಾರೊಡನೆ ಎಂದು ಈಗಾಗಲೇ ಗುರುತಿಸಿದ್ದು, ಭಾಜಪ ಮತ್ತು ಡಿಎಮ್‌ಕೆ ಅವರ ಲಿಸ್ಟ್‌ನಲ್ಲಿ ಮೇಲ್ಮೆಯಲ್ಲಿದ್ದಾರೆ. ಹಾಗೆಯೇ ರಾಮಸ್ವಾಮಿ ಪೆರಿಯಾರ್ ಅವರ ಅದರ್ಶ ನಾಯಕರೆಂದು ಘೋಷಿಸಿದರೂ, ದೈವತ್ವದ ವಿಷಯದಲ್ಲಿ ಅವರು ಎಚ್ಚರಿಕೆಯ ಅಭಿಪ್ರಾಯ ವ್ಯಕ್ತ ಮಾಡಿ ತಮ್ಮ ಮತ ಬ್ಯಾಂಕ್ ಶಿಥಿಲಗೊಳ್ಳದಂತೆ ನಿಗಾ ವಹಿಸಿದ್ದಾರೆ. ರಾಜಕಾರಣದಲ್ಲಿ ತಾನು ಮಗು. ಈ ಮಗು ಭಿನ್ನರ ಹಾವಿನ ಜೊತೆ ಅತ್ಮವಿಶ್ವಾದಿಂದ ಅಟ ಅಡುತ್ತದೆ ಎನ್ನುತ್ತಾ ಭರವಸೆಯ ಕಹಳೆಯನ್ನು ಊದಿದ್ದಾರೆ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿಯುತ್ತಿದೆ ಎನ್ನುತ್ತಾ ತಮ್ಮ ಮೊದಲ ಬಾಣವನ್ನು ಬಿಟ್ಟಿದ್ದಾರೆ.

ರಾಜಕೀಯದಲ್ಲಿ ಆಸೆ, ಅಕಾಂಕ್ಷೆ ಮತ್ತು ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲ. ಇದಿಲ್ಲದೆ ಯಾರೂ ರಾಜಕೀಯ ಮಾಡುವುದಿಲ್ಲ. ಆದರೆ, ಮೊದಲನೇ ಪ್ರಯತ್ನದಲ್ಲಿಯೇ ಅಧಿಕಾರದ ಗದ್ದುಗೆ ಹಿಡಿಯವ ತವಕಕ್ಕೆ ಡಿವಿಡೆಂಡ್ ದೊರಕುವುದು ಕಷ್ಟ. ವೃತ್ತಿನಿರತ ರಾಜಕಾರಿಣಿಗಳ ಎದುರು, ಅವರ ನಾನಾ ರೀತಿಯ ತಂತ್ರ ಮತ್ತು ಕುತಂತ್ರಗಳನ್ನು ಎದುರಿಸಿ ಮುನ್ನುಗ್ಗುವುದು ಹೊಸಬರಿಗೆ ತಿಳಿದಷ್ಟು ಸರಳವಲ್ಲ. ಜನತೆ ಬದಲಾವಣೆಯನ್ನು ಬಯಸಿದರೆ ಮತ್ತು ಆಡಳಿತ ವಿರೋಧಿ ಅಲೆ ಇದ್ದರೆ ವಿಜಯ್ ಅವರ ಮಿಷನ್ ಫಲ ನೀಡುವದರಲ್ಲಿ ಸಂಶಯವಿಲ್ಲ. ಸುಮಾರು 75 ವರ್ಷಗಳಿಂದ ಚುನಾವಣೆಯನ್ನು ನಿರಂತವಾಗಿ ಗೆಲ್ಲುತ್ತಿರುವ ದ್ರಾವಿಡ ಪಕ್ಷಗಳನ್ನು ಹಗುರಾಗಿ ತೆಗೆದುಕೊಳ್ಳಲಾಗದು. ವಿಜಯ್ ತಮ್ಮ ಮತದ ಪಾಲನ್ನು ಜೀರೋದಿಂದ ಶೇ.51 ಗೆ ಏರಿಸಬೇಕಾಗುತ್ತದೆ. ದ್ರಾವಿಡ ಪಕ್ಷಗಳ ಪಾಲು ಸದ್ಯ ಶೇ.70 ಇದ್ದು ಅದು ಶೇ.51 ಕ್ಕೂ ಕಡಿಮೆಯಾಗದಂತೆ ನೋಡಿಕೊಳ್ಳಬೇಕಷ್ಟೇ: ಚುನಾವಣೆ ಇನ್ನೂ ಬಹುದೂರ ಇದ್ದು, ಅಷ್ಟರೊಳಗೆ ಕಾವೇರಿಯಲ್ಲಿ ಸಾಕಷ್ಟು ನೀರು ಹರಿಯುತ್ತದೆ. ರಾಜಕೀಯದಲ್ಲಿ ಯಾವು ದನ್ನೂ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಇತ್ತೀಚಿನ ಮತಗಟ್ಟೆ ಸಮೀಕ್ಷೆಯಂತೆ ಎಲ್ಲ ನಿರೀಕ್ಷೆಗಳನ್ನು ಸುಳ್ಳುಮಾಡಿ ಅಚ್ಚರಿ ಮೂಡಿಸಬಹುದು. ವಿಜಯ್ ಮೇಲುಗೈ ಅಗುವ ಸುಳಿವು ಕಂಡುಬಂದರೆ ಉಳಿದರಡು ದ್ರಾಮಕ ಪಕ್ಷಗಳು ಒಂದಾಗಿ ಹೋರಾ ಡುವುದನ್ನು ಅಲ್ಲಗೆಳೆಯಲಾಗದು. ರಾಜಕೀಯದಲ್ಲಿ ಯಾರೂ ಖಾಯಂ ವಿರೋಧಿಗಳಾಗಿ ಇರುವುದಿಲ್ಲ. ಅಧಿಕಾರದ ಕೇಕ್ ದೊರೆಯುವ ಸಾಧ್ಯತೆ ಇದ್ದರೆ ಕೈಕುಲುಕುವುದು ರಾಜಕೀಯದಲ್ಲಿ ತೀರಾ ಸಾಮಾನ್ಯ.

(ಲೇಖಕ: ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಅಭಿಮತ

ಉದಯಕೃಷ್ಣ ಬಿ.

ಅಸಲಿ ವೈದ್ಯರ ಭಯ ನಿವಾರಣೆ ನಕಲಿಗಳ ಹಾವಳಿಗೆ ಮದ್ದು

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ನಕಲಿ ವೈದ್ಯರ ಸುದ್ದಿ ಸದ್ದು ಮಾಡುತ್ತಿದೆ. ಯಾವುದೇ ರೀತಿಯ ವೈದ್ಯಕೀಯ ಪದವಿಯನ್ನೂ ಗಳಿಸದೆ, ಸಮಾಜದಲ್ಲಿ ತನ್ನನ್ನು ತಾನೇ ವೈದ್ಯನೆಂಬಂತೆ ಬಿಂಬಿಸಿಕೊಳ್ಳುವವರನ್ನು ನಕಲಿ ವೈದ್ಯ ಎನ್ನುತ್ತಾರೆ. ಹಾಗೆಯೇ, ವೈದ್ಯಕೀಯ ವೃತ್ತಿ ನಿರತರು ವ್ಯಾಧಿಯೊಂದರ ತಪಾಸಣೆ ಹಾಗೂ ಚಿಕಿತ್ಸೆಯಲ್ಲಿ, ಪರಿಣಾಮಕಾರಿಯಲ್ಲದ, ಅನುಚಿತ ಮಾರ್ಗಗಳನ್ನು, ತನ್ನನ್ನು ನಂಬಿ ಬಂದ ರೋಗಿಗಳಿಗೆ ಅಳವಡಿಸಿಕೊಂಡರೂ ಅದನ್ನು ನಕಲಿ ವೈದ್ಯಕೀಯ ಎನ್ನಬಹುದು. ಸಾರ್ವಜನಿಕರಿಗೆ ಹಾನಿಕಾರಕವಾದ ಇಂತಹವರನ್ನು ಹುಡುಕಿ ಶಿಕ್ಷಿಸಬೇಕಾದದ್ದು ಸರಕಾರದ ಆದ್ಯ ಕರ್ತವ್ಯ.

ಈ ಬೋರ್ಡ್ ಆಧುನಿಕ ವೈದ್ಯ ಪದ್ಧತಿಯವರಿಗೆ ನೀಲ ವರ್ಣದಲ್ಲಿ ಇದ್ದು, ಆಯುಷ್ ಪದ್ಧತಿಗೆ ಹಸಿರು ವರ್ಣದಲ್ಲಿ ಇರತಕ್ಕದ್ದು. ಅಕ್ಷರಗಳು ಕಪ್ಪು ಬಣ್ಣದ್ದಾಗಿದ್ದು, ಮೊದಲ ಸಾಲಿನಲ್ಲಿ ಕೆಪಿಎಂಇ ನೋಂದಣಿ ಸಂಖ್ಯೆ, ಎರಡನೆಯ ಸಾಲಿನಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಯ ಹೆಸರು ಹಾಗೂ ಮೂರನೆಯ ಸಾಲಿನಲ್ಲಿ ಸಂಸ್ಥೆಯ ವ್ಯವಸ್ಥಾಪಕ ಅಥವಾ ವೈದ್ಯರ ಹೆಸರು ಇರಬೇಕು. ಕ್ಲಿನಿಕ್ / ಡಿಸ್ಪೆನ್ಸರಿಗಳಿಗೆ ಬೋರ್ಡಿನ ಗಾತ್ರವು 5X2.5 ಅಡಿ ಆಗಿದ್ದರೆ, ಆಸ್ಪತ್ರೆಗಳಿಗೆ 7X3.5 ಅಡಿ ಗಾತ್ರದ್ದು ಇರಬೇಕು. ಇದನ್ನು ಯಾರು ಎಲ್ಲಿ ಬೇಕಾದರೂ ಮಾಡಿಸಿಕೊಳ್ಳಬಹುದಾದ ಕಾರಣ ನಕಲಿಗಳೇ ಇದರ ಅಳವಡಿಕೆಯಲ್ಲಿ ಮೊದಲಿಗರಾಗಿದ್ದಾರೆ. ಕೊನೆಯ ಪಕ್ಷ, ಸರಕಾರವೇ ಕೆಪಿಎಂಇ ನೋಂದಾಯಿತ ವೈದ್ಯರು ಅಥವಾ ಸಂಸ್ಥೆಗಳಿಗೆ ವಿಶೇಷವಾಗಿ ಸುರಕ್ಷಾ ಕ್ರಮಗಳೊಂದಿಗೆ ತಯಾರಿಸಿದ ಬೋರ್ಡುಗಳನ್ನು ನೇರವಾಗಿ ಒದಗಿಸುತ್ತಿದ್ದರೆ ನಕಲಿಗಳ ಹಾವಳಿಗೆ ತಡೆ ಒಡಬಹುದಿತ್ತೇನೋ? ಅಲ್ಲದೇ, ಇನ್ನಿತರ ಅಗತ್ಯ ಸಾರ್ವಜನಿಕ ಮಾಹಿತಿಗಳಾದ ಸೇವಾ ಸಮಯ, ವೈದ್ಯರ ಶೈಕ್ಷಣಿಕ ಅರ್ಹತೆಗಳು, ವೈದ್ಯಕೀಯ ಮಂಡಳಿಯ ವೈಯಕ್ತಿಕ ವೃತ್ತಿ ನಿರ್ವಹಣಾ ನೋಂದಣಿ ಸಂಖ್ಯೆ, ಕೇಂದ್ರ ಸರಕಾರದ ಎಚ್‌ಪಿ ಆರ್‌ಐಡಿ ದೂರವಾಣಿ ಸಂಪರ್ಕ ವಿವರ ಇತ್ಯಾದಿ ಹಾಕುವುದು ಕಾನೂನು ಬಾಹಿರ ಆಗಿದೆ.

ಆಯುರ್ವೇದ, ಯುನಾನಿ, ಸಿದ್ಧ, ಹೋಮಿಯೋಪತಿ, ನ್ಯಾಚುರೋಪತಿ, ಯೋಗ ಇದೇ ಮೊದಲಾದ ವೈದ್ಯಕೀಯ ಪದ್ಧತಿಗಳನ್ನು ಭಾರತೀಯ ವೈದ್ಯ ಪದ್ಧತಿಗಳು ಹಾಗೂ ಈ ಪದ್ಧತಿಯ ವೈದ್ಯರುಗಳನ್ನು ಆಯುಷ್ ವೈದ್ಯರು ಎಂದು ಕರೆಯುತ್ತಾರೆ. ಆಧುನಿಕ ವೈದ್ಯ ಪದ್ಧತಿಯ ಎಂಬಿಬಿಎಸ್, ಬಿಡಿಎಸ್, ಪದವಿಯ ಹಲವು ಪಠ್ಯಕ್ರಮಗಳು ಭಾರತೀಯ ವೈದ್ಯ ಪದ್ಧತಿಯ ಪಠ್ಯ ಕ್ರಮದಲ್ಲಿ ಸರಕಾರದ ಆದೇಶದ ರೀತ್ಯಾ ಸುಮಾರು ಅರ್ಧ ಶತಮಾನದಿಂದ ಕಾಲೇಜುಗಳಲ್ಲಿ ಬೋಧಿಸಲ್ಪಡುತ್ತಿದೆ. ಅಲ್ಲದೆ ಒಂದು ವರ್ಷದ ಕಡ್ಡಾಯ ಕಲಿಕಾ ವೈದ್ಯ ತರಬೇತಿಯ ಸಮಯದಲ್ಲೂ ಆಧುನಿಕ ವೈದ್ಯ ವಿಜ್ಞಾನದ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಣೆಯೂ ಆದ ಬಳಿಕವಷ್ಟೇ ಸರಕಾರದಿಂದ ನಿಯೋಜಿತಗೊಂಡ ಆಯಾ ಪದ್ಧತಿಯ ವೈದ್ಯಕೀಯ ಮಂಡಳಿಗಳಿಂದ ವೃತ್ತಿ ನಿರ್ವಹಣಾ ನೋಂದಣಾ ಪತ್ರ ಲಭ್ಯವಾಗುವುದು. ಅಲ್ಲದೆ ಎನ್‌ಆರ್‌ಎಚ್‌ಎಂ ಯೋಜನೆಯಡಿ ಗುತ್ತಿಗೆ ವೈದ್ಯರುಗಳಾಗಿ ಆಯುಷ್ ವೈದ್ಯರ ಸೇವೆ ಶಾಲಾ ಮಕ್ಕಳ ಆರೋಗ್ಯ ತಪಾಸಣಾಧಿಕಾರಿಗಳಾಗಿ, ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಾಗಿ ಎರಡು ದಶಕಗಳಿಗೂ ಮಿಗಿಲಾಗಿ ನಡೆಯುತ್ತಿದೆ. ಹೀಗೆ ಆಧುನಿಕ ವೈದ್ಯ ಪದ್ಧತಿಯ ಆಸ್ಪತ್ರೆಯಲ್ಲಿ ಕಲಿಕಾ ವೈದ್ಯರಾಗಿ ತರಬೇತಿ ಪಡದರೂ, ಪಠ್ಯಕ್ರಮದಲ್ಲಿ ಆಧುನಿಕ ವೈದ್ಯ ವಿಜ್ಞಾನದ ಅನೇಕ ಪಠ್ಯ ಅಭ್ಯಸಿಸಿದ್ದರೂ ಆಯುಷ್ ವೈದ್ಯರಿಗೆ ಅನಿವಾರ್ಯ/ತುರ್ತು ಸಂದರ್ಭದಲ್ಲಿ ಆಧುನಿಕ ಪದ್ಧತಿಯಂತೆ ಚಿಕಿತ್ಸೆ ನೀಡುವಲ್ಲಿ ಕಾನೂನಿನ ತೊಡಕು ಇದೆ.

ಇಂತಹ ಗೊಂದಲಗಳ ನಿವಾರಣೆಗೆ ಚಿಕಿತ್ಸೆಯನ್ನು, ಪ್ರಾಥಮಿಕ ಹಾಗೂ ಉನ್ನತ ಎಂಬುದಾಗಿ ಎರಡು ಹಂತಗಳೆಂದು ವಿಭಾಗಿಸಿ ಪ್ರಾಥಮಿಕ ಹಂತದಲ್ಲಿ ಆಯುಷ್ ವೈದ್ಯರೂ ಆಧುನಿಕ ಪದ್ಧತಿಯ ಕೆಲವೊಂದು ಔಷಧ, ಚಿಕಿತ್ಸಾ ವಿಧಾನಗಳನ್ನು ಧೈರ್ಯದಿಂದ ಬಳಸುವಂತೆ ಸೂಕ್ತ ಕಾನೂನು ಮಾರ್ಪಾಡು ಮಾಡುವುದೊಂದೇ ದಾರಿ. ಪ್ರಾಥಮಿಕ ಹಂತದಲ್ಲಿ ಅಳವಡಿಸಿಕೊಳ್ಳಬಹುದಾದ ಚಿಕಿತ್ಸಾ ಕ್ರಮಗಳು, ಔಷಧಗಳ ಇತಿಮಿತಿಗಳ ಬಗ್ಗೆ ಸೂಕ್ತ ನಿರ್ಣಯಗಳನ್ನು (EXPERT COMMITTEE) ಪರಿಣಿತರ ಸಮಿತಿಯೊಂದರ ಮೂಲಕ ಸರಕಾರ ಆದಷ್ಟು ಶೀಘ್ರವಾಗಿ ನಿರ್ದೇಶಿಸಲಿ. ಈ ವಿಭಾಗದಲ್ಲಿ ಉಲ್ಲೇಖಿಸಲ್ಪಡದ ಚಿಕಿತ್ಸಾ ವಿಧಾನಗಳು, ಔಷಧಿಗಳೆಲ್ಲವೂ ಉನ್ನತ ಹಂತದಲ್ಲಿ ಆಧುನಿಕ ವೈದ್ಯ ಪದ್ಧತಿಯ ವೈದ್ಯರುಗಳಿಗೆ ಮಾತ್ರ ಬಳಕೆಗೆ ಆದೇಶಿಸುವುದು ಸೂಕ್ತ. ಇದರಿಂದಾಗಿ ಸಮ್ಮಿಶ್ರ(ಇಂಟೆಗ್ರೇಟೆಡ್) ವೈದ್ಯ ಪದ್ಧತಿಯ ಉಗಮವಾಗಿ ರೋಗಿಗೆ ಒಂದೇ ಸೂರಿನಡಿ ವಿವಿಧ ಪದ್ಧತಿಯ ವೈದ್ಯ ಕೀಯ ಉಪಚಾರ ಮಿತವ್ಯಯದಲ್ಲಿ ಲಭ್ಯ. ಕಾರ್ಪೊರೇಟ್ ಆಸ್ಪತ್ರೆ ಗಳಲ್ಲಿ ಕಡಿಮೆ ಸಂಬಳದಲ್ಲಿ ಕರ್ತವ್ಯ ನಿರತ ವೈದ್ಯರಾಗಿ ಆಯುಷ್ ವೈದ್ಯರ ನಿಯುಕ್ತಿಗೆ ಅವಕಾಶ ಇರುವುದರಿಂದ ವೈದ್ಯಕೀಯ ವೆಚ್ಚ ದಲ್ಲಿ ಗಮನೀಯ ಇಳಿಕೆ ಸಾಧ್ಯತೆ. ಸಹಕಾರೀ ತತ್ವದಲ್ಲಿ ವೈದ್ಯರೇ ಮಾಲೀಕರಾದ ಆಸ್ಪತ್ರೆಗಳು ಮರುಹುಟ್ಟಿ, ಮುಂದೊಂದು ದಿನ ವೈದ್ಯಕೀಯ ಕ್ಷೇತ್ರ ಬಂಡವಾಳಶಾಹಿಯ ಕಪಿ ಮುಷ್ಟಿಯಿಂದಲೂ ಮುಕ್ತ ಆಗಬಹುದು. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ ಯಂತೆ ಪ್ರತಿ ಒಂದು ಸಾವಿರ ನಾಗರೀಕರಿಗೆ ಒಬ್ಬ ವೈದ್ಯ ಇರಲೇ ಬೇಕು.

ದೇಶದಲ್ಲಿ ಕುಟುಂಬ ವೈದ್ಯ ಪದ್ಧತಿ ಅವನತಿ ಹೊಂದಿ ಚಿಕಿತ್ಸಾಲಯಗಳು ಆರೋಗ್ಯ ಉದ್ದಿಮೆಗಳಾಗಿ ಪರಿವರ್ತನೆಯಾಗಿ ದಶಕಗಳೇ ಸಂದಿವೆ. ಹೆಲ್ತ್ ಇನ್ಶೂರೆನ್ಸ್ ಎಂಬ ಮಾಯಾ ಕನ್ನಡಿ, ಕೆಪಿಎಂಇ ಯಂತಹ ಕಾನೂನು, ವೈದ್ಯರೇ ನಡೆಸುತ್ತಿದ್ದ ಸಣ್ಣ ಸಣ್ಣ ನರ್ಸಿಂಗ್ ಹೋಂಗಳನ್ನು ನಿಷ್ಕರುಣೆಯಿಂದ ಮುಚ್ಚಿಸಿ, ದುಬಾರಿ ಸೇವಾ ಶುಲ್ಕ ಹೇರುವ ಪಂಚತಾರಾ ಆಸ್ಪತ್ರೆಗಳನ್ನು ಸಮಾಜಕ್ಕೆ ಅನಿವಾರ್ಯವಾಗಿಸಿದೆ. ಇತರೆ ಲಾಭದಾಯಕ ಉದ್ಯಮಗಳಲ್ಲಿ ರುವಂತೆ ಬಂಡವಾಳ ಹೂಡಿದ ವೈದ್ಯರೇ ಅಲ್ಲದ ಉದ್ದಿಮೆದಾತರು, ಇಲ್ಲೂ ಟಾರ್ಗೆಟ್/ಪರ್ಫಾರ್ಮನ್ಸ್ ಒತ್ತಡ ವೈದ್ಯರ ಮೇಲೆ ಹೇರಿರುವುದು ಕಟು ವಾಸ್ತವ. ಇದೆಲ್ಲ ಅರಿವಿದ್ದರೂ ಮುಗಿಬೀಳುವ ಜನರಿಗೆ ಅದೇನು ಮೋಹವೋ?/ ಭ್ರಾಂತಿಯೋ? ಶಕ್ತಿ ಮೀರಿ ದುಡ್ಡು ಸುರಿದು ಸೇವಾ ಸವಲತ್ತು ಪಡೆದರೂ ನಿರೀಕ್ಷಿತ ಫಲಿತಾಂಶ ದೊರೆಯದೇ ಇದ್ದಾಗ ಆಗುವ ಹತಾಶೆ, ಆಕ್ರೋಶವಾಗಿ ಸ್ಫೋಟಗೊಳ್ಳುವುದು ಸಹಜ. ಇವೆಲ್ಲದರ ಪರಿಣಾಮ ವೈದ್ಯರ ನಿರ್ಲಕ್ಷ್ಯ ಎಂಬ ಹಣೆಪಟ್ಟಿ. 2007 ರಲ್ಲಿ ರೂಪುಗೊಂಡ, 2009 ರಲ್ಲಿ ನಿಯಮಗಳೊಂದಿಗೆ ಜಾರಿಯಾದ ಕೆಪಿಎಂಇ ಕಾಯ್ದೆ ಆ ವರೆಗೆ ಊರ್ಜಿತದಲ್ಲಿದ್ದ 1967ರ ಕರ್ನಾಟಕ ಖಾಸಗಿ ನರ್ಸಿಂಗ್ ಹೋಂ ಕಾಯ್ದೆಯನ್ನು ನಿರಸನ ಗೊಳಿಸಿತು. ಈ ಕಾಯ್ದೆಯ ಸೆಕ್ಷನ್ 6, ಸಬ್ ಸೆಕ್ಷನ್ (ಜಿಜಿ)ರ ಅನುಸಾರ ವೈದ್ಯರೇ ಅಲ್ಲದ ಬಂಡವಾಳಶಾಹಿಗಳು, ನೊಂದಾಯಿತ ಹಲವು ವೈದ್ಯರುಗಳನ್ನು ನೇಮಿಸಿಕೊಂಡು, ಉದ್ದಿಮೆಯ ರೀತಿಯ ಆಸ್ಪತ್ರೆಗಳನ್ನು ಹುಟ್ಟು ಹಾಕಲು ಅನುವು ಮಾಡಿಕೊಟ್ಟಿದೆ. ಇದೇ ರೀತಿ, ನಕಲಿ ವೈದ್ಯರುಗಳೂ ನೊಂದಾಯಿತ ವೈದ್ಯರ ನೋಂದಣಿ ಸಂಖ್ಯೆಯನ್ನು ದುರ್ಬಳಕೆ ಮಾಡಿಕೊಂಡು ತಮ್ಮ ದಂಧೆಯನ್ನು ಕೆಪಿಎಂಇ ಕಾಯ್ದೆಯ ಅಡಿ ನೋಂದಾಯಿಸಿಕೊಳ್ಳಬಹುದಾಗಿದೆ. ಇಂತಹ ಅಕ್ರಮ ಸಕ್ರಮ ಸಾಧ್ಯವಾದದ್ದು 1962ರ ವೈದ್ಯರ ವೈಯಕ್ತಿಕ ವೃತ್ತಿ ನಿರ್ವಹಣಾ ನೋಂದಣಾ ಕಾಯ್ದೆಯ ಪ್ರಕಾರ ನೊಂದಾಯಿತ ವೈದ್ಯರು ನಡೆಸುವ ಡಿಸ್ಪೆನ್ಸರಿಗಳನ್ನೂ ಕಾರ್ಪೊರೇಟ್ ಸಂಸ್ಥೆ/ ವೈದ್ಯಕೀಯೇತರ ವ್ಯಕ್ತಿ (business man) ನಡೆಸುವ ಆಸ್ಪತ್ರೆಯ ರೀತಿ ಪರಿಗಣಿಸಿದ್ದೇ ಕಾರಣ. ಕುಟುಂಬ ವೈದ್ಯ ಪದ್ಧತಿ ಎಂಬ ವಿಶ್ವಾಸಾರ್ಹ ವ್ಯವಸ್ಥೆಗೆ ದಶಕಗಳ ಹಿಂದೆ ಈ ಕಾಯ್ದೆ ಕೊಡಲಿ ಏಟು ನೀಡಿತು. ಕ್ಲಿನಿಕ್ / ಡಿಸ್ಪೆನ್ಸರಿಗಳನ್ನು ನಡೆಸುವ ವೈದ್ಯರುಗಳ ವೈಯಕ್ತಿಕ ವೃತ್ತಿ ನಿರ್ವಹಣಾ ನೋಂದಣಿ ಹಾಗೂ ಶೈಕ್ಷಣಿಕ ಅರ್ಹತೆಗಳ ಅಸಲಿಯತ್ತನ್ನು ಪರಿಶೀಲಿಸುವ ಅಧಿಕಾರವನ್ನು ಸ್ಥಳೀಯ ಆಡಳಿತ ಸಂಸ್ಥೆ ಹಾಗೂ ಸ್ಥಳೀಯ ಆರೋಗ್ಯ ಇಲಾಖೆಯ ಸೂಕ್ತ ಪದ ನಿಮಿತ್ತ ಅಧಿಕಾರಿಗಳಿಗೆ ಜಂಟಿಯಾಗಿ ವಹಿಸಿಕೊಡಬಹುದು. ಈ ಕಾರ್ಯದಲ್ಲಿ ಮಾಹಿತಿ ಕ್ರೋಢೀಕರಣಕ್ಕಾಗಿ ಆಶಾ ಕಾರ್ಯಕರ್ತೆಯರ ಸಹಾಯವನ್ನೂ ಪಡೆದುಕೊಳ್ಳಬಹುದು. ಹೀಗೆ ಮಾಡುವುದರಿಂದ ನೊಂದಾಯಿತ ವೈದ್ಯರುಗಳ ಸ್ವಂತ ಚಿಕಿತ್ಸಾಲಯಗಳಿಗೆ ಕೆಪಿಎಂಇ ಕಾಯ್ದೆಯಿಂದ ವಿನಾಯಿತಿ ನೀಡಿ ನಕಲಿ ವೈದ್ಯರುಗಳ ಅಕ್ರಮ ಸಕ್ರಮಕ್ಕೆ ಕಡಿವಾಣ ಬೀಳಬಹುದು. ಮಿತವ್ಯಯದ ವಿಶ್ವಾಸಾರ್ಹ ಕುಟುಂಬ ವೈದ್ಯ ಪದ್ಧತಿಯ ಪುನರುತ್ಥಾನವೂ ಸಾಧ್ಯ.

(ಲೇಖಕರು: ಕೆ.ವಿ.ಜಿ. ಕಾನೂನು ವಿದ್ಯಾಲಯದ ಪ್ರಾಂಶುಪಾಲರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 183

ಸಮಾಚಾರ ಸಣ್ಣದಲ್ಲ

ಕೆನಡಾ ಪ್ರತಿಭಟನೆ; ಅರ್ಚಕ ಅಮಾನತು

ಚಂಡೀಗಢ: ಬ್ರಾಂಪ್ಟನ್‌ನ ಹಿಂದೂ ಸಭಾ ಮಂದಿರದ ಬಳಿ ಭಾನುವಾರ ನಡೆದ ಭಾರತ ಮೂಲದವರ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಕ್ಕೆ ದೇವಸ್ಥಾನದ ಅರ್ಚಕ ರಾಜಿಂದರ್ ಪ್ರಸಾದ್ ಅವರನ್ನು ಹಿಂದೂ ಸಭಾ ದೇವಾಲಯ ಆಡಳಿತ ಮಂಡಳಿ ಗುರುವಾರ ಅಮಾನತುಗೊಳಿಸಿದೆ. ಹಿಂದೂ ಸಭಾ ದೇವಾಲಯದಲ್ಲಿ ಖಾಲಿಸ್ತಾನಿ ಪರ ಪ್ರತಿಭಟನಾಕಾರರು ಮತ್ತು ಜನರ ನಡುವಿನ ಘರ್ಷಣೆ ನಂತರ ಟೊರೊಂಟೊದಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಕಾನ್ಸುಲರ್ ಶಿಬಿರಗಳನ್ನೂ ರದ್ದುಗೊಳಿಸಲಾಗಿದೆ.

ಐಎಎಫ್ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ಜೈಪುರ: ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆ ರಾಜಸ್ಥಾನದ ನಾಗೌರ್‌ನ ಪ್ರದೇಶದಲ್ಲಿ ಭಾರತೀಯ ವಾಯುಪಡೆಯ (ಐಎಎಫ್) ಹೆಲಿಕಾಪ್ಟರ್ ಗುರುವಾರ ತುರ್ತು ಭೂಸ್ಪರ್ಶ ಮಾಡಿದೆ. ಹೆಲಿಕಾಪ್ಟರ್ ಜಾಸ್ ನಗರದ ಹೊಲದಲ್ಲಿ ಇಳಿದಿದ್ದು ಯಾವುದೇ ಪ್ರಾಣ ಹಾನಿ, ಆಸ್ತಿ ನಷ್ಟವಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ವಾಯುಪಡೆಯ 2 ಹೆಲಿಕಾಪ್ಟರ್‌ಗಳು ಜೋಧ್‌ಪುರದಿಂದ ಜೈಪುರಕ್ಕೆ ಹೋಗುತ್ತಿದ್ದಾಗ ತಾಂತ್ರಿಕ ಸಮಸ್ಯೆ ಕಾಣಿಸಿ ಕೊಂಡಿದೆ. ಹಾಗಾಗಿ ತುರ್ತು ಭೂಸ್ಪರ್ಶ ಮಾಡಲಾ ಗಿದೆ. ತಾಂತ್ರಿಕ ಸಮಸ್ಯೆ ಸರಿಪಡಿಸಿದ ಬಳಿಕ ಮತ್ತೆ ಹೆಲಿಕಾಪ್ಟರ್ ಟೇಕಾಫ್ ಆಗಿ ಸಂಚಾರ ಮುಂದುವರಿಸಿದೆ.

ತೆಲುಗು ಭಾಷಿಕರಿಗೆ ಹೆಮ್ಮೆ: ನಾಯ್ಡು

ಅಮರಾವತಿ: ಅಮೆರಿಕದ ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿರುವ ಜೆ.ಡಿ.ವಾನ್ಸ್ ಅವರ ಪತ್ನಿ ಉಷಾ ಅವರನ್ನು ಆಂಧ್ರ ಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಅಭಿನಂದಿಸಿದ್ದು, ಇದು 'ತೆಲುಗು ಭಾಷಿಕರಿಗೆ ಹೆಮ್ಮೆಯ ಕ್ಷಣ' ಎಂದಿದ್ದಾರೆ.

'ತೆಲುಗು ಮೂಲದ ಉಷಾ ಅಮೆರಿಕದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಇದು ಜಗತ್ತಿನ ಎಲ್ಲಾ ತೆಲುಗು ಜನರಿಗೆ ಹೆಮ್ಮೆಯ ವಿಷಯ. ಅವರನ್ನು ಆಂಧ್ರ ಪ್ರದೇಶಕ್ಕೆ ಆಹ್ವಾನಿಸುವ ಅವಕಾಶಕ್ಕಾಗಿ ಕಾಯುತ್ತಿದ್ದೇನೆ' ಎಂದರು. ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಗಳಿಸಿರುವ ಡೊನಾಲ್ಡ್ ಟ್ರಂಪ್ ಅವರನ್ನೂ ನಾಯ್ಡು ಅಭಿನಂದಿಸಿದರು.

ದೆಹಲಿಯಲ್ಲಿ ಭಯೋತ್ಪಾದನಾ ವಿರೋಧಿ ಸಮಾವೇಶದಲ್ಲಿ ಗೃಹ ಸಚಿವ ಅಮಿತ್ ಶಾ ಪ್ರಕಟ

ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ನೀತಿ

ದೆಹಲಿ: ಉಗ್ರರ ಭಯೋತ್ಪಾದನೆ ಚಟುವಟಿಕೆಗಳ ನಿಗ್ರಹಕ್ಕೆ ಕೇಂದ್ರ ಸರಕಾರ ಶೀಘ್ರದಲ್ಲೇ 'ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ ಮತ್ತು ಕಾರ್ಯತಂತ್ರ'ವನ್ನು ಪ್ರಕಟಿಸಲಿದೆ. ಅದರಿಂದ ಭಯೋತ್ಪಾದಕರ ಸಮಗ್ರ ವ್ಯವಸ್ಥೆಯನ್ನೇ ನಾಶಮಾಡಲು ಅನುಕೂಲವಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ದೆಹಲಿಯಲ್ಲಿ ಗುರುವಾರ 'ಭಯೋತ್ಪಾದನಾ ನಿಗ್ರಹ ಸಮಾವೇಶ-2024'ರ ಉದ್ಘಾಟನಾ ಅಧಿವೇಶನದಲ್ಲಿ ಮಾತನಾಡಿದ ಸಚಿವ ಅಮಿತ್ ಶಾ, ಭಯೋತ್ಪಾದನೆ, ಭಯೋತ್ಪಾದಕರು ಮತ್ತು ಭಯೋತ್ಪಾದಕ ವ್ಯವಸ್ಥೆಯ ವಿರುದ್ಧ ಸಂಘಟಿತ ಹೋರಾಟ ಅಗತ್ಯ. ಈ ಕಾರ್ಯದಲ್ಲಿ ಎಲ್ಲಾ ರಾಜ್ಯಗಳು ಕೈಜೋಡಿಸಬೇಕು. ಕಾರ್ಯಾಚರಣೆಯನ್ನು ಮುನ್ನಡೆಸಬೇಕು. ಆದ್ದರಿಂದಲೇ 'ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ನೀತಿ ಮತ್ತು ಕಾರ್ಯತಂತ್ರ' ವನ್ನು ಶೀಘ್ರದಲ್ಲೇ ಅನಾವರಣಗೊಳಿಸಲಾಗುವುದು ಎಂದರು. ಭಯೋತ್ಪಾದಕರ ದಾಳಿಗಳು ಮತ್ತು ಅವರ ಪಿತೂರಿಗಳನ್ನು ಎದುರಿಸಬೇಕಾದರೆ ನಮ್ಮ ಯುವ, ಉತ್ಸಾಹಿ ಅಧಿಕಾರಿಗಳನ್ನು, ಭದ್ರತಾ ಪಡೆಗಳನ್ನು ಅತ್ಯುನ್ನತ ತಂತ್ರಜ್ಞಾನ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರ-ಪರಿಕರಗಳೊಂದಿಗೆ ಸಜ್ಜುಗೊಳಿಸಬೇಕಿದೆ. ಮುಂದಿನ ದಿನಗಳಲ್ಲಿ ನಾವು ಇದನ್ನು ಭಯೋತ್ಪಾದನಾ ಧಮನ ಕಾರ್ಯಾಚರಣೆಯಲ್ಲಿನ ತರಬೇತಿಯ ಪ್ರಮುಖ ಭಾಗವಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ಭಯೋತ್ಪಾದನೆ ಚಟುವಟಿಕೆಗಳನ್ನು ಮಟ್ಟಹಾಕಲು ಕೇಂದ್ರ ಗೃಹ ಸಚಿವಾಲಯ ಪೂರ್ವಭಾವಿ ವಿಧಾನಗಳ ಜತೆಗೇ ಹೊಸದಾಗಿ ಮುಂದಿನ ಹಂತವನ್ನು ಕೈಗೆತ್ತಿಕೊಳ್ಳುತ್ತಿದೆ. ಇದು ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ನೀತಿ ಮತ್ತು ಕಾರ್ಯತಂತ್ರದ ಜತೆ ಬರಲಿದೆ ಎಂದು ಶಾ ಘೋಷಿಸಿದ್ದಾರೆ.

36,468 ಪೊಲೀಸ್ ಬಲಿ

ದೇಶಕ್ಕೆ ಸ್ವಾತಂತ್ರ್ಯ ಬಂದು 77 ವರ್ಷಗಳೇ ಕಳೆದಿವೆ. ಭಯೋತ್ಪಾದನೆ ಎಂಬುದು ದೇಶದ ಪ್ರಗತಿಗೆ ತೊಡರುಗಾಲಾಗಿದೆ. ಅಲ್ಲದೇ, ಭಯೋತ್ಪಾದನೆ ಧಮನ ಕಾರ್ಯಾಚರಣೆಯಲ್ಲಿ ಈವರೆಗೆ 36,468 ಪೊಲೀಸ್ ಸಿಬ್ಬಂದಿ ಹುತಾತ್ಮರಾಗಿದ್ದಾರೆ. ದೇಶದ ಆಂತರಿಕ ರಕ್ಷಣಾ ಕಾರ್ಯದಲ್ಲಿ ವೀರ ಯೋಧರು ಪ್ರಾಣ ತ್ಯಾಗ ಮಾಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಮರಿಸಿದರು. ಭಯೋತ್ಪಾದನೆ ವಿರುದ್ಧ ಭಾರತ ಸರಕಾರ ದೃಢವಾದ ಕಾರ್ಯತಂತ್ರ ಅನುಸರಿಸಿದೆ. ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ ಎಂಬ ಮೋದಿಯವರ ಘೋಷಣೆಯನ್ನು ಭಾರತ ಮಾತ್ರವಲ್ಲದೆ ಇಡೀ ವಿಶ್ವವು ಭಯೋತ್ಪಾದನೆಯ ವಿರುದ್ಧ ಹೋರಾಡಲು ಪ್ರಬಲವಾದ ವ್ಯವಸ್ಥೆಯನ್ನು ರಚಿಸಿದೆ ಎಂದಿದ್ದಾರೆ.

ಭಯೋತ್ಪಾದನೆ ಗಡಿರಹಿತ

ಭಯೋತ್ಪಾದನೆ ಚಟುವಟಿಕೆಗಳು ಗಡಿ ರಹಿತವಾಗಿ ರುತ್ತವೆ. ಭಯೋತ್ಪಾದಕರು ಅದೃಶ್ಯರು. ಅವರಿಂದ ಎದುರಾಗುವ ಅಪಾಯವನ್ನು, ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಅತ್ಯಾಧುನಿಕ ತಂತ್ರಜ್ಞಾನದ ಅಗತ್ಯವಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಒತ್ತಿ ಹೇಳಿದರು. 'ಭಯೋತ್ಪಾದನೆ ವಿಚಾರದಲ್ಲಿ ಭಾರತದ ಶೂನ್ಯ ಸಹಿಷ್ಣುತೆ' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಘೋಷಣೆಯನ್ನು ಅಮಿತ್ ಶಾ ಇದೇ ಸಂದರ್ಭ ಪುನರುಚ್ಚರಿಸಿದರು. ಭಯೋತ್ಪಾದನೆ ಯನ್ನು ಬುಡಸಮೇತ ಕಿತ್ತೊಗೆಯಬೇಕು ಎಂಬುದಕ್ಕೆ ಸಂಬಂಧಿಸಿ ಪ್ರಧಾನಿ ಮೋದಿ 'ಶೂನ್ಯ ಸಹಿಷ್ಣುತೆ' ನೀತಿ ಪ್ರಸ್ತಾಪಿಸಿದ್ದರು. ಅವರ ಈ ನೀತಿಯನ್ನು ಈಗ ಜಾಗತಿ ಕವಾಗಿ ಒಪ್ಪಿಕೊಳ್ಳಲಾಗಿದೆ ಎಂದು ಶಾ ಹೇಳಿದರು. ಕಾನೂನು-ಸುವ್ಯವಸ್ಥೆ ರಾಜ್ಯಗಳ ಹೊಣೆ. ಆದರೆ, ಭಯೋತ್ಪಾದಕರಿಗೆ ಗಡಿಗಳ ಮಿತಿ ಇಲ್ಲ. ಹಾಗಾಗಿಯೇ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಪೊಲೀಸ್ ಮತ್ತು ಭದ್ರತಾ ಪಡೆಗಳು ಜಂಟಿಯಾಗಿಯೇ ಭಯೋತ್ಪಾದನೆ ನಿಗ್ರಹಕ್ಕೆ ಶ್ರಮಿಸಬೇಕು. ಗುಪ್ತಚರ ಮಾಹಿತಿ, ಜಂಟಿ ತಂತ್ರಗಾರಿಕೆ ನಡೆಸಬೇಕು ಎಂದು ಶಾ ಹೇಳಿದರು.

ಜಗತ್ತೇ ಮೋದಿ ಪ್ರೀತಿಸುತ್ತೆ

ದೆಹಲಿ: ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆದ್ದ ನಂತರ ಕರೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಕೆಲ ನಿಮಿಷ ಮಾತನಾಡಿದರು.



ಸ್ನೇಹಿತ ಡೊನಾಲ್ಡ್ ಟ್ರಂಪ್ ಜತೆ ಅದ್ಭುತವಾದ ಸಂಭಾಷಣೆ ನಡೆಸಿದೆ. ತಂತ್ರಜ್ಞಾನ, ರಕ್ಷಣೆ, ಇಂಧನ, ಬಾಹ್ಯಾ ಕಾಶ ಮತ್ತು ಇತರ ಕ್ಷೇತ್ರಗಳಲ್ಲಿ ಭಾರತ- ಅಮೆರಿಕ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ನಾವು ಮತ್ತೊಮ್ಮೆ ಒಟ್ಟಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ ಎಂದರು. ಮೂಲಗಳ ಪ್ರಕಾರ, ಇಬ್ಬರೂ ನಾಯಕರು ವಿಶ್ವಶಾಂತಿಗಾಗಿ ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಭಾರತ ಅದ್ಭುತ ದೇಶ ಮತ್ತು ಪ್ರಧಾನಿ ಮೋದಿ ಅದ್ಭುತ ವ್ಯಕ್ತಿ. ಇಡೀ ಜಗತ್ತು ಪ್ರಧಾನಿ ಮೋದಿಯನ್ನು ಪ್ರೀತಿಸುತ್ತಿದೆ ಎಂದು ಟ್ರಂಪ್ ಹೇಳಿದ ಮೋದಿ ಮತ್ತು ಭಾರತವನ್ನು ನನ್ನ ನೈಜ ಸ್ನೇಹಿತ ಎಂದು ಪರಿಗಣಿಸುವ ಎಂದಿದ್ದಾರೆ.

ಜನವರಿಯಲ್ಲಿ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಡೊನಾಲ್ಡ್ ಟ್ರಂಪ್ ಭಾರತಕ್ಕೆ ಭೇಟಿ ನೀಡಲಿದ್ದಾರೆ. 2025ರಲ್ಲಿ ಭಾರತದಲ್ಲಿ ಕ್ವಾಡ್ ಲೀಡರ್ಸ್ ಶೃಂಗಸಭೆ ನಡೆಯಲಿರುವುದರಿಂದ ಅದರಲ್ಲಿ ಭಾಗವಹಿಸಲು ಟ್ರಂಪ್ ಭಾರತಕ್ಕೆ ಬರಲೇಬೇಕಿದೆ. ಆಗ ಟ್ರಂಪ್ ಮೋದಿ ಜತೆ ವಿಶೇಷ ಸಭೆ ನಡೆಸಲಿದ್ದಾರೆ ಎಂದು ಹೇಳಲಾಗಿದೆ.

ಫಲಿತಾಂಶ ಒಪ್ಪಿಕೊಳ್ಳುವೆ: ಕಮಲಾ

ವಾಷಿಂಗ್ಟನ್: ದೇಶದ ಸಂವಿಧಾನಕ್ಕೆ ನಾವು ಬದ್ಧರು. ಚುನಾವಣೆ ಫಲಿತಾಂಶ ಒಪ್ಪಿಕೊಳ್ಳುತ್ತೇವೆ. ಆದರೆ, ಚುನಾವಣೆ ಸಂದರ್ಭ ಕಿಚ್ಚು ಹೊತ್ತಿಸಿದ ಹೋರಾಟವನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಜಾಪ್ರಭುತ್ವ, ಕಾನೂನು-ನ್ಯಾಯಕ್ಕಾಗಿ ಹೋ ರಾಟ ಮುಂದು ವರಿ ಯಲಿದೆ ಎಂದು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಹೇಳಿದ್ದಾರೆ. ಅಧ್ಯಕ್ಷೀಯ ಚುನಾ ವಣೆ ಫಲಿತಾಂಶದ ಬಳಿಕ ಹಾರ್ವರ್ಡ್ ವಿವಿ ಆವರಣದಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಭಾಷಣ ಮಾಡಿದ ಕಮಲಾ, ಮುಂಜಾನೆ ಟ್ರಂಪ್ ಜತೆ ಮಾತನಾಡಿ ಚುನಾವಣೆ ಗೆಲುವಿಗೆ ಅಭಿನಂದಿಸಿದೆ. ಅಧಿಕಾರ ವರ್ಗಾವಣೆ ಪ್ರಕ್ರಿಯೆ ಸುಗಮವಾಗಿಸಲು ಸಹಕರಿಸುತ್ತೇವೆ ಎಂದು ಹೇಳಿದೆ ಎಂದರು. ಕರಾಳ ದಿನಗಳನ್ನು ಸಮೀಪಿಸುತ್ತಿದ್ದೇವೆಂಬ ಆತಂಕ ಜನರಲ್ಲಿದೆ. ಆದರೆ, ಹಾಗಾಗುವುದಿಲ್ಲ ಎಂದು ಭಾವಿಸುತ್ತೇನೆ ಎಂದರು.

ರಾಜಿ ಆದರೂ ಅತ್ಯಾಚಾರ ಕೇಸ್ ರದ್ದಾಗಲ್ಲ: ಸುಪ್ರೀಂ

ದೆಹಲಿ: ರಾಜಿಯಾದ ಮಾತ್ರಕ್ಕೆ ಲೈಂಗಿಕ ಕಿರುಕುಳ ಪ್ರಕರಣ ರದ್ದು ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. 2022ರಲ್ಲಿ ರಾಜಸ್ಥಾನದ ಗಂಗಾಪುರದಲ್ಲಿ ಸರಕಾರಿ ಶಾಲೆ ಶಿಕ್ಷಕ ವಿಮಲ್ ಕುಮಾರ್ ಗುಪ್ತಾ ವಿರುದ್ಧ ಅಪ್ರಾಪ್ತ ದಲಿತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಾಗಿತ್ತು. ಪೋಕ್ಸೊ ಕಾಯಿದೆ ಮತ್ತು ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಬಳಿಕ ಶಿಕ್ಷಕ ಸಂತ್ರಸ್ತೆ ಕುಟುಂಬದ ಜತೆ ರಾಜಿ ಮಾಡಿಕೊಂಡಿದ್ದ. ಆದರೆ, ವಿಚಾರಣಾ ನ್ಯಾಯಾಲಯ ರಾಜಿ ಒಪ್ಪದೇ ಆರೋಪಿ ಶಿಕ್ಷಕನಿಗೆ ಶಿಕ್ಷೆ ವಿಧಿಸಿತ್ತು. ನಂತರ ಶಿಕ್ಷಕ ರಾಜಸ್ಥಾನ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ರಾಜಿ ಪ್ರಸ್ತಾಪ ಒಪ್ಪಿದ ಹೈಕೋರ್ಟ್ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಿತ್ತು. ಬಳಿಕ ಸಾಮಾಜಿಕ ಕಾರ್ಯಕರ್ತರೊಬ್ಬರು ಹೈಕೋರ್ಟ್ ಕ್ರಮ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಸಿ.ಟಿ.ರವಿಕುಮಾರ್, ನ್ಯಾ.ಪಿ.ವಿ.ಸಂಜಯ್ ಕುಮಾರ್ ಅವರ ಪೀಠ, ಹೈಕೋರ್ಟ್ ಆದೇಶ ತಳ್ಳಿಹಾಕಿ ಶಿಕ್ಷಕನ ವಿರುದ್ಧ ಕಾನೂನು ಕ್ರಮ ಜರುಗಿಸಲು ಆದೇಶಿಸಿದೆ. ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ರಾಜಿ ಸೂತ್ರ ಅನ್ವಯವಾಗದು ಎಂದು ಸ್ಪಷ್ಟವಾಗಿ ಹೇಳಿದೆ.

ಶಾರುಖ್ ಖಾನ್‌ಗೆ ಕೊಲೆ ಬೆದರಿಕೆ: 50 ಲಕ್ಷಕ್ಕೆ ಬೇಡಿಕೆ

ಮುಂಬೈ: ಬಾಲಿವುಡ್ ನಟ ಶಾರುಖ್ ಖಾನ್ ಕೊಲೆ ಮಾಡುವುದಾಗಿ ಬೆದರಿಕೆ ಕರೆ ಬಂದಿದೆ. 50 ಲಕ್ಷ ರು.ಗೆ ಬೇಡಿಕೆ ಇಡಲಾಗಿದೆ. ಈ ಸಂಬಂಧ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



50 ಲಕ್ಷ ರು. ಹಣ ನೀಡದೇ ಇದ್ದರೆ ಶಾರುಕ್ ಖಾನ್ ಕೊಲ್ಲುವುದಾಗಿ ನ.5ರ ರಾತ್ರಿ ಬಾಂದ್ರಾ ಪೊಲೀಸ್ ಠಾಣೆಗೆ ಕರೆ ಬಂದಿತ್ತು. ಕರೆ ಸ್ವೀಕರಿಸಿದ ಪೊಲೀಸ್ ಸಿಬ್ಬಂದಿ ಹೆಸರು ಕೇಳಿದ್ದಕ್ಕೆ, ಅದೆಲ್ಲಾ ಮುಖ್ಯವಲ್ಲ. ಹೆಸರನ್ನು ಬರೆದುಕೊಳ್ಳುವುದಾದರೆ ಹಿಂದೂಸ್ತಾನಿ ಎಂದು ಬರೆಯಿರಿ ಎಂದು ಹೇಳಿ ಕರೆ ಕೊನೆಗೊಳಿಸಿದ್ದ ಎಂದು ಪೊಲೀಸರು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಬೆದರಿಕೆ ಕರೆ ಛತ್ತೀಸ್‌ಗಢ ರಾಜ್ಯದ ರಾಯಪುರದಿಂದ ಬಂದಿದೆ. ಕರೆ ಮಾಡಲಾದ ಫೋನ್ ನಂಬರ್ ಫೈಜಾನ್ ಹೆಸರಿನಲ್ಲಿ ನೋಂದಣಿಯಾಗಿದೆ ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಮುಂಬೈ ಪೊಲೀಸರ ತಂಡ ಗುರುವಾರವೇ ರಾಯಪುರಕ್ಕೆ ಪ್ರಯಾಣ ಬೆಳೆಸಿದ್ದು, ಫೈಜಾನ್ ಖಾನ್ ಎಂಬ ಯುವಕನಿಗಾಗಿ ಹುಡುಕಾಟ ನಡೆಸಿದ್ದಾರೆ.

ಲಘು ವಾಹನ ಚಾಲಕರಿಗೆ ಹೆಚ್ಚು ಪ್ರಯೋಜನ ಸಿಕ್ಕ ಖುಷಿ

ಲಘು ವಾಹನ ಡಿಎಲ್‌ನಲ್ಲಿ 7.5 ಟನ್ ಗೂಡ್ಸ್ ಚಾಲನೆ ಅವಕಾಶ

ದೆಹಲಿ: ಕಾರು ಸೇರಿದಂತೆ ಲಘು ಸಾಮರ್ಥ್ಯದ ವಾಹನಗಳ(ಎಲ್‌ಎಂವಿ) ಚಾಲನೆಗೆ ಪರವಾನಗಿ (ಡಿಎಲ್) ಪಡೆದಿರುವವರು ಗರಿಷ್ಠ 7,500 ಕಿಲೋ (7.5 ಟನ್) ಸಾಮರ್ಥ್ಯದ ಸರಕು ಸಾಗಣೆ ವಾಹನಗಳನ್ನೂ ಇನ್ನು ಮುಂದೆ ಚಲಾಯಿಸಬಹುದಾಗಿದೆ.

ಇಂಥದೊಂದು ಬಹು ಪ್ರಯೋಜನಕಾರಿ ಮಹತ್ವದ ಆದೇಶವನ್ನು ಸುಪ್ರೀಂ ಕೋರ್ಟ್ ಹೊರಡಿಸಿದ್ದು, ದೇಶಾದ್ಯಂತ ಎಲ್‌ಎಂವಿ ಡ್ರೈವಿಂಗ್ ಲೈಸೆನ್ಸ್ ಹೊಂದಿದ ಕೋಟ್ಯಂತರ ಮಂದಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗಲಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ಬುಧವಾರ ಈ ಮಹತ್ವದ ಆದೇಶ ಹೊರಡಿಸಿದೆ. ಎಲ್‌ಎಂವಿ ಡ್ರೈವಿಂಗ್ ಲೈಸೆನ್ಸ್ ಹೊಂದಿದವರು ಸರಕು ಸಾಗಣೆ ವಾಹನಗಳನ್ನು ಚಲಾಯಿಸಲು ಈವರೆಗೂ ಅವಕಾಶವಿರಲಿಲ್ಲ. ಪ್ರಾದೇಶಿಕ ಸಾರಿಗೆ ಕಚೇರಿ(ಆರ್‌ಟಿಒ) ಅಧಿಕಾರಿಗಳು, ಸಂಚಾರ ಪೊಲೀಸರೂ ತಪಾಸಣೆ ವೇಳೆ, ಎಲ್‌ಎಂವಿ ಡಿಎಲ್ ಹೊಂದಿದವರು ಲಘು ಗೂಡ್ಸ್ ವಾಹನಗಳನ್ನು ಚಲಾಯಿಸಿದ್ದು ಕಂಡರೆ ದಂಡ ವಿಧಿಸುತ್ತಿದ್ದರು. ಅಲ್ಲದೇ, ವಾಹನ ವಿಮಾ ಕಂಪನಿಯವರೂ ಎಲ್‌ಎಂವಿ ಡಿಎಲ್ ಹೊಂದಿದವರು ಲಘು ಸರಕು ಸಾಗಣೆ ವಾಹನ ಚಲಾಯಿಸಿ ಅಪಘಾತವೆಸಗಿದರೆ ಪರಿಹಾರ ಹಣ ಕೊಡಲು ನಿರಾಕರಿಸುತ್ತಿದ್ದರು. ಈಗ ಸುಪ್ರೀಂ ಕೋರ್ಟ್ ಪಂಚ ಪೀಠವೇ ಎಲ್‌ಎಂವಿ ಡಿಎಲ್ ಹೊಂದಿದವರಿಗೆ 7.50 ಟನ್ ವರೆಗಿನ ಸಾಮರ್ಥ್ಯದ ಸರಕು ಸಾಗಣೆ ಚಲಾಯಿಸಲು ಅನುಮತಿ ನೀಡಿ ಆದೇಶ ಹೊರಡಿಸಿರುವುದರಿಂದ 'ಲಘು ಚಾಲಕರ' ಸಮಸ್ಯೆಗೆ 'ದೊಡ್ಡ ಪರಿಹಾರ'ವೇ ಸಿಕ್ಕಂತಾಗಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **22.11.2024ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	46448730036372	ಭುಜಂಗೇಶ್ವರ ಪಿ ಪಿ	11.1
2	46448730036369	ರಮೇಶ ಆರ್	5.8
3	46448730036202	ಕೆ ಎಲ್ ಮಂಜು	5.1
4	46448730036181	ಜ್ಯೋತಿ	4.9
5	46448730036152	ರಾಜಮ್ಮ	7.9
6	46448160005956	ಸೋಮಣ್ಣ ಎಸ್ ಎಸ್	12.2
7	46448160005893	ಸ್ವಾಮಿ ಎಂ	12.2
8	46448160005815	ಶ್ರೀಕಾಂತ್ ಸಿ ಎಸ್	89.6
9	46448160005802	ರವಿ ಪಿ	31.2
10	46448160005791	ಶ್ರೀಕಾಂತ್ ಸಿ ಎಸ್	29.5
11	46448160005689	ಸೋಮಣ್ಣ	18
12	46448160001779	ರಾಜು ಎಂಎನ್	53.6
13	46448160001766	ಪದ್ಮರಾಜಪ್ಪ ಎಂ ಸಿ	51.9
14	46448160001753	ನಾಗರಾಜಯ್ಯ ಎಂ ಸಿ	54.4
15	46448160001575	ಮಾದೇಶ್ ಎಸ್	31.7
16	46448160001562	ಮಾದೇಶ್ ಎಸ್	41.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
17	33458730023989	ಸುಜಾತ ಶಿವಣ್ಣ	3
18	33458730023924	ಹೇಮಾವತಿ ಎನ್	6.4
19	33458160003676	ಬಿ ವಿ ದೇವಯ್ಯ	107.4
20	33458160003548	ಸ್ವಾಮಿ ಎಂ	30.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು-570017.			
21	31788730015330	ಅರ್ಶಿಯಾ ಬಾನು	3
22	31788730015277	ರಘು	6.06
23	31788160011121	ವಾಸುದೇವ ಸಿ ಎನ್	28.95
24	31788160011084	ಸುಪ್ರಿಯ ಸಿ	9.21
25	31788160010921	ಮಂಜುಳ ನಿಂಗೇಗೌಡ	7.8
26	31788160010911	ಪರಮೇಶ ಬಿ ಪಿ	36.19
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8-1-501-66, ವಾರ್ಡ್ ನಂ.8-ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ-573201, ಕರ್ನಾಟಕ.			
27	46458730007842	ಭರತ್ ಕೆ ಬಿ	15.6
28	46458730007839	ಮಂಜುನಾಥ್ ವಿ	5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್ ಹೊಸಕೋಟೆ-562114.			
29	31838730051112	ಭಾಗ್ಯ ವೆಂಕಟನಾರಾಯಣ್	8.7
30	31838730051088	ಕವಿತ ಸಿ ನಾಗರಾಜು	3.7
31	31838730051052	ಶ್ರೀದೇವಿ ಗೋಪಾಲ್ ರೆಡ್ಡಿ	3.9
32	31838730050925	ಮಂಜುಳ ರಮೇಶ್	5.7
33	31838730050862	ಶಾಂತಕುಮಾರಿ ಕೆ	3.5
34	31838730050852	ಚೇತನ್ ಎಸ್	4.6
35	31838730050823	ಗೌತಮಿ ಶ್ರೀನಿವಾಸ್	4.3
36	31838730050786	ಕುಮಾರ್ ಜಿ ವಿ	4
37	31838730050711	ರವಿ ಕೆವಿಎಲ್	8.8
38	31838160000352	ರವಿ ಕೆವಿಎಲ್	85
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಕರ್ನಾಟಕ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು-560061.			
39	45468160002758	ನರಸಿಂಹಮೂರ್ತಿ ಎಂ	89.7
40	45468160002745	ರುಕ್ಮಿಣಿ ಸಿ ಜಿ	9.3
41	45468160002732	ರುಕ್ಮಿಣಿ ಸಿ ಜಿ	24.3
42	45468160002528	ಕಮಲ ಕುಮಾರಿ ಕೆ ಎನ್	49.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್-1, ನಂ.27, ಗಂಗೋತ್ರಿ ರಸ್ತೆ, ತುಮಕೂರು-572101.			
43	45358730014623	ಭಾಗ್ಯಮ್ಮ ಶಿವಕುಮಾರ್	13.6
44	45358730014600	ಆಯಿಷಾ ಬಾನು ಸೈಯ್ಯದ್ ಶಬ್ಬೀರ್ ಅಹಮದ್	5.6
45	45358730014560	ವಿಜಯ್ ಕುಮಾರ್ ಡಿಬಿ	4.6
46	45358730014508	ಕೋಮಲ ಪ್ರಭಾಕರ್ ಬಿ ಕೆ	5.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು-560060, ಭಾರತ.			
47	30488730029790	ರತ್ನ ಚಂದ್ರಹಾಸ್ ಪಾಟೀಲ್	5.6
48	30488730029777	ರೇಷ್ಮಾ ಡಿ ಶಿಂಧೆ	3.4
49	30488730029751	ರಜಿಯಾ ಬೇಗಂ ಜಕಾತಿ	4
50	30488730029725	ಮಂಜುನಾಥ್ ಅರ್ಜುನ್ ಸುಲ್ಲದ್	28.22
51	30488730029702	ಒಡುಗೌಡ್ ಪಾಟೀಲ್	4.38
52	30488730029649	ಬಸವರಾಜ್ ಮಾಲಗಿಮನಿ	7.3
53	30488730029623	ಈರಪ್ಪ ವಾಲಿಕಾರ್	30
54	30488730029586	ಪ್ರಿಯಾಂಕ ಸಿ ಭಜಂತ್ರಿ	6.89
55	30488730029547	ತೋಸಿಫ್ ನಡಾಫ್	17.26
56	30488160000539	ಬಾಬು ಬೋಜಗಾರ್	32.72
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಲಿಂಗರೆಡ್ಡಿ ಕಟ್ಟಡ, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ-580002			
57	33648730030897	ಪ್ರಮೀಳಾ ಅಶೋಕ್ ಕುಮಾರ್	6.9
58	33648730030858	ಪ್ರಮೀಳಾ ಅಶೋಕ್ ಕುಮಾರ್	5
59	33648160000823	ದೀಪು ಎನ್	27.4
60	33648160000810	ಗಂಗಾ ಲಕ್ಷ್ಮಿ	51.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 12, 1ನೇ ಮಹಡಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಿ ಆರ್ ಪಾಳ್ಯ, ಬೆಂಗಳೂರು-560072.			
61	33638730056740	ಕಫಿಲ್ ಪಾಶಾ	15.4
62	33638730056687	ಶಿರಿನ್‌ತಾಜ್ ರಿಯಾಜ್‌ಪಾಶಾ	5.2
63	33638730056674	ಶಬ್ನಮ್ ತಾಜ್	16.5
64	33638730056648	ಲೀಲಾ ಬಿ	4.4
65	33638730056418	ಕಿರಣ್ ಎಂ	11.6
66	33638730056355	ಎನ್ ಟಿ ಲಕ್ಷ್ಮಿ ನರಸಿಂಹಯ್ಯ	7.7
67	33638730056253	ಕೃಷ್ಣಮೂರ್ತಿ ವಿ	6.53
68	33638730056214	ಕಿರಣ್ ಎಸ್	4.5
69	33638730056190	ಪ್ರಭು ಜಿಬಿ	24.2
70	33638730046942	ಗುರು ಎಸ್ ಕೆ	49.65
71	33638160000604	ಉಮಾ ಎಸ್	73.7
72	33638160000593	ಅಭಿಲಾಶ್ ಎ ಎಸ್	52.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ನಂ.4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023.			
73	34018730022981	ಗುಲ್ಜರ್ ಬೇಗಂ ಖಾದರ್ ವಾಲಿ	4.5
74	34018730022971	ಹನುಮ ಎಂ	4.7
75	34018730022882	ನಜೀಮಾ ಸೈಯ್ಯದ್ ಅಕ್ಬರ್	3
76	34018730022879	ಪೂವಿಜಿ ಜಿ	24.8
77	34018730022801	ಪ್ರಿಯ ಸುಬ್ರಮಣ್ಯ	5
78	34018730022764	ಎಂ ಮುನಿಯಪ್ಪ	25.2
79	34018160001333	ನವೀನ್ ಕುಮಾರ್ ವಿ	15.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007-ಡಬ್ಲ್ಯು0377-73-1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು-560092			
80	32908730015408	ಲಕ್ಷ್ಮಿ ಮಂಜುನಾಥ	3
81	32908730015384	ಇಂದ್ರಾಣಿ ಎಸ್	7.6
82	32908730015319	ಉಮಾ ಮಹೇಶ್ವರಿ ಕಬಿಲ ಕುಮಾರ್	3.9
83	32908730015295	ರೇಷ್ಮಾ ಸಿ	3.48
84	30138730031864	ಕೇಶವಮೂರ್ತಿ ಸಿ	24.47
85	30138730031838	ಮಹದೇವಮ್ಮ ಎಂ	6.8
86	30138730031621	ಸುಷ್ಮಾ ಶ್ರೀನಿವಾಸ್	3.4
87	30138730031532	ಮೀನಾ ಬಿ	24
88	30138160004966	ಟಿ ಬಸವರಾಜು	53.8
89	30138160004930	ಕೇಶವ ಮೂರ್ತಿ ಸಿ	19.36
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ-408, ಯೋಗ ಸ್ಪಂದನ ಕಾಂಪ್ಲೆಕ್ಸ್, 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು-560016.			
90	31128730034389	ಹಾಲೇಶ್ ನಾಯ್ಕ್	7.12
91	31128730034311	ಮಂಜಪ್ಪ ಬಿ	5.2
92	31128730034290	ಪುಷ್ಪಲತ ಜಯರಾಮ್ ರಾವ್	15.38
93	31128730034287	ಶಿವ ಕುಮಾರ ಬಿ	5.1
94	31128160003200	ನೂರುಲ್ಲಾ	17.05
95	31128160003147	ಕವಿತ ಬಾಯಿ ಯು	60.86
96	31128160003134	ಕವಿತ ಬಾಯಿ ಯು	38.49
97	31128160003097	ಕಾವ್ಯ ಎನ್ ಎಸ್	75.47
98	31128160003084	ಮಮತ ಕೆ ಕೆ	83.11
99	31128160003071	ಸಿದ್ದೇಶ	16.6
100	31128160003061	ಸಿದ್ದೇಶ	12.6
101	31128160003032	ಅನು ಸಿ	5.93
102	31128160003006	ಬಿ ಬಿ ಜನ್	29.8
103	31128160002999	ಪ್ರಶಾಂತ ಕುಮಾರ	71.44
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ-577202.			
104	32568730025031	ಭಾಗ್ಯಮ್ಮ ಎ	3.7
105	32568160003627	ಜಿ ಯಲ್ಲಪ್ಪ	57.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಕೆಸ್‌ಆರ್‌ಟಿಸಿ ಬಸ್ ನಿಲ್ದಾಣ, ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಹತ್ತಿರಬೆಂಗಳೂರು-562106.			
106	46988160004351	ಭೀಮರಾಜು ಎನ್	62.6
107	46988160004291	ಆನಂದ ಕುಮಾರ್	19.6
108	46988160004147	ಆನಂದ ಕುಮಾರ್	49.3
109	46988160004134	ಆನಂದ ಕುಮಾರ್	43.7
110	46988160003861	ಶಿವಕುಮಾರ್ ಯಾದವ್ ಬಿ ಎನ್	106.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಡಿ ಕ್ರಾಸ್, ನಂದಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು-561203.			
111	32508160000760	ಶಿವಮ್ಮ ಸಂಪಂಗಿ	21.3
112	32508160000622	ಶಿವ ಶಕ್ತಿ	92.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್-560068			
113	30948730019157	ಸಂತೋಷ್ ಎಸ್	10.8
114	30948730019105	ಜಿ ವರುಣ್	2.3
115	30948730019081	ಮಹದೇವ	2.8
116	30948730019042	ರೇಖ ಶಿವಮೂರ್ತಿ	2.6
117	30948730018970	ಸತೀಶ್ ಹೆಚ್ ಆರ್	20.3
118	30948730018921	ಮಹದೇವಮ್ಮ ಸಿದ್ದರಾಜು	2.6
119	30948160002492	ಅಭಿಷೇಕ್ ಹೆಚ್ ಎಸ್	92.1
120	30948160002450	ಅಭಿಷೇಕ್ ಗೌಡ ಕೆ ಡಿ	124.9
121	30948160002440	ರಾಜೇಶ ಎಂ	30.1
122	30948160002348	ಹರೀಶ	15.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು-570009.			
123	30198730035747	ರುತ್ ಎ	12
124	30198730035708	ಸುಧಾ ಹರಿ ಕೃಷ್ಣ	4.1
125	30198730035697	ಜಗದೀಶ್ವರಿ ಮಂಕ್ಯಂ	5.1
126	30198730035467	ಜೈಬಾ ಖನುಮ್ ಎ	6.6
127	30198730035378	ದೀಪಾ ಕೆ	20.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು-560027.			
128	45448730004533	ಸಣ್ಣಯಲ್ಲಪ್ಪ ಡಾಲಿನ್	40.3
129	45448730004405	ಪರ್ವಿನ್‌ಬಾನು ಮಾರ್ಟ್‌ಜನಲ್ಲಿಸಾಬ್	3.6
130	45448730004381	ಸವಿತ ದೊಡ್ಡಮಾಣಿ	3.1
131	45448730004342	ಶಬೀರಾ ಅಬ್ಬಾಸ್ ಆಲಿ	3.25
132	45448730003977	ಹೀನಾ ಯದವಾಡ್	4.2
133	45448730003964	ಹೀನಾ ಯದವಾಡ್	6.7
134	45448160001202	ರುಸ್ತುಂಬಿ ರಾಜಕ್ಕನವರ್	51.05
135	45448160001165	ಪದ್ಮಾ ಬೋಜಗಾರ್ ಬೋಜಗಾರ್	43.6
136	45448160001152	ಸಿದ್ದಲಿಂಗಸ್ವಾಮೀಜಿ ಹಿರೇಮಠ್	24.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಬಿವಿಬಿ ಇಂಜಿನಿಯರಿಂಗ್ ಕಾಲೇಜು ಎದುರು ರೆನಾಲ್ಟ್ ಷೋರೂಮ್ ಹತ್ತಿರ, ಪಿ.ಬಿ. ರಸ್ತೆ, ವಿದ್ಯಾನಗರ, ಹುಬ್ಬಳ್ಳಿ			
137	45398160001452	ರವೂಫ್ ಸೌದಾಗರ್	7.2
138	45398160001442	ಮೊಹಮ್ಮದ್ ಅತ್ತರ್	10.8
139	45398160001439	ಮೊಹಮ್ಮದ್ ಅತ್ತರ್	62.3
140	45398160001413	ರವೂಫ್ ಅಹಮದ್ ಮೊಹಮ್ದ್ ಸೌದಾಗರ್	11.3
141	45398160001392	ಮೊಹಮ್ಮದ್ ಅತ್ತರ್	39.5
142	45398160001363	ಪ್ರಶಾಂತ್ ಸುತರ್	30.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಕ್ ಟವರ್, ಬಿಗ್ ಬಜಾರ್ ಹತ್ತಿರ ಖಾನಾಪುರ ರಸ್ತೆ, ಬೆಳಗಾವಿ-590003.			
143	46658730022337	ನಯೇಜ್ ಬೇಗ್ ಎ	6.4
144	46658160002777	ಸುರೇಶ್ ಸಿ ಎನ್	8.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು-562110.			
145	45438730008300	ಹರೀಶ್ ಕೆ ಎಂ	15
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ಶಾಮನೂರು ರಸ್ತೆ, ದಾವಣಗೆರೆ-577004.			
146	33878730040592	ಶಾರದಮ್ಮ ರಾಮಣ್ಣ	3.9
147	33878730040527	ವಾಣಿಶ್ರೀ ಜಿ	102.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ-408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು-560016.			
148	31888730024878	ಹಸೀನಾ	6
149	31888730024690	ಜಯಮ್ಮ ರವಣಯ್ಯ ಟಿ	2.7
150	31888730024651	ಶಿವಶಂಕರಿ ಗುಣಶೇಖರ್	4.1
151	31888730024609	ಕೀರ್ತನ	4.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85-6-22 ಸರ್ವಜ್ಞನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-560005.			
152	31878730043087	ಇಂದುಮತಿ ಬಿ	4
153	31878730043048	ಎನ್ ನಾಗರಾಜ್	6
154	31878730043022	ರವನಮ್ಮ ವೆಂಕಯ್ಯ	4.4
155	31878730043009	ಆದಿ ಲಕ್ಷ್ಮಮ್ಮ	111.1
156	31878730042976	ಸನತ್ ಕುಮಾರ್ ಕೆ ವಿ	4.45
157	31878730042950	ನವೀನ್ ಆರ್	15.3
158	31878160001771	ಆರತಿ ಡಿ	23.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273-ಬಿ, ಕೊ-ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು-560078.			
159	31768730016415	ಮಂಜುನಾಥ್ ಝುರೆಪ್ಪ ಡಿ	5
160	31768730016402	ಪ್ರೀತಮ್	6
161	31768730016365	ಮಾರುತಿ ಬಾಭು ಕುಂಬಾರ್ ಕೆ	5.8
162	31768730016190	ಪಂಚ್ ಶೀಲ ಎಸ್	4.1
163	31768730016112	ಆಯೇಷಾ ಬೇಗಂ ಅಸಿಫ್ ಖಾನ್	5.1
164	31768730016109	ಯೂನುಸ್ ಖಾನ್ ಪಿ	12.2
165	31768160002071	ಸೋಮಶೇಖರ್ ವಿ	10.8
166	31768160002042	ಉತ್ತಿಮ ಡಬ್ಲ್ಯು	6
167	31768160001983	ಸಂತೋಷ್ ಶಿವರಾಜ್	12.5
168	31768160001868	ಸಂಜುಕುಮಾರ್	8.99
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಶಿವಶಕ್ತಿ ಟವರ್ ಕೆಳಭಾಗ ಶಿವನಗರ ಉತ್ತರ, ಬೀದರ್ - 585401			
169	31138730054445	ಸಲ್ಮಾ ಸಮೀರ್	10.8
170	31138730054372	ಹುಸೇನ್ ಸಾಬ್ ಜತ್ಗರ್	9.5
171	31138730054330	ಮಧು ರವಿ ನಾಯಕ್	3.1
172	31138730054304	ತುಕಾರಾಂ ದೊಡ್ಡಮಾಣಿ	4.2
173	31138730054092	ಸಮೀನಾ ಹುಸೇನ್‌ಸಾಬ್ ಮದಭಾವಿ	2.4
174	31138730054050	ಶುಬುದ್ದಿನ್ ಪಠಾಣ್	3.4
175	31138730030238	ಶಿವಂದ ಹಿರೇಮಠ್	5
176	31138160002706	ಸುನಂದ ಪ್ರಕಾಶ್ ಪವಾರ್	10.8
177	31138160002669	ಸತೀಶ್ ಪಾಂಡುರಂಗ್ ರಾಥೋಡ್	10.3
178	31138160002620	ಲತಿಫ್‌ಅಹಮದ್ ಶಫಿ ಅಹಮದ್ ಮುಲ್ಲಾ	14.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ-586101			
179	45488730013017	ಅನಂತ್ ಕುಮಾರ್ ದೇಸಾಯಿ	5.04
180	45488730012984	ಉಮ್ಮೈರ್ ಎಸ್	4.8
181	45488730012971	ಸುನಿಲ್ ಜಿ	3.3
182	45488730012830	ಬಸವರಾಜ್	6
183	45488730012820	ಚಂದ್ರು ಸಿ	5.3
184	45488730012731	ನಿರ್ಮಲ ಕೆ	7.2
185	45488160005212	ಎಸ್ ಮುತ್ತಣ್ಣ	23.3
186	45488160004601	ವೆಂಕಟೇಶ್ ವಿ	11.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ			
187	33818730027877	ಅನಂತ್ ಕುಮಾರ್ ದೇಸಾಯಿ	24
188	33818730027723	ಉಮ್ಮೈರ್ ಎಸ್	6.9
189	33818730027700	ಸುನಿಲ್ ಜಿ	6.5
190	33818730027443	ಬಸವರಾಜ್	11.6
191	33818160004160	ಚಂದ್ರು ಸಿ	9.4
192	33818160004150	ನಿರ್ಮಲ ಕೆ	15.9
193	33818160004097	ಎಸ್ ಮುತ್ತಣ್ಣ	29.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ-577004			
194	31988730030322	ಕುಬೇರ ಎಸ್	28.4
195	31988730030298	ಕೆ ರೇಷ್ಮಾ	2.9
196	31988730030285	ಶಫೀವುಲ್ಲಾ ಸಿ	3.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1, ಮಹಡಿ, ಮೋಕಾ ರಸ್ತೆ, ಗಾಂದಿನಗರ ಮಾರುಕಟ್ಟೆ, ಬಳ್ಳಾರಿ-583101, ಕರ್ನಾಟಕ.			
197	45458730023065	ಅನಿತ ಪವಾರ್	8
198	45458730023013	ಚನ್ನವೀರ್ ಜೆ	7.9
199	45458730022970	ಗಣೇಶ್ ರಾಥೋಡ್	9.9
200	45458730022842	ದಿಲೀಪ್ ಕುಮಾರ್	3.2
201	45458730022776	ಶಹೆನಾಜ್ ಬೇಗಂ	18.4
202	45458730022750	ನವ್‌ನಾತ್ ಸೀತಾರಾಮ್ ಚವನ್ ಸೀತಾರಾಮ್ ಚವನ್	4.98
203	45458160002934	ದಶರಥ್	10.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2-907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ- 590003.			

ಸ್ಥಳ: ಕರ್ನಾಟಕ
ದಿನಾಂಕ: 08.11.2024

ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಕನಕರಾಯ ನಾಯಕಗೆ ಸೇವಾರತ್ನ ಪ್ರಶಸ್ತಿ

ಮಸ್ಕಿ: ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ರಾಜ್ಯಶಾಸ್ತ್ರ ಸಂಶೋಧಕರು, ಬರಹಗಾರರಾದ ಮಸ್ಕಿ ತಾಲೂಕಿನ ಮುದಬಾಳ ಗ್ರಾಮದ ಕನಕರಾಯ ಕೆ ಎಸ್ ನಾಯಕ್ ಅವರಿಗೆ ಮಹರ್ಷಿ ವಾಲ್ಮೀಕಿ ಗುರುಕುಲ ಪೀಠದಿಂದ ನೀಡಲಾಗುವ ಶ್ರೀ ವಾಲ್ಮೀಕಿ ಸೇವಾ ರತ್ನ 2024 ರಾಜ್ಯ ಪ್ರಶಸ್ತಿ ಪುರಸ್ಕಾರ ಸಂದಿದೆ. ರಾಜ್ಯ ಮಟ್ಟದ ವಾಲ್ಮೀಕಿ ಸೇವ ರತ್ನ ಪ್ರಶಸ್ತಿಯನ್ನು ನವೆಂಬರ್ 9 ರಂದು ಬೆಂಗಳೂರಿನ ಬಾಪೂ ಸಭಾಂಗಣದಲ್ಲಿ ವಾಲ್ಮೀಕಿ ಬ್ರಹ್ಮಾನಂದ ಗುರೂಜಿಯವರು ಪ್ರಧಾನ ಮಾಡಲಿದ್ದಾರೆ.

ಓಟ ಸ್ಪರ್ಧೆ: ಬಿಸ್ಮಿಲ್ಲಾ ರಾಜ್ಯ ಮಟ್ಟಕ್ಕೆ ಆಯ್ಕೆ

ಲಿಂಗಸೂಗೂರು: ಪಟ್ಟಣದ ಶ್ರೀ ಸಂಗಮೇಶ್ವರ ಪದವಿ ಕಾಲೇಜಿನ ವಿದ್ಯಾರ್ಥಿನಿ ಬಿಸ್ಮಿಲ್ಲಾ ದಸ್ತಗೀರ ಬಾಷಾ ಖೈರವಾಡಗಿ 10 ಕಿ.ಮೀ ಮ್ಯಾರ ಥಾನ್ ಓಟದಲ್ಲಿ ಭಾಗವಹಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ ಎಂದು ಪ್ರಾಚಾರ್ಯ ಬಸವರಾಜ ವೈ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ರಾಯಚೂರು ವಿಶ್ವವಿದ್ಯಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಬಾಷುಮಿಯಾ ಸಾಹುಕಾರ ಪ್ರಥಮ ದರ್ಜೆ ಕಾಲೇಜು ಮಾನ್ವಿ ಅವರ ಸಹಯೋಗದಲ್ಲಿ 2024-25ನೇ ಸಾಲಿನ ವಿಶ್ವವಿದ್ಯಾಲಯ ಮಟ್ಟದ ಅಂತರ್ ಕಾಲೇಜುಗಳ ಮ್ಯಾರಥಾನ್ ಓಟ ಸ್ಪರ್ಧೆ ನಡೆದಿತ್ತು. ವಿದ್ಯಾರ್ಥಿನಿಯ ಸಾಧನೆಗೆ ಶ್ರೀ ಸಂಗಮೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಸರೋಜಿನಿದೇವಿ ಪಾಟೀಲ, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿ, ಶುಭ ಕೋರಿದ್ದಾರೆ

ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ

ರಾಯಚೂರು: ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಪ್ರತಿ ವರ್ಷವೂ ನವೆಂಬರ್ ತಿಂಗಳನ್ನು ಅಂತರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವುದು ಪ್ರತಿಯೆ ೂಂದು ಮಗುವಿನ ಹಕ್ಕು ಮಗುವಿನ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತಾವ ರಣವು ಕಲ್ಪಿಸುತ್ತಿದ್ದು, ಈ ನಿಟ್ಟಿನಲ್ಲಿ ದತ್ತು ಪ್ರಕ್ರಿಯೆ ಯು ಅನಾಥ, ಪರಿತ್ಯಕ್ತ ಹಾಗೂ ಒಪ್ಪಿಸಲ್ಪಟ್ಟ ಮಕ್ಕಳ ಪುನರ್ವಸತಿಗೆ ನೆರವಾಗುವುದು ಮಕ್ಕಳ ರಕ್ಷಣಾ ಯೋಜನೆಯ ಉದ್ದೇಶವಾಗಿರುತ್ತದೆ. ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಪ್ರತಿ ವರ್ಷವೂ ನವೆಂಬರ್ ತಿಂಗಳನ್ನು ಅಂತರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಕಾನೂನಾತ್ಮಕ ದತ್ತು ಪಡೆಯಲು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಲಯ ಮ.ನಂ.1-9-138 ಮಾರೆಮ್ಮ ದೇವಸ್ಥಾನದ ಹತ್ತಿರ, ಆಜಾದ ನಗರ ರಾಯಚೂರು ದೂರವಾಣಿ ಸಂಖ್ಯೆ: 08532-226226ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ರಾಯಚೂರು: ತಾಲೂಕಿನ ಶಕ್ತಿನಗರ ಉಪ-ವಿಭಾಗದ ಜೆಸ್ಕಾಂ ವ್ಯಾಪ್ತಿಯಲ್ಲಿ ಬರುವ 110/11 ಕೆವಿ ಶಕ್ತಿನಗರ ಮತ್ತು ಚಿಕ್ಕಸೂಗೂರು ಉಪ-ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡ ಪ್ರಯುಕ್ತ ಇದೇ 2024ರ ಇಂದು ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ ದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಪಾಲನ ಮತ್ತು ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಯಚೂರು ನಗರಸಭೆ: ಜಾಹೀರಾತು ನಿಷೇಧ

ರಾಯಚೂರು: ರಾಯಚೂರು ನಗರಸಭೆ ವ್ಯಾಪ್ತಿ ಯಲ್ಲಿ ಈಗಾಗಲೇ ರಾಯಚೂರು ನಗರಾದ್ಯಂತ ಜಾಹೀರಾತು ನಾಮಫಲಕಗಳನ್ನು ಖಾಸಗಿಯ ಮತ್ತು ಸಾರ್ವಜನಿಕ ಸ್ಥಳದಲ್ಲಿ ವಿವಿಧ ಜಾಹೀರಾತು ಪ್ರಕಟಿಸಲು ಅನುಮತಿ ಪಡೆದಿರುವ ಸಂಸ್ಥೆಗಳು ಲಭ್ಯವಿದ್ದು ಸಾರ್ವಜನಿಕರು ಮತ್ತು ಜಾಹೀರಾತು ಪ್ರಕಟಿಸಲು ಅನಧಿಕೃತ ಸ್ಥಳಗಳನ್ನು ಬಳಸುತ್ತಿರು ವುದು ಪಾದಚಾರಿಗಳಿಗೆ ಮತ್ತು ವಾಹನ ಚಾಲಕರಿಗೆ ತೊಂದರೆ ಉಂಟಾಗುವ ರೀತಿಯಲ್ಲಿ ನಗರಾದ್ಯಂತ ಜಾಹೀರಾತು ಪ್ರಕಟಿಸುವುದು ನಿಷೇಧಿಸಲಾಗಿರುತ್ತದೆ.

ಗಂಗಾವತಿ ಪೌರಾಯುಕ್ತ ವಿರೂಪಾಕ್ಷ ಮೂರ್ತಿ ವಿರುದ್ಧ ವಂಚನೆ ಆರೋಪ | ಆದೇಶ ಉಲ್ಲಂಘಿಸಿ ಫಾರಂ ನಂ 3 ವಿತರಣೆ

ಸಿಎಂಸಿ ಪೌರಾಯುಕ್ತರ ವಿರುದ್ಧ ಎಫ್ಐಆರ್ !

ಶರಣಬಸವ ಹುಲಿಹೈದರ/ ವೀರೇಂದ್ರ ಪಾಟೀಲ್, ಕೊಪ್ಪಳ/ ಕಾರಟಗಿ

ಜಿಲ್ಲೆಯ ಗಂಗಾವತಿ ನಗರಸಭೆ ಪೌರಾಯುಕ್ತ ವಿರೂಪಾಕ್ಷ ಮೂರ್ತಿ ವಿರುದ್ಧ ಎಫ್ಆರ್ ದಾಖಲಾಗಿದ್ದು, ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಸಿಂಧನೂರು ನಗರದ ಹೃದಯ ಭಾಗದಲ್ಲಿನ ಸುಮಾರು 3.20 ಎಕರೆ ಗೃಹ ಉಪಯೋಗಿ ಎನ್ ಎ ಭೂಮಿಯ ಬಹು ಕೋಟಿ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ. ಈ ಬಗ್ಗೆ ಕೊಪ್ಪಳ ಜಿಲ್ಲೆ ಕಾರಟಗಿ ಮೂಲದ ಪ್ರದೀಪ ಕುಮಾರ ಎಂಬುವರು ನೀಡಿದ ದೂರು ಆಧರಿಸಿ, ಸಿಂಧನೂರು ನಗರದ ಪೊಲೀಸ್ ಠಾಣೆಯಲ್ಲಿ ವಿರೂಪಾಕ್ಷ ಮೂರ್ತಿ ಸೇರಿ 9 ಜನರ ವಿರುದ್ಧ ಎಫ್ಐಆರ್ ಆಗಿದೆ. ವಂಚನೆ, ಅಧಿಕಾರ ದುರುಪಯೋಗ ಖೊಟ್ಟಿ ದಾಖಲೆ ಸೃಷ್ಠಿ ಸೇರಿ ವಿವಿಧ ಕಲಂನಡಿ ಪ್ರಕರಣ ದಾಖಲಾಗಿದೆ.

ಕೊಟ್ಟಿ ದಾಖಲೆ ಸೃಷ್ಠಿಸಿ, ಸಂಬಂಧವೇ ಇಲ್ಲದ ವ್ಯಕ್ತಿಗಳ ಹೆಸರಿಗೆ ಸುಮಾರು 30 ಪ್ಲಾಟ್ ಗಳ ಹಕ್ಕು ಬದಲಾವಣೆ ಮಾಡಲಾಗಿದೆ. ಅಷ್ಟೇ ಅಲ್ಲದೇ ಕಲಬುರಗಿ ಪೌರಾಯುಕ್ತರ ಆದೇಶ ಉಲ್ಲಂಘಿಸಿ ಫಾರಂ-3 ನೀಡಿರುವ ಆರೋಪದಡಿ ಪ್ರಕರಣ



ಕರ್ನಾಟಕ ರಾಜ್ಯ ಪೊಲೀಸ್
ಪ್ರಥಮ ವರ್ತಮಾನ ವರದಿ
(ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 173 BNSS ರ ಕೆಳಗೆ)
ಘನ ನ್ಯಾಯಾಲಯ : Prl. Civil Judge(Jr.Dn) & JMFC Court,Sindhanoor, Raichur Dist.

1. ಜಿಲ್ಲೆ : Raichur ವೃತ್ತ/ಉಪ ವಿಭಾಗ : Sindhanoor Sub-Division ಪೊಲೀಸ್ ಠಾಣೆ : Sindhanoor Town PS
ಅಪರಾಧ ಸಂಖ್ಯೆ : 0172/2024 ಪ್ರ.ವ.ವ.ದಿನಾಂಕ : 05/11/2024

2. ಕಾಯ್ದೆ ಮತ್ತು ಕಲಂಗಳು : IPC 1860 (U/s-120B,415,420,464,465,468,470,471)

3. (a) ಕೃತ್ಯ ನಡೆದ ದಿನ : Wednesday ದಿನಾಂಕ ದಿಂದ : 01/01/2014 ದಿನಾಂಕ ವರೆಗೆ : 01/01/2017
ವೇಳೆಯಿಂದ : 00:00:00 ವೇಳೆಯವರೆಗೆ : 00:00:00
(b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 05/11/2024 16:30:00 ಬರವಣಿಗೆಯಲ್ಲಿ / ಹೇಳಿಕೆ : Written
(c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :
(d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 11 , 16:30:00

4. (a) ಕೃತ್ಯ ನಡೆದ ಸ್ಥಳ :
CMC OFFICE, SINDHANUR, Raichur, Karnataka, 584128
(b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : TO WORDS NORTH 500 METERS
(c) ಗ್ರಾಮ : KOTE AREA ಗಸ್ತಿನ ಹೆಸರು : BEAT 05
(d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :
ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :
(a) ಹೆಸರು : PRADEEP KUMAR ತಂದೆ / ಗಂಡನ ಹೆಸರು : TIMMAPPA PARASI
(b) ವಯಸ್ಸು : 36 (c) ವೃತ್ತಿ : Others Pl Specify
(d) ಧರ್ಮ : Hindu (e) ಜಾತಿ : KABBERA / KABBER
(f) ಫ್ಯಾಕ್ಸ್ : (g) ಇ-ಮೇಲ್ : pradeepparasi47@gmail.com
(h) ದೂರವಾಣಿ : 9686351244 (i) ರಾಷ್ಟ್ರೀಯತೆ : India
(j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

ಎಫ್ಐಆರ್ ಪ್ರತಿ

ದಾಖಲಾಗಿದೆ. ಹಕ್ಕು ವರ್ಗಾವಣೆ ಮಾಡಿಕೊಂಡಿರುವ ಸುಮಂಗಲ, ರೋಹಿತಕುಮಾರ, ಪಿ.ಭರತಕುಮಾರ, 2014-17ರ ವರೆವೆ ಪೌರಾಯುಕ್ತರಾಗಿದ್ದ ವಿ.ರಮೇಶ, ಆರ್. ವಿರೂಪಾಕ್ಷಮೂರ್ತಿ, ಕಂದಾಯ ನಿರೀಕ್ಷಕ ಕೆ. ಮುನಿಸ್ವಾಮಿ, ಕರವಸೂಲಿಗಾರ ಅಮರೇಶ, ಮ್ಯಾನೇಜರ್ ಗುರುರಾಜ ಹಾಗೂ ಸಿಬ್ಬಂದಿ ನಸ್ರೀನಾ ವಿರುದ್ಧ ಎಫ್ಐಆರ್ ದಾಖಲಾಗಿದೆ.

> ನಾನು ಕಾನೂನು ಹೋರಾಟ ಮಾಡುವಾಗ ಸಾಕಷ್ಟು ಅಡೆತಡೆ ಸಂಕಷ್ಟ ಎದುರಿಸಿದ್ದೇನೆ. ಈಗ ಕಲಬುರ್ಗಿ ಹೈ ಕೋರ್ಟ್ ನಮ್ಮ ಪರ ಆದೇಶ ನೀಡಿದೆ. ಹಣ ಕೊಟ್ಟರೆ ಏನಾದರೂ ಮಾಡಬಹುದು ಎಂಬುದಕ್ಕೆ ಈ ಪ್ರಕರಣ ಸಾಕ್ಷಿ.
> - ಪ್ರದೀಪ ಕುಮಾರ, ದೂರುದಾರ

ಏನಿದು ಪ್ರಕರಣ?: ತಿಮ್ಮಣ್ಣ ಎಂಬುವರು ಕಳೆದ 1970ರಲ್ಲಿ ಸಿಂಧನೂರು ನಗರದ ಹೃದಯ ಭಾಗದಲ್ಲಿನ ತಮ್ಮ 3.20 ಜಮೀನು ಗೃಹ ಉಪಯೋಗಿ ಬಳಕೆಗೆ ಎನ್ ಎ ಮಾಡಿ ಸುಮಾರು 50 ಪ್ಲಾಟ್ ರಚನೆ ಮಾಡಿದ್ದಾರೆ. ಇದರಲ್ಲಿ ಸುಮಾರು 20 ನಿವೇಶನ ಮಾರಾಟ ಮಾಡಿದ ನಂತರ 1991ರಲ್ಲಿ ತಿಮ್ಮಣ್ಣ ಮೃತಪಟ್ಟಿದ್ದಾರೆ. ಈ ವೇಳೆ ಮೃತನ ಅಣ್ಣ ಮತ್ತವರ ಮಕ್ಕಳು ತಿಮ್ಮಣ್ಣನ ಪತ್ನಿ ಶಾರದಮ್ಮಗೆ ಕಿರುಕುಳ ನೀಡಿದ್ದರಿಂದ ತನ್ನ ಮೂವರು ಮೂವರು ಸಣ್ಣ ಮಕ್ಕಳ ಜತೆಗೆ ತವರು ಕಾರಟಗಿ ಪಟ್ಟಣಕ್ಕೆ ಬಂದು ಕೂಲಿ ಮಾಡಿ ಜೀವನ ಮಾಡಿದ್ದಾಳೆ.

ಕೆಲ ವರ್ಷದ ನಂತರ ತಮ್ಮ ಪತಿಯ ಆಸ್ತಿ ಬಗ್ಗೆ ಕೇಳಿದಾಗ ತಿಮ್ಮಣ್ಣನ ಅಣ್ಣ ಬಸಪ್ಪ ಅವರು, ನಿಮ್ಮ ಪತಿಯ ಹೆಸರಿನಲ್ಲಿ ಯಾವುದೇ ಆಸ್ತಿ ಉಳಿದಿಲ್ಲ. ಎಲ್ಲ ಮಾರಾಟ ಮಾಡಿದ್ದಾರೆ ಎಂದು ಹೇಳಿ ಕಳುಹಿಸಿದ್ದಾರೆ. ನಂತರ ಕಳೆದ 1991ರಿಂದ 2017ರ ವರೆಗೆ ಈ ಬಾಕಿ ನಿವೇಶನಕ್ಕೆ ಯಾರೂ ಕರ ಪಾವತಿ ಮಾಡಿಲ್ಲ. ಈ ವೇಳೆ ತಿಮ್ಮಪ್ಪ ಅವರ ಅಣ್ಣ ಬಸಪ್ಪ ಅವರ ಮಗ ನಾಗರಾಜ ಎಂಬುವರು ಆಗಿನ ನಗರಸಭೆ ಪೌರಾಯುಕ್ತ ರಮೇಶ ವಟಗಲ್ ಅವರೊಂದಿಗೆ ಶಾಮೀಲಾಗಿ, ತಿಮ್ಮಪ್ಪ ಅವರ ಹೆಸರಿನಲ್ಲಿ ಇರುವ ಬಾಕಿ ಪ್ಲಾಟ್ ಗಳನ್ನು ಯಾವುದೇ ದಾಖಲೆ ಇಲ್ಲದೇ ನಾಗರಾಜ ಹೆಸರಿಗೆ ಹಕ್ಕು ಬದಲಾವಣೆ ಮಾಡಿದ್ದಾರೆ. ಪೈಕಿ 14 ಪ್ಲಾಟ್ ಗೆ ಫಾರಂ ನಂ. 3 ನೀಡಿ, ಅಲ್ಲಿಂದ ವರ್ಗಾವಣೆ ಆಗಿದ್ದಾರೆ.

ಈ ವೇಳೆ ವಿಷಯ ತಿಳಿದ ತಿಮ್ಮಣ್ಣ ಅವರ ಮಗ ಪ್ರದೀಪ ಸಿಂಧನೂರು ನಗರಸಭೆಯಲ್ಲಿ ಕಾನೂನು ಹೋರಾಟ ಮಾಡಿದಾಗ, ತಮ್ಮ ತಂದೆ ಹೆಸರಿನಲ್ಲಿ ಸುಮಾರು 30 ನಿವೇಶನ ಇರುವುದು ತಿಳಿದು, ಕಲಬುರಗಿ ಕಂದಾಯ ಆಯುಕ್ತರಿಗೆ ದೂರು ನೀಡಿದ್ದಾರೆ. ವಿಚಾರಣೆ ನಡೆಸಿದ ಆಯುಕ್ತರು ಹಿಂದಿನ ಎಲ್ಲ ಖಾತಾ ವರ್ಗಾವಣೆ ರದ್ದು ಮಾಡುವಂತೆ ಆದೇಶಿಸಿದ್ದಾರೆ. ಅಷ್ಟರಲ್ಲೇ ಸದ್ಯ ಗಂಗಾವತಿ ಪೌರಾಯುಕ್ತ ಆಗಿರುಗ ವಿರೂಪಾಕ್ಷ ಮೂರ್ತಿ ಸಿಂಧನೂರು ನಗರಸಭೆ ಪೌರಾಯುಕ್ತರಾಗಿ ಅಧಿಕಾರ ವಹಿಸಿಕೊಂಡಿದ್ದು, ಆಯುಕ್ತರ ಆದೇಶ ಉಲ್ಲಂಘಿಸಿ ಮತ್ತೇ ಖೊಟ್ಟಿ ಖಾತೆ ಸೃಷ್ಠಿಸಿದವರ ಹೆಸರನಲ್ಲಿ ಫಾರಂ 3 ನೀಡಲಾಗಿದೆ.

ಸಿನಿಮೀಯ ಮಾದರಿ ಪ್ರಕರಣ

ಸದ್ಯ ವಿವಾದದಲ್ಲಿ ಇರುವ ಈ ನಿವೇಶನ ಸಿಂಧನೂರು ಹೃದಯ ಭಾಗದಲ್ಲಿದ್ದು, ಹಿಂಬದಿಯ ನಿವೇಶನ ಕನಿಷ್ಠ 60 ಲಕ್ಷ ರು. ಬೆಲೆ ಇವೆ. ಇನ್ನು ಗಂಗಾವತಿ- ಸಿಂಧನೂರು ಮುಖ್ಯ ರಸ್ತೆಗೆ ಮುಖವಾಗಿರುವ ಒಂದು ಪ್ಲಾಟ್ ನ ಮಾರುಕಟ್ಟೆ ಬೆಲೆ ಕನಿಷ್ಠ 3 ಕೋಟಿ ರು. ಇದೆ. ಅಪ್ಪ ಮಾಡಿದ ಕೋಟ್ಯಂತರ ರು. ಆಸ್ತಿ ಇದ್ದರೂ ದೂರುದಾರ ಪ್ರದೀಪ ಕುಮಾರು ತನ್ನ ಬಾಲ್ಯವನ್ನು ಕಾರಟಗಿಯಲ್ಲಿ ಗುಡಿಸಲಿನಲ್ಲಿ ಕಳೆದಿದ್ದಾನೆ. ಕಷ್ಟಪಟ್ಟು ಓದಿ ಸದ್ಯ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಆರ್ಥಿಕ ಸಂಕಷ್ಟದ ನಡುವೆಯೂ ಕಾನೂನು ಹೋರಾಟ ಮಾಡಿದ್ದಾರೆ. ಈಗ ಕಲಬುರಗಿ ಹೈಕೋರ್ಟ್ ನಿರ್ದೇಶನದಂತೆ ತಪ್ಪಿತಸ್ಥರ ವಿರುದ್ಧ ಎಫ್ಐಆರ್ ಮಾಡಿದ್ದಾರೆ.

ಗ್ರಾಪಂ ಪಿಡಿಒ, ಅಧ್ಯಕ್ಷರ ಕಾರ್ಯಾಗಾರದಲ್ಲಿ ಜಿಪಂ ಸಿಇಒ ಸೂಚನೆ

ವಿವಿಧ ಯೋಜನೆ ಅನುಷ್ಠಾನ ಮಾಡಿ

ಕೊಪ್ಪಳದ ಜಿಲ್ಲಾಡಳಿತ ಭವನದಲ್ಲಿನ ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಪಿಡಿಒ, ಗ್ರಾಪಂ ಅಧ್ಯಕ್ಷರ ಸಭೆಯಲ್ಲಿ ಜಿಪಂ ಸಿಇಒ ಉದ್ಯೋಗ ಖಾತರಿ ಪೋಸ್ಟರ್ ಬಿಡುಗಡೆ ಮಾಡಿದರು.

ಕೊಪ್ಪಳ: ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಪಂ ಪಿಡಿಒ ಹಾಗೂ ಅಧ್ಯಕ್ಷರ ಪಾತ್ರ ಮಹತ್ವದ್ದಾಗಿದ್ದು, ಗ್ರಾಮಗಳ ಸರ್ವತೋಮುಖ ಬೆಳವಣಿಗೆಗೆ ನಿರ್ದಿಷ್ಟ ಗುರಿಯೊಂದಿಗೆ ವಿವಿಧ ಯೋಜನೆಗಳ ಕಾಮಗಾರಿ ಅನುಷ್ಠಾನ ಮಾಡಬೇಕು ಎಂದು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿನ ಜಿಪಂ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಯೋಜನೆಗಳ ಅನುಷ್ಠಾನ ಕುರಿತು ಜಿಲ್ಲೆಯ ಎಲ್ಲ ಪಿಡಿಒ, ಅಧ್ಯಕ್ಷರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಪಂ ಬೇಡಿಕೆಗೆ ಅನುಗುಣವಾಗಿ ಯೋಜನಾ ಅನುದಾನ ಕ್ರೋಢೀಕರಿಸಬೇಕು. ಗ್ರಾಮ ಪಂಚಾಯತ್ ಸಮಗ್ರ ಅಭಿವೃದ್ಧಿ ಯೋಜನೆ ಸಿದ್ಧಪಡಿಸಲು ಸರಿಯಾದ ಯೋಜನೆ ರೂಪಿಸುವುದು. ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಯ ಅನುಷ್ಟಾನಗೊಳ್ಳುವ ಕಾಮಗಾರಿ ಹಂತಹಂತವಾಗಿ ಪರಿಶೀಲಿಸಿ, ಮೇಲ್ವಿಚಾರಣೆ ನಡೆಸಬೇಕು ಎಂದು ತಿಳಿಸಿದರು.

ಗ್ರಾಪಂ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ಮುಂದಾಲೋನೆ ಮತ್ತು ದೂರ ದೃಷ್ಟಿಯಲ್ಲಿ ಸಿದ್ಧಪಡಿಬೇಕು. ಪ್ರತಿಯೊಂದು ಯೋಜನೆ ಅನುಷ್ಠಾನದ ವೇಳಾಪಟ್ಟಿ ತಯಾರಿ ಮಾಡಿಕೊಳ್ಳಬೇಕು. ಕ್ರಿಯಾ ಯೋಜನೆಗೆ ಅನುಗುಣವಾಗಿ ಭೌತಿಕ ಗುರಿ, ಅನುದಾನದ ಹಂಚಿಕೆ ಮತ್ತು ಮಾರ್ಗಸೂಚಿಯಂತೆ ಅನುಷ್ಠಾನ ಮಾಡಬೇಕು ಎಂದರು.

> ಗ್ರಾಮ ಪಂಚಾಯಿತಿ ಸಾಮಾನ್ಯ ಮಾಹಿತಿ ಮತ್ತು ಕುಟುಂಬ ಸಮೀಕ್ಷೆಯ ವರದಿ ಸಿದ್ದಪಡಿಸಿಟ್ಟುಕೊಂಡು ಗ್ರಾಮಸ್ಥರ ಮಾಹಿತಿಗೆ ಪ್ರದರ್ಶಿಸಬೇಕು. ಕುಂದು ಕೊರತೆಗಳ ಪರಿಹಾರಕ್ಕಾಗಿ ಗ್ರಾಪಂ ಹಂತದಲ್ಲೇ ಆಂತರಿಕ ಕಾರ್ಯ ವಿಧಾನ ಅಳವಡಿಸಿಕೊಳ್ಳಬೇಕು.
> -ರಾಹುಲ್ ರತ್ನಂ ಪಾಂಡೆ, ಜಿಪಂ ಸಿಇಒ

ಇದೇ ವೇಳೆ ಉದ್ಯೋಗ ಖಾತರಿ ಯೋಜನೆ ಜಾಗೃತಿ ಪೋಸ್ಟರ್ ಹಾಗೂ ಜೆಜೆಎಂ ಪೋಸ್ಟರ್ ಅನ್ನು ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ ಬಿಡುಗಡೆಗೊಳಿಸಿದರು. ಕೆಎಚ್ ಪಿಟಿ ಯೋಜನೆಯಿಂದ ಪಿಡಿಒ ಮತ್ತು ಅಧ್ಯಕ್ಷರಿಗೆ ಗ್ರಾಮ ಆರೋಗ್ಯ ಕಿಟ್ ವಿತರಿಸಿದರು. ಈ ಕಾರ್ಯಾಗಾರದಲ್ಲಿ ಆಯ್ದ ಕೆಲ ಗ್ರಾಪಂ ಪಿಡಿಒಗಳು ಗ್ರಾಮ ಪಂಚಾಯತಿಯಲ್ಲಿ ಅನುಷ್ಠಾನಗೊಂಡ ಯೋಜನೆ ಮತ್ತು ಅಭಿವೃದ್ಧಿ ಮುನ್ನೋಟಗಳ ಬಗ್ಗೆ ಪ್ರಸ್ತುತ ಪಡಿಸಿದರು.

ನಂತರ ರಾಜೀವ್ ಗಾಂಧಿ ಪಂಚಾಯಿತಿ ರಾಜ್ ಫೇಲೋ ರವರು ಘನ ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ವಹಣೆ ಮತ್ತು ಕೂಸಿನ ಮನೆ ನಿರ್ವಹಣೆಯ ಕುರಿತು ಮಾಹಿತಿ ನೀಡಿದರು.

ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೋದಲಬಾಗಿ, ಜಿಪಂ ಯೋಜನಾ ನಿರ್ದೇಶಕ ಪ್ರಕಾಶ ವಡ್ಡರ್ ಇದ್ದರು.

ಜಯಂತಿಗಳ ಆಚರಣೆಗೆ ಅಗತ್ಯ ಕ್ರಮಕೈಗೊಳ್ಳಿ



ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಜಯಂತಿಗಳ ಪೂರ್ವಭಾವಿ ಸಭೆ ನಡೆಯಿತು.

ರಾಯಚೂರು: ಜಿಲ್ಲಾಡಳಿತದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಅದ್ದೂರಿಯಾಗಿ ಹಾಗೂ ವಿಜೃಂಭಣೆಯಿಂದ ವೀರವನತೆ ಒನಕೆ ಓಬವ್ವ ಮತ್ತು ಕನಕದಾಸರ ಜಯಂತಿ ಆಚರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

> ಎಲ್ಲಾ ಸರಕಾರಿ, ಅರೆಸರಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ನವೆಂಬರ್ 11ರಂದು ವೀರವನತೆ ಒನಕೆ ಓಬವ್ವ ಹಾಗೂ ನವೆಂಬರ್ 18ರಂದು ಕನಕದಾಸ ಜಯಂತಿಯನ್ನು ಆಚರಿಸಲು ಸೂಕ್ತ ಕ್ರಮಕೈಗೊಳ್ಳಬೇಕು. ಶಿಷ್ಟಾಚಾರ ಪ್ರಕಾರ ಆಹ್ವಾನ ಪತ್ರಿಕೆ ಮುದ್ರಿಸಿ, ಸಂಬಂಧಪಟ್ಟವರಿಗೆ ತಲುಪಿಸಬೇಕು. ಅಲ್ಲದೆ ಜಯಂತಿಗಳ ಮೆರವಣಿಗೆ ವೇಳೆ ವಿವಿಧ ಕಲಾ ತಂಡಗಳು ಭಾಗಿಯಾಗಲು ಕ್ರಮವಹಿಸಬೇಕು.
> - ಶಿವಾನಂದ, ಅಪರ ಜಿಲ್ಲಾಧಿಕಾರಿ

ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಇದೇ ನವೆಂಬರ್ 11ರ ಸೋಮವಾರ ಬೆಳಗ್ಗೆ 9ಗಂಟೆಗೆ ನಗರದ ಡಾ.ಬಿಆರ್.ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಹಾಗೂ ಬೆಳಗ್ಗೆ 11ಗಂಟೆಗೆ ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೀರವನತೆ ಒನಕೆ ಓಬವ್ವ ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನವೆಂಬರ್ 18ರ ಸೋಮವಾರ ದಂದು ನಗರದ ಗಂಜ್ ವೃತ್ತದಿಂದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದವರೆಗೆ ಮೆರವಣಿಗೆ ಹಾಗೂ ಬೆಳಿಗ್ಗೆ 11ಗಂಟೆಗೆ ಕನಕದಾಸ ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಮತ್ತು ಶಾಲಾ ಕಾಲೇಜಿನ ಮಕ್ಕಳು ಆಗಮಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕೆಂದು ಸೂಚಿಸಿದರು.

ಭಾವಚಿತ್ರಕ್ಕೆ ಮಾಲಾರ್ಪಣೆ ಹೂದಾನಿಗಳಿಂದ ಅಲಂಕಾರ, ಕುಡಿಯುವ ನೀರು ಹಾಗೂ ಸ್ವಚ್ಛತೆ ಕಾಪಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ದತ್ತಪ್ಪ ಸಾಗೂರು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಜಯರಾಮ್, ರಾಯಚೂರು ನಗರಸಭೆಯ ಸಮುದಾಯ ಸಂಘಟನಾ ಅಧಿಕಾರಿ ಕೃಷ್ಣ ಕಟ್ಟಿಮನಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಭೆಯಲ್ಲಿ ಇದ್ದರು.

ಕುಕನೂರುಗೆ 100 ಹಾಸಿಗೆಗಳ ಆಸ್ಪತ್ರೆ

ದಿವಸ ಡಾ. ಬಿ ಆರ್ ಅಂಬೇಡ್ಕರ್ ಭವನ, ಬಾಲ ಭವನ, ಕಾಮಗಾರಿಗಳನ್ನು ಶಾಸಕ ಬಸವರಾಜ ರಾಯರಡ್ಡಿ ವೀಕ್ಷಿಸಿದರು.

ಕುಕನೂರು: ಕುಕನೂರು ಪಟ್ಟಣಕ್ಕೆ 100 ಹಾಸಿಗೆಗಳ ಆಸ್ಪತ್ರೆ ಮಂಜೂರಾಗಿದೆ ಸದ್ಯದಲ್ಲೇ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿ ಕಾಮಗಾರಿ ಕೂಡ ಪ್ರಾರಂಭವಾಗುವುದು ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಪಟ್ಟಣದಲ್ಲಿ ದಿವಸ ಡಾ. ಬಿ ಆರ್ ಅಂಬೇಡ್ಕರ್ ಭವನ, ಬಾಲ ಭವನ, ಕಾಮಗಾರಿಗಳನ್ನು ವೀಕ್ಷಿಸಿ ಮಾತನಾಡಿ, ತಾಲೂಕು ಆಡಳಿತ ಕಚೇರಿ, ಬುದ್ಧ ಬಸವ ಅಂಬೇಡ್ಕರ್ ಭವನ, ಕೋರ್ಟ್, ಕಟ್ಟಡಗಳ ನೀಲ ನಕ್ಷೆ ರೆಡಿಯಾಗಿವೆ. ಪಟ್ಟಣದ ಅಭಿವೃದ್ಧಿಗೆ ಪಟ್ಟಣ ಪಂಚಾಯಿತಿಯ ಸರ್ವ ಸದಸ್ಯರು ನೇರ ನಿಷ್ಠರವಾಗಿ ನಿರ್ಧಾರಗಳನ್ನು ತೆಗೆದುಕೊಂಡು ಪಟ್ಟಣದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಪಟ್ಟಣದ ಅಭಿವೃದ್ಧಿಗೆ ನಿಮ್ಮ ಜವಾಬ್ದಾರಿಯ ಬಹುಮುಖ್ಯ. ನೀವು ಮಾಡಿದ ಕೆಲಸ ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಉಳಿಯಬೇಕು. ಸಹಕಾರ ಹಾಗೂ ಅನುದಾನ ಕೊಡಲು ನಾನು ಸದಾ ಸಿದ್ಧನಿದ್ದೇನೆ ಗುಣಮಟ್ಟದ ಕಾಮಗಾರಿಗಳನ್ನು ಮಾಡಿಸಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿ ರವೀಂದ್ರ ಬಾಗಲಕೋಟೆ, ಮುಖಂಡರಾದ ಸತ್ಯನಾರಾಯಣಪ್ಪ ಹರಪನಹಳ್ಳಿ, ಖಾಸಿಂಸಾಬ್ ತಳ್ಕಲ್, ವೀರಯ್ಯ ತೋಟದಾರಿಮಠ, ಸಂಗಮೇಶ್ ಗುತ್ತಿ, ರೈಮಾನ್ ಸಾಬ್ ಮಕಪ್ಪನವರ್, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಪ್ರಶಾಂತ್ ಆರಬೆರಳಿನ್, ಪಟ್ಟಣ ಪಂಚಾಯಿತಿಯ ಸ್ಥಾಯಿ ಸಮಿತಿ ಅಧ್ಯಕ್ಷ ನೂರುದ್ದೀನ್ ಗುಂಡಿಯಿಂದಲ, ರಾಮಣ್ಣ ಬಂಕದ ಮನಿ, ಸಿರಾಜ್ ಕರ್ಮುಡಿ, ಪ್ರಕಾಶ್ ಚಂಡೂರ್, ಮಂಜುನಾಥ್ ಎಡೆಯಾಪುರ್, ಸಿದ್ದು ತೊಂಡಿಹಾಳ, ರಾಘವೇಂದ್ರ ಕಾತರಕಿ, ಎಲ್ಲಪ್ಪ ಕಲ್ಮನಿ ಉಪಸ್ಥಿತರಿದ್ದರು.

ಬಹುಜನ ಸಮಾಜ ಪಕ್ಷ ಪದಾಧಿಕಾರಿಗಳ ಆಯ್ಕೆ

ಪಟ್ಟಣದ ಪತ್ರಿಕಾ ಭವನದಲ್ಲಿ ಬಹುಜನ ಸಮಾಜ ಪಕ್ಷದ ನೂತನ ತಾಲೂಕು ಅಧ್ಯಕ್ಷರಾದ ಆರ್. ಮುದುಕಪ್ಪನಾಯಕ ಮಾತನಾಡಿದರು.

ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಬಹುಜನ ಸಮಾಜ ಪಕ್ಷದ ನೂತನ ತಾಲೂಕು ಅಧ್ಯಕ್ಷರಾದ ಆರ್.ಮುದುಕಪ್ಪ ನಾಯಕ ಮಾತನಾಡಿ ಬಹುಜನ ಸಮಾಜ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಎಂ.ಬಸವರಾಜ ಭಂಡಾರಿಯವರು ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಬಹುಜನ ಸಮಾಜ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಬಲಿಷ್ಟಗೊಳಿಸುವ ಮೂಲಕ ಮುಂಬರುವ ಸ್ಥಳಿಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷವು ಹೆಚ್ಚು ಸ್ಥಾನಗಳನ್ನು ಪಡೆಯುವುದಕ್ಕೆ ಹಾಗೂ ಕ್ಷೇತ್ರದ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡುವುದಕ್ಕೆ ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಬಹುಜನ ಸಮಾಜ ಪಕ್ಷದ ಅಧ್ಯಕ್ಷರಾಗಿ ನನ್ನನ್ನು ಹಾಗೂ ನೂತನ ಉಪಾಧ್ಯಕ್ಷರಾಗಿ ಖಾನಸಾಬ್, ವೆಂಕಟೇಶ ನಂದಿಹಾಳ್, ಪ್ರ. ಕಾರ್ಯದರ್ಶಿಯಾಗಿ ಬಸವರಾಜ್ ನಿಲಗಲ್, ವಿಧಾನ ಸಭಾ ಉಸ್ತುವಾರಿಗಳಾಗಿ ಚಂದ್ರಶೇಖರ,ಬಿ, ಆಕಾಶ್ ಮ್ಯಾತ್ರಿ ರವರನ್ನು ಆಯ್ಕೆ ಮಾಡಿದ್ದು ಮುಂದಿನ ದಿನಗಳಲ್ಲಿ ತಾಲೂಕಿನ ಜನರ ಸಮಸ್ಯೆಗಳಿಗೆ ಪಕ್ಷದಿಂದ ನಿರಂತರವಾಗಿ ಹೋರಾಟಗಳನ್ನು ನಡೆಸಲಾಗುವುದು ಎಂದು ತಿಳಿಸಿದರು. ಖಾನಸಾಬ್, ವೆಂಕಟೇಶ ನಂದಿಹಾಳ್, ಬಸವರಾಜ್ ನೀಲಗಲ್, ಚಂದ್ರಶೇಖರ,ಬಿ, ಆಕಾಶ್ ಮ್ಯಾತ್ರಿ ಇದ್ದರು.

ಹೆದ್ದಾರಿಯೋ, ಹೆಮ್ಮಾರಿಯೋ: ಬಾಬುರಾವ್

ರಾಯಚೂರು: ಇದೂ ಹೆದ್ದಾರಿಯೋ ಅಥವಾ ಹೆಮ್ಮಾರಿಯೋ ಎಂದು ಆತಂಕದಲ್ಲಿ ವಾಹನ ಸವಾರರು ಅಭಿಪ್ರಾಯವ್ಯಕ್ತಪಡಿಸುವಂತ ಸ್ಥಿತಿ 167 ಹೆದ್ದಾರಿಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದು ವಾಹನ ಸವಾರರ ಆಕ್ರೋಶಕ್ಕೆ ಕಾರಣವಾಗಿದೆ.

ನಗರದ ಗಂಜ್ ನಿಂದ ಹೈದ್ರಾಬಾದ್ ಬೈಪಾಸ್ ರಸ್ತೆಯವರೆಗಿನ ಹೆದ್ದಾರಿಯಲ್ಲಿ ಮೂರು ವರ್ಷದಲ್ಲಿ 800 ಬಲಿಯನ್ನು ಪಡೆದ ರಾಷ್ಟ್ರೀಯ ಹೆದ್ದಾರಿಯೋ ಅಥವಾ ಬಲಿಗಳನ್ನು ಪಡೆಯುತ್ತಿರುವ ಹೆಮ್ಮಾರಿಯೋ ಎನ್ನುವಂತಾಗಿದೆ ಈ ಹೆದ್ದಾರಿಯ ಸ್ಥಿತಿ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹಲವು ಮುಂಜಾಗ್ರತಾ ಕಾರ್ಯಕ್ರಮಗಳ ತೆಗೆದುಕೊಳ್ಳದೆ ಇರುವುದು ಅಚ್ಚರಿಯನ್ನು ಮೂಡಿಸಿದೆ ಮಾತ್ರವಲ್ಲ ಅಪಘಾತಗಳು ಸಂಭವಿಸುತ್ತಲೇ ಇರುವುದು ಕಾರಣವಾಗಿದೆ ಎನ್ನುವುದು ವಾಹನ ಸವಾರರ ಆರೋಪ.

> ಬಲಿ ಗಾಗಿ ಕಾದು ಕುಳಿತಂತೆ ಇರುವ ರಾಷ್ಟ್ರೀಯ ಹೆದ್ದಾರಿ 167 ನಗರದ ಗಂಜ್ ವೃತ್ತದಿಂದ ಶಕ್ತಿ ನಗರದ ವರೆಗೆ ವಾಹನ ದಟ್ಟಣೆಯಿಂದ ಕೂಡಿದ್ದು ಸಮರ್ಪಕವಾದ ಮಾರ್ಗಸೂಚಿಗಳಿಲ್ಲದಿರುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈ ರಸ್ತೆಯನ್ನು ದ್ವಿಭಾಜಕವನ್ನಾಗಿ ಮಾಡಬೇಕು. ಎರಡೆರಡು ವಾಹನಗಳು ಏಕಮುಖವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು.
> - ಡಾ. ಬಾಬುರಾವ್, ಜಿಲ್ಲಾ ಉಪಾಧ್ಯಕ್ಷ

ಹೆದ್ದಾರಿ ಕಿರಿದಾಗಿರುವುದರಿಂದ ಅಪಘಾತಗಳು ಸಂಭವಿಸುತ್ತಿವೆ ಎನ್ನುವುದು ಪೊಲೀಸ್ ಇಲಾಖೆಯವರು ಅಂದಾಜು. ಒಟ್ಟಿನಲ್ಲಿ ಹಲವು ಕಾರಣದಿಂದ ಈ ಹೆದ್ದಾರಿ ಅಪಘಾತ ವಲಯವಾಗಿ ಮಾರ್ಪಟ್ಟಂತೆ ಮೇಲ್ನೋಟಕ್ಕೆ ತೋರುತ್ತಿದೆ. ಇನ್ನಾದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಎಚ್ಚೆತ್ತುಕೊಂಡು ಸವಾರರ ಪ್ರಾಣ ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಸಾರ್ವಜನಿಕರು ವಿಶೇಷವಾಗಿ ವಾಹನ ಸವಾರರು ಆಗ್ರಹಿಸಿದ್ದಾರೆ.

ಉತ್ಸವ ಯಶಸ್ವಿಗೆ ಸಮಿತಿ ರಚನೆ

ಮುದಗಲ್: ಪಟ್ಟಣದ ಕೋಟೆ ಉತ್ಸವ ಸಂಪೂರ್ಣ ಯಶಸ್ವಿಗೆ ಕೋಟೆ ಉತ್ಸವ ಸಮಿತಿ ರಚಿಸಿ ಒಗ್ಗಟ್ಟು ಪ್ರದರ್ಶಿಸಿದರೆ ಕಾರ್ಯಕ್ರಮ ಯಶಸ್ವಿಯಾಗಲಿದೆ ಎಂದು ಮುದಗಲ್ ಮಾನವ ಬಂಧುತ್ವ ವೇದಿಕೆಯ ಸಂಘಟನೆ ಅಧ್ಯಕ್ಷ ಸಂಜೀವ ಚಲುವಾದಿ ಅಭಿಪ್ರಾಯ ವ್ಯಕ್ತಪಡಿಸಿದರು. ಬುಧವಾರ ದಂದು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಜನಪ್ರತಿನಿಧಿಗಳು ಮತ್ತು ಕಸಾಪ ಪದಾಧಿಕಾರಿಗಳ ಗೌಪ್ಯತಾ ಸಭೆಯಲ್ಲಿ ಕೋಟೆ ಉತ್ಸವ ಬಗ್ಗೆ ಗಂಭೀರ ಚರ್ಚೆ ನಡೆಸಿದ್ದು ಪಟ್ಟಣದ ನಾಗರೀಕರ ಮತ್ತು ಹಲವು ಸಂಘಟನೆಗಳ ಬೇಸರಕ್ಕೆ ಕಾರಣವಾಗಿದೆ. ಯಾವುದೇ ಕಾರಣಕ್ಕೂ ಏಕ ಪಕ್ಷಿಯವಾಗಿ ನಿರ್ಧಾರ ಕೈಗೊಳ್ಳದೆ ಪಟ್ಟಣದ ಹಿರಿಯ ನಾಗರಿಕರ ಮತ್ತು ಸಂಘಟನೆಗಳ ಹಾಗೂ ಸರ್ವ ಜನಾಂಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮತ್ತು ಒಮ್ಮತ ಅಭಿಪ್ರಾಯದಿಂದ ಮೊದಲು ಮುದಗಲ್ ಕೋಟೆ ಉತ್ಸವ ಸಮಿತಿ ರಚಿಸಿ ನಂತರ ಸಮಿತಿ ವತಿಯಿಂದ ಸಭೆಯನ್ನು ಕರೆದು ಕೋಟೆ ಉತ್ಸವದ ಬಗ್ಗೆ ರೂಪುರೇಷೆಗಳನ್ನು ಹಾಕಿಕೊಂಡು ಕೋಟೆ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಮತ್ತು ಸಮಿತಿ ರಚಿಸಿಯಲ್ಲಿ ಯಾವುದೇ ಜಾತಿ ಧರ್ಮ ಬೇಧ-ಭಾವ ಮರೆತು ಭಾವೈಕ್ಯತೆ ಅನುಸರಿಸಿ ಉತ್ಸವ ಸಮಿತಿ ರಚಿಸಿಬೇಕು ಎಂದು ಸಹಮತ ಅಭಿಪ್ರಾಯ ವ್ಯಕ್ತಪಡಿಸಿದರು.

ಅನ್ನಮಯ ತಾತ 39ನೇ ಆರಾಧನೆ

ಮಾನ್ವಿ: ಪಟ್ಟಣದ ಬೆಟ್ಟದಗವಿ ಶ್ರೀ ಅನ್ನಮಯ ತಾತನವರ ದೇವಸ್ಥಾನದಲ್ಲಿ ಬೆಟ್ಟದಗವಿ ಶ್ರೀ ಅನ್ನಮಯ ತಾತನವರ ಸೇವಾ ಸಮಿತಿಯ ಅಧ್ಯಕ್ಷರಾದ ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ನೇತೃತ್ವದಲ್ಲಿ ದಿಗಂಬರವಧೂತ ಮಹಾ ಹಠಯೋಗಿ ಶ್ರೀಅನ್ನಮಯತಾತನವರ 39 ನೇ ಆರಾಧನಾ ಮಹೋತ್ಸವ ಹಾಗೂ ಉಚ್ಚಾಯಮಹೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ.

ನ.11 ರಂದು ಸಂಜೆ 5 ಕ್ಕೆ ದಿಗಂಬರವಧೂತ ಮಹಾ ಹಠಯೋಗಿ ಶ್ರೀಅನ್ನಮಯತಾತನವರ ಪಲ್ಲಕ್ಕಿ ಉತ್ಸವ ಮಾನ್ವಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಬೆಟ್ಟದಗವಿ ಶ್ರೀ ಅನ್ನಮಯ ತಾತನವರ ದೇವಸ್ಥಾನದ ವರೆಗೆ ನಡೆಯಲಿದೆ.ನ.12 ರಂದು ಭಾವಚಿತ್ರ ಮೆರವಣಿಗೆ ನಡೆಯಲಿದೆ.ನ.13 ರಂದು ಸಂಜೆ5 ಕ್ಕೆ ಉಚ್ಚಾಯ ಮಹೋತ್ಸವ ನಡೆಯಲಿದೆ. ನ.14 ರಂದು ಮಧ್ಯಾಹ್ನ 2ರಿಂದ ಜನಪದ ಕ್ರೀಡೆಗಳಾದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿದ್ದು ಪ್ರಥಮ ಬಹುಮಾನವಾಗಿ 9 ತೊಲೆ ಬೆಳ್ಳಿಯ ಕಡಗವನ್ನು ಜೆ.ಡಿ.ಎಸ್.ರಾಜ್ಯ ಯುವ ಘಟಕದ ರಾಜ್ಯ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ ನೀಡಲಿದ್ದಾರೆ. ದ್ವಿತೀಯ ಬಹುಮಾನ 5 ತೊಲೆ ಬೆಳ್ಳಿ ಕಡಗ, ತೃತೀಯ ಬಹುಮಾನ 3 ತೊಲೆ ಬೆಳ್ಳಿ ಕಡಗವನ್ನು ನೀಡಲಾಗುವುದು ಎಂದು ಬೆಟ್ಟದಗವಿ ಶ್ರೀ ಅನ್ನಮಯ ತಾತನವರ ಸೇವಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ಕ್ಷೇತ್ರದಲ್ಲಿ ಕನ್ನಡ ಉದ್ಯಮ ಆಗಿ ಬೆಳೆಯಲಿ

ಕಾರಟಗಿ: ಕನ್ನಡ ಉದ್ಯಮವಾಗಿ, ವಿಜ್ಞಾನ, ತಂತ್ರಜ್ಞಾನ, ಬ್ಯಾಂಕಿಂಗ್ ಕ್ಷೇತ್ರದ ಭಾಷೆಯಾಗಿ ಹಾಗೂ ಸರಕಾರದಲ್ಲಿ ಸಮರ್ಪಕವಾಗಿ ಬಳಕೆಯಾಗಬೇಕು. ಆಗ ಮಾತ್ರ ಕನ್ನಡದ ಅಸ್ಮಿತೆ ಉಳಿಯಲಿದೆ ಎಂದು ಉಪನ್ಯಾಸಕ ಪವನಕುಮಾರ ಗುಂಡೂರು ಹೇಳಿದರು. ಪಟ್ಟಣದ ಮಲ್ಲಿಕಾರ್ಜುನ ನಾಗಪ್ಪ ಪದವಿ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದಿಂದ ಆಯೋಜಿಸಲಾಗಿದ್ದ ಪ್ರಸಕ್ತ ಸಾಲಿನ ರಾಜ್ಯೋತ್ಸವದಿಂದ ಕುವೆಂಪು ಅವರ ಜನ್ಮದಿನದ ವಿಶ್ವಮಾನವ ದಿನಾಚರಣೆಯವರೆಗಿನ ಕನ್ನಡ ಕಾರ್ತಿಕೋತ್ಸವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಅಸ್ಮಿತೆ ಮತ್ತು ಸವಾಲುಗಳು ಎನ್ನುವ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕನ್ನಡ ಉಳಿಸಿ ಬೆಳೆಸುವುದು ಎಂದರೆ ಅದು ಬರೀ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಪರ ಸಂಘಟನೆಗಳ ಕೆಲಸವಲ್ಲ. ಕನ್ನಡ ಸಮೃದ್ಧವಾಗಬೇಕು. ಕನ್ನಡ ಉದ್ಯಮವಾಗಿ ಬೆಳೆಯಬೇಕು. ಉದ್ಯಮ, ವಿಜ್ಞಾನ, ತಂತ್ರಜ್ಞಾನ, ಬ್ಯಾಂಕಿಂಗ್ ವಲಯ ಮತ್ತು ಸರಕಾರದ ಮಟ್ಟದಲ್ಲಿ ಕನ್ನಡ ಸಮರ್ಪಕವಾಗಿ ಬಳಕೆಯಾಗಬೇಕು. ಆಗ ಕನ್ನಡಕ್ಕೆ ಗೌರವ, ಘನತೆ ಬರುತ್ತದೆ ಎಂದರು. ತಂತ್ರಜ್ಞಾನದ ಯುಗದಲ್ಲಿ, ಅದರಲ್ಲಿ ಈ ವೇಗದ ಡಿಜಿಟಲ್ ಲೋಕದಲ್ಲಿ ಕನ್ನಡ ಭಾಷೆ ಹಿಂದುಳಿಯದಂತೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಸಿದೆ ಎಂದರು. ಈ ಸಂದರ್ಭದಲ್ಲಿ ಕಸಾಪ ಜಿಲ್ಲಾ ಕೋಶಾಧ್ಯಕ್ಷ ರಮೇಶ ಕುಲಕರ್ಣಿ ಮರಳಿ,' ಅಧ್ಯಕ್ಷ ಬಸವರಾಜ ಶೆಟ್ಟರ್ ಇದ್ದರು.

ಉಪ ಚುನಾವಣೆ: ಶಸ್ತ್ರ ಠೇವಣಿಗೆ ಸೂಚನೆ

ಕೊಪ್ಪಳ: ವಿವಿಧ ಕಾರಣದಿಂದ ತೆರವಾಗಿರುವ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗೆ ಉಪ ಚುನಾವಣೆ ನಡೆಯಲಿದ್ದು, ಪರವಾನಗಿ ಪಡೆದ ಶಸ್ತಗಳನ್ನು ಪೊಲೀಸ್ ಇಲಾಖೆಯಲ್ಲಿ ಠೇವಣಿ ಮಾಡುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಆದೇಶಿಸಿದ್ದಾರೆ. ನ. 4 ರಿಂದ ನ.26ರ ವರೆಗೆ ಕೊಪ್ಪಳ ನಗರಸಭೆಯ ವಾರ್ಡ್ 8ರ ಮತ್ತು 11 ಹಾಗೂ ಕಾರಟಗಿ ಪುರಸಭೆಯ ವಾರ್ಡ್ 21ರ ನಗರ ಸ್ಥಳೀಯ ಸಂಸ್ಥೆಗೆ ಉಪ ಚುನಾವಣೆ ನಡೆಯಲಿದೆ. ಯಾವುದೇ ರೀತಿಯ ಅಹಿತಕರ ಘಟನೆ ಜರುಗದಂತೆ, ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ದೃಷ್ಠಿಯಿಂದ, ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ ವ್ಯಾಪ್ತಿಯಲ್ಲಿ ರೈತರು, ಗಣ್ಯರು ಮತ್ತು ಇತರರು ಹೊಂದಿರುವ ಶಸ್ತ ಪೊಲೀಸ್ ಠಾಣೆಯಲ್ಲಿ ಠೇವಣಿ ಮಾಡುವುದು ಅತೀ ಅವಶ್ಯಕ. ಪೊಲೀಸ್ ಠಾಣೆಯಲ್ಲಿ ಠೇವಣಿ ಮಾಡಿಕೊಳ್ಳು ವಂತೆ ಮತ್ತು ನಿಗದಿತ ಅವಧಿಯೊಳಗೆ ಶಸ್ತ್ರಾಸ್ತ್ರಗಳನ್ನು ಠೇವಣಿ ಮಾಡದೇ ಇರುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರ ಕಲಂ 223ರನ್ವಯ ಕ್ರಮ ಕೈಗೊಳ್ಳುವಂತೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಉಪ ಚುನಾವಣಾ ನೀತಿ ಸಂಹಿತೆ ಅವಧಿ ಮುಗಿದ ನಂತರ ನಿಯಮಾನುಸಾರ ಪರವಾನಿಗೆದಾರರ ವಶಕ್ಕೆ ನೀಡಲು ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಪ್ಪಳ ಇವರಿಗೆ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

@vishwavaninews

ವಿಶ್ವವಾಣಿ

ಆರಾಮ

ಬೆಂಗಳೂರು
ಶುಕ್ರವಾರ
08 | 11 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ,
ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಚಿತ್ತ ವಿಹಾರ

ಬುದ್ಧಿವಂತಿಕೆ ಮತ್ತು ಮೌನ

ಕತ್ತೆಯೊಂದು, ಹುಲಿಗೆ ಹುಲ್ಲಿನ ಬಣ್ಣ ನೀಲಿ ಎಂದು ಹೇಳಿತು. ಹುಲಿ ಇಲ್ಲ, ಹುಲ್ಲು ಹಸಿರು ಬಣ್ಣದ್ದು ಎಂದು ಉತ್ತರಿಸಿತು. ವಾದ ಬಗೆಹರಿಯುವ ಸೂಚನೆ ಕಾಣದೆ ಇದ್ದಾಗ, ಕಾಡಿನ ರಾಜನಾದ ಸಿಂಹದ ಹತ್ತಿರ ಹೋರಟವು. ಸಿಂಹವನ್ನು ದೂರದಿಂದ ನೋಡುತ್ತಲೇ ಕತ್ತೆರಾಯ ಕೂಗಲು ಪ್ರಾರಂಭಿಸಿತು. 'ಮಹಾಪ್ರಭುಗಳೇ, ನೀವೇ ಹೇಳಿ, ಹುಲ್ಲಿನ ಬಣ್ಣ ನೀಲಿ ಎಂಬುದು ನಿಜವಲ್ಲವೇ?'. ಸಿಂಹ 'ಹೌದು, ನಿಜ, ಹುಲ್ಲು ನೀಲಿ ಬಣ್ಣದ್ದು ಎಂದಿತು.

ಕತ್ತೆ ಆತುರದಿಂದ ಮುಂದುವರಿದು 'ನೋಡಿ ಮಹಾಸ್ವಾಮಿ ಈ ಹುಲಿಯಪ್ಪ ನನ್ನ ಮಾತನ್ನು ಒಪ್ಪುವುದಿಲ್ಲ, ನನಗೆ ಕಿರಿಕಿರಿ ಉಂಟುಮಾಡುತ್ತಿದ್ದಾನೆ, ದಯವಿಟ್ಟು ಇವನನ್ನು ಶಿಕ್ಷಿಸಿ' ಎಂದಿತು. ಆಗ ಸಿಂಹರಾಜ ಹುಲಿಗೆ ಐದು ವರ್ಷಗಳ ಕಾಲ ಮೌನದಿಂದ ಇರಬೇಕು ಎಂಬ ಶಿಕ್ಷೆ ವಿಧಿಸಿತು. ಕತ್ತೆಗೆ ಯುದ್ಧಗೆದ್ದ ಸಂಭ್ರಮ.

ಹರ್ಷದಿಂದ ಹುಲ್ಲಿನ ಬಣ್ಣ ನೀಲಿ, ಹುಲ್ಲಿನ ಬಣ್ಣ ನೀಲಿ ಎನ್ನುತ್ತಾ ಇನ್ನಷ್ಟು ಪ್ರಾಣಿಗಳಿಗೆ ತನ್ನ ಮಾತನ್ನು ಹೇಳುತ್ತಾ, ಕೇಕೆ ಹಾಕುತ್ತಾ ಕತ್ತೆ ಓಡಿ ಹೋಯಿತು. ಇತ್ತ ಹುಲಿ ತನ್ನ ಶಿಕ್ಷೆಯನ್ನು ಒಪ್ಪಿಕೊಂಡಿತು. ಆದರೆ 'ಮಹಾಸ್ವಾಮಿ ನಿಮಗೂ ಗೊತ್ತು, ಹುಲ್ಲಿನ ಬಣ್ಣ ಹಸಿರು. ಅದಾಗ್ಯೂ ನೀವು ನನ್ನನ್ನು ಏಕೆ ಶಿಕ್ಷಿಸಿದ್ದೀರಿ?' ಎಂದು ಸಿಂಹವನ್ನು ಕೇಳಿತು.

ಸಿಂಹ 'ಹುಲಿಯಪ್ಪಾ ವಾಸ್ತವವಾಗಿ, ಹುಲ್ಲಿನ ಬಣ್ಣ ಹಸಿರು. ಹುಲ್ಲಿನ ಬಣ್ಣ ನೀಲಿಯೋ ಅಥವಾ ಹಸಿರೋ ಎಂಬುದು ತಳಬುಡವಿಲ್ಲದ ಪ್ರಶ್ನೆ. ಇಂತಹ ಯಕಃಶ್ಚಿತ್ ಪ್ರಶ್ನೆಯನ್ನು ಇಟ್ಟುಕೊಂಡು, ಕತ್ತೆಯೊಂದಿಗೆ ಜಗಳವಾಡುತ್ತಾ ಸಮಯ ಹಾಳು ಮಾಡುತ್ತಿದ್ದೀಯಾ, ಅದೂ ಅಲ್ಲದೆ ಆ ವಾದವನ್ನು ನನ್ನ ಬಳಿಗೆ ಎಳೆತಂದು ನನ್ನ ಕ್ಷಣಗಳನ್ನು ಸವೆಸಿದೆಯಲ್ಲಾ, ಅದಕ್ಕೇ ಈ ಶಿಕ್ಷೆ, ಇನ್ನೊಮ್ಮೆ ಇಂತಹ ಅಚಾತುರ್ಯ ಘಟಿಸಕೂಡದು, ಎಚ್ಚರಿಕೆ!'' ಎಂದು ಉತ್ತರಿಸಿ, ಸಿಂಹ ಘರ್ಜಿಸಿತು.

ವಾಸ್ತವದ ಬಗ್ಗೆ ಕಾಳಜಿ ಇರದ ಮೂರ್ಖರೊಂದಿಗೆ ವಾದಮಾಡುವುದು ಅತ್ಯಂತ ಕೆಟ್ಟದ್ದು. ಅದರಿಂದ ಅಮೂಲ್ಯ ಸಮಯ ವ್ಯರ್ಥವಾಗುವುದು. ಆ ಮೂರ್ಖರಿಗೆ ಸತ್ಯಕ್ಕಿಂತ ಅವರ ನಂಬಿಕೆ ಮತ್ತು ಭ್ರಮೆಗಳ ಗೆಲುವುಗಳ ಬಗ್ಗೆ ಮಾತ್ರ ಒಲವಿರುತ್ತದೆ. ಹಾಗಾಗಿ ಅರ್ಥವಿಲ್ಲದ ವಾದಗಳಿಗಾಗಿ ನಿಮ್ಮ ಸಮಯವನ್ನು ವ್ಯರ್ಥ ಮಾಡಬೇಡಿ. ತಮ್ಮದೇ ತಪ್ಪಿದ್ದರು ತಾವೇ ಸರಿ ಎಂದು ಬೀಗುವವರ ಮುಂದೆ ನಿಮ್ಮ ಪಾಂಡಿತ್ಯದ ಪ್ರದರ್ಶನ ಅನವಶ್ಯಕ. ಅದುವೇ ಯಶಸ್ಸಿನ ಗುಟ್ಟು.

• **ಬೇಲೂರು ರಾಮಮೂರ್ತಿ**

ಸುಳ್ಳಿನಿಂದ ಸುಖವಿಲ್ಲ

ಧೈರ್ಯದಿಂದ ಸತ್ಯ ನುಡಿಯುವವನಿಗೆ ಸುಳ್ಳಿನ ಅವಶ್ಯಕತೆಯೇ ಇರುವುದಿಲ್ಲ. ಸತ್ಯ ನುಡಿಯುವ ಧೈರ್ಯ ಇಲ್ಲದಿರುವ ಎಷ್ಟೋ ಜನರು ಜೀವನದಲ್ಲಿ ಸುಳ್ಳು ಹೇಳಿಕೊಂಡು ಪಾರಾಗಿ ಹೋಗಬೇಕೆನ್ನುತ್ತಾರೆ. ಸತ್ಯ ಹೇಳುವುದಕ್ಕೆ ತಾತ್ವಿಕ ನಂಬುಗೆ ಹಾಗೂ ಮನಸ್ಸಿನ ನಿರ್ಧಾರ ಬೇಕಾಗುತ್ತದೆ. ಸುಳ್ಳಿಗೆ, ಅವುಗಳ ಅವಶ್ಯಕತೆಯೊಂದೂ ಇರುವುದಿಲ್ಲ.

ಸತ್ಯವು ಸ್ಥಿರವಾದ ಅಸ್ತಿವಾರದ ಮೇಲೆ ನಿಂತಿದೆ. ಸುಳ್ಳು ಮಾತ್ರ ತನಗೋಸುಗ ಅಂಥ ತಳಹದಿಯನ್ನು ಹುಡುಕಿಕೊಂಡಿರುವುದಿಲ್ಲ. ಸುಳ್ಳಿನ ಅಸ್ತಿವಾರವು ಬೀಳದಂತೆ ತಡೆದು ನಿಲ್ಲಿಸುವುದಕ್ಕೆ ಮೇಲಿಂದ ಮೇಲೆ ಆನಿಕೆ ಕೊಡಬೇಕಾಗುತ್ತದೆ. ನಿಜವಾದ ಧೈರ್ಯಶಾಲೀ ಮನುಷ್ಯನಿಗೆ, ಅವನಾಡುವ ಮಾತು ಅವನ ಜೀವನಕ್ಕಿಂತಲೂ ಹೆಚ್ಚು ಬೆಲೆಯಾದುದು; ಅವನು, ಸುಳ್ಳು ಹೇಳುವ ಕೀಳುಮಟ್ಟಕ್ಕೆ ಎಂದಿಗೂ ಇಳಿಯಲಾರನು.

ಸತ್ಯವನ್ನೇ ಮಾತನಾಡಬೇಕು. ಅರ್ಧಮರ್ಧ ಸುಳ್ಳು ಹೇಳುವುದೂ, ಸಂಪೂರ್ಣ ಸುಳ್ಳು ಹೇಳುವುದೂ ಬೇರೆ ಬೇರೆಯೇನೂ ಅಲ್ಲ. ನರಕದ ಹಾದಿಯು ಸುಂದರವಾದ ಸುಳ್ಳುಗಳಿಂದಲೇ, ನಿರ್ಮಾಣಗೊಂಡಿದೆ. ಸುಳ್ಳು ಹೇಳುವವನಿಗೆ ಲಭಿಸುವ ನಿಜವಾದ ಶಿಕ್ಷೆ, ಅವನನ್ನು ಯಾರೂ ನಂಬುವುದಿಲ್ಲ ಎನ್ನುವುದಲ್ಲ, ಅವನು ಯಾರನ್ನೂ ನಂಬುವುದಿಲ್ಲ ಎನ್ನುವುದು.

ಸುಳ್ಳು ಹೇಳುವವನು, ತಾನೆಂಥ ಗುರುತರ ಹೊಣೆಯನ್ನು ಮೈಮೇಲೆ ಹಾಕಿಕೊಂಡಿರುವೆ ಎಂಬುದನ್ನೇ ತಿಳಿದಿರುವುದಿಲ್ಲ. ಒಂದು ಸುಳ್ಳನ್ನು ಬದುಕಿಸಬೇಕಾದರೆ ಅವನು ಇಪ್ಪತ್ತು ಸುಳ್ಳನ್ನು ಸೃಷ್ಟಿಸಬೇಕಾಗುತ್ತದೆ. ಬರಬರುತ್ತಾ ಸುಳ್ಳಿನ ಗೋಪುರದಲ್ಲೇ ತನ್ನ ವಾಸ್ತವ್ಯ ಹೂಡಬೇಕಾಗುತ್ತದೆ. ಆದರೆ ಸುಳ್ಳಿನ ಗೋಪುರ ಯಾವಾಗ ಬೇಕಾದರೂ ಕುಸಿದು ಬೀಳಬಹುದು! ಆಗ, ಆ ವ್ಯಕ್ತಿಯ ವ್ಯಕ್ತಿತ್ವವೇ ಕುಸಿದಂತೆ.

• **ಚೇತನ್ ಎನ್. ಆರ್., ನಂಜನಗೂಡು**

ರಂಗದಲ್ಲಿ ಅಂತರಂಗ ತಟ್ಟುವ ಸಿದ್ದಿ

• **ರಾಜು ಅಡಕಳ್ಳಿ**

ಬೆಳಗ್ಗೆಯಿಂದ ಸಂಜೆಯವರೆಗೂ ಕೂಲಿ ಕೆಲಸ. ಸಂಜೆಯಿಂದ ರಾತ್ರಿವರೆಗೂ ನಾಟಕ, ಸಣ್ಣಾಟ, ಹಾಡು, ಕುಣಿತಗಳಿಗೆ ತುಡಿತ. ತಾಂಬೂಲಕ್ಕಿಂತ ತಾಳ, ತುಂಬೂರಿಯೆಡೆಗೇ ಮಿಡಿತ. ಹೀಗೆ ಕಲೆಯ ಬಲೆಯೊಳಗಿದ್ದರೆ ಬಡತನದ ಒಲೆಯಿಂದಲೂ ಹೊರಗೆ ಬಂದು, ಬದುಕಿನ ಹೊರೆಯನ್ನಿಳಿಸಿಕೊಳ್ಳಬಹುದು ಎಂಬುದಕ್ಕೆ ಬಾಚನಹಳ್ಳಿಯ ಸುರೇಶ ಸಿದ್ದಿಯವರೇ ಜೀವಂತ ನಿದರ್ಶನ.

ಸುರೇಶ ಸಿದ್ದಿಯವರು ಶಾಲಾ ಕಾಲೇಜಿಗೆ ಹೋದವರಲ್ಲ. ನಾಟಕ, ಸಂಗೀತ, ಸಣ್ಣಾಟ, ಜಾನಪದ, ಕುಣಿತಗಳಲ್ಲೇ ಇವರು ಬದುಕಿನ ಹೊಸ ಬೆಳಕು ಕಂಡವರು. ಈ ಕಲೆಯ ಸಹವಾಸವಿಲ್ಲದಿದ್ದರೆ ಇವರಿಗೆ ವನವಾಸವೇ ಗತಿಯಾಗಿತ್ತು. ಕಾಡು, ಕೂಲಿ ಕೆಲಸಗಳಲ್ಲೇ ಮುಗಿದು ಹೋಗುತ್ತಿದ್ದ ಇವರನ್ನು ನಾಡಿಗೆ ತಂದಿದ್ದು ಇವರ ಕಲೆಯ ಹುಚ್ಚೊ ಅಥವಾ ಇವರ ಆಸಕ್ತಿಯ ಕಲಗಚ್ಚೊ ಗೊತ್ತಿಲ್ಲ.

ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಬಂದ ದಿನ ಇವರು ಬೆದೆಹಕ್ಕಲು ಅನಂತ ಹೆಗಡೆಯವರ ಮನೆಗೆ ಕೂಲಿ ಕೆಲಸಕ್ಕೆ ಹೋಗಿದ್ದರು. ಈ ಪ್ರಶಸ್ತಿ ಸ್ವೀಕರಿಸಿ ವಾಪಸ್ಸಾದ ನಂತರವೂ ಮತ್ತೆ ಇವರು ಯಥಾ ಪ್ರಕಾರ ಮಾಳಕೊಪ್ಪದ ರವಿ ಹೆಗಡೆಯವರ ಮನೆಗೆಲಸ, ಕೂಲಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಜೊತೆಗೆ ಸಣ್ಣಾಟ, ನಾಟಕಗಳ ನೆಂಟಸ್ತನ. ಪ್ರಶಸ್ತಿ ಇವರಿಗೆ ಗೌರವ ತಂದುಕೊಟ್ಟಿದೆಯೇ ಹೊರತು ಇವರ ಬದುಕಿನ ಪಥ ಬದಲಿಸಲಿಲ್ಲ. ಇವರ ಕಲೆಯ ವ್ರತದಲ್ಲೂ ವ್ಯತ್ಯಾಸವಾಗಿಲ್ಲ. ಅಡ್ಡಿಲ್ರ ಒಡೆಯಾ ಎನ್ನುವ ಇವರ ದನಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಪ್ಪಟ ಗ್ರಾಮೀಣ ಕಲಾವಿದನ ಈ ಮುಗ್ಧ ಮನಸ್ಸೇ ಇವರ ವಿಶಿಷ್ಟ ಶಕ್ತಿ.

ಸುರೇಶ ಸಿದ್ದಿ ಅವರ ಪಾಲಿಗೆ ಹಾಡು, ಕುಣಿತ, ಭಾಗವತಿಕೆ, ಡಮಾಮಿ, ಪುಗುಡಿ ನಲಿತಗಳೆಲ್ಲವೂ ಇವರ ಅಪ್ಪ ರಾಮಚಂದ್ರ ಸಿದ್ದಿಯವರಿಂದ ಸಿದ್ಧಿಸಿದ್ದು. ಕಲ್ಲಳ್ಳಿಯ ಮಹಾಬಲ ಹೆಗಡೆಯವರ ಮನೆಯಲ್ಲಿ ಈ ರಾಮಚಂದ್ರ, ಕೂಡ ಮನೆಯಾಳು. ಆಳಾಗಲೀ ಅರಸನಾಗಲೀ, ಪ್ರತಿಭೆಗೇನೂ ಫರಕ್ಕಿಲ್ಲವಲ್ಲ.

ಅಪ್ಪ ರಾಮಚಂದ್ರರ ಈ ಗಾವಟಿ ಪ್ರತಿಭೆಯ ಪ್ರಭಾವ ಮಗ ಸುರೇಶರ ಮೇಲಾಗಿ, ತದನಂತರ ಈ ಸುರೇಶರಿಗೆ ಮಂಚಿಕೇರಿಯ ರಂಗ ತಂಡಗಳಿಂದ ಮತ್ತು ಹೆಗ್ಗೋಡಿನ ನೀನಾಸಂ ನಿಂದ ಶಾಸ್ತ್ರೀಯ ತರಬೇತಿ, ತಾಲೀಮು ಸಿಕ್ಕಿ ಇವರೊಬ್ಬ ಪ್ರಬುದ್ಧ ಕಲಾವಿದರಾಗಲು ಸಾಧ್ಯವಾಯಿತು. ಮನೆಯಲ್ಲಿ ಕೊಂಕಣಿ, ಊರಲ್ಲಿ ಕನ್ನಡ ಮಾತನಾಡುವುದರಿಂದ ಇವರಿಗೆ ಎರಡೂ ಭಾಷೆಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರಸ್ತುತಪಡಿಸಲು ಸಾಧ್ಯವಾಯಿತು.

ಡಮಾಮಿ ಪುಗುಡಿ

ನಾಟಿ ಸ್ಟೈಲಿನ ಭಾಗವತರಾಗಿ, ಡಮಾಮಿಯೂ ಸೇರಿದಂತೆ ವಿವಿಧ ವಾದ್ಯ, ತಾಳಗಳ ವಾದಕರಾಗಿ, ಜಾನಪದ ಗಾಯಕರಾಗಿ, ನಾಟಕಗಳಲ್ಲಿ ನಟರಾಗಿ, ಪುಗುಡಿಯಲ್ಲಿ ಗೆಜ್ಜೆ ಉಲಿಸುವ ಗೆಜ್ಜೇಶ್ವರನಾಗಿ, ನೃತ್ಯದಲ್ಲಿ ಹೆಜ್ಜೆ ಹಾಕುವ ನವಿಲೇಶ್ವರನಾಗಿ ಸುರೇಶ ಸಿದ್ದಿಯವರು ರಂಗಭೂಮಿ ಮತ್ತು ಜಾನಪದ ಕ್ಷೇತ್ರಗಳಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ಸಲ್ಲಿಸುತ್ತಿದ್ದಾರೆ.

ಅಂದಿನ ಅನ್ನಕ್ಕಾಗುವಷ್ಟು ಅಂದೇ ದುಡಿದುಕೊಂಡು ಕಾಡು ನಾಡಿನ ನಡುವೆ ತ್ರಿಶಂಕು ಸ್ಥಿತಿಯಲ್ಲಿದ್ದ ಈ ಸುರೇಶ ಸಿದ್ದಿಯವರಿಗೆ ಹೊರ ಜಗತ್ತನ್ನು ಪರಿಚಯಿಸಿದ್ದು ಮಂಚಿಕೇರಿಯಲ್ಲಿ ಆಗ ರಾಮಕೃಷ್ಣ ಭಟ್, ದುಂಡಿಯವರ ನೇತೃತ್ವದಲ್ಲಿ ಪ್ರಾರಂಭಗೊಂಡಿದ್ದ ರಾಜರಾಜೇಶ್ವರಿ ರಂಗ ಸಮೂಹ ಸಂಸ್ಥೆ.

ಈ ರಂಗ ಸಂಸ್ಥೆಯಿಂದ ಆಗ ಜಂಬೆಯವರ ನಿರ್ದೇಶನದಲ್ಲಿ 'ಕಪ್ಪು ಜನ ಕೆಂಪು ನೆರಳು' ನಾಟಕದ ತಯಾರಿ ಆರಂಭವಾದಾಗ ಈ ಸುರೇಶ ಸಿದ್ದಿಯವರೂ ಸೇರಿದಂತೆ ಕೆಲವು ಸಿದ್ದಿ ಯುವ ಪ್ರತಿಭೆಗಳು ಸೇರಿಕೊಂಡರು. ಇದರಿಂದಾಗಿ ಸಂಜೆಯಾಗುತ್ತಲೇ ಗುಂಡು ಗಡಂಗುಗಳಿಗೆ ತೆರಳುತ್ತಿದ್ದವರು ಮಂಚಿಕೇರಿಯ ರಂಗಮಂಚಕ್ಕೆ ಬಂದು ರಿಹರಸಲ್ಲುಗಳಲ್ಲಿ ಅರ್ಥಪೂರ್ಣವಾಗಿ ಕಾಲ ಕಳೆಯುವಂತಾಯಿತು. ಮೊದಲೇ ಜಾನಪದ ಶೈಲಿಯಲ್ಲಿ ಕರಗತರಾಗಿದ್ದ ಸುರೇಶ ಸಿದ್ದಿಯವರಿಗೆ ಈ ಹೊಸ ನಾಟಕ ಶಾಲೆಗೆ ಸೇರುವಂತಾಗಿ, ಕಲೆಯ ಶಾಸ್ತ್ರೀಯ ಕಲಿಕೆ ಗ್ರಹಿಕೆ ಸಾಧ್ಯವಾಗುವಂತಾಯಿತು.

ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಘೋಷಣೆಯಾದಾಗ ಈ ಸುರೇಶ ಸಿದ್ದಿಯವರೂ ಪುರಸ್ಕೃತರಾಗಿ ಸುದ್ದಿಯಾದರು.

ಹೆಗ್ಗೋಡಿನಲ್ಲಿ

ಮುಂದೆ ಹೆಗ್ಗೋಡಿನಲ್ಲಿಯೂ ಕೆಲಕಾಲ ಸುರೇಶರು ರಂಗ ನಿರ್ವಹಣೆಯ ವಿವಿಧ ಆಯಾಮಗಳ ಕುರಿತು ಹೆಚ್ಚಿನ ತರಬೇತಿ ಪಡೆದುಕೊಂಡರು. ಇವೆಲ್ಲವುಗಳಿಂದ ಸುರೇಶ ಸಿದ್ದಿಯವರು ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಯಿತಲ್ಲದೇ, ಸಿದ್ದಿ ಜನಾಂಗದ ಇನ್ನೂ ಅನೇಕರು ಇವರಿಂದ ಪ್ರೇರಣೆಗೊಂಡು ನಾಡಿನ ಸಾಂಸ್ಕೃತಿಕ ಲೋಕದಲ್ಲಿ ನೆಲೆಗಟ್ಟು ಕಂಡುಕೊಳ್ಳುವಂತಾಗಿರುವುದು ಬಹು ಮುಖ್ಯ ಬೆಳವಣಿಗೆ.

ಕಾಕನಕೋಟೆ, ಅಗ್ನಿವರ್ಣ, ಸತ್ತವರ ಕಥೆ ಅಲ್ಲ, ಪುಂಟಿಲಾ, ಕೋಟೆಮನೆ ಪೊಲೀಸ್ ಸ್ಟೇಷನ್, ತ್ರೀ ಪೆನ್ನಿ ಒಪೆರಾ, ಬೆಟ್ಟದ ಅರಸು, ಚೋರ ಚರಣ ದಾಸ, ಅಂತಿಗೊನೆ, ಸೂರ್ಯ ಶಿಕಾರಿಯಂಥ ವಿಚಾರ ಪ್ರಚೋದಕ ನಾಟಕಗಳಲ್ಲಿ ನಟನೆ, ಸಂಗೀತ, ನೃತ್ಯ ವಿಭಾಗಗಳಲ್ಲಿ ಇವರು ತಮ್ಮ ಪ್ರತಿಭೆ ಬೆಳಗಿದ್ದಾರೆ.

ನೆಲ್ಸನ್ ಮಂಡೇಲಾ ಹೋಲಿಕೆ

ಪ್ರಸಿದ್ಧ ರಂಗ ನಿರ್ದೇಶಕರಾದ ಜಂಬೆ, ರಘುನಂದನ, ಕೃಷ್ಣಮೂರ್ತಿ ಕವತ್ತಾರ, ಪ್ರಮೋದ್ ಶಿಗ್ಗಾವ್, ವೆಂಕಟರಮಣ ಐತಾಳ್, ಚೆನ್ನಕೇಶವ ಮುಂತಾದವರ ನಾಟಕಗಳಲ್ಲಿ ಪಳಗಿ, ಬೆಳಗಿ ಇವರು ಸೈ ಎನಿಸಿಕೊಂಡಿದ್ದಾರೆ. ಸೈಡ್ ಪೋಸಿನಿಂದ ನೋಡಿದರೆ ನೆಲ್ಸನ್ ಮಂಡೇಲಾ ಅವರ ದೊಡ್ಡಪ್ಪನಂತೆ ಕಾಣುವ ಈ ಸಿದ್ದಿಯವರು ತಮ್ಮ ವಿಶಿಷ್ಟ ಮೈಕಟ್ಟಿನಿಂದ, ಒಳ್ಳೆಯ ಜವಾರಿ ಭಾಷೆಯಿಂದ ರಂಗಭೂಮಿಯ ವಿಶಿಷ್ಟ ಪಾತ್ರಗಳಿಗೆ ಹೊಂದಿಕೆಯಾಗುತ್ತಾರೆ. ಪ್ರತಿಭೆಯಲ್ಲಿ ಆಫ್ರಿಕಾದವರಿಗಿಂತಲೂ ಕಂಡಾಪಟ್ಟೆಯಿರುವ ಸಿದ್ದಿ ಜನಾಂಗದವರು ಕೇವಲ ನಾಟಕವೊಂದೇ ಅಲ್ಲ, ಸಿನಿಮಾ, ಟಿವಿ ನಟನೆ, ಸಿನಿಮಾ ಸಂಗೀತ, ಕ್ರೀಡೆಗಳಲ್ಲೂ ಇತ್ತೀಚೆಗೆ ಹೆಚ್ಚೆಚ್ಚು ಬೆಳಕಿಗೆ ಬರುತ್ತಿರುವುದು ಆಶಾದಾಯಕ ಬೆಳವಣಿಗೆ.

ಸಣ್ಣಾಟದಲ್ಲಿ ಹೆಜ್ಜೆ ಹಾಕುವ ಕಲಾವಿದರಾಗಿ, ಭಾಗವತರಾಗಿ, ಮೃದಂಗ, ಚಂಡೆ, ವಾದಕರಾಗಿ, ಸಂಗ್ಯಾ ಬಾಳ್ಯಾದ ನಿರ್ದೇಶಕರಾಗಿ ಸುರೇಶರು ತಮ್ಮ ಛಾಪು ಮೂಡಿಸಿದ್ದಾರೆ. ರಾಜರಾಜೇಶ್ವರಿ ರಂಗ ವಿಭಾಗ, ಮಂಚಿಕೇರಿ ರಂಗ ಸಮೂಹ, ಸಿದ್ದಿ ಟ್ರಸ್ಟ್, ದೇವರಕಲ್ಲಳ್ಳಿ ಹವ್ಯಾಸಿ ತಂಡಗಳಲ್ಲಿ ಇವರು ಸಕ್ರಿಯರಾಗಿದ್ದಾರೆ.

ನೂರಾರು ಜಾನಪದ ಹಾಡುಗಳನ್ನು, ರಂಗ ಗೀತೆಗಳನ್ನು ಪಟ್ಟಿ ನೋಡದೇ ಹಾಡುವುದು ಇವರಿಗೆ ಕರಗತವಾದ ಕಲೆ. ಆದರೆ ಕರಗಸದಂತೆ ಇವರು ತಮ್ಮ ಕಲೆಯನ್ನು ಯದ್ವಾತದ್ವಾ ಪ್ರದರ್ಶಿಸುವುದಿಲ್ಲ. ದಕ್ಷಿಣ ಭಾರತದ ಅನೇಕ ಕಡೆ ಇವರು ರಂಗ ಜಂಗಮರಾಗಿ ಅಲೆದಿದ್ದಾರೆ. ತಾನೇನು ಅಜರಾಮರನಾಗಬೇಕೆಂಬ ತಹತಹ ಇವರದ್ದಲ್ಲ, ತಾನು ತಂಪು ನೀಡುವ ಮರದಂತಿದ್ದರೂ ಸಾಕು ಎಂಬ ಸಮಚಿತ್ತದ ಇವರ ಮನಸ್ಥಿತಿ ಇವರಲ್ಲಿನ ಸಹೃದಯತೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿದೆ. ತನ್ನ ಬಗ್ಗೆ ಆಕಾಶವಾಣಿಯ ಪ್ರದೇಶ ಸಮಾಚಾರದಲ್ಲಿ ಬರಬೇಕು ಅಥವಾ ತನ್ನ ಫೋಟೋ ಲೋಕಧ್ವನಿಯ ಮುಖಪುಟದಲ್ಲೇ ಬರಬೇಕು ಎಂದು ಅಕಲು ಹಾಕುವವರು ಇವರಲ್ಲ.

ಸೀದಾ ಸಾದಾ ಎಂಬುದು ಇವರ ರಕ್ತದಲ್ಲೇ ಬಂದಿದೆ. ಆದರೂ ಮನೆಯಲ್ಲಿ ಗಂಜಿ ಕುಡಿಯುವುದು ಮಾತ್ರ ಇವರಿಗೆ ತಪ್ಪಿಲ್ಲ. ಅಪರೂಪಕ್ಕೆ ಕೋಳಿ ಊಟಕ್ಕೆ ಆಗಲೆಂದು ಒಂದಷ್ಟು ಕೋಳಿ ಸಾಕಿಕೊಂಡಿದ್ದಾರೆ. ಜೀವಂತವಾಗಿದ್ದಾಗ ಕೋಳಿ ಮನಸ್ಸಿಗೂ ಖುಷಿ ಕೊಡುತ್ತದೆ. ಮುಂದೆ ಕೋಳಿ ದಿವಂಗತನಾದ ನಂತರ ನಾಲಿಗೆಗೂ ರುಚಿ ಕೊಡುತ್ತದೆಯಲ್ಲವೇ?

ಪತ್ನಿಯೂ ಕಲಾವಿದೆ

ಸುರೇಶರ ಪತ್ನಿ ಸವಿತಾ ಸಹಾ ಅಲ್ಲಲ್ಲಿ ಅಡಿಕೆ ಸೊಲಿಯಲು ಕೆಲಸಕ್ಕೆ ಹೋಗುತ್ತಾ, ಪುಂಟಿಲಾ ಸೇರಿದಂತೆ ಕೆಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮಗ ಲೋಕೇಶ್ ಕೂಡಾ ಮಂಚಿಕೇರಿಯಲ್ಲಿ ಗ್ಯಾರೇಜನ್ನು ನಡೆಸುತ್ತಲೇ, ತಮ್ಮ ತಂದೆಯ ನಿರ್ದೇಶನದಲ್ಲಿ ಸಂಗ್ಯಾ ಬಾಳ್ಯಾದಲ್ಲೂ ಕಲಾವಿದರಾಗಿ ಎಂಟ್ರಿ ಕೊಟ್ಟಿದ್ದಾರೆ. ತಮ್ಮ ಬಡತನದಲ್ಲಿಯೂ ಒಬ್ಬ ಮಗಳಿಗೆ (ಉಮಾ) ಎಲ್. ಎಲ್. ಬಿ. ಓದಿಸಿ ವಕೀಲೆಯನ್ನಾಗಿ ಮಾಡಿರುವುದು ಸುರೇಶರ ಮತ್ತೊಂದು ಸಾಧನೆ.

ವೃತ್ತಿ ಯಾವುದಾದರೇನು? ಪ್ರವೃತ್ತಿ ಪನ್ನೀರಿನಂತೆ ಘಮಘಮಿಸುತ್ತಾ ಮತ್ತೊಬ್ಬರಿಗೂ ಖುಷಿ ಕೊಡುವಂತಿರಬೇಕು ಎಂಬ ಜೀವನ ಸಂದೇಶವನ್ನು ಮೌನವಾಗಿಯೇ ಸಾರುತ್ತಿರುವುದು ಈ ಸುರೇಶರ ವೈಶಿಷ್ಟ್ಯ.

ಪ್ರಶಸ್ತಿ

ಇವರ ಸದ್ಯೋಜಾತ ಪ್ರತಿಭೆಯ ಕೊಡುಗೆ ಉತ್ತರ ಕನ್ನಡಕ್ಕೆ ಕೋಡು ಮೂಡಿಸಿದ್ದಂತೂ ನಿಜ. ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಘೋಷಣೆಯಾದಾಗ ಈ ಸುರೇಶ ಸಿದ್ದಿಯವರೂ ಪುರಸ್ಕೃತರಾಗಿ ಸುದ್ದಿಯಾದರು. ಪ್ರತಿನಿತ್ಯ ಬನಿಯನ್ನು, ಟಾವೆಲ್ ಡ್ರೆಸ್ಸಿನಲ್ಲಿ ಯಾರಂತೆ, ಊರಂತೆ ಕೃಷಿ ಕೂಲಿ ಕೆಲಸ ಮಾಡುತ್ತಿದ್ದ ಈ ಸುರೇಶ ಸಿದ್ದಿಯವರನ್ನು ನೋಡುತ್ತಿದ್ದ ಯಲ್ಲಾಪುರ ಸಮೀಪದ ಮಂಚಿಕೇರಿ, ಹಾಸಣಗಿ ಭಾಗದವರಿಗಂತೂ ಇದು ದೊಡ್ಡುದ್ದಿಯೋ ದೊಡ್ಡುದ್ದಿ. ಗೊಬ್ಬರದ ಹೆಡಿಗೆ ಹೊತ್ತು ಹೊತ್ತು ಸವೆಸಿಕೊಂಡಿದ್ದ ತಲೆಯ ಮೇಲೆ ಒಮ್ಮೆಗೇ ಹೀಗೆ ಪ್ರಶಸ್ತಿಯ ಕಿರೀಟ ಮಿಂಚಿದ್ದಕ್ಕೆ ಆಶ್ಚರ್ಯ ಸಹಜವೇ.

ನಿರಂತರ ಪ್ರಯತ್ನ ಅಗತ್ಯ

• **ಕು. ಶಿರೀನ ಮೋಮಿನ**

ವಿದ್ಯಾರ್ಥಿಗಳು ವಿದ್ಯಾವಂತರಾಗಬೇಕೆಂಬ ಹಂಬಲ ಪ್ರತಿಯೊಬ್ಬ ತಂದೆ-ತಾಯಿಯವರ ಮಹಾದಾಸೆ. ಆದರೆ ವಿದ್ಯಾರ್ಥಿಗಳಲ್ಲಿ ಮೊದಲು ವಿಷಯಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಪ್ರತಿಯೋರ್ವ ವಿದ್ಯಾರ್ಥಿ ಇಂಗ್ಲೀಷ, ವಿಜ್ಞಾನ ಹಾಗೂ ಗಣಿತದಂತಹ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಮುಖ್ಯವಾದ ಕೆಲಸ. ಎಲ್ಲಿ ವಿಷಯ ಸರಿಯಾಗಿ ತಿಳಿಯುವುದಿಲ್ಲವೋ ಅಲ್ಲಿ ಶಿಕ್ಷಕರನ್ನು ಪುನಃ ಕೇಳಿ ತಿಳಿದುಕೊಳ್ಳಬೇಕು.

ವಿಜ್ಞಾನದಂತಹ ವಿಷಯಗಳನ್ನು ತಿಳಿದುಕೊಳ್ಳುವಾಗ

ಯಾವುದೇ ವಿಷಯವು ಕಠಿಣವಾದುದಲ್ಲ; ನಾವು ಮಾಡುತ್ತಿರುವ ಪ್ರಯತ್ನ ಕಡಿಮೆ.

ಪ್ರಯೋಗಾಲಯದಲ್ಲಿ ಪ್ರಯೋಗಗಳ ಮೂಲಕ ತಿಳಿದುಕೊಳ್ಳುತ್ತೇವೆಯೋ ಹಾಗೆಯೇ ಗಣಿತದಂತಹ ವಿಷಯಗಳನ್ನು ತಿಳುವಳಿಕೆಯಲ್ಲಿ ಲೆಕ್ಕಗಳನ್ನು ಸರಳ ರೂಪದಲ್ಲಿ ತಿಳಿಯುತ್ತಾ, ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಿದಾಗ ಗಣಿತವೂ ಸರಳವಾಗುತ್ತದೆ. ಹಾಗೆಯೇ ಇಂಗ್ಲೀಷ ಪದಗಳ ಶಬ್ದಕೋಶಗಳ ಕಡೆಗೆ ಗಮನ ಹರಿಸುವುದು ಮತ್ತು ಇಂಗ್ಲೀಷ ಪದಗಳನ್ನು ಸರಿಯಾಗಿ ಜೋಡಿಸುವ ರೀತಿ ಬೆಳೆಸಿಕೊಂಡರೇ, ದಿನನಿತ್ಯದ ಬದುಕಿನಲ್ಲಿ, ಆಡುವಾಗ, ಮಾತಾಡುವಾಗ ಆ ಭಾಷೆಯ ಪದಗಳನ್ನು ಬಳಸುವುದರಿಂದ ಅದೂ ಸುಲಭೀಕರಣಗೊಳ್ಳುತ್ತದೆ.

ಥಾಮಸ ಅಲ್ವಾ ಎಡಿಸನ ಅವರ ಪ್ರಯತ್ನ ಎಲ್ಲರಿಗೂ ತಿಳಿದದ್ದೇ. 10,000 ಕ್ಕಿಂತ ಹೆಚ್ಚಿನ ಪ್ರಯತ್ನದ ಫಲವಾಗಿ ವಿದ್ಯುತ್ ಬಲ್ಬನ್ನು ಅವರು ಕಂಡುಹಿಡಿದರು. ಇವರ ಪ್ರಯತ್ನ ನಮಗೆ ಮಾದರಿಯಾಗಬೇಕು.

ಒಂದು ಮಗುವಿಗೆ ಏನೂ ತಿಳಿದಿರುವುದಿಲ್ಲ, ಅದು ನಡೆದಾಡುವಾಗ ಎಷ್ಟೋ ಸಾರಿ ಅದು ಬೀಳುತ್ತದೆ. ಹಾಗೆಂತ ನಡೆಯುವುದನ್ನೇ ಬಿಡಲಾರದು. ಮಾತನಾಡುವಾಗ ಎಷ್ಟೋ ತೊದಲುತ್ತದೆ ಹಾಗೆಂತ ಮಾತನಾಡುವುದನ್ನೇ ಬಿಡಲಾರದು. ಬರ ಬರುತ್ತಾ ಸುಲಭವಾಗಿ ಸ್ಪಷ್ಟವಾಗಿ ಮಾತನಾಡಲು ಕಲಿಯುತ್ತದೆ.ಯಾವುದು ಕಠಿಣವೆಂದು ಕೊಂಡಿರುತ್ತೇವೆಯೋ ಅದನ್ನು ಹಲವಾರು ಪ್ರಯತ್ನಗಳ ಮೂಲಕ ಮಾಡಿದಾಗ ಅದು ಸರಳೀಕರಣವಾಗುತ್ತದೆ.

ಕಲಿಯುವವರೆಗೂ ಬ್ರಹ್ಮ ವಿದ್ಯೆಯಾದದ್ದು, ಕಲಿತ ನಂತರ ಕೋತಿ ವಿದ್ಯೆಯಷ್ಟು ಸರಳವಾಗಿಬಿಡುತ್ತದೆ. ಯಾವುದೇ ವಿಷಯವೂ ಕಠಿಣವಲ್ಲ ಅವುಗಳನ್ನುಸರಿಯಾಗಿ ಅರ್ಥೈಸಿಕೊಳ್ಳಿ ಹಾಗೂ ಹಲವು ಪ್ರಯತ್ನಗಳನ್ನು ಮಾಡಿ ಎಲ್ಲವೂ ಸುಲಭ.

ಸ್ವಾರ್ಥಿಗಳು

ಚುನಾವಣೆ ಬಂದಾಗ
ಮಾಡುತ್ತಾರೆ ಆರೋಪ
ಒಬ್ಬರ ಮೇಲೆ ಒಬ್ಬರು
ನಂತರ ಎಲ್ಲರೂ ಒಂದೇ
ಸ್ವಾರ್ಥ ಎಂಬುದು
ಕಹಿಯ ಮರೆಸುವ ರಬ್ಬರು

• **ಮಹಾಂತೇಶ ಮಾಗನೂರ**

ಕುಲುಮೆಯ ಪೆಟ್ಟು!

• **ಹೊಸ್ಮನೆ ಮುತ್ತು**

ಕಾದ ಕಬ್ಬಿಣವನ್ನು ಬಡಿದು ಜೀವನದ ಬಂಡಿಯನ್ನು ದೂಡುವ ಶ್ರಮಜೀವಿಗಳಿವರು. ಕುಲುಮೆ ಒಲೆಯಲ್ಲಿ ಕಾದು ಕೆಂಪಾದ ಕಬ್ಬಿಣವನ್ನು ಸುತ್ತಿಗೆಯಿಂದ ಬಡಿದು ಬಾಗಿಸಿ, ತಟ್ಟಿ, ತೀಡಿ ಉಪಯೋಗಿ ವಸ್ತುಗಳನ್ನು ಸಿದ್ಧಮಾಡಲು ನೈಪುಣ್ಯತೆ ಬೇಕು. ಜೊತೆಗೆ ದೈಹಿಕವಾಗಿ ಗಟ್ಟಿಮುಟ್ಟಾಗಿರಬೇಕು. ಕುಲುಮೆಯ ಶಾಖದಲ್ಲಿ ಬೆಂದು ಮೆತ್ತಗಾದ ಕಬ್ಬಿಣದಿಂದ ವಿಧ, ವಿಧವಾದ ಪರಿಕರಗಳನ್ನು ಅರಳಿಸುವ ಈ ಕೆಲಸ ಸುಲಭದ್ದೇನಲ್ಲ. ಇವರು ರಸ್ತೆಯಲ್ಲಿ ಬಿಡಾರ ಹೂಡಿದ್ದಾರೆ. ದಿನಬೆಳಗಾದರೆ ರಸ್ತೆ ಬದಿಯಲ್ಲಿಯೇ ಕುಲುಮೆ ಇಟ್ಟು ಮಹಿಳೆ ಮಕ್ಕಳೆನ್ನದೆ ಕಾದ ಕಬ್ಬಿಣವನ್ನು ಬಡಿದು ಉಪಯೋಗಿ ವಸ್ತುಗಳನ್ನು ತಯಾರಿಸುವ ದೃಶ್ಯ ರಸ್ತೆ ಬದಿ ಸಂಚರಿಸುತ್ತಿರುವವರ ಗಮನಸೆಳೆಯುತ್ತಿತ್ತು. ಅವರನ್ನು ಮಾತಿಗೆಳೆದಾಗ ಇದೇ ಉದ್ಯೋಗವನ್ನಾಧರಿಸಿ, ಊರಿಂದ ಊರಿಗೆ ವಲಸೆ ಮಾಡುತ್ತಾ ಬದುಕುತ್ತಿರುವ ಇವರು ಮೂಲತಃ ಮಹಾರಾಷ್ಟದವರು. ತಾವಾಯಿತು, ತಮ್ಮ ಶ್ರಮವಾಯಿತು, ಈ ವೃತ್ತಿ ಕೌಶಲ್ಯವೇ ಅವರ ಬಾಳು ಬೆಳಗುತ್ತಿದೆ.

ಅಭಿನವ ಶಂಕರಾಲಯಕ್ಕೆ 100

• **ವಾರುಣಿ , ಮೈಸೂರು**

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಶಕ್ತಿ ಶಾರದೆ ಪೀಠಕ್ಕೆ 100 ವಸಂತ ಪೂರ್ಣಗೊಂಡಿದೆ. ಜ್ಞಾನದೇವಿ ಆರಾಧನೆಯೊಂದಿಗೆ ನಿತ್ಯವೂ ಮಕ್ಕಳ ಅಕ್ಷರಾಭ್ಯಾಸಕ್ಕೆ ವೇದಿಕೆಯಾದ ಮಂದಿರವು ಅಧ್ಯಾತ್ಮಿಕ ಮತ್ತು ವೇದ ಜ್ಞಾನ ಪ್ರಸಾರದ ಮೂಲಕ ಸಮಾಜಕ್ಕೆ ಆದರ್ಶಪ್ರಾಯವಾದ ಶ್ರದ್ಧಾ ಕೇಂದ್ರವಾಗಿದ್ದು, ಶತಮಾನ ಪೂರ್ಣಗೊಳಿಸಿದೆ.

ಮೈಸೂರಿನಲ್ಲಿರುವ ಅಭಿನವ ಶಂಕರಾಲಯದಲ್ಲಿ ಈಗ ಶತಮಾನ ಸಂಭ್ರಮಾಚರಣೆ ನಡೆಯುತ್ತಿದೆ. ಬರುವ ಏ. 5 ರಂದು ಮಹಾ ಕುಂಭಾಭಿಷೇಕವೂ ನಡೆಯಲಿದೆ.

ಆದಿಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಶೃಂಗೇರಿ ಮಹಾಸಂಸ್ಥಾನಕ್ಕೆ ಶ್ರೇಷ್ಠ ಯತಿರಾಜರನ್ನು ಕೊಟ್ಟ ಕೀರ್ತಿ ಈ ತಾಣಕ್ಕೆ ಇದೆ ಎಂಬುದೇ ಬಹಳ ವಿಶೇಷ. ಅಂದರೆ ಮಹಾಪೀಠದ 33ನೇ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮೀಜಿ ಅವರು ಜನ್ಮ ತಾಳಿದ ಮನೆಯೇ ಶಾರದಾ ಮಾತೆ ಮಂದಿರವಾಯಿತು ಎಂಬುದು ಐತಿಹಾಸಿಕ ಸಂಗತಿ.

1924ರಲ್ಲಿ ಶಾರದಾ ಪೀಠದಲ್ಲಿ ವಿರಾಜಮಾನರಾಗಿದ್ದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿ ಅವರು ಗುರು ಗೌರವಾರ್ಥ ಇಲ್ಲಿ ಶಾರದೆಯನ್ನು ಪ್ರತಿಷ್ಠೆ ಮಾಡುವ ಸಂಕಲ್ಪ ಈಡೇರಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಮನೆಯನ್ನೇ ಮಂದಿರವಾಗಿ ರೂಪಿಸಿ, ಹೆಚ್ಚುವರಿಯಾಗಿ ಮೂರುವರೆ ಎಕರೆ ಜಾಗ ದಾನವಿತ್ತರು. ಇದನ್ನು ಗುರುಗಳು 'ಅಭಿನವ ಶಂಕರಾಲಯ'ವೆಂದು ನಾಮಕರಣ ಮಾಡಿದರು. ಆ ಮೂಲಕ ಇಲ್ಲೇ ಜನಿಸಿದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮೀಜಿ ಅವರಿಗೆ ಗೌರವಾದರ ಸಮರ್ಪಿಸಿದರು.



ಅಕ್ಷರದಾಯಿನಿ ಆಶೀರ್ವಾದ

100 ವರ್ಷದ ಅವಧಿಯಲ್ಲಿ ಮೈಸೂರಿನ ಲಕ್ಷಾಂತರ ಮಕ್ಕಳ ಅಕ್ಷರಾಭ್ಯಾಸ ಶಾರದೆ ದೇಗುಲದಲ್ಲೇ ನಡೆದಿದೆ. ನಿತ್ಯವೂ ಶಾರದಾಂಬೆ ಎದುರು ಮಕ್ಕಳ ಅಕ್ಷರ ಅಭ್ಯಾಸಕ್ಕೆ ಅನುವು ಮಾಡಿಕೊಡಲಾಗುತ್ತದೆ. ಅಶ್ವಯುಜ ಮಾಸದ ದಸರಾ ಸಂದರ್ಭದ ವಿಜಯದಶಮಿ ದಿನ ಸಾವಿರಾರು ಮಕ್ಕಳು ಇಲ್ಲಿ ಅಕ್ಷರಾಭ್ಯಾಸಕ್ಕೆ ಬರುತ್ತಾರೆ.

ಅಭಿನವ ಶಂಕರಾಲಯದಲ್ಲಿ ಇರುವ ಶಾರದಾಂಬದೇಗುಲದಲ್ಲಿ ನಿತ್ಯ ಬೆಳಗ್ಗೆ ಅಮ್ಮನವರಿಗೆ ಅಷ್ಟೋತ್ತರ, ಸಹಸ್ರನಾಮ, ಕುಂಕುಮಾರ್ಚನೆ, ಶ್ರೀಚಕ್ರ, ನವಾವರಣ ಪೂಜೆಗಳು ಕಲ್ಪೋಕ್ತ ವಿಧಾನದಲ್ಲಿ ಸಂಪನ್ನಗೊಳ್ಳುತ್ತವೆ.

ಇಲ್ಲಿ ಗಣಪತಿ, ನವಗ್ರಹ, ನಾಗ, ಶ್ರೀ ಆದಿಶಂಕರಾಚಾರ್ಯ, ಜಗದ್ಗುರು ನೃಸಿಂಹ ಭಾರತಿ ಅವರ ಸನ್ನಿಧಾನವಿದೆ. ಕೃಷ್ಣ ಏಕಾದಶಿ ರುದ್ರ, ಕ್ರಮಾರ್ಚನೆ, ಹುಣ್ಣಿಮೆ ಚಂಡಿಕಾಯಾಗ, ಸತ್ಯನಾರಾಯಣ ಪೂಜೆ, ಸಂಕಷ್ಟಿ, ಪ್ರದೋಶ, ಅಮಾವಾಸ್ಯೆಗೆ ಮೃತ್ಯುಂಜಯ ಹೋಮ, ರುದ್ರಹೋಮ, ಜ್ಯೇಷ್ಠ ಮಾಸದಲ್ಲಿ 3 ದಿನ ವಾರ್ಷಿಕೋತ್ಸವ, ಶಂಕರ ಜಯಂತಿಗೆ 5 ದಿನ ಶಂಕರೋತ್ಸವ, ಧರ್ಮೋಪನಯನ ವಿಜೃಂಭಣೆಯಿಂದ ನೆರವೇರುತ್ತದೆ. ನವರಾತ್ರಿಯಲ್ಲಿ ಒಂಬತ್ತು ದಿನವೂ ದೇವಿಗೆ ವಿಶೇಷ ಅಲಂಕಾರ, ಪೂಜೆ ಇರುತ್ತದೆ. ಮಹಾಲಯದಂದು ಅಮ್ಮನವರಿಗೆ ವಾರ್ಷಿಕ ಮಹಾಭಿಷೇಕ, ಹರಿದ್ರಾದರ್ಶನ ಅಲಂಕಾರ ಗಮನ ಸೆಳೆಯುತ್ತದೆ.

ವೇದ ಪಾಠಶಾಲೆ

ದೇಗುಲದ ಆವರಣದಲ್ಲಿ ಗೋ ಶಾಲೆ, ವೇದಪಾಠಶಾಲೆ, ಗ್ರಂಥಾಲಯ ಇವೆ. ಮಕ್ಕಳಿಗೆ ಪೂರ್ಣಾವಧಿ ಋಗ್ ಮತ್ತು ಯಜುರ್ ಸಂಹಿತೆಯನ್ನು ದಶಕದಿಂದ ಕಲಿಸಲಾಗುತ್ತದೆ. ಶ್ರೀ ಶಾರದಾ ಅದ್ವೈತ ಶೋಧ ಕೇಂದ್ರದಲ್ಲಿ ಸಂಶೋಧನೆಗಳು ಸಾಗಿವೆ. ಸಮಗ್ರ ಶಂಕರ ಸಿದ್ಧಾಂತವನ್ನು ಡಿಜಿಟಲೀಕರಣ ಮಾಡುವ ಕಾರ್ಯ ಭರದಿಂದ ನಡೆಯುತ್ತಿದೆ. ಇದಲ್ಲದೇ ಬಡ, ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿವೇತನ, ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಶತಮಾನೋತ್ಸವ ಆಚರಣೆ ಸಂಭ್ರಮದಿಂದ ಸಾಗಿದೆ. 'ಜಗದ್ಗುರುಗಳ ಆಶೀರ್ವಾದವೇ ನಮಗೆ ಸ್ಫೂರ್ತಿ' ಎನ್ನುತ್ತಾರೆ ಧರ್ಮಾಧಿಕಾರಿ ಎಚ್. ರಾಮಚಂದ್ರನ್.

ಜಗದ್ಗುರು ಶ್ರೀ ವಿಧುಶೇಖರ ಭಾರತೀ ತೀರ್ಥ ಮಹಾಸ್ವಾಮೀಜಿ ನೇತೃತ್ವದಲ್ಲಿ ಏ. 5ರಂದು ಮಾತೆ ಶಾರದೆ ಮತ್ತು ಜಗದ್ಗುರು ಶ್ರೀ ಸಚ್ಚಿದಾನಂದ ನೃಸಿಂಹ ಭಾರತೀ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಶತಮಾನೋತ್ಸವ ಅಂಗವಾಗಿ ಮಹಾ ಕುಂಭಾಭಿಷೇಕ, ಗೋಪುರದಲ್ಲಿ ಚಿನ್ನದ ಕಲಶ ಪ್ರತಿಷ್ಠಾಪನೆ ನೆರವೇರಲಿದೆ. ಶ್ರೀ ವಿಧುಶೇಖರ ಭಾರತೀ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಾವಿರಾರು ಭಕ್ತರು ಸಾಕ್ಷಿ ಆಗಲಿದ್ದಾರೆ ಶತಮಾನ ಉತ್ಸವ ಆಚರಣೆಯ ಪರ್ವ ಕಾಲಕ್ಕೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
08.11.2024 ಶುಕ್ರವಾರ
vishwavani.news

ದಿನ ದರ್ಶಿಕೆ

ಕಾರ್ತಿಕಾ ಮಾಸ, ಶುಕ್ಲ ಪಕ್ಷ, ಷಷ್ಠಿ ತಿಥಿ, ಪೂರ್ವಾಷಾಢ ನಕ್ಷತ್ರ, ಧೃತಿ ಯೋಗ, ಕೌಲವ ಕರಣ, ಧನು ಲಗ್ನ, ತುಲಾ ರಾಶಿ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಆಹಾರ ಸೇವಿಸಿದ ನಂತರ ಕೆಲವರಿಗೆ ಹೊಟ್ಟೆ ಸೆಳೆತ ಉಂಟಾಗುತ್ತದೆ. ಅಂತಹವರು ಊಟದ ನಂತರ ಇಂಗು ನೀರು ಕುಡಿಯುವುದರಿಂದ ತುಂಬಾ ಪ್ರಯೋಜನಕಾರಿಯಾಗಿದೆ. ಇಂಗು ನೀರಿನಲ್ಲಿ ಇರುವ ಔಷಧೀಯ ಗುಣಗಳು ಹೊಟ್ಟೆಯ ಸೆಳೆತವನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದಲ್ಲದೆ, ಇಂಗು ನೀರು ಮಹಿಳೆಯರಿಗೆ ಪಿರಿಯಡ್ಸ್ ಸಮಯದಲ್ಲಿ ಹೊಟ್ಟೆ ಸೆಳೆತದಿಂದ ಪರಿಹಾರವನ್ನು ನೀಡಲು ಸಹಕಾರಿಯಾಗಿದೆ.

ಸೌಂದರ್ಯ ಸೂತ್ರ

1 ಚಮಚ ಅರಿಶಿನ ಪುಡಿಯನ್ನು 1 ಚಮಚ ಮೊಸರಿನ ಜೊತೆ ಮಿಶ್ರಣ ಮಾಡಿ ಕಂಕುಳಿನ ಭಾಗಕ್ಕೆ ಹಚ್ಚಿ ಮತ್ತು 20 ನಿಮಿಷಗಳ ಕಾಲ ಹಾಗೇ ಬಿಡಿ. ನಂತರ ತೊಳೆಯಿರಿ. ಅರಿಶಿನವು ಉರಿಯೂತವನ್ನು ಕಡಿಮೆ ಮಾಡುತ್ತದೆ ಮತ್ತು ಮೊಸರು ಚರ್ಮವನ್ನು ಹೊಳೆಯುವಂತೆ ಮಾಡುತ್ತದೆ. ಇದರಿಂದ ಕಂಕುಳಿನ ಭಾಗ ಬಿಳಿಯಾಗುತ್ತದೆ.

ದಿನ ಭವಿಷ್ಯ

ಮೇಷ ಕುತ್ತಿಗೆ / ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ.

ವೃಷಭ ಯಶಸ್ಸು ಸಾಧಿಸಲು- ಸಮಯದ ಜೊತೆ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ ಇದು ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ.

ಮಿಥುನ ದಿಟ್ಟ ಮತ್ತು ನಿರ್ಭಯ ಅಭಿಪ್ರಾಯಗಳು ಸ್ನೇಹಿತನ ಆತ್ಮಗೌರವವನ್ನು ಹಾನಿ ಮಾಡಬಹುದು. ಅಗತ್ಯವಿದ್ದರೆ ಸ್ನೇಹಿತರು ನೆರವಿಗೆ ಬರುತ್ತಾರೆ.

ಕಟಕ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ ನೆನಪಿಡಿ, ಬದುಕಿನ ರಕ್ಷಣೆ ನಿಜವಾದ ಆಣೆ. ವ್ಯಾಪಾರಿಗಳಿಗೆ ನಷ್ಟ ಸಾಧ್ಯತೆ ಇದೆ.

ಸಿಂಹ ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ.

ಕನ್ಯಾ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ಇದು ಪರಸ್ಪರ ಸಂಪರ್ಕದಲ್ಲಿ ಸ್ವಾಭಾವಿಕತೆ ಮತ್ತು ಸ್ವಾತಂತ್ರ್ಯ ನಿಡುತ್ತದೆ.

ತುಲಾ ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಹಣವನ್ನು ಉಳಿಸುವ ಬಯಕೆ ಇಂದು ಪೂರ್ಣಗೊಳ್ಳಬಹುದು.

ವೃಶ್ಚಿಕ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ.

ಧನು ಜನರು ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ. ಆದರೆ ಇಂದು ಖರ್ಚುಗಳಲ್ಲಿ ತುಂಬಾ ಉದಾರಿಯಾಗದಿರಿ.

ಮಕರ ಅನಗತ್ಯ ಆಲೋಚನೆಗಳು ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ.

ಕುಂಭ ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಹೂಡಿಕೆಯಿಂದ ಪ್ರಯೋಜನ ಸಾಧ್ಯತೆ.

ಮೀನ ಯೋಗ ಮತ್ತು ಧ್ಯಾನ ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- ಖ್ಯಾತ ಗಾಯಕಿ ಉಷಾ ಉತ್ತುಪ್ ಹುಟ್ಟುಹಬ್ಬ
- ಖ್ಯಾತ ರಾಜಕಾರಣಿ, ಉಪಪ್ರಧಾನಿ ಹುದ್ದೆಗೇರಿದ್ದ ಲಾಲ್ ಕೃಷ್ಣ ಅಡ್ವಾನಿ ಅವರ ಹುಟ್ಟುಹಬ್ಬ
- ವಿದ್ಯುತ್‌ನಿಂದ ಎಕ್ಸ್-ರೇಗಳನ್ನು ಜರ್ಮನಿಯ ವಿಜ್ಞಾನಿ ವಿಲಿಯಮ್ ರಾಂಟ್‌ಗೆನ್ ಕಂಡುಹಿಡಿದರು.

ಚಿತ್ರಸ್ಫೂರ್ತಿ



ಅಲಸೂರು ಕೆರೆಯಲ್ಲಿ ನಡೆದ ಛಾತ್ ಪೂಜೆಯ ಸಮಯ. ಚಿತ್ರ: ಸುಧಾಕರ ದೇವರಾಜ್

ಶ್ರೀರಮಣ ಮಹರ್ಷಿಗಳ ಪ್ರಾಣಿ ಪ್ರೀತಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

1908ರಲ್ಲಿ ಒಮ್ಮೆ ರಮಣ ಮಹರ್ಷಿಗಳಿದ್ದ ಕಾಲದಲ್ಲಿ ತಿರುವಣ್ಣಾಮಲೈನಲ್ಲಿ, ಪ್ಲೇಗ್ ಸಾಂಕ್ರಾಮಿಕ ರೋಗ ಬಂದಿತು. ಆಗ ಮಹರ್ಷಿಗಳು ಪಚ್ಚೆಯಮ್ಮ ಎಂಬ ದೇಗುಲದಲ್ಲಿ ವಾಸಿಸಲು ಹೊರಟರು. ಆಗ ಅವರೊಂದಿಗೆ ಒಂದಷ್ಟು ಕೋತಿಗಳ ಹಿಂಡೂ ಅವರು ಹಿಂದೆ ಹೊರಟಿತು. ದೇವಾಲಯದ ಸುತ್ತಮುತ್ತಲೂ ಬಹಳಷ್ಟು ಹುಣಸೆ ಮರಗಳು ಇದ್ದು, ಅವುಗಳು ಹುಣಸೆಕಾಯಿಯಿಂದ ನೇತಾಡುತ್ತಿದ್ದವು. ಆ ವರ್ಷ ಆ ಹುಣಸೆ ಮರಗಳನ್ನು ಒಬ್ಬ ಮುಸ್ಲಿಂ ಹರಾಜಿನಲ್ಲಿ ಹಿಡಿದಿದ್ದ. ರಮಣ ಮಹರ್ಷಿಗಳ ಜೊತೆಗೆ ಬಂದಿದ್ದ ಕಪಿಗಳು ಹುಣಸೆ ಕಾಯಿಗಳನ್ನು ಕಿತ್ತು ಕಿತ್ತು ತಿನ್ನುತ್ತಿದ್ದವು. ಅದನ್ನು ನೋಡಿದ ಆತ ಕೋಪದಿಂದ ಕೋತಿಗಳ ಕಡೆಗೆ ಕವಣೆಯನ್ನು ಬೀಸಿದ. ಇವನು ಬೀಸಿದ ಕವಣೆ ತಾಕಿ ಕೋತಿಯೊಂದು ಸತ್ತು ಬಿದ್ದಿತು. ಆತ ಕೋತಿಗಳನ್ನು ಬೆದರಿಸಿ ಓಡಿಸುವ ಉದ್ದೇಶದಿಂದ ಕವಣೆಯನ್ನು ಬೀಸಿದ್ದ ಅಷ್ಟೇ. ಅವುಗಳನ್ನು ಕೊಲ್ಲುವ ಉದ್ದೇಶ ಅವನಿಗಿರಲಿಲ್ಲ. ಆಕಸ್ಮಿಕವಾಗಿ ಅದು ಒಂದು ಕೋತಿಗೆ ತಗಲಿ ಅದು ಸತ್ತೇ ಹೋಯಿತು. ಉಳಿದ ಕೋತಿಗಳೆಲ್ಲ ಆ ಸತ್ತ ಕೋತಿಯನ್ನು ಎತ್ತಿಕೊಂಡು ಹೋಗಿ ಭಗವಾನರ ಮುಂದಿರಿಸಿದವು. ಅವುಗಳ ಮುಖದಲ್ಲಿ ಕೋಪ ಮತ್ತು ದುಃಖ ಎರಡೂ ಕಾಣುತ್ತಿತ್ತು. ತಮ್ಮ ದುಃಖವನ್ನು ಅವು ಕಿರುಚಾಡುತ್ತಾ ವ್ಯಕ್ತಪಡಿಸುತ್ತಿದ್ದವು.

ಆಗ ರಮಣ ಮಹರ್ಷಿಗಳು,ಅವುಗಳನ್ನುದ್ದೇಶಿಸಿ 'ಜೀವವು ದೇಹವನ್ನು ಪಡೆದು ಹುಟ್ಟಿದ ಮೇಲೆ ಸಾವು ತಪ್ಪಿದ್ದಲ್ಲ ಇದು ಜೀವನದ ಸತ್ಯ. ಯಾರಿಂದ ಈ ಕೋತಿ ಸಾಯಿಸಲ್ಪಟ್ಟಿತೊ ಅವರಿಗೂ ಒಂದು ದಿನ ಸಾವು ತಪ್ಪದು' ಎಂದು ಅವುಗಳಿಗೆ ಹೇಳಿದರು. ಆಗ ಅವುಗಳೆಲ್ಲ ಅರ್ಥವಾದಂತೆ ಸುಮ್ಮನಾದವು.

ಇದಾದ ಮೂರು ನಾಲ್ಕು ದಿನಗಳಲ್ಲೇ, ಹುಣಸೆ ಮರದ ಗುತ್ತಿಗೆ ಪಡೆದಿದ್ದ ಆ ಮುಸ್ಲಿಂ ಮನುಷ್ಯ, ಕಾಯಿಲೆಗೆ ತುತ್ತಾದ. ಆತ ತಾನು ಕೋತಿಯೊಂದನ್ನು ಕೊಂದುದ್ದಾಗಿಯೂ ಮಹರ್ಷಿಗಳು ತನಗೆ ಶಾಪಕೊಟ್ಟಿದ್ದಾರೆಂದು ಮನೆ ಮಂದಿಗೆಲ್ಲ ಹೇಳಿದ. ಆಗ ಭಗವಾನರು 'ತಾವು ಯಾರಿಗೂ ವರವನ್ನಾಗಲೀ ಅಥವಾ ಶಾಪವನ್ನಾಗಲೀ ಕೊಡುವುದಿಲ್ಲ. ಕೋತಿಗಳನ್ನು ಸಮಾಧಾನಪಡಿಸಲು ನಾನು ಅವುಗಳಿಗೆ ಜೀವನದ ಸತ್ಯವನ್ನು ತಿಳಿಸಿದೆ ಅಷ್ಟೇ' ಎಂದರು.

ಆದರೂ ಆ ಮನುಷ್ಯನ ಮನೆಯವರೆಲ್ಲ ಭಗವಾನರಲ್ಲಿಗೆ ಬಂದು, 'ತಮ್ಮ ಮನೆಯ ಯಜಮಾನ ತಪ್ಪು ಮಾಡಿದ್ದಾನೆ, ಆತನಿಗೆ ಒಂದು ಭಸ್ಮ ನೀಡಿ ಕಾಪಾಡಬೇಕೆಂದು ಒತ್ತಾಯಿಸಿದರು.' ತಮಗೆ ಯಾರಿಗೂ ಬಸ್ಮಾ ಕೊಡುವ ಅಭ್ಯಾಸವಿಲ್ಲವೆಂದು ರಮಣ ಮಹರ್ಷಿ ಎಷ್ಟೇ ಹೇಳಿದರೂ, ತಮಗೆ ವಿಭೂತಿ ಪ್ರಸಾದ ಕೊಟ್ಟ ಹೊರತು ತಾವು ಆಶ್ರಮದಿಂದ ಕದಲುವುದಿಲ್ಲ ಎಂದು ಅಲ್ಲೇ ಕುಳಿತರು.

ಆಗ ಮಹರ್ಷಿಗಳು ನಗುತ್ತಾ, ಅಡಿಗೆ ಮನೆಯ ಒಲೆಯಲ್ಲಿ ಉರಿದ ಬೂದಿಯನ್ನು ತಂದು ಅದನ್ನೇ ವಿಭೂತಿ ಎಂದು ನೀಡಿದರು. ಅದನ್ನು ಆ ಗುತ್ತಿಗೆದಾರನ ಕುಟುಂಬದವರು, ಅವನ ಹಣೆಗೆ ಸವರಿದರು. ಸ್ವಲ್ಪ ದಿನಗಳಲ್ಲಿಯೇ, ಆತ ಹುಷಾರಾಗಿ ಆರೋಗ್ಯವಂತನಾದ. ನಂತರ ಆತ ಭಗವಾನರ ಶಿಷ್ಯರಲ್ಲಿ ಒಬ್ಬನಾದ. ಕೆಲವೊಮ್ಮೆ ನಾವು ಮಾಡಿದ ಕೆಟ್ಟ ಕೃತ್ಯಗಳ ಪಾಪಪ್ರಜ್ಞೆಯೇ ನಮ್ಮನ್ನು ಶಿಕ್ಷೆಗೀಡುಮಾಡುತ್ತದೆ.

ನಮ್ಮ ಮನಸ್ಸಿಗಿಂತ ದೊಡ್ಡ ಶತ್ರು ಮತ್ತು ಮಿತ್ರ ಯಾವುದೂ ಇಲ್ಲ. ನಮ್ಮ ಮನಸ್ಸು ನಮ್ಮನ್ನು ಕ್ಷಮಿಸಿದರೆ ನಾವು ನಿರಾಳವಾಗಿ ಜೀವನ ಮಾಡಬಹುದು. ನಮ್ಮ ಮನಸ್ಸು ನಮ್ಮನ್ನು ಶಿಕ್ಷಿಸಲು ನಿರ್ಧರಿಸಿದರೇ, ಆಜೀವ ಪರ್ಯಂತ ನಾವು ಖಿನ್ನತೆಗೆ ಜಾರಿ ತೊಳಲಾಡಬೇಕಾಗುತ್ತದೆ.

ಸೂಕ್ಷ್ಮ ಮನಸ್ಸಿನವರಿಗೆ ಅವರ ಜೀವನದಲ್ಲಾಗುವ ಇಂತಹದ್ದೇ ಅನೇಕ ಘಟನೆಗಳು ಮತ್ತೆ ಅವರನ್ನು ಕಾಡುತ್ತಾ ಅವರು ಜೀವನದಲ್ಲಿ ಮತ್ತೊಂದು ಸುಖವಾಗಿರಲಾರದಂತೆ ಶಾಪವಾಗಿ ಬಿಡುತ್ತದೆ. ಆಗ ಅವರಿಗೆ ಧೈರ್ಯ ನೀಡುವ ಸಾಂತ್ವನದ ಮಾತುಗಳು ಮತ್ತು ಅವರ ಮನಸ್ಸನ್ನು ಗಟ್ಟಿಗೊಳಿಸುವ ವಿಚಾರಗಳನ್ನು ಅವರಿಗೆ ಹೇಳಬೇಕಾಗುತ್ತದೆ. ಮನಸ್ಸಿನ ವಿಚಾರಗಳು ಹೊರಗೆ ಕಾಣದಂತವು. ಅವುಗಳನ್ನು ಹಗುರಾಗಿ ಪರಿಗಣಿಸಬೇಡಿ. ಈ ರೀತಿಯ ತೊಂದರೆಗಳಿದ್ದಲ್ಲಿ ಪರಿಣಿತರನ್ನು ಕಂಡು ಅದಕ್ಕೆ ತಕ್ಕ ಸಲಹೆ ಸಮಾಧಾನ ಅತ್ಯಗತ್ಯ.

ಪದಬಂಧ



ಎಡದಿಂದ ಬಲಕ್ಕೆ

2. ಬುದ್ಧಿವಂತನಂತೆ ಕಾಣುತ್ತಿದೆ ಈ ಪಕ್ಷಿ (3)
3. ಅಪಾಯ ಬಂದರೂ ನೆರವಿಗೆ ಬರುವ ಯುಕ್ತಿ (3)
5. ದೊಡ್ಡದಾದ ಬೆಟ್ಟ (3)
6. ಮಂಡೂಕವಿದ್ದ ಬಾವಿ (2)
7. ಹತ್ತಿಯಿಂದ ಮಾಡಿದ ಮೇಲುಹೊದಿಕೆ (3)
9. ವಿರಮಿಸುವಾಗ ಕಂಡ ಸೂರ್ಯ (2)
11. ಆಕಾಶದಲ್ಲಿ ಹಾರಲು ಮಾನವಿರಬೇಕು (3)
13. ರೀತಿಯೊಂದಿಗೆ ಬಂದಿರುವ ಜೋಡಿಪದ (3)
15. ಸುದ್ದಿ ಅಥವಾ ವಿಚಾರಕ್ಕೆ ಮತ್ತೊಂದು ಹೆಸರು (3)
17. ದೊಡ್ಡದಾದ ಹೊಳೆ (2)
19. ಗುರುತು ಅಥವಾ ಸಹಿ (3)
21. ದಾನವಾಗಿ ಕೊಟ್ಟ ಭೂಮಿ, ಹಣ ಇತ್ಯಾದಿ (2)
23. ಅತಿಯಾದ ಆತುರ (3)
24. ಜೋರಾದ ಯುದ್ಧ (3)

ಎಡದಿಂದ ಬಲಕ್ಕೆ

1. ಮತ್ತೊಬ್ಬರಿಗೆ ಮಾಡುವ ನೆರವು (4)
2. ಮನದಲ್ಲಿನ ಉತ್ಸುಕತೆ (3)
3. ಅನ್ಯರ ಅವಲಂಬನೆಯಿಂದ ಜೀವಿಸುವ ಮನುಷ್ಯ,ಸಸ್ಯ,ಪ್ರಾಣಿ ಇತ್ಯಾದಿ (4)
4. ಕರಾವಳಿಯ ಪ್ರಸಿದ್ಧ ಕಲೆ (4)
8. ಸಣ್ಣ ಸಣ್ಣ ತೂತುಗಳಿರುವ ಸೌಟು (3)
10. ವಿಹಂಗಮ ಕಂಡ ಪಕ್ಷಿ (3)
12. ಅಳತೆ ಮಾಡುವಿಕೆ (3)
14. ಛತ್ರಿಯಾಕಾರದ ಕಿವಿಗೆ ಹಾಕುವ ಆಭರಣ (3)
15. ಕುಗ್ಗಿದ ಎಂದರ್ಥ (4)
16. ಎಳ್ಳು ನೀರು ಬಿಡುವುದು (4)
18. ಪ್ರತಿದಿನ ಕಾಣುವ ಭಾಸ್ಕರ (4)
20. ನೀರಿನಲ್ಲಿ ಎದ್ದ ಅಲೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಆಯವ್ಯಯ 3. ಪರ್ವ 4. ದಿನಕರ 5. ಕಲಹ 7. ಶುಲ್ಕ 8. ವರ್ಣನೆ 10. ವಿರಳ 12. ಆಮದು 13. ಪುರಾಣ 14. ಭಾನು 16. ತಿಮಿರ 18. ಭಗವಂತ 19. ಜಾವ 20. ಗೊರವಂಕ

ಮೇಲಿನಿಂದ ಕೆಳಕ್ಕೆ: 1. ಆತಂಕ 2. ದಿನಸಿ 3. ಪರಶುರಾಮ 6. ಹವಳ 9. ನೆನಪು 11. ರಸಾನುಭವ 12. ಆಣತಿ 15. ನೆವಂದ 17. ರಜಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ರಕ್ತನಾಳವಿಲ್ಲದ ದೇಹದ ಭಾಗ

ದೇಹದ ಎಲ್ಲ ಭಾಗಗಳಲ್ಲೂ ರಕ್ತ ಸಂಚಾರ ವಾಗುತ್ತೆ. ರಕ್ತವೇ ದೇಹಕ್ಕೆ ಪೂರಕವಾದ ಆಮ್ಲಜನಕ ಮತ್ತಿತರ ವಸ್ತುಗಳನ್ನು ಪೂರೈಸುತ್ತದೆ, ಎಂಬುದು ಎಲ್ಲರಿಗೂ ಗೊತ್ತಿ ರುವ ವಿಚಾರವೇ! ಆದರೆ, ಕಣ್ಣಿನ ಭಾಗ



ವಾಗಿರುವ ಕಾರ್ನಿಯಾದಲ್ಲಿ ರಕ್ತನಾಳವೇ ಇಲ್ಲವಂತೆ! ಕಾರ್ನಿಯಾ ಅನ್ನುವುದು ಕಣ್ಣುಗುಡ್ಡೆ ಮತ್ತು ಇಡೀ ಕಣ್ಣಿನ ಭಾಗದ ಮೇಲೆ ಹೊದಿಕೆಯಾಗಿರುವ ಒಂದು ಅಂಗ, ಮನುಷ್ಯನ ದೇಹದಲ್ಲಿರುವ ಕಾರ್ಟಿಲೇಜ್ ಮತ್ತು ಕಾರ್ನಿಯಾ ಎಂಬ ಎರಡು ಅಂಗಾಂಶಗಳಲ್ಲಿ ರಕ್ತನಾಳವೇ ಇಲ್ಲ. ಹಾರ್ವರ್ಡ್ ವಿಶ್ವವಿದ್ಯಾಲಯದ ಕಣ್ಣಿನ ವಿಜ್ಞಾನಿಗಳು ಈ ಅಂಶವನ್ನು ಪತ್ತೆ ಮಾಡಿದ್ದಾರಂತೆ. ಕಣ್ಣಲ್ಲಿ ಯಾರಿಗೂ ಗೊತ್ತಿರದ ಹಲವಾರು ವಿಲಕ್ಷಣ ಗಳಿವೆ, ಅದು ತಿಳಿದರೆ, 'ಹೌದಾ!?' ಎಂದು ಪ್ರಶ್ನಿಸಲೂ ಬಹುದು, ಉದ್ಗರಿಸಲೂಬಹುದು.

ಪುಸ್ತಕ ಲೋಕ

ಭಿತ್ತಿ

ಸರಸ್ವತಿ ಸಮ್ಮಾನ್ ಪುರಸ್ಕೃತ, ಎಸ್.ಎಲ್. ಭೈರಪ್ಪ ಅವರು ಬರೆದಂತಹ ಕೃತಿ ಜೀವನದಲ್ಲಿ ತಿರುವುಗಳು ಸಾಮಾನ್ಯ ಅದನ್ನು ಬಂದಂತೆ ಸ್ವೀಕರಿಸಿದರೆ ಯಾವ ರೀತಿಯಲ್ಲಿಯೂ ನೋವು ಎಂಬ ಛಾಯೆ ಇರುವುದಿಲ್ಲ. ಭೈರಪ್ಪನವರು ಅಷ್ಟೆ. ಜೀವನದಲ್ಲಿ ಅದೆಷ್ಟೋ ಸಾವು, ನೋವು, ಕಷ್ಟಗಳನ್ನು ಅನುಭವಿಸಿದ್ದಾರೆ. ಅವರ ಜೀವನ ಇವೆಲ್ಲವನ್ನೂ ಒಳಗೊಂಡಿದೆ. ನಿರ್ಲಿಪ್ತರೆಂದಲ್ಲ ಆದರೂ ಯಾವುದನ್ನು ಹೆಚ್ಚು ವಿಜೃಂಭಿಸಿದವರಲ್ಲ. ಅವೆಲ್ಲದರ ಸಂಪೂರ್ಣ ವಿವರಣೆ ಈ ಪುಸ್ತಕದಲ್ಲಿದೆ. ಕಲ್ಲು ಹೇಗೆ ಚಾಣದ ಏಟುಗಳನ್ನು ತಿಂದರೆ ಮಾತ್ರ ಮೂರ್ತಿಯಾಗಬಲ್ಲದೋ ಹಾಗೆ ಇವರು ಜೀವನದಲ್ಲಿ ಹಲವಾರು ನೋವುಗಳನ್ನು ತಿಂದು ಮತ್ತೆ ಎದ್ದು ನಿಂತಿದ್ದ ವ್ಯಕ್ತಿ. ಬರಹಗಾರನ ಪ್ರತೀ ಬರಹವೂ ಅವನ ಒಂದಿಲ್ಲೋಂದು ತನ್ನದೇ ಜೀವನದ ಘಟನೆಯೇ ಎಂಬುದು ಎಷ್ಟು ಸತ್ಯ ಎಂದು ಇವರ ಬಿತ್ತಿ ಓದಿದ ಮೇಲೆ ಅರಿವಿಗೆ ಬಂದಿದೆ. ಇವರ ಹಲವಾರು ಕಾದಂಬರಿಗಳು ಇವರ ಅನುಭವಗಳೇ ಆಗಿದ್ದಿವೆ ಕೆಲವು ಕೆಲವು ಮಾತ್ರ ಕಲ್ಪನೆಯಲ್ಲಿ ಬಂದಿದ್ದಿರಬಹುದು. ಅವರನ್ನು ಪ್ರಭಾವಿಸಿರಬಹುದಾದಂತಹ ಘಟನೆಗಳು ಅವರ ಪುಸ್ತಕದಲ್ಲಿ ಸರಿಯಾಗಿ ಕಾಣುತ್ತದೆ.

ಟ್ವೀಟ್‌ಮೆಂಟ್

ರಜಾಕ್: ಸ್ನೇಹಿತರೇ, ಮದುವೆಯಾಗಿ ಮಕ್ಕಳಾದವರು ಜಾಸ್ತಿ ಹೊರಗಡೆ ಸುತ್ತಲು ಏಕೆ ಹೋಗುವುದಿಲ್ಲ?

ಸೌಮ್ಯ: ನೀವು ಮನೆಗೆ ಬಂದು ಪಾತ್ರೆ ತೊಳೆದು, ಬಟ್ಟೆ ಒಗೆದು, ಅಡುಗೆ ಮಾಡಿಡಿ, ನಾವು ಊರು ಸುತ್ತಿಕೊಂಡು ಬರುತ್ತೇವೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

- ಇತ್ತೀಚೆಗೆ, ಭಾರತದ ಯಾವ ನಗರದಲ್ಲಿ ಅಂತಾರಾಷ್ಟ್ರೀಯ ಒಂಟೆ ಉತ್ಸವವನ್ನು ಪ್ರಾರಂಭಿಸಲಾಯಿತು?
- ಎ. ಬಿಕಾನೇರ್, ರಾಜಸ್ಥಾನ.
- ಬಿ. ಹುಬ್ಬಳ್ಳಿ, ಕರ್ನಾಟಕ.
- ಸಿ. ಕಚ್, ಗುಜರಾತ್.
- ಡಿ. ಇಂದೋರ್, ಮಧ್ಯಪ್ರದೇಶ.

ಉತ್ತರ: ಎ. ಬಿಕಾನೇರ್, ರಾಜಸ್ಥಾನ.

ಮಾಹಿತಿ

ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ ಅಂತಾರರಾಷ್ಟ್ರೀಯ ಒಂಟೆ ಉತ್ಸವವು ರಾಂಪುರಿಯಾ ಹವೇಲಿಯಿಂದ ರೋಮಾಂಚಕ ಪರಂಪರೆಯ ನಡಿಗೆಯೊಂದಿಗೆ ಪ್ರಾರಂಭವಾಯಿತು. ಅಲಂಕರಿಸಿದ ಒಂಟೆಗಳು, ಸಾಂಪ್ರದಾಯಿಕ ವೇಷಭೂಷಣಗಳು ಮತ್ತು ಸ್ಥಳೀಯ ಜಾನಪದ ಕಲಾವಿದರಿಂದ ಈ ಉತ್ಸವ ಮನಸೋರೆಗೊಂಡಿತು. ಪ್ರವಾಸಿಗರು ಮತ್ತು ಸ್ಥಳೀಯರು ಜಾನಪದ ಗೀತೆಗಳು, ರಮ್ಮಾಟ್‌ಗಳ ಟ್ಯೂನ್‌ಗಳು ಮತ್ತು ನೃತ್ಯಗಳನ್ನು ಆನಂದಿಸಿದರು, ನಗರದ ಉದ್ಯಾನವನದಲ್ಲಿ ಹಬ್ಬದ ವಾತಾವರಣವನ್ನು ಬೆಳೆಸಿದರು. ಈ ಕಾರ್ಯಕ್ರಮವು ನಿವಾಸಿಗಳಿಂದ ಹೂವುಗಳು ಮತ್ತು ರಂಗೋಲಿ ಅಲಂಕಾರಗಳೊಂದಿಗೆ ಬೆಚ್ಚಗಿನ ಸ್ವಾಗತವನ್ನು ಒಳಗೊಂಡಿತ್ತು. ಹೆಚ್ಚುವರಿಯಾಗಿ, ಪ್ರವಾಸೋದ್ಯಮ ಇಲಾಖೆಯು ಬಿಕಾಜಿ ಕಿ ಟೆಕ್ರಿಯಲ್ಲಿ ರಂಗೋಲಿ, ಮೆಹಂದಿ ಮತ್ತು ಚಿತ್ರಕಲೆ ಸ್ಪರ್ಧೆಗಳನ್ನು ಆಯೋಜಿಸಿತು, ವಿಜೇತರಿಗೆ ಸ್ಮರಣಿಕೆಗಳನ್ನು ನೀಡಲಾಯಿತು.

ಪುಂಡಿಕಟ್ಟು ಸುಟ್ಟು ಸ್ವಾಗತಿಸೋಣ ಚಳಿಗಾಲವಾ...

● ಸುರೇಂದ್ರ ಪೈ

ದೀಪಾವಳಿ ಹಬ್ಬಕ್ಕೆಂದು ಮೊನ್ನೆ ತಂಗಿಯ ಊರಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಕ್ಕೆ ಹೋಗಿದ್ದೆ. ದೀಪಾವಳಿಯಂದು ನಾವೆಲ್ಲ ಎಣ್ಣೆ ಸ್ನಾನ, ಪಟಾಕಿ, ಹೋಳಿಗೆ ಊಟ, ಲಕ್ಷ್ಮೀ ಪೂಜೆ, ಗೋ ಪೂಜೆಯನ್ನು ಆಚರಿಸಿದರೆ ಆ ಊರಿನಲ್ಲಿ ಇವೆಲ್ಲದರ ಹೊರತಾಗಿಯೂ ದೀಪಾವಳಿಯ ಪಾಡ್ಯದಂದು ಸಾಯಂಕಾಲ 'ಪುಂಡಿಕಟ್ಟು' ಸುಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಹಬ್ಬವನ್ನು ಆಚರಿಸುತ್ತಾ, ಮುಂಬರುವ ಚಳಿಗಾಲ ಸ್ವಾಗತಿಸುವ ಒಂದು ವಿಶಿಷ್ಟ ಸಂಪ್ರದಾಯವನ್ನು ನೋಡುವ ಅವಕಾಶ ದೊರಕಿತು. ಇಂತಹ ಒಂದು ಆಚರಣೆ ಇಲ್ಲಿ ಬಿಟ್ಟರೆ ರಾಜ್ಯದ ಬೇರೆಲ್ಲೂ ನಮಗೆ ಕಾಣಸಿಗುವುದಿಲ್ಲ.

ಅರೇ! ಇದೇನಿದು 'ಪುಂಡಿಕಟ್ಟು' ಎಂದು ಕೇಳುತ್ತಿದ್ದೀರಾ? ಪುಂಡಿಕಟ್ಟು ಎಂದರೆ ಎಳೆ ಸೆಣಬಿನ ಸಸ್ಯದಿಂದ ತಯಾರಾಗುವ ಒಂದು ತೆರನಾದ ಬಿದಿರು. ಇದು ನೋಡಲು ಥೇಟ್ ಬಿದಿರಿನ ಹಾಗೇ ಕಾಣುತ್ತದೆ. ಆದರೆ ಅದು ಬಿದಿರಲ್ಲ. ಸಿದ್ದಾಪುರ ಭಾಗದ ಕೆಲ ರೈತರು ದೀಪಾವಳಿಗೂ ಕೆಲ ತಿಂಗಳುಗಳ ಮುನ್ನ ಸೆಣಬನ್ನು ತಮ್ಮ ಗದ್ದೆಯಲ್ಲಿ ಬೆಳೆಯುತ್ತಾರೆ. ಅದು ಎತ್ತರಕ್ಕೆ ಬೆಳೆದು ಕಟಾವಿಗೆ ಬರುವಾಗ ಅದನ್ನು ಕತ್ತರಿಸಿ ನೀರಿನಲ್ಲಿ ನೆನೆ ಹಾಕುತ್ತಾರೆ. ಹದಿನೈದು ಇಪ್ಪತ್ತು ದಿನಗಳ ಕಾಲ ಸರಿಯಾಗಿ ನೆನೆದ ಬಳಿಕ ಅದನ್ನು ಸುಡು ಬಿಸಿಲಿನಲ್ಲಿ ಚೆನ್ನಾಗಿ ಒಣಗಲು ಬಿಡುತ್ತಾರೆ. ಆಗ ಅದು ಅತ್ಯಂತ ಹಗುರವಾಗಿ, ಒಳಗಡೆ ಪೊಳ್ಳಾಗಿ ಒಣ ಹುಲ್ಲಿನಂತಾಗಿ ಪುಂಡಿಕಟ್ಟು ಸಿದ್ಧವಾಗುತ್ತದೆ. ನಂತರ 8-10 ಎಳೆಗಳನ್ನು ಸೇರಿಸಿ ಒಂದು ಕಟ್ಟು ಮಾಡುತ್ತಾರೆ. ಆದ್ದರಿಂದಲೇ ಅದನ್ನು 'ಪುಂಡಿ ಕಟ್ಟು'ಎನ್ನುತ್ತೇವೆ.

ಇದನ್ನು ದೀಪಾವಳಿಯಂದು ರೈತರು ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಾರೆ. ಊರಿನವರೆಲ್ಲ ತಮಗೆ ಬೇಕಾದಷ್ಟು ಕೊಂಡುಕೊಂಡು ಪಾಡ್ಯದ ಸಂಜೆ ಅದಕ್ಕೆ ಬೆಂಕಿ ಕಚ್ಚಿ ದೀಪ್ ದೀಪ್ ದೀಪಾವಳಿಯೋ, ಎಲ್ಲರ ಮನೆ ಹೋಳಿಗ್ಯೋ ಹಾಗೂ ಅಳಿಯನಿಗೆ ದೀಪಾವಳಿ, ಮಾವನಿಗೆ ದೀವಾಳಿ ಎಂಬ ಘೋಷಣೆ ಕೂಗುತ್ತಾ ಕೆಲವರು ತಮ್ಮ ವಠಾರದ ಸದಸ್ಯರೊಂದಿಗೆ ಪುಂಡಿಕಟ್ಟು ಸುಡುತ್ತಾ ಸಂಭ್ರಮಿಸಿದರೆ, ಇನ್ನು ಕೆಲವರು ಪಟ್ಟಣದ ಬೀದಿಗಳಲ್ಲಿ ಸುಡುತ್ತಾ ಸಾಲಾಗಿ ಮೆರವಣಿಗೆ ಹೊರಟು



ಸಂಭ್ರಮಿಸುತ್ತಾರೆ.

ದೀಪಾವಳಿಯ ಸಮಯಕ್ಕೆ ಸರಿಯಾಗಿ ಚಳಿಗಾಲ ಪ್ರಾರಂಭವಾಗುವುದರಿಂದ ರಾತ್ರಿಯ ಹೊತ್ತಿನಲ್ಲಿ ಬೆಚ್ಚನೆಯ ಶಾಖವು ಮೈಮನಸ್ಸಿಗೆ ಮುದ ನೀಡುತ್ತದೆ, ಹಾಗೂ ಚಳಿಗಾಲಕ್ಕೆ ಸ್ವಾಗತವನ್ನು ಕೋರುವ ನಿಟ್ಟಿನಲ್ಲಿ ಪುಂಡಿಕಟ್ಟನ್ನು ಗ್ರಾಮೀಣ ಭಾಗದಲ್ಲಿ ಎಲ್ಲರೂ ಒಟ್ಟಾಗಿ ಸುಡುವುದರ ಮೂಲಕ ಹಿರಿಯರು ಹಬ್ಬವನ್ನು ಆನಂದಿಸುತ್ತಿದ್ದರು, ಅದನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದೇವೆ ಎಂದು ಸ್ಥಳೀಯ ನರಸಿಂಹ ಮೂರ್ತಿ ಕಾಮತ್ ತಿಳಿಸಿದರು. ಏನೇ ಆಗಲಿ ಇಂತಹ ಒಂದು ವಿಶಿಷ್ಟ ಆಚರಣೆ ಕರ್ನಾಟಕದ ಈ ಊರಿನಲ್ಲಿ ಮಾತ್ರ ತಲೆತಲಾಂತರದಿಂದಲೂ ಇಂದಿಗೂ ಸಹ ನಡೆದು ಕೊಂಡು ಬರುತ್ತಿರುವುದು ದೀಪಾವಳಿಯ ಮೆರುಗನ್ನು ಹೆಚ್ಚಿಸುತ್ತದೆ ಎಂದರೆ ತಪ್ಪಾಗಲಾರದು. ನಿಮಗೆನಾದರೂ ಇಂತಹ ಒಂದು ವಿಶೇಷ ಸಂಪ್ರದಾಯವನ್ನು ಕಣ್ತುಂಬಿಕೊಳ್ಳುವ ಆಸೆ ಇದ್ದರೆ ಮುಂದಿನ ಬಾರಿ ದೀಪಾವಳಿ ಪಾಡ್ಯದಂದು ಸಿದ್ದಾಪುರಕ್ಕೆ ಭೇಟಿ ನೀಡಿ ನೀವು ಈ ಸಂಭ್ರಮದಲ್ಲಿ ಪಾಲ್ಗೊಳ್ಳಬಹುದು.

ಇಲ್ಲಸಲ್ಲದ ಮಾತುಗಳಿಗೆ ಬ್ರೇಕ್!

● ವಿಜಯಕುಮಾರ್ ಕಟ್ಟೆ

ಮನುಷ್ಯ ಬೇರೆ ಎಲ್ಲ ಪ್ರಾಣಿಗಳಿಗಿಂತ ತುಂಬ ಬುದ್ಧಿವಂತನಿರಬಹುದೇನೋ. ಹಾಗೆ ಅವನು ಪ್ರತಿಯೊಂದು ವಿಷಯಕ್ಕೂ ಯೋಚಿಸುವಷ್ಟು ಬೇರೆ ಯಾವ ಜೀವಿಯು ಯೋಚಿಸಲಾರದು. ಆದರೆ ಪ್ರಾಣಿಗಳಿಗೆ ಇರುವ ಒಂದು ವಿಶೇಷ ಮತ್ತು ಒಳ್ಳೆಯ ಗುಣ ಮಾನವನಿಗಿಲ್ಲ. ಅದೇನೆಂದರೆ ಪ್ರಾಣಿಗಳು ಎಂತಹ ಸಂದರ್ಭ ಬಂದರು ನೇರವಾಗಿ ಕಾದಾಡುತ್ತವೆ ಮತ್ತು ಯಾವೊಂದು ಪ್ರಾಣಿಯು ತನ್ನ ಜೊತೆಯವರ ಬಗ್ಗೆ ಕೆಟ್ಟದಾಗಿ ಆಡಿಕೊಳ್ಳುವುದಿಲ್ಲ. ಆದರೆ ಈ ಮನುಷ್ಯ ಪ್ರಾಣಿಗೆ ಮಾತ್ರ ಈ ಒಳ್ಳೆಯ ಗುಣವಿಲ್ಲ. ಎದುರಿಗೆ ಹೋರಾಡದೆ ಅವರ ಬೆನ್ನಿನ ಹಿಂದೆಯೇ ತನ್ನವರ ಬಗ್ಗೆ ಹೀಯಾಳಿಸುವುದು, ಕೆಟ್ಟದಾಗಿ ಮಾತನಾಡುವ ಚಾಳಿ.

ದೂರದವರ ವಿಷಯ ಹಾಗಿರಲಿ. ನಮ್ಮ ಜೊತೆಯಲ್ಲಿ ಬದುಕುವವರನ್ನೇ ನಾವು ಬಿಡುವುದಿಲ್ಲ. ಅವರ ಬಗ್ಗೆ ಕೂಡ ಇಲ್ಲದ ಕಥೆ ಕಟ್ಟಿ ಮಾತನಾಡುವ ಕೆಟ್ಟ ಅಭ್ಯಾಸ ಜೊತೆಗೆ ಅಂಟಿಕೊಂಡುಬಿಟ್ಟಿರುತ್ತದೆ. ಅದರಲ್ಲೂ ಯಾರಾದರೂ ಹೊಸಬರು ನಮ್ಮ ಅಕ್ಕಪಕ್ಕ ಬಂದರೆ, ಆಫೀಸ್ ಗೆ, ಕೆಲಸ ಮಾಡುವ ಜಾಗದಲ್ಲಿ ಹೊಸಬರು ಸೇರಿಕೊಂಡರೆ ಮುಗಿಯಿತು. ಅವರೇ ನಮ್ಮ ಟಾರ್ಗೆಟ್ ಆಗುತ್ತಾರೆ. ಸುಮ್ಮನೇ ಅವರ ವೈಯುಕ್ತಿಕ ವಿಷಯಗಳನ್ನು, ಅವರು ಎಲ್ಲಿಂದ ಬಂದಿದ್ದಾರೆ, ,ಅವರ ಕುಟುಂಬ ಹೇಗೆ ಎಂದು ನಮಗೆ ಬೇಡದ ಪ್ರತಿಯೊಂದು ವಿಷಯವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಕಲೆ ಹಾಕಿ ಆಗಿರುತ್ತದೆ. ನಮ್ಮ ಹತ್ತಿರವಿರುವ ಕಿವಿಗೆ ಅದನ್ನೆಲ್ಲ ತಲುಪಿಸಿ ಅದು ಒಂದು ಕಿವಿಯಿಂದ ಇನ್ನೊಂದು ಕಿವಿಗೆ ಮಿಂಚಿನಂತೆ ಹರಡಿಬಿಡುತ್ತದೆ. ಸ್ವಲ್ಪ ಸಮಯದಲ್ಲೇ ಎಷ್ಟು ವಿಷಯಗಳು ಸಿಕ್ಕಿರುತ್ತವೆ ಎಂದರೇ ಯಾವುದೇ ಸ್ಪೆಷಲ್ ಗೂಢಾಚಾರಿ ಕೂಡ ಒಟ್ಟು ಮಾಡಲು ಸಾಧ್ಯವಾಗುವುದಿಲ್ಲ ಅಷ್ಟೊಂದು ಮಾಹಿತಿಗಳನ್ನು ಕೇವಲ ಅವರಿವರ ತಲೆ ತಿಂದು ಬಾಯಿಯಿಂದ ಬಾಯಿಗೆ ತಲುಪಿ ಹೇರಳವಾಗಿ ಗೋಡೌನ್‌ನಲ್ಲಿ ತುಂಬಿದ ಹಾಗೆ ತುಂಬಿಬಿಡುತ್ತದೆ.

ಹೌದಾ? ನಿಮಗೆ ಗೊತ್ತಾ? ಅದು ಹೀಗಂತೆ. ಅದು ಹಾಗಂತೆ. ಹೀಗೆ ಪ್ರತಿಯೊಬ್ಬರೂ ಆ ಹೊಸ ವ್ಯಕ್ತಿಯ ಬಗ್ಗೆ ಮಾತನಾಡುವಂತಹ ವಾತಾವರಣ ಶುರು ಆಗಿಬಿಡುತ್ತದೆ. ಅವರಿವರ ಬಾಯಿ ಮಾತಿಗೆ ಬಲಿಪಶುವಾದ ವ್ಯಕ್ತಿಗಳ ಮನ ಎಷ್ಟು ನೊಂದುಕೊಳ್ಳು ತ್ತದೆ ಎಂಬ ಕನಿಷ್ಠ ಪರಿಜ್ಞಾನವೂ ಕೂಡ ಕೆಲವರಿಗೆ ಇರುವುದಿಲ್ಲ. ಕೆಲವು ಬಾರಿ ಈ ಚಿಕ್ಕ ಚಿಕ್ಕ ಮಾತುಗಳು ಎಂತಹ ಅನಾಹುತಕ್ಕೆ ಕಾರಣ ಆಗುತ್ತದೆ ಎಂಬ ಯೋಚನೆ ಕೂಡ ನಮಗೆ ಇರುವುದಿಲ್ಲ. ಟೈಂಪಾಸ್ ಅಥವಾ ಬಾಯಿ ಚಪಲದಿಂದ ಆಡುವ ಇಂತಹ ಮಾತುಗಳಿಂದ ನೊಂದ ವ್ಯಕ್ತಿಗಳ ಅವಮಾನಕ್ಕೆ ಕಾರಣವಾಗಿ ಅವರ ಸಂಸಾರಕ್ಕಷ್ಟೇ ಅಲ್ಲ ಅವರ ಜೀವಕ್ಕೂ ಕೂಡ

ಅಪಾಯವಾಗುವ ಸಂದರ್ಭಗಳು ಬರುವುದುಂಟು.

ಇಂತಹ ಕೆಲಸಕ್ಕೆ ಬಾರದ ಮಸಾಲೆ ಮಾತುಗಳು ಆಡುವವರಿಗೆ ಮತ್ತು ಕೇಳುಗರಿಗೆ ತುಂಬಾನೆ ಖುಷಿಯಾಗುತ್ತಿರುತ್ತದೆ ಕುತೂಹಲವಿರುತ್ತದೆ. ಕಾರಣ ಏನೆಂದರೆ ಇದು ನಮ್ಮಗಳಿಗೆ ಸಂಬಂಧಿಸಿದ ಮಾತಾಗಿರುವುದಿಲ್ಲವಲ್ಲಾ? ಅದು ಬೇರೆಯವರದಾಗಿರುತ್ತದೆ. ಆದರಿಂದ ಈ ರೀತಿಯ ಲೂಸ್ ಟಾಕ್ ಬಹಳ ರಸವತ್ತಾಗಿ ಕಾಣಿಸುತ್ತದೆ. ಹೀಗೆ ಶುರುವಾದ ಮೇಲೆ ಕ್ರಮೇಣವಾಗಿ ವ್ಯಕ್ತಿಯ ಅತ್ಯಂತ ವೈಯಕ್ತಿಕ ವಿಷಯಗಳ ಬಗ್ಗೆ ಕೂಡ ಹಿಂದೆ ಮುಂದೆ ಮಾತನಾಡಿಕೊಳ್ಳುವುದಕ್ಕೆ ಶುರು ಮಾಡಿರುತ್ತೇವೆ. ಹೀಗೆ ಮಾತಾಡ ಬಾರದು ಎಂದು ಕೆಲವೊಮ್ಮೆ ಬುದ್ಧಿ ಹೇಳಿದರು ನಾವು ಅದನ್ನು ಕೇಳುವ ಮನಸ್ಸು ಮಾಡುವುದಿಲ್ಲ. ಇನ್ನೊಬ್ಬರು ಅವರ ಪಾಡಿಗೆ ಅವರಿದ್ದರೂ ಈ ಬೆನ್ನ ಹಿಂದೆ ಮಾತಾಡುವ ಚಪಲ ನಿಲ್ಲುವುದೇ ಇಲ್ಲ.

ಏಕೆಂದರೆ ಕೆಲವರಿಗೆ ಸಾಮಾಜಿಕ, ಆಧ್ಯಾತ್ಮಿಕ ಅಥವಾ ಬೇರೆ ವಿಷಯಗಳಿಗಿಂತ ಈ ರೀತಿಯ ವ್ಯಕ್ತಿಯ ಬಾಯಿ ಚಲಪ ತೀರಿಸಿಕೊಳ್ಳುವಂತಹ ಮಾತುಗಳೇ ಬಹಳ ರಸವತ್ತಾಗಿರುತ್ತವೆ.

ಇಂತಹ ಮನೆಹಾಳು ಮಾಡುವ ಗುಣವನ್ನು ಚಿಕ್ಕದಾಗಿದ್ದಲೇ ಚಿವುಟಿಹಾಕಬೇಕು. ವಿಶೇಷವಾಗಿ ಚಿಕ್ಕ ಮಕ್ಕಳಿಗೆ ಸುಮ್ಮನೇ ಬೇರೆಯವನ್ನು ನಿಂದಿಸುವುದು, ಆಡಿಕೊಳ್ಳುವುದು ಮಾಡುತ್ತಾ ಅವರ ಹಿಂದೆ ಮಾತಾಡದೆ ಆ ವ್ಯಕ್ತಿಯ ಒಳ್ಳೆಯತನಗಳನ್ನು ತಿಳಿದು ಅದನ್ನು ಪಾಲಿಸಲು ಪ್ರಯತ್ನ ಮಾಡಬೇಕು ಎಂಬ ಶಿಕ್ಷಣವನ್ನು, ಅರಿವನ್ನು ಮೂಡಿಸಬೇಕು. ನಾವು ಇನ್ನೊಬ್ಬರ ಬಗ್ಗೆ ಮಾತನಾಡುವ ಮಾತು ಅವರ ಜೀವನಕ್ಕೆ ಕುತ್ತು ತರುವಂತೆ ಹಾಗು ಸಮಾಜಕ್ಕೂ ಕೆಡುಕಾಗುವಂತೆ ಇರಬಾರದು ಎಂಬ ಅರಿವು ಮೂಡಿಸುವುದು ನಮ್ಮೆಲ್ಲರ ಕರ್ತವ್ಯ ಹೌದಲ್ಲವೇ.

ಸಮಾಚಾರ ಸಣ್ಣದಲ್ಲ

ಗ್ರಾಪಂಗೆ ಚುನಾವಣೆ ವೇಳಾಪಟ್ಟಿ ಪ್ರಕಟ

ಹೊಸಪೇಟೆ: ಜಿಲ್ಲೆಯ ವಿವಿಧ ತಾಲೂಕುಗಳ ಗ್ರಾಪಂಗಳಲ್ಲಿ ಖಾಲಿ ಇರುವ, ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆಗೆ ಅಧಿಸೂಚನೆ ಪ್ರಕಟಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. ಜಿಲ್ಲೆಯ ಕೊಟ್ಟೂರು ತಾಲೂಕಿನ ನಾಗರಕಟ್ಟೆ, ರಾಂಪುರ ಮತ್ತು ಉಜ್ಜಿನಿ, ಹೂವಿನ ಹಡಗಲಿ ತಾಲೂಕಿನ ಮಾಗಳ, ಸೋವೆನಹಳ್ಳಿ ಮತ್ತು ಮಕ್ಕರಬ್ಬಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಬ್ಯಾಸಿಗಿದೇರಿ, ಮೊರಗೇರಿ ಮತ್ತು ಗದ್ದಿಕೇರಿ, ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿ, ಬಣವಿಕಲ್ಲು, ಹರಪನಹಳ್ಳಿ ತಾಲೂಕಿನ ಯಡೀಹಳ್ಳಿ, ಕುಂಚೂರು ಮತ್ತು ಕೂಲಹಳ್ಳಿ, ಹೊಸಪೇಟೆ ತಾಲೂಕಿನ ಡಣಾಯಕನಕೆರೆ, ಸೀತಾರಾಮ ತಾಂಡ, ಹಂಪಿ ಗ್ರಾಪಂಗಳಿಗೆ ತಲಾ ಒಂದು ಸದಸ್ಯ ಸ್ಥಾನ ಹಾಗೂ ಪಾಪಿನಾಯಕನಹಳ್ಳಿ ಗ್ರಾಪಂನಲ್ಲಿ 2 ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಡೆಯಲಿದೆ. ನ.12 ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ನ.13 ರಂದು ನಾಮಪತ್ರಗಳ ಪರಿಶೀಲನೆ ಮತ್ತು ನ. 15 ರಂದು ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ನ.23 ರಂದು ಅವಶ್ಯವಿದ್ದರೆ ಮತದಾನ ನಡೆಸಲಾಗುವುದು. ಮರು ಮತದಾನ ಇದ್ದಲ್ಲಿ ನ.25 ನಡೆಸಬೇಕು. ಮತ ಎಣಿಕೆ ಪ್ರಕ್ರಿಯೆ ನ.26 ರಂದು ನಡೆಯಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಸಮ್ಮೇಳನದ ಪದಾಧಿಕಾರಿಗಳ ಆಯ್ಕೆ

ಕೊಟ್ಟೂರು: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಪ್ರಥಮ ಸಮ್ಮೇಳನ ನಡೆಯಿತು. ವಿಜಯನಗರ ಜಿಲ್ಲಾ ಪ್ರಥಮ ಸಮ್ಮೇಳನವನ್ನು ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ರಾಜ್ಯ ಸಂಚಾಲಕ ಡಾ.ಕೆ ಎಸ್ ಜನಾರ್ದನ್ ಹಲಗೆ ಬಾರಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ನಂತರ ರಾಜ್ಯ ಸಂಚಾಲಕ ಡಾ.ಕೆ ಎಸ್ ಜನಾರ್ದನ್, ಹಲಿಗಿ ಸುರೇಶ್, ಗುಡಿಹಳ್ಳಿ ಹಾಲೇಶ್ , ಎನ್ ಎಫ್ ಐ ಡಬ್ಲ್ಯೂ ರಾಜ್ಯ ಕಾರ್ಯದರ್ಶಿ ಕೆ ರೇಣುಕಮ್ಮ ಇವರುಗಳ ನೇತೃತ್ವದಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ವಿಜಯನಗರ ಜಿಲ್ಲಾಧ್ಯಕ್ಷ ಕೆ ಕೊಟ್ರೇಶ್ ಕೊಟ್ಟೂರು, ಉಪಾಧ್ಯಕ್ಷರು ಎಚ್ ಹನುಮತಪ್ಪ ಹರಪನಹಳ್ಳಿ, ಗಂಗಾಧರ್ ಹಗರಿಬೊಮ್ಮನಹಳ್ಳಿ, ಜಿಲ್ಲಾ ಕಾರ್ಯದರ್ಶಿ ಹಲಗಿ ಸುರೇಶ್,ಸಹ ಕಾರ್ಯದರ್ಶಿ ಕೆ ಮಧು ನಾಯ್ಕ್, ಕೋಶಾಧಿಕಾರಿ (ಖಜಾಂಚಿ)ದಡ್ಯಮ್ಮ ಹಡಗಲಿ, ಸಂಘಟನೆ ಕಾರ್ಯದರ್ಶಿ ಕೊಟೇಪ್ಪ ಹರಪನಹಳ್ಳಿ, ಜಿಲ್ಲಾ ಗೌರವಾಧ್ಯಕ್ಷ ನಾಗರಾಜಪ್ಪ ನಿವೃತ್ತ ಶಿಕ್ಷಕರು ಹಡಗಲಿ, ಕಾರ್ಯಕಾರಿಣಿ ಸದಸ್ಯರು ಜಯನಾಯ್ಕ್, ಅಂಜಿನಪ್ಪ, ಕೊಟ್ರೇಶ್ ತಗ್ಗಿನಕೇರಿ, ರಮೇಶ್ ನಾಯ್ಕ , ಕೆ ರೇಣುಕಮ್ಮ,ಎ ದುರುಗಪ್ಪ,ರಾಮಪ್ಪ,ಪಿ ಚಂದ್ರಶೇಖರ್, ಮಂಜುನಾಥ್, ಮುದಿಯಪ್ಪ, ಉಪಸ್ಥಿತರಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಅಧ್ಯಕ್ಷ ನಂಜಪ್ಪ ಆಯ್ಕೆ

ಕೊಟ್ಟೂರು: ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಭ್ಯರ್ಥಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವಿಜಯನಗರ ಜಿಲ್ಲೆಯ ಕೊಟ್ಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸದಸ್ಯರನ್ನಾಗಿ ನಾಮ ನಿರ್ದೇಶನಗೊಳಿಸಿ ಆದೇಶಿಸಲಾಗಿದೆ. ಅಧ್ಯಕ್ಷರನ್ನಾಗಿ ಎ ನಂಜಪ್ಪ ಹರಾಳು , ಉಪಾಧ್ಯಕ್ಷರನ್ನಾಗಿ ಎಂ ಶಿವಣ್ಣ, ಸದಸ್ಯರಾಗಿ ಶಿರಿಬಿ ಕೊಟ್ರೇಶ್, ಬೇವೂರು ದೇವಪ್ಪ, ಕೆ ಶಿವಕುಮಾರ್, ನಾಗರತ್ನಮ್ಮ , ಜ್ಯೋತಿ ಲಕ್ಷ್ಮಿ , ಬಸಮ್ಮ, ಎಲ್ ನಾಗರಾಜ್, ಕೊಟ್ರಯ್ಯ ಎಂ ಓ,ಹೆಚ್ ಶಂಕ್ರಪ್ಪ,ಎಂ ವಿರೇಶ್, ಕಲ್ಲಿನ ಗೌಡ,ಬಿ ಶಿವಲಿಂಗಪ್ಪ,ಹೆಚ್ ಕೆ ಕಲ್ಲಪ್ಪ,ಎಂ ಶಾಂತನಗೌಡ್ರು, ಎಸ್ ಕೊಂಡದಪ್ಪ,ಆಯ್ಕೆ ಮಾಡಲಾಗಿದೆ.ಮತ್ತು ಬುಧವಾರ ರಂದು ಎಲ್ಲಾ ನಾಮ ನಿರ್ದೇಶನಗೊಂಡ ಸದಸ್ಯರು ಪದಗ್ರಹಣ ಮಾಡಲಾಗುತ್ತದೆ ಎಂದು ಎಪಿಎಂಸಿ ಕಾರ್ಯದರ್ಶಿ ವಿರಣ್ಣ ತಿಳಿಸಿದ್ದಾರೆ.

ಕೇಂದ್ರಗಳಿಗೆ ಫ್ರಾಂಚೈಸಿ ನೇಮಕ: ಅರ್ಜಿ ಆಹ್ವಾನ

ಬಳ್ಳಾರಿ: ಸರಕಾರದ ಇಡಿಸಿಎಸ್ ನಿರ್ದೇಶನಾಲಯದ ಇ-ಆಡಳಿತ ಇಲಾಖೆಯ ನಿರ್ದೇಶನದಂತೆ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳನ್ನು ನೇಮಕ ಮಾಡಲು ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಜಿಲ್ಲೆಯ 4 ಗ್ರಾಮ - ಒನ್ ಕೇಂದ್ರಗಳಿಗೆ ಫ್ರಾಂಚೈಸಿಯನ್ನು ನೇಮಕ ಮಾಡಲು ಉದ್ದೇಶಿಸಲಾಗಿದೆ. ಬಳ್ಳಾರಿ ತಾಲ್ಲೂಕಿನ ರೂಪನಗುಡಿ, ಕಂಪ್ಲಿ ತಾಲ್ಲೂಕಿನ ರಾಮಸಾಗರ ಮತ್ತು ಸಿರುಗುಪ್ಪ ತಾಲ್ಲೂಕಿನ ಕೆ.ಸುಗೂರು, ಕೆಂಚನಗುಡ್ಡ ಗ್ರಾಮ ಪಂಚಾಯತಿ. ನಾಗರೀಕ ಸೇವಾ ಕೇಂದ್ರ ಗ್ರಾಮ ಒನ್ ಫ್ರಾಂಚೈಸಿಯನ್ನು ಬಯಸುವವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನ ನವೆಂಬರ್ 15 ಆಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಸಿದ್ದರಾಮಯ್ಯ } ಸಿ.ಎಂ.

ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದ ಅವಧಿಯಿಂದಲೂ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಪರವಾಗಿದೆ. ಬಿಜೆಪಿ ಸ್ವಾತಂತ್ರ್ಯ ಹೋರಾಟದಲ್ಲೂ ಜನರ ಪರವಾಗಿ ಇರಲಿಲ್ಲ. ಈಗಲೂ ಇಲ್ಲ.ಪ್ರಧಾನಿ ನರೇಂದ್ರ ಮೋದಿಯವರು ನಾ ಖಾವೋಂಗಾ-ನಾ ಖಾನೆ ದೂಂಗಾ ಎಂದು ಭಾಷಣ ಮಾಡುತ್ತಾರೆ.

ಕನ್ನಡ ವಿವಿಯಲ್ಲಿ ರಾಷ್ಟ್ರೀಯ ಸಮ್ಮೇಳನ

ಹಂಪಿ ಕನ್ನಡ ವಿವಿಯಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭ ನ.9ರಿಂದ

ಹೊಸಪೇಟೆ: ಕರ್ನಾಟಕ ಇತಿಹಾಸ ಅಕಾಡೆಮಿ ಸಹಯೋಗದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನವೆಂಬರ್ 9,10 ಮತ್ತು 11 ರಂದು 38 ನೇ ವಾರ್ಷಿಕ ರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದ ಮಂಟಪ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಟಿಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲರವರು ಸಮ್ಮೇಳನ ಉದ್ಘಾಟಿಸುವರು. ಇತಿಹಾಸ ದರ್ಶನ ಸಂಪುಟವನ್ನು ಶಾಸಕರಾದ ಎಚ್.ಆರ್.ಗವಿಯಪ್ಪನವರು ಬಿಡುಗಡೆಗೊಳಿಸುವರು. ಶಾಸನ ತಜ್ಞ, ಸಂಶೋಧಕ, ಹಿರಿಯ ವಿದ್ವಾಂಸರಾದ ಡಾ.ಆರ್.ಶೇಷಶಾಸ್ತ್ರೀ ಆವರು ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸುವರು. ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾದ ಡಾ.ದೇವರಕೊಂಡಾರೆಡ್ಡಿಯವರು ಸದಸ್ಯರ ಪುಸ್ತಕಗಳನ್ನು ಬಿಡುಗಡೆಗೊಳಿಸುವರು ಎಂದು ಮಾಹಿತಿ ನೀಡಿದರು.

ಪ್ರಶಸ್ತಿಗಳು ಮತ್ತು ಪುರಸ್ಕೃತರು : ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಗೆ ಪ್ರೊ.ಕೆ.ಆರ್ .ನರಸಿಂಹನ್ ಹಾಗೂ ಡಾ.ಹರಿಹರ ಶ್ರೀನಿವಾಸರಾವ್‌ರನ್ನು ಆಯ್ಕೆ. ಇವರಿಗೆ ವರಲಕ್ಷ್ಮಿ ಮತ್ತು ಬಿ.ಆರ್.ಅಶೋಕ್ ಕುಮಾರ್ ಅವರು ತಮ್ಮ ತಾಯಿ-ತಂದೆಯವರಾದ ಬೈಸಾನಿ ರುಕ್ಕಣಮ್ಮ-ರತ್ನಂಶೆಟ್ಟಿ ಸ್ಮರಣೆಗೆ ಪ್ರಶಸ್ತಿ ನೀಡುತ್ತಿದ್ದಾರೆ. ಡಾ.ಬಾ.ರಾ.ಗೋಪಾಲ್ ಶಾಸನ ದತ್ತಿ ಪ್ರಶಸ್ತಿಗೆ ವಿಜಯಪುರದ ಡಾ.ಎಸ್.ಕೆ.ಕೊಪ್ಪ ಆಯ್ಕೆ. ಅರಸೀಕೆರೆ ಮೇಲಣಮಠದ ಎಸ್. ಸಿದ್ದಣ್ಣಯ್ಯ ಮತ್ತು ಗಂಗಮ್ಮ ಸ್ಮಾರಕ ಟ್ರಸ್ಟ್ ನೊಳಂಬಶ್ರೀ' ಪ್ರಶಸ್ತಿಗೆ ಬೆಂಗಳೂರಿನ ಡಾ.ಟಿ.ವಿ.ನಾಗರಾಜ ಆಯ್ಕೆ. ವಿ.ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ.ನಾಗರಾಜ್, ಪದ್ಮ ವಿರೂಪಾಕ್ಷಯ್ಯ ಮತ್ತು ಡಾ.ಎಂ.ಜಿ.ಚಂದ್ರಕಾಂತ್ ಇವರು ಸ್ಥಾಪಿಸಿರುವ ದತ್ತಿಯಿಂದ ಸಂಶೋಧನಶ್ರೀ' ಪ್ರಶಸ್ತಿಗೆ ಬೆಂಗಳೂರು ಸಂಶೋಧಕ ಆದಪ್ಪ ಪಾಸೋಡಿ ಆಯ್ಕೆ. ಕರ್ನಾಟಕ ನಾಯಕ ಅರಸರ ಇತಿಹಾಸ ಮತ್ತು ಸಂಸ್ಕೃತಿ ಸಂಶೋಧನೆಯಲ್ಲಿ ಸಾಧನೆಗೈದ ವಿದ್ವಾಂಸರಿಗೆ ಡಾ.ಲಕ್ಷ್ಮಣ್ ತೆಲಗಾವಿರವರು ಸ್ಥಾಪಿಸಿರುವ ದತ್ತಿಯಿಂದ ನಾಯಕ' ಪ್ರಶಸ್ತಿಗೆ ಮೂಡುಬಿದರೆಯ ಹಿರಿಯ ವಿದ್ವಾಂಸ ಡಾ.ಪುಂಡಿಕ್ಯಾ ಗಣಪಯ್ಯ ಭಟ್ ಆಯ್ಕೆ. ಕೊಪ್ಪಳದ ಬಿ.ಸಿ. ಪಾಟೀಲ ಟ್ರಸ್ಟ್ ಸ್ಥಾಪಿಸಿರುವ ಸುಮಂಗಲ ಪಾಟೀಲ ಮಹಿಳಾ' ಪ್ರಶಸ್ತಿಗೆ ಬೆಂಗಳೂರು ಸಂಶೋಧಕಿ ಡಾ.ಸ್ಮಿತಾರೆಡ್ಡಿ ಆಯ್ಕೆ. ಡಾ.ಅರ್ಚನಾ ಕಾಮತ್‌ರು ಸ್ಥಾಪಿಸಿರುವ ಸೂರ್ಯಕೀರ್ತಿ' ಪ್ರಶಸ್ತಿಗೆ ನಾಗಮಂಗಲ ಸಂಶೋಧಕ ಮಹಮದ್ ಕಲೀಂಉಲ್ಲ ಆಯ್ಕೆ, ಮುಂಬೈನ ಡಾ.ಸಿ.ಆರ್,ಶ್ಯಾಮಲರವರು ಸ್ಥಾಪಿಸಿದ ಡಾ.ಶ್ರೀನಿವಾಸ ಹಾವನೂರ ಸ್ಮರಣಾರ್ಥ' ಪ್ರಶಸ್ತಿಗೆ ಧಾರವಾಡದ ಡಾ. ಮಹೇಶ್ ಕುಮಾರ್.ಹ.ಪಾಟೀಲ ಆಯ್ಕೆ, ಡಾ.ಬೆಂ.ಶಾ.ಶ್ಯಾಮಲಾ ರತ್ನಕುಮಾರಿರವರು ಸ್ಥಾಪಿಸಿರುವ ಡಾ.ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿಗೆ ಬಾಗಲಕೋಟೆಯ ಡಾ.ಯಾದಪ್ಪ ಪರದೇಶಿ ಆಯ್ಕೆ, ಡಾ.ಲಕ್ಷ್ಮಣ್ ತೆಲಗಾವಿರವರು ಸ್ಥಾಪಿಸಿರುವ ಇತಿಹಾಸ ಸಂಶೋಧನ ಪ್ರಸಕ್ತ ಹುಲ್ಲೂರು ಶ್ರೀನಿವಾಸ್ ಜೋಯಿಸ ಸ್ಮಾರಕ ಅತ್ಯುತ್ತಮ ಗ್ರಂಥ ಪ್ರಶಸ್ತಿಗೆ ಚಿತ್ರದುರ್ಗದ ಡಾ.ಸಿ.ಎಂ.ತಿಪ್ಪೇಸ್ವಾಮಿರವರ ರಕ್ಕಸದಂಗಡಿ ಕದನ' ಗ್ರಂಥವನ್ನು ಆಯ್ಕೆ. ಪುಣೆಯ ಡೆಕ್ಕನ್ ಕಾಲೇಜು ಖ್ಯಾತ ಪುರಾತತ್ವವಿದರಾದ ಡಾ. ಕೆ.ಪದ್ದಯ್ಯರವರು ಸ್ಥಾಪಿಸಿರುವ ಡಾ.ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್‌'ಗೆ ತುಮಕೂರು ಹಿರಿಯ ವಿಜ್ಞಾನಿ ಬಿ.ಎಸ್.ಸೋಮಶೇಖರ್‌ರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ವೇಳೆಯಲ್ಲಿ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷರಾದ ಪ್ರೊ. ಲಕ್ಷ್ಮಣ್ ತೆಲಗಾವಿ, ಅಧ್ಯಯನಾಂಗ ವಿಭಾಗದ ನಿರ್ದೇಶಕರಾದ ಡಾ.ಅಮರೇಶ್ ಯತಗಲ್, ಪ್ರಾಧ್ಯಾಪಕ ಡಾ.ಎಸ್.ವೈ.ಸೋಮಶೇಖರ್, ಮಾಹಿತಿ ಕೇಂದ್ರದ ಉಪನಿರ್ದೇಶಕಿ ಡಾ.ಡಿ.ಮೀನಾಕ್ಷಿ ಇದ್ದರು.



ಮಂಟಪ ಸಭಾಂಗಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಟಿಯಲ್ಲಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಮಾತನಾಡಿದರು.

> **ನ.11 ರಂದು ಸಮಾರೋಪ ಸಮಾರಂಭದಲ್ಲಿ ಶ್ರೀಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನಮಠದ ಕೊಟ್ಟೂರು ಬಸವಲಿಂಗಮಹಾಸ್ವಾಮೀಜಿಯವರು ಪಿಎಚ್‌ಡಿ ಮತ್ತು ಡಿ.ಲಿಟ್ ಪದವೀಧರ ಸದಸ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಎರಡೂ ವೇದಿಕೆಯಲ್ಲಿ ಸಂಶೋಧನಾ ಗೋಷ್ಠಿಗಳು ಜರುಗಲಿವೆ.**
> - ಡಾ.ದೇವರಕೊಂಡಾರೆಡ್ಡಿ ಅಕಾಡೆಮಿಯ ಅಧ್ಯಕ್ಷ

ಓಬವ್ವ ಜಯಂತಿ ನ.11 ರಂದು

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಬಳ್ಳಾರಿ: ಸರಕಾರದ ನಿರ್ದೇಶನದಂತೆ ವೀರ ವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ನ.11 ರಂದು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು. ನ.11 ರಂದು ಬೆಳಿಗ್ಗೆ 11 ಗಂಟೆಗೆ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಎಲ್ಲರೂ ತಪ್ಪದೇ ಪಾಲ್ಗೊಳ್ಳುವಂತೆ ಕ್ರಮವಹಿಸಬೇಕು ಎಂದು ನಿರ್ದೇಶನ ನೀಡಿದರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ಹಾಗೂ ಸಂಗೀತ ಕಾರ್ಯಕ್ರಮ ಆಯೋಜಿಸಬೇಕು. ಶಾಲಾ-ಕಾಲೇಜು ವಿದ್ಯಾರ್ಥಿಗಳು, ವಸತಿನಿಲಯದ ವಿದ್ಯಾರ್ಥಿನಿಯರು ಮತ್ತು ಸಾರ್ವಜನಿಕರು ಭಾಗವಹಿಸುವಂತೆ ಮತ್ತು ಲಘು ಉಪಹಾರ, ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳುವಂತೆ ಸೂಚಿಸಿದರು. ಶಿಷ್ಟಾಚಾರದ ಅನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ, ಗಣ್ಯರನ್ನು ಆಹ್ವಾನಿಸಬೇಕು ಎಂದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ವಿದ್ಯಾಭ್ಯಾಸದ ಕಡೆ ಗಮನಹರಿಸಿ

ಪಟ್ಟಣದಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ನೂತನ ವಿದ್ಯಾರ್ಥಿ ನಿಲಯವನ್ನು ಶಾಸಕಿ ಎಂ.ಪಿ.ಲತಾ ಗುರುವಾರ ಉದ್ಘಾಟಿಸಿದರು.

ಹರಪನಹಳ್ಳಿ: ವಿದ್ಯಾರ್ಥಿಗಳು ಸರಕಾರಿ ಸವಲತ್ತುಗಳನ್ನು ಸರಿಯಾಗಿ ಸದುಪಯೋಗ ಪಡಿಸಿಕೊಂಡು ಹೆಚ್ಚಿನ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಬೇಕು ಎಂದು ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಗುರುಭವನದ ಮುಂಭಾಗದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಟ್ಟಡದಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ನೂತನ ವಿದ್ಯಾರ್ಥಿ ನಿಲಯವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು.

ಹರಪನಹಳ್ಳಿ ಶೈಕ್ಷಣಿಕವಾಗಿ ಮುಂದುವರೆದ ತಾಲೂಕು ಇಲ್ಲಿ ಹೆಚ್ಚು ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಬರುತ್ತಾರೆ, ಅಂತಹ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಕೊರತೆಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹೊಸಪೇಟೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ್ದೆ, ಸಿಎಂ ಅವರು ಅಂದೆ ಹೊಸ ವಸತಿ ನಿಲಯ ಮಂಜೂರಾತಿ ಆದೇಶ ಮಾಡಿಸಿದರು ಎಂದು ತಿಳಿಸಿದರು.

ತಾಲೂಕಿನ ವಿದ್ಯಾರ್ಥಿಗಳ ಅನುಕೂಲವಾಗಲೆಂದು ಇನ್ನೂ ಹೆಚ್ಚಿನ ವಸತಿ ನಿಲಯಗಳ ಮಂಜೂರಾತಿಗೆ ಪ್ರಯತ್ನ ಮಾಡುತ್ತೇನೆ. ಮಕ್ಕಳು ಸಹ ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ತಮ್ಮ ತಂದೆ, ತಾಯಿ ಹಾಗೂ ತಾಲೂಕಿಗೆ ಒಳ್ಳೆಯ ಹೆಸರು ತನ್ನಿ ಎಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ಹಿಂದುಳಿದ ವರ್ಗಗಳ ತಾಲೂಕು ಕಲ್ಯಾಣಾಧಿಕಾರಿ ಕೆ.ಭೀಮಪ್ಪ, ವಸತಿ ಮೇಲ್ವಿಚಾರಕರಾದ ಬಿ.ಎಚ್.ಚಂದ್ರಪ್ಪ, ವೀರಣ್ಣ, ಜುಂಜಪ್ಪ, ಪ್ರೇಮಾವತಿ, ಶೃತಿ, ಅನ್ನಪೂರ್ಣ, ಮತ್ತೂರು ಬಸವರಾಜ, ಸಿದ್ದೇಶ, ಹರಿಕೃಷ್ಣ ಇದ್ದರು.

> **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಜಿಲ್ಲೆಗೆ ಎರಡು ಹಾಸ್ಟೆಲ್‌ಗಳು ಮಂಜೂರಾಗಿದ್ದು, ಜಿಲ್ಲಾ ಕೇಂದ್ರದಲ್ಲಿ ಆರಂಭಿಸುವಂತೆ ಇಲಾಖೆಯಿಂದ ಆದೇಶ ಇತ್ತು, ಆದರೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ಪಟ್ಟು ಹಿಡಿದು ಹರಪನಹಳ್ಳಿ ತಾಲೂಕಿಗೆ ಒಂದು ಹಾಸ್ಟೆಲ್ ಮಂಜೂರು ಮಾಡಿಸಿದೆ.**
> - ಕೆ.ಬಿ.ರಾಮಚಂದ್ರಪ್ಪ ಜಿಲ್ಲಾಧಿಕಾರಿ

ರೈತರಿಗೆ ವಂಚಿಸುವ ಮಧ್ಯವರ್ತಿಗಳ ವಿರುದ್ಧ ಎಫ್‌ಐಆರ್ ಹಾಕಿ

ಹೂವಿನಹಡಗಲಿ: ತಾಲೂಕಿನ ಬೆಳೆ ವಿಮೆ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದ್ದು, ಮಧ್ಯವರ್ತಿಗಳು ಮುಗ್ಧ ರೈತರನ್ನು ವಂಚಿಸಿ ಮೋಸಮಾಡಿದ್ದಾರೆ ಅಂಥವರನ್ನು ಪತ್ತೆ ಹಚ್ಚಿ ಎಫ್‌ಐಆರ್ ದಾಖಲಿಸಬೇಕು ಎಂದು ಶಾಸಕ ಎಲ್.ಕೃಷ್ಣನಾಯ್ಕ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಈ ಜಾಲ ಮಾಫಿಯಾ ಸ್ವರೂಪ ಪಡೆದಿದೆ. ರೈತರನ್ನು ವಂಚಿಸಿರುವ ಮಧ್ಯವರ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ, ಉನ್ನತ ತನಿಖೆ ನಡೆಸಬೇಕು ಎಂದು ಸೂಚಿಸಿದರು. ಕೃಷಿ, ತೋಟಗಾರಿಕೆ ಇಲಾಖೆಯಲ್ಲಿ ಅನೇಕ ಉಪಯುಕ್ತ ಯೋಜನೆಗಳಿವೆ. ಮಾಹಿತಿ ಕೊರತೆಯಿಂದ ಅವು ರೈತರಿಗೆ ತಲುಪುತ್ತಿಲ್ಲ. ಅನುದಾನಬಳಕೆಗೆ ಸೀಮಿತವಾಗದೇ ರೈತರಿಗೆ ಅನುಕೂಲವಾಗುವಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು. ಸೌಲಭ್ಯಗಳ ಕುರಿತು ವ್ಯಾಪಕ ಪ್ರಚಾರ ಮಾಡಬೇಕು ಎಂದು ತಿಳಿಸಿದರು.

ಶಿಕ್ಷಣ ಕ್ಷೇತ್ರಕ್ಕೆ ನಾನು ಹೆಚ್ಚು ಅನುದಾನ ವಿನಿಯೋಗಿಸಿದ್ದೇನೆ. ಐಎಎಸ್, ಕೆಎಎಸ್ ತರಬೇತಿಗೆ ಇಲ್ಲಿನ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗದಿರುವುದು ಬೇಸರ ಮೂಡಿಸಿದೆ. ಇಲ್ಲಿನ ಪ್ರತಿಭೆಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಸಮಾಜ ಕಲ್ಯಾಣ ಮತ್ತು ಬಿಸಿಎಂ ಇಲಾಖೆ ಅಧಿಕಾರಿಗಳು ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಗೆ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗುವಂತೆ ಸಿದ್ಧಗೊಳಿಸಬೇಕು ಎಂದು ಸೂಚಿಸಿದರು.

ಸಭೆಗೆ ಗೈರಾಗಿದ್ದ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಕೊಡಲು ಶಾಸಕರು ಸೂಚಿಸಿದರು. ಪಟ್ಟಣ ಹಾಗೂ ಹಳ್ಳಿಗಳಲ್ಲಿ ಬೀದಿನಾಯಿಗಳ ಉಪಟಳ ಹೆಚ್ಚಾಗಿದೆ. ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆಮಾಡಿ ಕೊಂಡು ಎಲ್ಲ ನಾಯಿಗಳಿಗೆ ರೇಬಿಸ್ ಲಸಿಕೆ ಮತ್ತು ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮಾಡಬೇಕು. ಯಶಸ್ವಿಯಾದರೆ ಎಲ್ಲ ಪಂಚಾಯಿತಿಗಳಿಗೂ ವಿಸ್ತರಿಸುತ್ತೇವೆ ಎಂದರು. ಪಶು ಸಂಗೋಪನೆ ಇಲಾಖೆಯವರು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಾ.ಪಂ. ಇಒ ಎಂ.ಉಮೇಶ್ ತಿಳಿಸಿದರು. ತಾ.ಪಂ. ಆಡಳಿತಾಧಿಕಾರಿ ಅಶೋಕ ಇದ್ದರು.

ಹೂವಿನಹಡಗಲಿ ಪಟ್ಟಣದ ತಾಲ್ಲೂಕು ಪಂಚಾಯಿತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎಲ್.ಕೃಷ್ಣನಾಯ್ಕ ಮಾತನಾಡಿದರು.

> **ವಿಮಾ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡಿರುವ ಮಧ್ಯವರ್ತಿಗಳು ರೈತರನ್ನು ನಂಬಿಸಿ ದಾಖಲೆ ಪಡೆದು ಅವರ ಪರವಾಗಿ ಕಂತು ಪಾವತಿಸುತ್ತಾರೆ. ರೈತರ ಖಾತೆಗೆ ವಿಮಾ ಪರಿಹಾರ ಜಮೆ ಆಗುತ್ತಿದ್ದಂತೆ ರೈತರಿಗೆ ಅಲ್ಪಸ್ವಲ್ಪ ಹಣ ನೀಡಿ ಬಹುಪಾಲು ಹಣವನ್ನು ಲಪಟಾಯಿಸಿದ್ದಾರೆ.**
> - ಎಲ್.ಕೃಷ್ಣನಾಯ್ಕ ಶಾಸಕ

ಕನ್ನಡ ಸೇವಕ ಪ್ರಶಸ್ತಿ ಪ್ರದಾನ ನ.10 ಕ್ಕೆ

ಹರಪನಹಳ್ಳಿ: ಪಟ್ಟಣದ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆಯಿಂದ ಗೊರವಿನ ತೋಟದ ಬಸಮ್ಮ ಕಲಾಮಂದಿರದಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ಕನ್ನಡ ಸೇವಕ ಪ್ರಶಸ್ತಿ ಪ್ರದಾನ ಸಮಾರಂಭ ನ10ರ ಮದ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಉದ್ಘಾಟಿ ಸುವರು, ಸೇವಾ ಸಂಸ್ಥೆಯ ಅಧ್ಯಕ್ಷೆ ಸಪ್ನ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು. ಸುವರ್ಣ ಪ್ರಶಸ್ತಿ ಪುರಸ್ಕೃತರಾದ ಡಾ.ಟಿ.ಎಂ. ಚಂದ್ರಶೇಖರಯ್ಯ ಅವರಿಗೆ ಗೌರವ ಸಮರ್ಪಣೆ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಪುರಸಭೆ ಸದಸ್ಯರಾದ ಎಂ.ವಿ.ಅಂಜಿನಪ್ಪ, ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ, ಎಂ.ಪಿ.ನಾಯ್ಕ, ಮೆಹತಾಬ್ ಅವರು ಭಾಗವಹಿಸಲಿದ್ದಾರೆ. ಎಚ್.ಮಲ್ಲಿಕಾರ್ಜುನ್ ವಿವಿಧ ಕ್ಷೇತ್ರದ 25ಜನ ಸಾಧಕರಿಗೆ ಸಂಸ್ಥೆಯಿಂದ ಕನ್ನಡ ಸೇವಕ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ರವಿಕುಮಾರ, ಕೆ.ಎಸ್. ಶಿವಪ್ರಕಾಶ್, ಡಾ.ತಿಪ್ಪೆರುದ್ರ, ಸೋಗಿ ಹೊನ್ನಮ್ಮ, ಡಿ. ಅಬ್ದುಲ್ ರೆಹಮಾನ್, ಸೋ.ದಾ.ವಿರುಪಾಕ್ಷಗೌಡ, ಅಕ್ಕಿ ಬಸವೇಶ, ಎಸ್.ಎಂ.ಕುಲಕರ್ಣಿ, ನಿಚ್ಚವ್ವನಹಳ್ಳಿ ಭೀಮಪ್ಪ, ಸೇವಕ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಆಯೋಜಕರಾದ ಎಚ್.ಮಲ್ಲಿಕಾರ್ಜುನ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳನ್ನು ಜನಪದ ಕಲೆಗಳ ಕಡೆ ಕರೆ ತನ್ನಿ

ಕಂಪ್ಲಿ: ಈಗಿನ ಮಕ್ಕಳು ಜನಪದ ಕಲೆಗಳನ್ನು ತೊರೆದು ತಮ್ಮ ತಮ್ಮ ಆಲೋಚನೆಗಳು ಬೇರೆ ಕಡೆ ಗಮನಹರಿಸುವುದನ್ನು ಕಾಣುತ್ತಾ ಹೋಗುತ್ತೇವೆ. ಅದಕ್ಕಾಗಿ ಜನಪದ ಕಲೆಗಳ ಕಡೆಗೆ ಅವರನ್ನು ಕರೆ ತರಬೇಕೆಂದು ಎಸ್ ಡಿ ಎಂ ಸಿ ಅಧ್ಯಕ್ಷ ಜಗದೀಶ್ ಎಚ್ ಹೇಳಿದರು.

ಕಂಪ್ಲಿ ತಾಲೂಕಿನ ಮೆಟ್ರಿ ಗ್ರಾಮದಲ್ಲಿ ಎಂ.ಬಸಾಪುರದ ರಂಗನೇಸರ ಸಾಂಸ್ಕತಿಕ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಸಹಯೋಗದಲ್ಲಿ ''ಗ್ರಾಮೀಣ ರಂಗೋತ್ಸವ'' ವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸಿ. ಡಿ. ಗುಂಡಮ್ಮ ಚೌಡಪ್ಪನವರುವಹಿಸಿದ್ದರು.

ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕ ಶಂಕರ ಮೆಟ್ರಿ, ಗ್ರಾಮೀಣ ರಂಗೋತ್ಸವದಲ್ಲಿ ಜಾನಪದ ಗೀತೆ ಕೆ ಹೇಮೇಶ್ವರ ಮತ್ತು ತಂಡ ಮಾವಿನಹಳ್ಳಿ ,ತತ್ವಪದ ಕೆ ನಾಗರಾಜ ಮತ್ತು ತಂಡ ,ಮೆಟ್ರಿ, ಸಮೂಹ ನೃತ್ಯ ಕೆ ನಾಗವೇಣಿ ಮತ್ತು ತಂಡ ,ಕಂಪ್ಲಿ. ಬಯಲಾಟ ''ಅಭಿಮನ್ಯು ಕಾಳಗದಲ್ಲಿ'' ಶ್ರೀ ಕೃಷ್ಣ ಮತ್ತು ಅರ್ಜುನ ಸನ್ನಿವೇಶ ಪ್ರಸಂಗ ಶ್ರೀ ಕೆ ಹನುಮಂತ ರೆಡ್ಡಿ ಮತ್ತು ತಂಡ ನೇರವೇರಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಜಗದೀಶ್ ಹೊಸಕೋಟೆ, ಗಿರೀಶ್ ಎನ್,ಶ್ರೀ ಸಿದ್ದೇಶ್ವರ ಕೃಷ್ಣ ಪಾತ್ರಧಾರಿ ಬಿ.ಸಿದ್ದಪ್ಪ ಧರ್ಮಪ್ಪ ಮಾವಿನಹಳ್ಳಿ, ಅರ್ಜುನ ಪಾತ್ರ ಕೆ ವಿರೇಶ ,ತತ್ವಪದ ಕಲಾವಿದರು ಸಿ ಡಿ ಕುಟುಂಬದ ಕಲಾವಿದರಾದ ಆಂಜೀನಪ್ಪ,ಮೌನೇಶ, ಈರೇಶ,ಬಿ ದೊಡ್ಡಬಸಪ್ಪ,ಅಸೂಟಿ ಶ್ರೀನಿವಾಸ, ಗಾಧಿಲಿಂಗಪ್ಪ ಕಬ್ಬೇರ,ರಂಗನೇಸರ ಸಾಂಸ್ಕೃತಿಕ ಕಲಾ ಸಂಘದ ಕಾರ್ಯದರ್ಶಿ ಚಂದ್ರಶೇಖರ ಮತ್ತು ಸದಸ್ಯ ದೇವಲಾಪುರ ಸರ್ವೇಶ, ಕಾರ್ಯಕ್ರಮದ ನಿರೂಪಣೆ ಚಂದ್ರಪ್ಪ ಕಂಬಳಿ ನೆರವೇರಿಸಿದರು.

ಮೆಟ್ರಿ ಗ್ರಾಮದಲ್ಲಿ ಎಂ.ಬಸಾಪುರದ ರಂಗನೇಸರ ಸಾಂಸ್ಕತಿಕ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಸಹಯೋಗದಲ್ಲಿ ''ಗ್ರಾಮೀಣ ರಂಗೋತ್ಸವ'' ವನ್ನು ಗಣ್ಯರು ಉದ್ಘಾಟಿಸಿದರು.

ಪದವಿ ಕಾಲೇಜಿಗೆ ಡಾ. ಶೋಭಾ ಭೇಟಿ

ಹೊಸಪೇಟೆ: ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿ ಡಾ. ಶೋಭಾ ಹೊಸಪೇಟೆ ನಗರದ ಶ್ರೀ ಶಂಕರ್ ಆನಂದ್ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅವರು ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ಅತಿಥಿ ಉಪನ್ಯಾಸಕರ ಸಭೆ ನಡೆಸಿ ಕಾಲೇಜಿನ ಪ್ರಗತಿಯ ಮಾಹಿತಿಯನ್ನು ಪಡೆದು ನಂತರ ತರಗತಿಗಳು, ಪ್ರಯೋಗಾಲಯ, ಗ್ರಂಥಾಲಯ, ಮತ್ತು ಶೌಚಾಲಯದ ವ್ಯವಸ್ಥೆಗಳನ್ನು ಪರಿಶೀಲಿಸಿ ನಿರ್ವಹಣೆ ಕುರಿತು ಸಂತೋಷ ವ್ಯಕ್ತಪಡಿಸಿದರು ಮತ್ತು ಕಾಲೇಜಿಗೆ ಅವಶ್ಯಕತೆ ಇರುವ ಇನ್ನಿತರ ಸೌಲಭ್ಯಗಳನ್ನು ಒದಗಿಸುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರಿಗೆ ಅವರ ಸಮಸ್ಯೆಗಳನ್ನು ಆದಷ್ಟು ಬೇಗನೆ ಬಗೆಹರಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ನಾರಾಯಣ ಜಿ ಹೆಬಸೂರ್ ಮತ್ತು ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಮತ್ತು ಅತಿಥಿ ಉಪನ್ಯಾಸಕರು ಹಾಜರಿದ್ದರು.

ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿ ಡಾ. ಶೋಭಾ ಹೊಸಪೇಟೆ ನಗರದ ಶ್ರೀ ಶಂಕರ್ ಆನಂದ್ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿದರು.

> **ಕಳೆದ 2007 ಪ್ರಾರಂಭಗೊಂಡ ಕಾಲೇಜು ಇಂದು ಸುಮಾರು 3000 ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದು ಗ್ರಾಮೀಣ ಭಾಗದ ಮತ್ತು ಬಡ ಮಕ್ಕಳಿಗೆ ತುಂಬಾ ಅನುಕೂಲವಾಗಿದೆ.**
> -ಡಾ. ಶೋಭಾ ಶಿಕ್ಷಣ ಇಲಾಖೆಯ ನಿರ್ದೇಶಕಿ

ಲೋಕಾಯುಕ್ತ: ಜನರ ಅಹವಾಲು ಸ್ವೀಕಾರ

ಬಳ್ಳಾರಿ: ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದಿರುವ ಕುರಿತು ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ತಿಳಿಸಿದ್ದಾರೆ. ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಆರ್.ವಸಂತ್‌ಕುಮಾರ್ ಮತ್ತು ಪೊಲೀಸ್ ನಿರೀಕ್ಷಕರಾದ ಸಂಗಮೇಶ್, ಮಹಮ್ಮದ್ ರಫಿ ನೇತೃತ್ವದಲ್ಲಿ ಸಿರುಗುಪ್ಪ, ಕುರುಗೋಡು ಮತ್ತು ಸಂಡೂರು ತಾಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ. ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ: ನ.13 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಿರುಗುಪ್ಪದ ಸಿಡಿಪಿಒ ಕಚೇರಿ ಸಭಾಂಗಣ, ನ.15 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕುರುಗೋಡು ತಹಶೀಲ್ದಾರರ ಕಚೇರಿ ಸಭಾಂಗಣ ಮತ್ತು ನ.26 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.1 ಮತ್ತು 2 ಗಳನ್ನು ಸಹ ನೀಡಲಾಗುವುದು.

ಬಂಗಾರು ಹನುಮಂತ ಪರ ಅಶೋಕ್ ಪ್ರಚಾರ

ಸಂಡೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದ ಬಳಿಕ ಸರಕಾರಿ ನೌಕರರಿಗೆ ಸಾವಿನ ಭಾಗ್ಯ ಕೊಟ್ಟಿದೆ. ಲಂಚ ಕೊಡಿ, ಇಲ್ಲ ನೇಣು ಹಾಕಿಕೊಳ್ಳಿಯೆಂದು ಹೇಳಿದಂತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ವ್ಯಂಗ್ಯವಾಡಿದರು.

ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತ ಪರ ಕಮತ್ತೂರು ಸೇರಿ ಹಲವು ಕಡೆ ಪ್ರಚಾರ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. 'ವಾಲ್ಮೀಕಿ ಹಗರಣದ ಕುರಿತು ನಾನು ಅಧಿವೇಶನದಲ್ಲಿ ಪ್ರಶ್ನಿಸಿದಾಗ ಮುಖ್ಯಮಂತ್ರಿ ಹಗರಣ ಒಪ್ಪಿಕೊಂಡಿದ್ದರು. ಆ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಹಣ ವಾಪಸ್ ಬಂತು. ಅದೇ ರೀತಿ ರಾಜ್ಯದಲ್ಲಿ ಅಧಿಕಾರಿಗಳ ಸರಣಿ ಆತ್ಮಹತ್ಯೆ ನಡೆಯುತ್ತಿದೆ ಎಂದರು.

ವಿಜಯೇಂದ್ರ ವಿರುದ್ಧ ಹೇಳಿಕೆ ನೀಡುತ್ತಿರುವ ರಮೇಶ ಜಾರಕಿಹೊಳಿ ಮತ್ತು ಬಸನಗೌಡ ಪಾಟೀಲ ಯತ್ನಾಳ ಅವರ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಶೋಕ, 'ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ನಡೆದಿದೆ' ಎಂದರು.

ಸಂಡೂರು ಕ್ಷೇತ್ರದಲ್ಲಿ ಮುನಿಸಿಕೊಂಡವರನ್ನು ಮತ್ತು ರಾಜಕೀಯದಿಂದ ದೂರವುಳಿದವರನ್ನು ಸೆಳೆಯಲು ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಪ್ರಯತ್ನ ನಡೆಸಿದ್ದಾರೆ.

2023ರ ಚುನಾವಣೆಯ ಬಿಜೆಪಿ ಪರಾಜಿತ ಅಭ್ಯರ್ಥಿಯನ್ನು ಕರೆತರಲು ಕಾಂಗ್ರೆಸ್ ಕಸರತ್ತು ನಡೆಸುತ್ತಿದೆ. ಜತೆಗೆ, ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿರುವ ಬಿಜೆಪಿ ನಾಯಕ ಕಾರ್ತಿಕೇಯ ಘೋರ್ಪಡೆ ಅವರ ಬೆಂಬಲ ಪಡೆಯಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂತೋಷ್ ಲಾಡ್, 'ಘೋರ್ಪಡೆ ವಂಶಸ್ಥರನ್ನು ನಾನು ರಾಜಕೀಯವಾಗಿ ಎದುರಿಸಿರಬಹುದು. ಆದರೆ, ಅವರ ಬಗ್ಗೆ ನಾನು ಒಂದು ಮಾತನ್ನೂ ಹೇಳಿಲ್ಲ. ಎಂ.ವೈ ಘೋರ್ಪಡೆಯವರು ಈ ಭಾಗಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಕಾರ್ತಿಕೇಯ ಘೋರ್ಪಡೆ ತಟಸ್ಥರಾಗಿ ಉಳಿದಿದ್ದಾರೆ ಎಂದರೆ ಅದು ನಮಗೆ ಸಹಾಯವಾದಂತೆ' ಎಂದು ಸಚಿವ ಸಂತೋಷ ಲಾಡ್ ತಿಳಿಸಿದರು. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಖುದ್ದು ದೂರು ಸಲ್ಲಿಸುವೆ ಎಂದು ತಿಳಿಸಿದರು.

ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತ ಪರ ಕಮತ್ತೂರು ಸೇರಿ ಹಲವು ಕಡೆ ಪಕ್ಷದ ನಾಯಕ ಆರ್. ಅಶೋಕ ಪ್ರಚಾರ ನಡೆಸಿದರು.

ಉದ್ಯಮಶೀಲತಾ ಅಭಿವೃದ್ಧಿ ತರಬೇತಿ

ಬಳ್ಳಾರಿ: ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ಇವರ ವತಿಯಿಂದ ಸ್ವಂತ ಉದ್ಯೋಗ ಸ್ಥಾಪಿಸಲು ಇಚ್ಚಿಸುವವರಿಗಾಗಿ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರಕಾರದ ಸ್ವಂತ ಉದ್ಯೋಗ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಹಾಗೂ ಉದ್ಯಮ ನಿರ್ವಹಣೆ ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಗುವುದು. ಆಸಕ್ತ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮಾತ್ರ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು ಹಾಗೂ ಓದಲು, ಬರೆಯಲು ಬರುತ್ತಿರಬೇಕು. ಅರ್ಜಿ ಸಲ್ಲಿಸಲು ಅಥವಾ ನೋಂದಾಯಿಸಿಕೊಳ್ಳಲು ನ.16 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾ ಕೈಗಾರಿಕಾ ಕೇಂದ್ರ, ಕಚೇರಿ ಕಟ್ಟಡದ ಸಿಡಾಕ್‌ನ ಜಂಟಿ ನಿರ್ದೇಶಕರ ಕಚೇರಿ ಅಥವಾ ಮೊ.9449226221, 7483538942 ಗೆ ಸಂಪರ್ಕಿಸಬಹುದು ಎಂದು ಸಿಡಾಕ್‌ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕರ್ನಾಟಕ ತಂಡಕ್ಕೆ ಗೌತಮ್ ನಾಯಕ

ಬೆಂಗಳೂರು: ಅನೀಶ್ವರ್ ಗೌತಮ್ ಅವರು ಇದೇ 15ರಿಂದ 18ರವರೆಗೆ ಒಡಿಶಾದ ಬಲಂಗೀರ್ ಗಾಂಧಿ ಕ್ರೀಡಾಂಗಣದಲ್ಲಿ ನಡೆಯಲಿರುವ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಟೂರ್ನಿಯಲ್ಲಿ ಚಂಡೀಗಢ ವಿರುದ್ಧದ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ. ಮೂರು ಪಂದ್ಯಗಳಲ್ಲಿ ಒಂದನ್ನು ಗೆದ್ದು, ಎರಡರಲ್ಲಿ ಡ್ರಾ ಸಾಧಿಸಿರುವ ಕರ್ನಾಟಕ ತಂಡವು 30 ಅಂಕಗಳೊಂದಿಗೆ ಎ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ತಮಿಳುನಾಡು (33) ಮತ್ತು ಮಹಾರಾಷ್ಟ್ರ (30) ಕ್ರಮವಾಗಿ ನಂತರದ ಸ್ಥಾನದಲ್ಲಿದೆ. ಹಾಲಿ ಚಾಂಪಿಯನ್ ಕರ್ನಾಟಕ ತಂಡವು ನಾಲ್ಕನೇ ಪಂದ್ಯದಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.
ಕರ್ನಾಟಕ ತಂಡ ಹೀಗಿದೆ: ಅನೀಶ್ವರ್ ಗೌತಮ್ (ನಾಯಕ), ಕೃತಿಕ್ ಕೃಷ್ಣ (ಉಪನಾಯಕ/ ವಿಕೆಟ್ ಕೀಪರ್), ವಿಶಾಲ್ ಓನತ್, ಮ್ಯಾಕ್ನಿಲ್ ನೊರೊನ್ಹಾ, ಪ್ರಖರ್ ಚತುರ್ವೇದಿ, ಹರ್ಷಿಲ್ ಧರ್ಮಾನಿ, ಮನ್ವಂತ್ ಕುಮಾರ್ ಎಲ್, ಮೋನಿಶ್ ರೆಡ್ಡಿ, ಶಶಿಕುಮಾರ್ ಕೆ, ಪಾರಸ್ ಗುರುಬಕ್ಷ್ ಆರ್ಯ, ಸಂಜಯ್ ಅಶ್ವಿನ್ (ವಿಕೆಟ್ ಕೀಪರ್), ಧನುಷ್ ಗೌಡ, ಧ್ರುವ ಪ್ರಭಾಕರ್, ರಾಜವೀರ್ ವಾಧ್ವಾ, ಶಿಖರ್ ಶೆಟ್ಟಿ, ಜಾಸ್ಪರ್ ಇ.ಜೆ.

ಸೆಮಿಫೈನಲ್‌ಗೆ ರಿತ್ವಿಕ್, ಫ್ರಾನ್ಸಿಸ್ಕೊ ಜೋಡಿ

ಮೆಟ್ಜ್ (ಫ್ರಾನ್ಸ್): ಭಾರತದ ಬೊಲ್ಲಿಪಲ್ಲಿ ರಿತ್ವಿಕ್ ಚೌಧರಿ ಮತ್ತು ಅವರ ಜೊತೆಗಾರ ಫ್ರಾನ್ಸಿಸ್ಕೊ ಕ್ಯಾಬ್ರಾಲ್ ಅವರು ಮೊಸೆಲ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಜೋಡಿಯನ್ನು ಸೋಲಿಸಿ ಸೆಮಿಫೈನಲ್ ಗೇರಿದರು. ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಿತ್ವಿಕ್- ಪೋರ್ಚುಗಲ್ ಆಟಗಾರ ಕ್ಯಾಬ್ರಲ್ 7-6 (1), 6-4 ರಿಂದ ಅಗ್ರ ಶ್ರೇಯಾಂಕದ ಗೊನ್ಸಾಲ್ವೆಸ್ (ಮೆಕ್ಸಿಕೊ)- ರೋಜರ್ ವ್ಯಾಸೆಲಿನ್ (ಫ್ರಾನ್ಸ್) ಜೋಡಿಯನ್ನು ಮಣಿಸಿದರು. ಹೈದರಾಬಾದಿನ ಬೊಲ್ಲಿಪಲ್ಲಿ ರಿತ್ವಿಕ್, ಎಟಿಪಿ ಟೂರ್ನಿಯೊಂದರ ಸೆಮಿಫೈನಲ್ ತಲುಪುತ್ತಿರುವುದು ಇದೇ ಮೊದಲು. ಎಟಿಪಿ 250 ಮಟ್ಟದ ಈ ಟೂರ್ನಿಯಲ್ಲಿ ಆಡಿದ್ದ ಭಾರತದ ಇನ್ನಿಬ್ಬರಾದ ಸುಮಿತ್ ನಗಾಲ್ ಮತ್ತು ಎನ್.ಶ್ರೀರಾಮ್ ಬಾಲಾಜಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು.

ಇಂದಿನಿಂದ ಕಿಂಗ್ಸ್‌ಮೀಡ್‌ನಲ್ಲಿ ಭಾರತ-ದಕ್ಷಿಣ ಆಫ್ರಿಕ ಟಿ20ಐ ಸರಣಿ ಶುರು

ಟಿ20ಐಗೆ ಬ್ಲೂಬಾಯ್ಸ್ ಸಿದ್ಧ!

ಡರ್ಬನ್: ಬಾಂಗ್ಲಾದೇಶ ವಿರುದ್ಧ ಟಿ20 ಸರಣಿ ಗೆಲುವಿನ ವಿಶ್ವಾಸದಲ್ಲಿ ತೇಲುತ್ತಿರುವ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡ ಇದೀಗ ಹರಿಣ ನಾಡಿನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಚುಟುಕು ಸರಣಿ ಆಡಲು ಸಜ್ಜಾಗುತ್ತಿದೆ. ಉಭಯ ತಂಡಗಳ ನಡುವಣ 4 ಪಂದ್ಯಗಳ ಟಿ20ಐ ಸರಣಿಯ ಮೊದಲನೇ ಪಂದ್ಯ ಇಂದಿನಿಂದ ಇಲ್ಲಿನ ಕಿಂಗ್ಸ್‌ಮೀಡ್ ಸ್ಟೇಡಿಯಂನಲ್ಲಿ ನಡೆಯಲಿದೆ.

ಅಂದ ಹಾಗೆ 2024ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಕೊನೆಯ ಬಾರಿ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಸೋಲಿನಂಚಿನಲ್ಲಿದ್ದ ಭಾರತ ತಂಡ ಅಂತಿಮವಾಗಿ ಗೆಲುವು ಪಡೆದು ಎರಡನೇ ಬಾರಿ ಟಿ20 ವಿಶ್ವಕಪ್ ಅನ್ನು ಮುಡಿಗೇರಿಸಿಕೊಂಡಿತ್ತು. ಇದೀಗ ದಕ್ಷಿಣ ಆಫ್ರಿಕಾ ತಂಡ, ಟಿ20 ವಿಶ್ವಕಪ್ ಫೈನಲ್ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಎದುರು ನೋಡುತ್ತಿದೆ.

ಅಂದ ಹಾಗೆ ದಕ್ಷಿಣ ಆಫ್ರಿಕಾ ತಂಡ, ಬಾಂಗ್ಲಾದೇಶ ವಿರುದ್ಧ 2-0 ಅಂತರದಲ್ಲಿ ಟೆಸ್ಟ್ ಸರಣಿ ಗೆಲುವಿನ ಮೂಲಕ ಭಾರತದ ಎದುರು ಟಿ20 ಸರಣಿ ಆಡಲು ಸಜ್ಜಾಗುತ್ತಿದೆ. ಸೆಪ್ಟಂಬರ್ ಅಂತ್ಯದಲ್ಲಿ ಐರ್ಲೆಂಡ್ ಎದುರು ದಕ್ಷಿಣ ಆಫ್ರಿಕಾ ತಂಡ ತನ್ನ ಕೊನೆಯ ಟಿ20ಐ ಪಂದ್ಯವನ್ನು ಆಡಿತ್ತು. ಈ ಸರಣಿಯು ಅಂತಿಮವಾಗಿ ಸಮಬಲ ಕಂಡಿತ್ತು.

ಇನ್ನು ಭಾರತ ತಂಡ, ಬಾಂಗ್ಲಾದೇಶ ವಿರುದ್ಧ ಟಿ20 ಸರಣಿಯ ಗೆಲುವಿನ ಬಳಿಕ ನ್ಯೂಜಿಲೆಂಡ್ ಎದುರು ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 0-3 ಅಂತರದಲ್ಲಿ ವೈಟ್‌ವಾಷ್ ಆಘಾತ ಅನುಭವಿಸಿತ್ತು. ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕಾರಣ ಭಾರತ ತಂಡದ ಹಿರಿಯ ಆಟಗಾರರು ಈ ಟಿ20 ಸರಣಿಗೆ ಅಲಭ್ಯರಾಗಿದ್ದಾರೆ. ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಸೂರ್ಯಕುಮಾರ್, ಸಂಜು ಸ್ಯಾಮ್ಸನ್, ಅರ್ಷದೀಪ್ ಸಿಂಗ್ ಬಿಟ್ಟರೆ ಇನ್ನುಳಿದಂತೆ ಯುವ ಆಟಗಾರರು ಟಿ20 ಸರಣಿಯಲ್ಲಿ ಕಠಿಣ ಸವಾಲನ್ನು ಎದುರಿಸಲಿದ್ದಾರೆ.

ಉಭಯ ತಂಡಗಳ ಮುಖಾಮುಖಿ ದಾಖಲೆ

ಒಟ್ಟು ಆಡಿರುವ ಪಂದ್ಯಗಳು: 27
ಭಾರತ ತಂಡದ ಗೆಲುವು: 15
ದಕ್ಷಿಣ ಆಫ್ರಿಕಾದ ಗೆಲುವು: 11
ಫಲಿತಾಂಶವಿಲ್ಲ: 01

ಪಂದ್ಯದ ವಿವರ

ಭಾರತ ಡಾ ದಕ್ಷಿಣ ಆಫ್ರಿಕಾ
ಮೊದಲನೇ ಟಿ20ಐ ಪಂದ್ಯ
ದಿನಾಂಕ: ನವೆಂಬರ್ 08, 2024
ಸಮಯ: ರಾತ್ರಿ 08: 30ಕ್ಕೆ (ಭಾರತೀಯ ಕಾಲಮಾನ)
ಸ್ಥಳ: ಡರ್ಬನ್‌ನ ಕಿಂಗ್ಸ್‌ಮೀಡ್ ಸ್ಟೇಡಿಯಂ
ನೇರ ಪ್ರಸಾರ: ಸ್ಪೋರ್ಟ್ 18
ಲೈವ್ ಸ್ಟ್ರೀಮಿಂಗ್: ಜಿಯೋ ಸಿನಿಮಾ

ಭಾರತ ತಂಡದ ಸಂಭಾವ್ಯ ಪ್ಲೇಯಿಂಗ್ 11

ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿ.ಕೀ), ಸೂರ್ಯಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ರಮಣ್ದೀಪ್ ಸಿಂಗ್, ಅಕ್ಷರ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಯಶ್ ದಯಾಳ್

ದಕ್ಷಿಣ ಆಫ್ರಿಕಾದ ಸಂಭಾವ್ಯ ಪ್ಲೇಯಿಂಗ್ 11

ಏಡೆನ್ ಮಾರ್ಕ್ರಮ್ (ನಾಯಕ), ರೀಝಾ ಹೆಂಡ್ರಿಕ್ಸ್, ರಿಯಾನ್ ರಿಕಲ್ಟನ್, ಟ್ರಿಸ್ಟನ್ ಸ್ಟಬ್ಸ್, ಹೆನ್ರಿಕ್ ಕ್ಲಾಸೆನ್ (ವಿ. ಕೀ), ಡೇವಿಡ್ ಮಿಲ್ಲರ್, ಡೊನೊವಾನ್ ಫೆರಾರಿ, ಮಾರ್ಕೊ ಯೆನ್ಸನ್, ಜೆರಾಲ್ಡ್ ಕೊಯೇಡ್ಜಿ, ಒಟ್ಟನೀಲ್ ಬಾರ್ಟ್‌ಮನ್, ಲುಥೊ ಸಿಪಾಮ್ಲ

ಪಿಚ್ ರಿಪೋರ್ಟ್

ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಣ ಮೊದಲನೇ ಟಿ20ಐ ಪಂದ್ಯ ನಡೆಯುವ ಕಿಂಗ್ಸ್‌ಮೀಡ್ ಸ್ಟೇಡಿಯಂ ಪಿಚ್ ಬೌಲರ್‌ಗಳಿಗೆ ನೆರವು ನೀಡಲಿದೆ. ಅದರಲ್ಲಿಯೂ ವಿಶೇಷವಾಗಿ ಫಾಸ್ಟ್ ಬೌಲರ್‌ಗಳ ಸ್ನೇಹಿಯಾಗಿದೆ. ಪಿಚ್ ಬೌಲರ್‌ಗಳ ಸ್ನೇಹಿಯಾಗಿದ್ದರೂ ಬ್ಯಾಟರ್‌ಗಳು ದೊಡ್ಡ ಮೊತ್ತವನ್ನು ಕಲೆ ಹಾಕಬಹುದಾಗಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ತಂಡದ ನಾಯಕ ಮೊದಲು ಬ್ಯಾಟಿಂಗ್ ಆಯ್ದುಕೊಳ್ಳುವ ಸಾಧ್ಯತೆ ಇದೆ. ಆ ಮೂಲಕ ಎದುರಾಳಿ ತಂಡಕ್ಕೆ ಚೇಸಿಂಗ್ ನೀಡಲು ಬಯಸಬಹುದು.

ಜುರೇಲ್‌ನ ಸಂಯಮದ ಆಟ | ಭಾರತ 'ಎ'ಗೆ 161 ರನ್

ಆಸ್ಟ್ರೇಲಿಯಾ 'ಎ' ವಿರುದ್ಧವೂ ಎಡವಿದ ರಾಹುಲ್‌ಗೆ 4 ರನ್

ಮೆಲ್ಬೋರ್ನ್: ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ, ಇನ್ನೊಂದೆಡೆ ಕೌಶಲ ಮತ್ತು ಸಂಯಮದ ಆಟ ಪ್ರದರ್ಶಿಸಿದ ಧ್ರುವ್ ಜುರೇಲ್, ಭಾರತ ಎ ತಂಡದ ಕಳಪೆ ಬ್ಯಾಟಿಂಗ್ ನಡುವೆ ಬೆಳ್ಳಿರೇಖೆಯಂತೆ ಕಂಡರು. ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ಗುರುವಾರ ಆರಂಭವಾದ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ಎ 57.1 ಓವರುಗಳಲ್ಲಿ 161 ರನ್‌ಗಳಿಗೆ ಉರುಳಿತು.

ದಿನದಾಟದ ಕೊನೆಗೆ ಆಸ್ಟ್ರೇಲಿಯಾ 2 ವಿಕೆಟ್‌ಗೆ 52 ರನ್ ಗಳಿಸಿದೆ.

ಮೂರನೇ ಓವರ್‌ನಲ್ಲಿ ಕ್ರೀಸಿಗಳಿದ ಜುರಲ್ (80, 161ಎ) ಅವರು ಭಾರತ ತಂಡದ ಅರ್ಧದಷ್ಟು ಮೊತ್ತ ಗಳಿಸಿದರು. ಅವರನ್ನು ಬಿಟ್ಟರೆ 20 ರನ್‌ಗಳಿಗಿಂತ ಹೆಚ್ಚು ಗಳಿಸಿದವರು ಕನ್ನಡಿಗ ದೇವದತ್ತ ಪಡಿಕ್ಕಲ್ ಮಾತ್ರ.

ಇನಿಂಗ್ಸ್ ಆರಂಭಿಸಿದ ಕೆ.ಎಲ್.ರಾಹುಲ್ (4), ಸ್ಕಾಟ್ ಬೋಲ್ಯಾಂಡ್ ಬೌಲಿಂಗ್‌ನಲ್ಲಿ ನೇರವಾಗಿ ಬಂದ ಎಸೆತವನ್ನು ವಿಕೆಟ್ ಕೀಪರ್ ಪಿಯರ್ಸನ್‌ಗೆ ಆಡಿದರು. ಅವಕಾಶವಂಚಿತ ಬೌಲರ್ ಮೈಕೆಲ್ ನೆಸೆರ್ (12.2 ಓವರುಗಳಲ್ಲಿ 27ಕ್ಕೆ4) ಆರಂಭದಲ್ಲೇ ನೀಡಿದ ಹೊಡೆತದಿಂದ ಭಾರತ ಎ ಚೇತರಿಸಲಿಲ್ಲ. ಅವರು ಮೊದಲ ಐದು ವಿಕೆಟ್‌ಗಳಲ್ಲಿ ನಾಲ್ಕನ್ನು ಪಡೆದರು.

ಅಭಿಮನ್ಯು ಈಶ್ವರನ್ (0) ಮತ್ತೆ ವಿಫಲರಾದರು. ಶಾರ್ಟ್‌ಪಿಚ್ ಎಸೆತವನ್ನು ಆಡಲು ಹೋಗಿ ಗಲಿಯಲ್ಲಿ ಕ್ಯಾಚಿತ್ತರು. ಲಯದಲ್ಲಿದ್ದ ಸಾಯಿ ಸುದರ್ಶನ್ ಕೂಡ ಬೇಗ ನಿರ್ಗಮಿಸಿದ್ದರು. ನಾಯಕ ಋತುರಾಜ್ ಗಾಯಕವಾಡ್ ಸಹ, ಸುದರ್ಶನ್ ಅವರಂತೆ ನೇಸರ್ ಬೌಲಿಂಗ್ ನಲ್ಲಿ ಸ್ಲಿಪ್‌ನಲ್ಲಿ ಕ್ಯಾಚ್ ನೀಡಿದರು.

ಶಾಂತಚಿತ್ತದಿಂದ ಆಡಿದ ಜುರೆಲ್ ವಿಕೆಟ್ ಕಾಪಾಡಿಕೊಂಡರು. ಬೌನ್ಸ್ ಆಗುತ್ತಿದ್ದ ಪಿಚ್‌ನಲ್ಲಿ ಚೆಂಡಿನ ಲೆಂತ್ ಗುರುತಿಸಿ ಆಡಿದರು. ರಿಷಭ್ ಪಂತ್ ನಂತರ ಎರಡನೇ ವಿಕೆಟ್ ಕೀಪರ್ ಆಗಿರುವ ಜುರೆಲ್, ಈಗ ಸರ್ಫರಾಜ್ ಅವರಿಗಿಂತ ಉಪಯುಕ್ತ ಎನಿಸುವ ಸೂಚನೆ ನೀಡಿದ್ದಾರೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಭಾರತ ಎ: 57.1 ಓವರುಗಳಲ್ಲಿ 161 (ದೇವದತ್ತ ಪಡಿಕ್ಕಲ್ 26, ಧ್ರುವ್ ಜುರೇಲ್ 80; ಮೈಕೆಲ್ ನೆರ್ಸ್ 27ಕ್ಕೆ4, ಬ್ಯೂ ವೆಬ್‌ಸ್ಟರ್ 19ಕ್ಕೆ3); ಆಸ್ಟ್ರೇಲಿಯಾ ಎ 17.1 ಓವರುಗಳಲ್ಲಿ 2 ವಿಕೆಟ್‌ಗೆ 53 (ಮಾರ್ಕಸ್ ಹ್ಯಾರಿಸ್ ಔಟಾಗದೇ 26; ಮುಕೇಶ್ ಕುಮಾರ್ 13ಕ್ಕೆ, ಖಲೀಲ್ ಅಹ್ಮದ್ 18ಕ್ಕೆ1).

ಸಯ್ಯದ್ ಮುಷ್ತಾಕ್ ಅಲಿ ಟಿ20ಗೆ 26 ಆಟಗಾರನ್ನೊಳಗೊಂಡ ತಂಡ ಪ್ರಕಟ | ನಂ.23ರಿಂದ ಕರ್ನಾಟಕ ತಂಡದ ಪಂದ್ಯ ಶುರು

ಕರ್ನಾಟಕ ತಂಡದಲ್ಲಿ ಸ್ಮರಣ್, ಮ್ಯಾಕ್ನಿಲ್ ನೊರೊನ್ಹಾಗೆ ಸ್ಥಾನ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಸ್‌ಸಿಎ)ನ.11ರಿಂದ ಆರಂಭವಾಗಲಿರುವ ಸಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಗೆ 26 ಆಟಗಾರರನ್ನೊಳ ಗೊಂಡ ತಂಡವನ್ನು ಪ್ರಕಟಿಸಿದೆ. ಯುವ ಪ್ರತಿಭಾನ್ವಿತಾ ಯುವ ಬ್ಯಾಟರ್‌ಗಳಾದ ಆರ್.ಸ್ಮರಣ್ ಮತ್ತು ಮ್ಯಾಕ್ನಿಲ್ ನೊರೊನ್ಹಾಗೆ ತಂಡದಲ್ಲಿ ಸ್ಥಾನ ಕಲ್ಪಿಸಲಾಗಿದೆ.

ಕಳೆದ ಆವೃತ್ತಿಯ 23 ವರ್ಷದೊಳಗಿನವರ ಬಿಸಿಸಿಐ ಸಿಕೆ ನಾಯ್ಡು ಟ್ರೋಫಿಯಲ್ಲಿ ಆರ್.ಸ್ಮರಣ್ ಮತ್ತು ಮ್ಯಾಕ್ನಿಲ್ ಅಮೋಘ ಪ್ರದರ್ಶನ ನೀಡಿ ಗಮನ ಸೆಳೆದಿದ್ದರು.

ತಂಡದ ಪರ ಸ್ಮರಣ್ 16 ಇನ್ನಿಂಗ್ಸ್‌ಗಳಿಂದ 829 ರನ್ ಕಲೆ ಹಾಕಿ ತಂಡದ ಪರ ಎರಡನೆ ಅತಿ ಹೆಚ್ಚು ರನ್ ಹೊಡೆದ ಆಟಗಾರ ಎನಿಸಿದ್ದರು. ಇನ್ನು ನೊರೊನ್ಹಾ ಇನ್ನಿಂಗ್ಸ್‌ವೊಂದರಲ್ಲಿ 117 ರನ್ ಹೊಡೆದು ಒಟ್ಟು 638 ರನ್ ಮೊತ್ತ ಗಳಿಸಿದ್ದರು.

ಪ್ರಸಕ್ತ ರಣಜಿ ಟೂರ್ನಿಗೆ ಪಾದಾರ್ಪಣೆ ಮಾಡಿರುವ ಸ್ಮರಣ್ ಮೂರು ಪಂದ್ಯಗಳನ್ನ ಆಡಿದ್ದಾರೆ. ಉತ್ತಮ ಲಯದಲ್ಲಿರುವ ನೊರೊನ್ಹಾ ಸಿಕೆ ನಾಯ್ಡು ಟೂರ್ನಿಯಲ್ಲಿ ತ್ರಿಪುರ ವಿರುದ್ಧ ತ್ರಿಶತಕ ಸಿಡಿಸಿದ್ದಾರೆ.

ಟೂರ್ನಿಯಲ್ಲಿ ಕರ್ನಾಟಕ ಕ್ರಿಕೆಟ್ ತಂಡ ಉತ್ತರಾಖಂಡ, ತ್ರಿಪುರ, ಸೌರಾಷ್ಟ್ರ, ಸಿಕ್ಕಿಂ, ತಮಿಳುನಾಡು, ಬರೋಡಾ ತಂಡಗಳೊಂದಿಗೆ ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಹಾಲಿ ಚಾಂಪಿಯನ್ ಕರ್ನಾಟಕ ಕ್ರಿಕೆಟ್ ತಂಡ ನ.23ರಂದು ಅಭಿಯಾನ ಆರಂಭಿಸಲಿದೆ.

ಸಂಭಾವ್ಯ ತಂಡ: ಕೆ.ಎಲ್.ರಾಹುಲ್, ಮಯಂಕ್ ಅಗರ್ವಾಲ್, ಮನೀಶ್ ಪಾಂಡೆ, ಪ್ರಸಿದ್ಧಎಂ.ಕೃಷ್ಣ, ದೇವದತ್ ಪಡಿಕ್ಕಲ್, ಎಲ್.ಆರ್.ಚೇತನ್, ಮ್ಯಾಕ್ನಿಲ್ ನೊರೊನ್ಹಾ, ಶ್ರೇಯಸ್ ಅಯ್ಯರ್, ಕೆ.ಎಲ್.ಶ್ರೀಜಿತ್ (ವಿಕೆಟ್ ಕೀಪರ್), ಅಭಿನವ್ ಮನೋಹರ್, ಮನೋಜ್ ಭಾಂಡಗೆ, ಹಾರ್ದಿಕ್ ರಾಜ್, ವಿ.ಕೌಶಿಕ್, ವಿದ್ಯಾಧರ್ ಪಾಟೀಲ್, ಶುಭಾಂಗ್ ಹೆಗಡೆ, ಅಭಿಲಾಶ್ ಶೆಟ್ಟಿ, ಮೊಹ್ಸಿನ್ ಖಾನ್, ಆರ್.ಸ್ಮರಣ್, ಲವಿನಿತ್ ಸಿಸೋಡಿಯಾ (ವಿಕೆಟ್ ಕೀಪರ್), ವೈಶಾಕ್ ವಿಜಯ್ ಕುಮಾರ್, ಮನ್ವಂತ್ ಕುಮಾರ್ ಎಲ್, ಯಶೋವರ್ಧನ್ ಪರಾಂತ್ರಾಪ್, ಅದ್ಸೋಶ್ ಹೆಗಡೆ, ಶರತ್ ಬಿ.ಆರ್ (ವಿಕೆಟ್ ಕೀಪರ್), ಪ್ರವೀಣ್ ದುಬೆ, ವೆಂಕಟೇಶ್ ಎಂ.

ಕೋಚ್: ಯರ್ರೆಗೌಡ : **ಬೌಲಿಂಗ್ ಕೋಚ್;** ಮನ್ಸೂರ್ ಅಲಿ ಖಾನ್:**ಫೀಲ್ಡಿಂಗ್ ಕೋಚ್;** ಶಬರೀಶ್ ಪಿ ಮೋಹನ್: **ಮ್ಯಾನೇಜರ್:** ಎ.ರಮೇಶ್ ರಾವ್: **ಫಿಸಿಯೊಥೆರಪಿಸ್ಟ್;** ಜಾಬಾ ಪ್ರಭು.

ರೋಣಪುರದಲ್ಲಿ ರಣಗಲ್

ಭೈರತಿ ರಣಗಲ್ ಕನ್ನಡ ಚಿತ್ರದಲ್ಲಿ ಕುತೂಹಲ ಮೂಡಿಸಿದೆ. ಭೈರತಿ ದರ್ಶನಕ್ಕೆ ದಿನಗಣನೆ ಆರಂಭವಾಗಿದ್ದು, ಶಿವಣ್ಣನನ್ನು ಬೆಳ್ಳಿತೆರೆಯಲ್ಲಿ ಕಣ್ತುಂಬಿಕೊಳ್ಳಲು ಕಾದುಕುಳಿತ್ತಿದ್ದಾರೆ. ಪೋಸ್ಟರ್, ಟೀಸರ್ ಹಾಡಿನ ಮೂಲಕವೇ ಮನಗೆದ್ದಿರುವ ಭೈರತಿ ರಣಗಲ್, ಟ್ರೇಲರ್ ಮೂಲಕ ಹೊಸ ದಾಖಲೆ ಬರೆದಿದೆ. ರಣ..ರಣ..ಭೈರತಿಯ ಟ್ರೇಲರ್ ಐದು ಮಿಲಿಯನ್‌ಗೂ ಹೆಚ್ಚು ವೀಕ್ಷಣೆ ಕಂಡಿದ್ದು ಹೊಸ ದಾಖಲೆ ಬರೆದಿದೆ. ಮಚ್ಚು ಹಿಡಿದು ಅಬ್ಬರಿಸಿದ ಶಿವಣ್ಣ ಅವರನ್ನು ನೋಡುವುದೇ ಚೆಂದ. ಅದರಲ್ಲಿಯೂ ಚಿತ್ರದ ಡೈಲಾಗ್ಸ್ ಅದ್ಭುತವಾಗಿವೆ, ಪ್ರೇಕ್ಷಕರ ಮನಸೂರೆಗೊಂಡಿವೆ. ನಾನು ತಾಳ್ಮೆ ಕಳೆದುಕೊಂಡಾಗಲೆಲ್ಲ ತುಂಬಾ ಜನ ತಲೆ ಕಳ್ಕೊಂಡಿದ್ದಾರೆ... ಎಂಬ ಡೈಲಾಗ್ ಟೀಸರ್‌ನಲ್ಲಿ ಕಿಚ್ಚೆಬ್ಬಿಸಿತ್ತು. ಈಗ ಟ್ರೇಲರ್‌ನಲ್ಲಿ ನಾನು ಜನರಿಗಾಗಿ ಯಾರನ್ನಾದರು ಕಳೆದುಕೊಳ್ಳುತ್ತೇನೆ, ಆದರೆ ಜನರನ್ನೇ ಕಳೆದುಕೊಳ್ಳುವುದಿಲ್ಲ.. ಎಂಬ ಡೈಲಾಗ್ ಮನಕ್ಕೆ ನಾಟುತ್ತದೆ. ಟ್ರೇಲರ್ ನೋಡಿ ಸಿನಿ ಪ್ರಿಯರು ಫಿದಾ ಆಗಿದ್ದಾರೆ. ಇದೇ 15 ರಂದು ಭೈರತಿ ರಣಗಲ್ ಭರ್ಜರಿಯಾಗಿ ತೆರೆಗೆ ಬರಲಿದೆ. ಇದು ಮಫ್ತಿ ಚಿತ್ರದ ಪ್ರೀಕ್ವೆಲ್ ಆಗಿದ್ದು, ಭೈರತಿ ರಣಗಲ್ ಡಾನ್ ಆಗಿದ್ದು ಯಾಕೆ ಎಂಬ ರೋಚಕ ಕಥೆ ಚಿತ್ರದಲ್ಲಿ ತೆರೆದುಕೊಳ್ಳಲಿದೆ. ಜನಾನುರಾಗಿಯಾದ ಭೈರತಿ ದುರಳರನ್ನು ಮುಲಾಜಿಲ್ಲದೆ ಹೆಡೆಮುರಿ ಕಟ್ಟುತ್ತಾರೆ. ಯಾರೇ ಎದುರು ಬಂದರು, ಯಾವುದೇ ಸಮಸ್ಯೆ ಕಾಡಿದರೂ ಹೆದರದೆ ಜನರ ಪರವಾಗಿ ಹೋರಾಡುತ್ತಾರೆ. ಭೈರತಿ ಮಚ್ಚು ಹಿಡಿದು ಬೀಸುವ ಏಟಿಗೆ ಎದುರಾಳಿಯ ಕೈಗಳೇ ಕತ್ತರಿಸಿ ಬೀಳುತ್ತವೆ.

ಹಿರಿಯ ನಟರ ದಂಡು: ಭೈರತಿ ರಣಗಲ್ ಚಿತ್ರದಲ್ಲಿ ಹಿರಿಯ ನಟರ ದಂಡೇ ಇದೆ. ನಟ ಅವಿನಾಶ್ ಈ ಚಿತ್ರದಲ್ಲಿ ಖಳನಾಗಿ ಕಾಣಿಸಿಕೊಂಡಿದ್ದಾರೆ. ಹಿಂದೆಂದೂ ಕಾಣದ ಲುಕ್‌ನಲ್ಲಿ ಗಮನಸೆಳೆಯುತ್ತಾರೆ. ಈ ಪಾತ್ರ ಅವಿನಾಶ್‌ಗೆ ಹೊಸ ಖದರ್ ತಂದುಕೊಡಲಿದೆ. ಬಾಲಿವುಡ್ ನಟ ರಾಹುಲ್ ಬೋಸ್ ಕೂಡ ಖಳನಟನಾಗಿ ಅಬ್ಬರಿಸಿದ್ದಾರೆ, ರಾಹುಲ್ ಪವರ್ ಫುಲ್ ಪಾತ್ರ ನಿರ್ವಹಿಸಿದ್ದಾರೆ. ದೇವರಾಜ್ ರಾಜಕಾರಣಿಯಾಗಿ ನಟಿಸಿದ್ದು ಸಿಂಪಲ್ ಲುಕ್‌ನಲ್ಲಿ ಮಿಂಚಿದ್ದಾರೆ. ಛಾಯಾಸಿಂಗ್, ಭೈರತಿಯ ತಂಗಿಯಾಗಿ ಅಭಿನಯಿಸಿದ್ದು, ಈ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆ. ಗೀತಾ ಪಿಕ್ಚರ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ನರ್ತನ್ ನಿರ್ದೇಶನ ಮಾಡಿದ್ದಾರೆ.

> ರೋಣಪುರದಲ್ಲಿ ಹೊಸ ಕೋಟೆ ಕಟ್ಟಿದ ಭೈರತಿ ರಣಗಲ್ ಕಣ್ತುಂಬಿಕೊಳ್ಳಲು ಎಲ್ಲರೂ ಕಾತರರಾಗಿದ್ದಾರೆ. ಈ ಚಿತ್ರದಲ್ಲಿ ಶಿವಣ್ಣ ಅವರನ್ನು ನೋಡುವುದೇ ಆನಂದ. ನಮ್ಮ ಸಿನಿಮಾದಲ್ಲಿ ನಟಿಸಿರುವ ಎಲ್ಲಾ ಕಲಾವಿದರು ತಮ್ಮ ಪಾತ್ರಗಳಿಗೆ ಜೀವ ತುಂಬಿ ನಟಿಸಿದ್ದಾರೆ. ಎಲ್ಲರ ಶ್ರಮದಿಂದ ಭೈರತಿ ರಣಗಲ್ ಅದ್ಭುತ ಚಿತ್ರವಾಗಿ ನಿಮ್ಮ ಮುಂದೆ ಬರಲಿದೆ. ನಮ್ಮ ಚಿತ್ರ ಮುಂದಿನ ವಾರ ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.
> -**ನರ್ತನ್** ನಿರ್ದೇಶಕ

ಸ್ವೀಟಿ ಬಲು ಘಾಟಿ

ಕ್ರಿಷ್ ಜಾಗರ್ಲಮುಡಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಘಾಟಿ ಚಿತ್ರದಲ್ಲಿ ಅನುಷ್ಕಾ ಶೆಟ್ಟಿ ನಟಿಸುತ್ತಿದ್ದಾರೆ. ಸ್ವೀಟಿ ಹುಟ್ಟುಹಬ್ಬದ ಪ್ರಯುಕ್ತ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿ ಕುತೂಹಲ ಮೂಡಿಸಿತ್ತು. ಈಗ ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿದೆ. ರಕ್ತದೋಕುಳಿಯಲ್ಲಿ ಮಿಂದಿರುವ ಅನುಷ್ಕಾ ಕುಡುಗೋಲು ಹಿಡಿದು ಬರುವ ದೃಶ್ಯ ರೋಮಾಂಚಕವಾಗಿದೆ. ಅವರ ಸಿಡುಕಿನ ಮುಖಭಾವ, ಭಂಗಿ ಸೇದುತ್ತಿರುವ ದೃಶ್ಯ ಅನುಷ್ಕಾ ಅವರ ಪಾತ್ರದ ಗಾಢತೆಯನ್ನು ಬಿಂಬಿಸುತ್ತಿದೆ. ಇದನ್ನು ನೋಡಿದರೆ ಸ್ವೀಟಿ ಇದುವರೆಗೂ ನಟಿಸಿರುವ ಪಾತ್ರಗಳಿಂತ ವಿಭಿನ್ನವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ವಿಕ್ಟಿಮ್, ಕ್ರಿಮಿನಲ್, ಲೆಜೆಂಡ್ ಎಂಬ ಟ್ಯಾಗ್‌ಲೈನ್ ಹೊಂದಿರುವ ಘಾಟಿ ಕುತೂಹಲಭರಿತ ಕಥೆಯನ್ನು ಒಳಗೊಂಡಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ. ಅದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಆ್ಯಕ್ಷನ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಗಿಸಿರುವ ಘಾಟಿ ತಂಡ ಅಂತಿಮ ಹಂತದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದೆ. ಘಾಟಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತೆಲುಗು, ಕನ್ನಡ, ತಮಿಳು, ಮಲೆಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ರಾಜೀವ್ ರೆಡ್ಡಿ, ಸಾಯಿ ಬಾಬು ಜಾಗರ್ಲಮುಡಿ ಚಿತ್ರ ನಿರ್ಮಾಣ ಮಾಡಿದ್ದಾರೆ.